TEXT FLY WITHIN THE BOOK ONLY

UNIVERSAL LIBRARY

OU_200399

UNIVERSAL LIBRARY

ಲಲಿತ ಸಾಹಿತ್ಯಮಾಲೆಯ ಮೂವತ್ತೆಂಟನೆಯ ಕುಡಿ
ಒಂಬತ್ತನೆಯ ವರುಷದ ಮೊದಲನೆಯ ಪ್ರಕಟನೆ

# ಅನಾದಿ

ಸಾಮಾಜಿಕ ಕಾದಂಬರಿ

ಶ್ರೀರಂಗ

ಉತ್ತಮ ಪ್ರತಿ
೨-೮-೦

ಅಕ್ಟೋಬರ ೧೯೫೨

ಸಾದಾ ಪ್ರತಿ
೧-೮-೦

ಚುಳಕಿ ಗೋವಿಂದರಾಯರು
ಲಲಿತ ಸಾಹಿತ್ಯಮಾಲೆ, ಧಾರವಾಡ

ಮಾರಾಟಗಾರರು :
ಮನೋಹರ ಗ್ರಂಥ ಭಾಂಡಾರ, ಧಾರವಾಡ
ಕನ್ನಡ ಪುಸ್ತಕಾಲಯ, ಬೆಳಗಾವಿ

ಮುದ್ರಕರು :
ಎಸ್. ಎಮ್. ಕುಲಕರ್ಣಿ
ಲಲಿತ ಮುದ್ರಣಾಲಯ, ಧಾರವಾಡ

# ಅರಿಕೆ

ಲಲಿತ ಸಾಹಿತ್ಯಮಾಲೆ ಈವರೆಗೆ ಮೂವತ್ತೇಳು ಪ್ರಕಟನೆಗಳನ್ನು ಚಿಗುರಿಸಿ ತನ್ನ ಎಂಟನೆಯ ವರುಷವನ್ನು ದಾಟಿ ನಿಂತಿದೆ.

ಒಂಬತ್ತನೆಯ ವರುಷದ ಆರಂಭದಲ್ಲಿ ಕನ್ನಡದ ವಿಚಾರಶೀಲ ಲೇಖಕರಲ್ಲೊಬ್ಬರಾದ ಶ್ರೀರಂಗರ ' ಅನಾದಿ ' ಎಂಬ ಕಾದಂಬರಿಯನ್ನು ಪ್ರಕಟಿಸಲು ನಮಗೆ ಹೆಮ್ಮೆ ಎನಿಸುತ್ತದೆ. ಶ್ರೀರಂಗರ ' ಪುರುಷಾರ್ಥ ' ವೆಂಬ ಕಾದಂಬರಿಯನ್ನು ಸ್ವಾತಂತ್ರ್ಯೋದಯದ ದಿನವೇ ಪ್ರಕಟಿಸಿದ ಮಾಲೆಗೆ ಅವರ **' ಪ್ರಥಮ ಪ್ರೇಮಕಥೆ '** ಯಾದ **' ಅನಾದಿ '** ಯನ್ನು ಪ್ರಕಟಿಸಲು ಅವಕಾಶವೊದಗಿದ್ದು ನಮ್ಮ ಚಂದಾದಾರರಿಗೂ ಪ್ರಿಯವೆನಿಸುವದೆಂದು ನಮ್ಮ ನಂಬಿಕೆ.

ಶ್ರೀರಂಗರು ಈ ಕಾದಂಬರಿಯನ್ನು ಬರೆದು ನೀಡಿದುದಕ್ಕಾಗಿ ಅವರಿಗೆ ಋಣಿಯಾಗಿದ್ದೇವೆ.

ಮುಂದಿನ ಕುಡಿಯಾಗಿ ಶ್ರೀ. ಜನಾರ್ದನ ಗುರ್ಕಾರ್ ಅವರ **' ಕೈಮಾಂಸ '** ಎಂಬ ಕಾದಂಬರಿ ಬರಲಿದೆ.

ಕನ್ನಡ ಓದುಗರು ಅಭಿಮಾನದಿಂದ ನಮ್ಮ ಪ್ರಕಟನೆಗಳನ್ನು ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

ಧಾರವಾಡ
೧೦-೧೦-೫೪

**ಸಂಪಾದಕ**
ಲಲಿತ ಸಾಹಿತ್ಯಮಾಲೆ

# ಪೀಠಿಕೆ

"ಅನಾದಿ"ಯ ಬಗ್ಗೆ ಎರಡು ಮಾತುಗಳನ್ನು ಹೇಳುವುದು ನನಗೆ ಅಗತ್ಯವೆನ್ನಿಸಿದ್ದರಿಂದ ಈ ಪೀಠಿಕೆಯನ್ನು ಬರೆಯುತ್ತಲಿದ್ದೇನೆ. ಇಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯದ ಬಗ್ಗೆ ಒಂದು ಕತೆಯನ್ನು ಬರೆಯಬೇಕೆಂಬ ವಿಚಾರವು ಒಂದು-ಒಂದೂವರೆ ವರುಷದಿಂದ ನನ್ನ ತಲೆಯನ್ನು ತಿನ್ನುತ್ತಿತ್ತು. ಆದರೆ ನನ್ನ ಬರೆಯುವ ರೀತಿ ನನಗೆ ಗೊತ್ತು. "**ಪುರುಷಾರ್ಥ**" ಕಾದಂಬರಿಯನ್ನು ಎಷ್ಟು ಜನ ವಾಚಕರು ಮೆಚ್ಚಿರಬಹುದೆಂಬ ಬಗ್ಗೆ ನನಗೆ ಸಂದೇಹವಿದ್ದಿತು. ಆ ಕಾದಂಬರಿಯ ಪ್ರತಿಗಳೆಲ್ಲ ತೀರಿದ್ದರೂ ಅದರ ಶೈಲಿ ಇನ್ನೂ ವಾಚಕರಿಗೆ ಜೀರ್ಣವಾಗಿರಲಿಕ್ಕಿಲ್ಲ ಎಂದು ತಿಳಿದು ಈ "ಅನಾದಿ"ಯ ಬಗ್ಗೆ ಅನಾಸ್ಥೆಯನ್ನು ವಹಿಸಿದ್ದೆ. ಆದರೆ ಮತ್ತೆ ವಿಚಾರ ಮಾಡಿ ನೋಡಲಾಗಿ ಅಂತರಂಗದ ಚಿತ್ರವನ್ನು ಕೊಡುವ ಕಾದಂಬರಿಗೆ ಬೇರೆ ಶೈಲಿಯೆ ಶಕ್ಯವಿಲ್ಲ ಎಂದೆನ್ನಿಸಿತು. ಆದುದರಿಂದ ಬರೆಯುವುದನ್ನು ನಿಶ್ಚಯಿಸಿದೆ, ಅದನ್ನು ಒಬ್ಬ ಗೆಳೆಯರ ಮುಂದೆ ಬಹಿರಂಗವಾಗಿ ಹೇಳಿದೆ, ಇನ್ನೊಬ್ಬ ಗೆಳೆಯರು—"ಪುರುಷಾರ್ಥ"ದ ಪ್ರಕಟನೆಗೆ ಧೈರ್ಯವನ್ನು ಮಾಡಿದವರೆ-ಇದನ್ನೂ ಪ್ರಕಟಿಸಲು ಸಿದ್ಧರಾದರು.

ಇದು ಪ್ರೇಮಕತೆ. ಈ ಮಾತನ್ನು ವಾಚಕರು ಒಪ್ಪಿದರೆ ಇದು ನಾನು ಬರೆದ ಮೊದಲನೆಯ ಪ್ರೇಮದ ಕತೆ ಎಂಬ ನನ್ನ ಇನ್ನೊಂದು ಮಾತನ್ನೂ ಒಪ್ಪಬೇಕಾಗುವುದು. ಸುಮಾರು ಇಪ್ಪತ್ತು ವರ್ಷಗಳ ವರೆಗೆ ಸಾಹಿತ್ಯ ನಿರ್ಮಾಣದಲ್ಲಿ ತೊಡಗಿದವನು ಆ ನಂತರ ಮೊದಲ ಪ್ರೇಮ-ಕಥೆಯನ್ನು ಬರೆಯುವುದೆಂದರೆ ಇದೊಂದು ವಿಪರೀತ ಅನುಭವವಲ್ಲವೆ? ಯಾವ ಸಾಹಿತಿಯಾದರೂ ಪ್ರೇಮದ ವಿಷಯದಿಂದಲೆ ಸಾಮಾನ್ಯವಾಗಿ ಸಾಹಿತ್ಯನಿರ್ಮಾಣಕ್ಕೆ ತೊಡಗುತ್ತಾನೆ. ನನಗೆ ಇಷ್ಟೊಂದು ವಿಲಂಬವಾದುದರ ಕಾರಣವು ಮರ್ಮಜ್ಞರಾದ ವಾಚಕರಿಗೆ ಈ ಕಾದಂಬರಿಯಲ್ಲಿ (ಅಥವಾ ಈ ಕಾದಂಬರಿಯಿಂದಲೆ) ದೊರೆಯಬಹುದಾಗಿದೆ. ಆ ಕಾರಣವನ್ನು ಒಪ್ಪಿದರೆ, ಈ ಕಾದಂಬರಿಯನ್ನು ಮೆಚ್ಚಿದರೆ ಈ ಕತೆಯನ್ನು "ಅನಂತ" ಎಂಬ ಇನ್ನೊಂದು ಭಾಗದಲ್ಲಿ ವಾಚಕರಿಗೆ ನಾನು ಒದಗಿಸಬಲ್ಲೆ—ಎಂದರೆ ಆದಷ್ಟು ಬೇಗ ಒದಗಿಸಬಲ್ಲೆ ಎಂದು ಅರ್ಥ. ಯಾಕೆಂದರೆ, ವಾಚಕರು ಒಪ್ಪಲಿ ಒಪ್ಪದಿರಲಿ, ಮೆಚ್ಚಲಿ ಮೆಚ್ಚದಿರಲಿ ಬರೆಯಬೇಕೆಂದು ಒಳಗೆ ಕುದಿಯುತ್ತಿದ್ದ ಕೃತಿಯನ್ನು ಯಾವ ಸಾಹಿತಿಯು ತಡೆಯಬಲ್ಲನು ?

ಧಾರವಾಡ

೧೧-೮-೩೩

—ಶ್ರೀರಂಗ

# ಅನಾದಿ

## ೧

" ಸಿನೆಮಾಕ್ಕೆ ಹೋಗೋಣವೆ ?"

" ಉಂ—?"

" ಸಿನೆಮಾಕ್ಕೆ-ಅಲ್ಲ–ಅಂದರೆ ಎಲ್ಲಿಯಾದರೂ ಹೊರಗೆ ಹೋಗೋಣವೆ ?"

ಉತ್ತರವಿಲ್ಲ.

" ಅಂದರೆ–ಬಯಲಿಗೆ ಅಡ್ಡಾಡಿ ಬಂದರೆ ಅಷ್ಟೆ ಒಂದಿಷ್ಟು—ಅಂದರೆ, ಮನೆಯೊಳಗೆ ಕುಳಿತು ನಿನಗು ಬೇಸರ ಬಂದಿದ್ದರೆ—ಅಂತ—"

ಒಳಅಂಗೈಯಿಂದ ಮುಚ್ಚಿದ ಆಕಳಿಕೆಯ ಉತ್ತರ ಬಂದಿತು.

" ಅಂದರೆ ಎಲ್ಲಿ ಹೋಗೋದು ಬೇಡ ಅಂತೀಯಾ ? ನಿನ್ನ ಸಲುವಾಗಿಯೆ ಕೇಳಿದೆ. ಯಾಕೆಂದರೆ, ನನಗೂ ಹಾಗೆ ನೋಡಿದರೆ ಬರೆಯೋ ಕೆಲಸ ಇದೆ....ಹೋಗೋದಿದ್ದರೆ ಹೇಳು. ನಾನು ರಾತ್ರಿ ಬರೀತೀನಿ.... ಹಂ....ಬ್ಯಾಡ ಅಂತೀಯಾ ?....ಆಯ್ತು, ಸುಮ್ಮ ಕುಳಿತಾದರೂ ಮಾಡೋದೇನು ? ಅಂದರೆ ನಾ ಬರೀತಾ ಕೂಡತೀನಿ....ಏನಾದರೂ ಕೆಲಸವಿದ್ದರೆ ಮಾತ್ರ ಬಂದ ಹೇಳು." ಹೀಗೆನ್ನುತ್ತ ಕೈಯೊಳಗಿನ ದಿನಪತ್ರಿಕೆಯನ್ನು ಬಿಸಾಡಿ, ಬೇಸರದ ಉಸಿರೆಳೆದು ರಾಮಣ್ಣ ಕುರ್ಚಿಯಿಂದ ಎದ್ದ. ಹನ್ನೆರಡು ತಾಸುಗಳ ಹಗಲಿನಲ್ಲಿ ಇದು ನೂರನೆಯದೊ, ಸಾವಿರನೆಯದೊ—ಅಂತೂ ಕೊನೆಯ ಪ್ರಯತ್ನ ರಾಮಣ್ಣನದು, ಕುಮುದಳನ್ನು ಮಾತಾಡಿಸಬೇಕೆಂದು. ಇದೂ ಮೊದಲನೆಯ ದಿನವಲ್ಲ, ಇಂದಿಗೆ ನಾಲ್ಕು ತಿಂಗಳುಗಳಾಗಿದ್ದುವು ಈ ಅಸಹಕಾರದ

ವಾತಾವರಣಕ್ಕೆ. ಹಾಗೆ ನೋಡಿದರೆ ರಾಮಣ್ಣನಿಗೆ ಇಂತಹ ಅಸಹ್ಯ ವಾತಾವರಣವನ್ನು ತಡೆದುಕೊಳ್ಳುವುದು ಅಗತ್ಯವಿದ್ದಿರಲಿಲ್ಲ. ಕುಮುದಳು ಯಾರು ? ತನಗೂ ಆಕೆಗೂ ಯಾವ ಸಂಬಂಧ ? ತಾನು ಯಾಕೆ ಆಕೆಗಾಗಿ ಮನೆಯಲ್ಲಿ ಮಸಣದ ಭಯಾನಕ ಶಾಂತತೆಯನ್ನು ಸಹಿಸಿಕೊಳ್ಳಬೇಕು ? ಕುಮುದಳದು ಎಂಥದಾದರೂ ಸಂಬಂಧವಿದ್ದರೆ ಅದು ತನ್ನ ಹೆಂಡತಿಯಾದ ಸರಲೆಯೊಡನೆ. ಪಾಪ ! ಸರಲೆಯು ಸ್ವಭಾವ ನಂಬುಗೆಯ ಸ್ವಭಾವ, ಜನರನ್ನು ಹಚ್ಚಿಕೊಳ್ಳುವ ಸ್ವಭಾವ. ಕುಮುದಳು ತನ್ನ ಅಬಚಿಯ ಮಗಳು ಎಂದು ಸರಲೆ ಹೇಳುವುದು; ಯಾವ ದೇಶದಲ್ಲಿದ್ದಳೊ ಆ ಅಬಚಿ ? ಯಾಕೆಂದರೆ, ಅಂದಿನವರೆಗೆ ಸರಲೆಯು ತನಗೊಂದು ಅಬಚಿ ಎಂಬ ವಸ್ತುವಿದೆ ಎಂಬ ಮಾತನ್ನೆತ್ತಿರಲಿಲ್ಲ. ಒಮ್ಮೆಲೆ ಒಂದು ದಿನ ಅಣ್ಣನ ಮನೆಯಿಂದ ಬರುವಾಗ ಕುಮುದಳನ್ನು ತಂದಳು, ಅಬಚಿಯ ಮಗಳು ಎಂದು ಆಕೆಯನ್ನು ಮನೆಯಲ್ಲಿಟ್ಟುಕೊಂಡಳು. ಅಬಚಿ ಇದ್ದಾಳೆಯೆ— ಎಂದು ಕೇಳಲು ಕೂಡ ಅವಕಾಶವಿದ್ದಿರಲಿಲ್ಲ. ಯಾಕೆಂದರೆ, ಅಬಚಿ ಸತ್ತಳು ಎಂಬ ನಾಂದಿಯಿಂದಲೆ ಕುಮುದಳ ಪಾತ್ರಪ್ರವೇಶವಾಯಿತು. ಇದೆಲ್ಲ ನಡೆದದ್ದು ಆರು ವರ್ಷಗಳ ಹಿಂದಿನ ಮಾತು. ಆದರೆ ಈಗ ಕುಮುದಳಿಗೆ ಆ ಸಂಬಂಧವೂ ಉಳಿದಿರಲಿಲ್ಲ. ಯಾಕೆಂದರೆ, ಈಗ ಸರಲೆಯೆ ತೀರಿಕೊಂಡು ನಾಲ್ಕು ತಿಂಗಳು ಕಳೆದಿದ್ದುವು. ಆರು ವರ್ಷಗಳ ಸಲುಗೆ–ಸಹವಾಸಗಳೇನೊ ಇವೆ. ಆದರೆ ಈ ಪರಿ ನಡತೆಯನ್ನು ತಡೆದುಕೊಳ್ಳುವುದು ಇನ್ನೆಷ್ಟು ದಿನ ಸಾಧ್ಯ ? ಇನ್ನು ತನಗೆ ಸಾಧ್ಯವಿಲ್ಲ ಎಂಬ ವಿಚಾರವನ್ನು ಬಾಯಿಯಿಂದ ಆಡದ್ದಕ್ಕಾಗಿ ಕೈಯೊಳಗಿನ ದಿನಪತ್ರಿಕೆಯನ್ನು ಕುರ್ಚಿಗೆ ಅಪ್ಪಳಿಸಿ ರಾಮಣ್ಣ ಎದ್ದ. " ಏನಾದ್ರೂ ಬೇಕಿದ್ದರೆ ಮಾತ್ರ ಬಂದು ಹೇಳಲಿಕ್ಕೆ ಮರೆಯಬ್ಯಾಡ ಮತ್ತೆ ! " ಎಂದು ಎಚ್ಚರಿಸಿ ರಾಮಣ್ಣ ತನ್ನ ಕೋಣೆಗೆ ನಡೆದ.

## ೨

ರಾಮಣ್ಣನ ಕೋಣೆಯ ಬಾಗಿಲು ಮುಚ್ಚಿದ ಸದ್ದನ್ನು ಕೇಳಿದಾಕ್ಷಣ ಕುಮುದಳಿಗೆ ಬಿಕ್ಕು ತಡೆಯದಾಯಿತು. ಅವನ ಮನಸ್ಸಿಗೆ ನೋವಾಯಿತಲ್ಲ ? ನೋವನ್ನುಂಟುಮಾಡಬೇಕೆಂದು ತಾನು ಬಯಸಿರಲಿಲ್ಲ. ಉಹುಂ. ರಾಮಣ್ಣ

ನಿಗೆ ನೋವನ್ನು ಕೊಡಬೇಕೆಂದು ತಾನು ಬಯಸುವುದು ಈ ಜನ್ಮದಲ್ಲಿ ಸಾಧ್ಯ ವಿಲ್ಲ. ಬೇಕಾದರೆ ಅವನಿಗಾಗಿ ತಾನು ಸಾವನ್ನು ಕೂಡ ಅಪ್ಪಿಕೊಳ್ಳಲು ಸಿದ್ಧ ಳಾಗಿದ್ದಳು. ಆದರೆ ಮಾಡುವುದೇನು ? ಹೃದಯ ಒಂದೆಣಿಸಿದರೆ, ಮನಸ್ಸು ಮತ್ತೊಂದನ್ನೆ ಎಣಿಸುವುದು. ಹೃದಯವು ರಾಮಣ್ಣನ ಸಾಹಚರ್ಯವನ್ನು ಬಯಸಿದರೆ, ಮನಸ್ಸಿಗೆ ಅವನ ನಗೆಮಾತು ಕೂಡ ಅಸಹ್ಯವೆನಿಸುವುದು. ಯಾಕೆ ಹೀಗಾಗಿದೆ ಎಂಬುದು ಕುಮುದಳಿಗೆ ತಿಳಿದಿರಲಿಲ್ಲ. ಹಾಗಾದುದು ಮಾತ್ರ ನಿಜ ಎಂಬುದನ್ನು ಪ್ರತಿನಿತ್ಯದ ಅವಳ ಅಂತರಂಗದ ಕಳವಳವೆ ಹೇಳು ತ್ತಿದ್ದಿತು. ಸರಲಕ್ಕನ ಮರಣದಿಂದ ಒಂದು ತರದ ಆಘಾತವಾಗಿರಬಹುದೆ ? ಹನ್ನೆರಡು ವರ್ಷದ ಅನಾಥೆಯಾದ ತನ್ನನ್ನು ತಂದು ಸಾಕಿ, ಸಲಹಿ, ಸುಖ ದಿಂದ ಬೆಳೆಸಿದ, ತಾಯಿಗೆ ಸಮಾನವಾದ ಸರಲಕ್ಕನ ಮರಣದಿಂದ ಹೀಗಾ ಗಿರಬಹುದು ಎಂದು ಆಕೆಗೆ ಎಷ್ಟೋ ಸಲ ತೋಚುತ್ತಿತ್ತು. ಆದರೆ ರಾಮ ಣ್ಣನ ಸ್ಥಿತಿ ತನ್ನ ಹಾಗೆ ಆಗಿರಲಿಲ್ಲವಲ್ಲ ? ಪ್ರೀತಿಯ ಹೆಂಡತಿಯನ್ನು ಕಳೆದು ಕೊಂಡ ಗಂಡನಿಗೆ ಆಗದ ಆಘಾತ ತನಗೆ ಆಗಬಹುದೇ ? ಇದು ಸಹಜವೆ ? ಎಂದೂ ಕೆಲವು ಸಲ ಸಂಶಯಪಡುತ್ತಿದ್ದಳು. ರಾಮಣ್ಣನು ಎದುರು ಕುಳಿತು ಮಾತನಾಡುತ್ತಿರುವಾಗ ಏನೋ ಒಂದು ತರದಿಂದ ಅಸಹ್ಯವೆನ್ನಿಸಿದರೆ, ರಾಮಣ್ಣನು ಮರೆಯಾದೊಡನೆ ಹುಚ್ಚು ಹಿಡಿದಂತಾಗುತ್ತಿತ್ತು. ಅದಕಾಗಿಯೆ, ಕೋಣೆಯ ಬಾಗಿಲಿನ ಸದ್ದು ಕೇಳಿದಾಕ್ಷಣ ಬಿಕ್ಕಿ ಸಿಡಿಲಿನಂತೆ ಅಬ್ಬರಿಸಿ ಬಂದರೂ, ಮರುಗಳಿಗೆಗೆ ಮುಖದಲ್ಲಿ ನಗೆಯ ಮಿಂಚು ಮೂಡಿಬಂದಿತು. ಅಂತರಂಗದ ಗೂಢವದು. ಅಂತರಂಗದ ಮುಗಿಲಿನಲ್ಲಿ ಮುಂಚೆ ಸಿಡಿಲು ಕೇಳಿಸಿ ತರುವಾಯ ಮಿಂಚು ಕಾಣಿಸುವುದೇನೋ ? ಮುಚ್ಚಿದ ಬಾಗಿಲನ್ನು ಮುಗುಳ್ನಗೆಯಿಂದ ನೋಡತೊಡಗಿದಳು, ನೋಡನೋಡುತ್ತ ಆ ಸುಖದ ಅನುಭವವನ್ನು ಅರಗಿಸಿಕೊಳ್ಳುವುದಕ್ಕಾಗಿ ಕಣ್ಣುಗಳನ್ನು ಮುಚ್ಚಿದಳು. ಬಿಸಿಲಿ ನೊಳಗಿನ ಮಳೆಹನಿಗಳಂತೆ ಮುಗುಳ್ನಗೆಯ ಮುಖದಲ್ಲಿ ಮುಚ್ಚಿದ ಕಣ್ಣುಗ ಳಿಂದ ನೀರು ಧಾರೆಯಾಗಿ ಸುರಿಯುತ್ತಿತ್ತು. ಇದು ಸುಖವೊ? ದುಃಖವೊ? ಎಂಬುದನ್ನರಿಯದ, ಅಥವಾ ಆ ವಿಚಾರವನ್ನೆ ಮೀರಿ ಒಂದು ಪರಸುಖ ವನ್ನು ಕಾಣುತ್ತಿರುವವಳಂತೆ ಅವಳ ಮುಖವು ಆಕರ್ಷಣೀಯವಾಗಿತ್ತು.... ಕಣ್ಣು ಮುಚ್ಚಿದಾಗ ಕುಮುದಳಿಗೆ ಪರಸುಖವೆ ಇದ್ದಿತೆಂದು ಹೇಳಬಹುದು.

ಇಂದಿನದಕ್ಕೆ ಕಣ್ಣು ಮುಚ್ಚಿದ ಕುಮುದಳಿಗೆ ಹಿಂದಿನದರ ನೆನಪು ಅನಿವಾರ್ಯವಾಗುತ್ತಿತ್ತು....ಆಗಲೂ ಹೀಗೇ ರಾಮಣ್ಣನ ಕೋಣೆಯ ಬಾಗಿಲು ಮುಚ್ಚಿತ್ತು. ತಾನು ಹನ್ನೆರಡು ವರ್ಷದ ಹುಡುಗಿ. ಸರಲಕ್ಕನ ಕೂಡ ಬಂದಿದ್ದಾಳೆ. ಗಾಡಿಯ ಪ್ರವಾಸ ಕೂಡ ತನಗೆ ಹೊಸತಾಗಿತ್ತು. ಕಿಟಿಕಿಗೆ ಕುಳಿತು ವೇಗದಿಂದ ಹಿಂದೆ ಓಡಿಹೋಗುವ ಹೊರಜಗತ್ತು " ರಾಜಾ ದೇಖೋ ರಾಣೀ ದೇಖೊ " ಚಿತ್ರಪಟದಂತಿತ್ತು. ಆ ಪಟಗಳನ್ನು ನೋಡಬೇಕೆಂಬ ಹಂಬಲ ತನಗೆ. ಆದರೆ ಸರಲಕ್ಕನು ಮಾತ್ರ ಒಂದೇಸವನೆ ಏನನ್ನೊ ಹೇಳುತ್ತಿದ್ದಾಳೆ. ನಡ-ನಡುವೆ " ತಿಳೀತೇನು, ಕುಮುದಾ " ಎನ್ನುತ್ತಿದ್ದಾಳೆ. ಅದಕಾಗಿ ಆಕೆಯ ಮಾತನ್ನು ಕೇಳಲೇಬೇಕಾಯಿತು. ಆದಾದರೂ ಯಾವ ಮಾತು ? ದಾರಿಯುದ್ದಕ್ಕೂ ರಾಮಣ್ಣನ ಪ್ರಶಂಸೆ. ಮಾತುಮಾತಿಗೆ " ಅವರು ಹೀಂಗ ಅಂತಾರ " ಎಂದು ಪಲ್ಲವಿ. " ಅವರು ಬರೆಯೋ ಚಟದವರು, ಅವರ ಸ್ವಭಾವ ವಿಚಿತ್ರ, ನಿನಗ ನಗೆಚಾಟಿಕೆ ಮಾಡಿದರೆ ಅಳಬ್ಯಾಡ ಮತ್ತೆ ! " ಎಂದು ಸರಲಕ್ಕ ಎಷ್ಟು ಗಂಭೀರವಾಗಿ, ಎಂತಹ ಕಳಕಳಿಯಿಂದ ಹೇಳಿದ್ದಳು. ಈಗಲೂ ಆಕೆಯ ಮುಖ ನೆನಪಿಗೆ ಬಂದರೆ ನಗೆ ಬರುವುದು. " ಮತ್ತ ಅವರು ಚಾಷ್ಟಿ ಮಾಡ್ತಾರಂತ ನೀನೂ ಮಾಡ್ಲಿಕ್ಕೆ ಹೋದೀ ! ಥಟ್ಟನೆ ಬೈದುಬಿಟ್ಟಾರು ! ಯಾಕೆಂದರೆ, ಯಾವ ವ್ಯಾಳ್ಯಾಕ್ಕ ಅವರ ಮನಸ್ಸು ಹ್ಯಾಂಗಿರ್ತದ ನೇಮುದ್ದಲ್ಲ " ಎಂದು ಎಚ್ಚರಿಸಿದ್ದಳು. ಅದನ್ನೆಲ್ಲ ಕೇಳಿ ರಾಮಣ್ಣನನ್ನು ನೋಡಲು ಕುಮುದಳಿಗೆ ಅತ್ಯಂತ ಕುತೂಹಲವಾಗಿತ್ತು. ತಾನೂ ಸರಲಕ್ಕ ಮನೆಗೆ ಬಂದರು, ಸ್ಟೇಶನ್‌ದಿಂದ. ಬಾಗಿಲು ತೆರೆದಿತ್ತು. ಒಳಗೆ ಯಾರೂ ಇದ್ದಂತಿರಲಿಲ್ಲ. ಆದರೂ ಸರಲಕ್ಕ ಒಳದನಿಯಿಂದಲೆ ಮಾತಾಡತೊಡಗಿದಳು. " ಏ—ಕೈಕಾಲು ತೊಳೆದುಕೊ. ನಾನು ಚಹ ಮಾಡ್ತೀನಿ. ಕೋಣೆಯ ಬಾಗಿಲು ಮುಚ್ಚೇದ ಅಂದಮ್ಯಾಲೆ ಅವರು ಒಳಗ ಬರೀತಾ ಕೂತಿರಬೇಕು. ಸದ್ದು ಮಾಡಬ್ಯಾಡ. ಚಹ ತಯಾರಾದಮ್ಯಾಲೆ ನೋಡೋಣಂತೆ " ಎಂದಿದ್ದಳು. ಕುಮುದಳಿಗೆ ಇನ್ನಿಷ್ಟು ತಡೆಯದಾಗಿ ಕೋಣೆಯ ಬಾಗಿಲನ್ನೆ ದಿಟ್ಟಿಸುತ್ತ ನಿಂತಳು. ಎಷ್ಟೊತ್ತು ಹಾಗೆಯೆ ನಿಂತಿದ್ದಳೊ ! ಒಮ್ಮೆಲೆ ಕೋಣೆಯಿಂದ " ಸರಲಾ " ಎಂದು ಕೂಗು, ಅದೇ ವೇಳೆಗೆ ಧಡಾರೆಂದು ಬಾಗಿಲು ತೆರೆದ ಸದ್ದು, ಎದುರು ರಾಮಣ್ಣನ ಮೂರ್ತಿ!

ಕುಮುದಳಿಗೆ ಏನು ಮಾಡಬೇಕೊ ತಿಳಿಯದಾಗಿ ಕಲ್ಲಿನ ಗೊಂಬೆಯಂತೆ ಕಾಲೂರಿ ನಿಂತಳು. "Sorry, ಸರಲಾ. ಸ್ವಲ್ಪೇ ಉಳಿದಿತ್ತು, ಮುಗಿಸಲೇ ಬೇಕಾಗಿತ್ತು" ಎಂದವನೆ ತನ್ನ ಹತ್ತಿರ ಬಂದು ಎರಡೂ ಕೈಗಳನ್ನು ಹೆಗಲ ಮೇಲೆ ಚೆಲ್ಲಿ "ಸರಲಾ, ಈ ಪುಸ್ತಕದಿಂದ ನನ್ನ ಜೀವನಾನೇ ಬದಲಾಗೋದು ನೋಡು; ನೀನು ಓದಿ ನೋಡಿದಿಯೆಂದರೆ ನಿನಗೂ ಹೊಳೆದೀತು. Shake Hands, ಸರಲಾ. ನಿನ್ನ ಗಂಡ ಇಂದಿನಿಂದ ಹೆಸರಾದ ಸಾಹಿತಿ" ಎಂದು ತನ್ನ ಭುಜಗಳನ್ನು ಬಲವಾಗಿ ಮುಷ್ಟಿಯಿಂದ ಬಿಗಿಯತೊಡಗಿದ. ಆಗ ಸರಲಕ್ಕ ಒಳಗಿನಿಂದ ಬಂದು "ಮುಗೀತೇನು ಬರೆಯೋದು" ಎಂದಾಗ, ಪಾಪ! ರಾಮಣ್ಣ ಬೆಚ್ಚಿ ದೂರ ಸರಿದು ತನ್ನನ್ನು ನೋಡಿ "ಎಲ! ಈ ಹುಡುಗೆ ಯಾರು? ಹಹ! ನನಗೂ ಅನ್ನಿಸಿತು, ಸರಲಾ ಇಷ್ಟು ಸಣ್ಣಾಕೆ ಹ್ಯಾಂಗ? ಅಂತ. ಯಾರಿಗ್ಗೊತ್ತು? ಅಣ್ಣಾಸ ಮನೇವಳಗ ಊಟ ಕಡಿಮೆಯಾಗಿ ಸೊರಗಿ ಸೊರಗಿ ಸಣ್ಣಾಕೆ ಕಾಣಿಸ್ತಾಳೇನೊ—ಅಂದುಕೊಂಡೆ.... ಹಹ...." ಎಂದು ತನ್ನ ಫಜೀತಿಗಾಗಿ ತಾನೇ ನಗತೊಡಗಿದ ರಾಮಣ್ಣ.... ಆದರೆ ನಡೆದ ಸಂಗತಿಗಿಂತಲೂ ಪಡೆದ ಅನುಭವವೊಂದು ಕುಮುದಳಿಗೆ ಮರೆಯದಾಗಿತ್ತು. ಅದೆಂದರೆ—ರಾಮಣ್ಣನ ಕೈಗಳು ತನ್ನ ಭುಜವನ್ನು ಮುಟ್ಟಿದ ಅನುಭವ. ಅದೇಕೊ—ಮೈ ನಡುಗಿದರೂ ಮನಸ್ಸು ಮಾತ್ರ—ಹೊಟ್ಟೆತುಂಬಿ ಉಂಡವನ ನಿದ್ರೆಯಂತೆ—ಸುಖದಲ್ಲಿ ತಟಸ್ಥವಾದಂತಿತ್ತು. ಈ ಆರು ವರ್ಷಗಳಲ್ಲಿ ಎಷ್ಟು ಸಲ ಆ ಬಾಗಿಲನ್ನು—ಮುಚ್ಚಿದ ಬಾಗಿಲನ್ನು—ನೋಡಿರುವಳೊ ಅಷ್ಟು ಸಲ ಕುಮುದಳು ಅಂದಿನ ತಟಸ್ಥ ಸುಖವನ್ನು ನೆನೆದು ಕಣ್ಣು ಮುಚ್ಚುತ್ತಿದ್ದಳು. ಈಗ ಕೂಡ ಕಣ್ಣು ಮುಚ್ಚಿದಾಗ ಮೊದಲೊಂದು ನಿಮಿಷ ಅದೇ ಸುಖೋದಯದ ಕಿರಣಗಳಂತೆ ಅವಳ ಮುಖದಲ್ಲಿ ಹೊಂಬೆಳಗಿನ ಕಾಂತಿ ಮಿಂಚುವುದು. ಕಣ್ಣೀರು ಸುರಿಯುವುದು. ಆದರೆ ಈಗ ಮಾತ್ರ ಕಣ್ಣೀರಿಗೆ ಕಾರಣ ಸುಖವೊ ದುಃಖವೊ ಎಂಬುದು ಆಕೆಗೆ ತಿಳಿಯದಾಗಿದೆ. ಈಗ ಅಂತರಂಗದಲ್ಲಿ ತಾಟಸ್ಥ್ಯವಿಲ್ಲ. ಆದುದರಿಂದ ತಟ್ಟನೆ ಮುಖವನ್ನೊರೆಸಿಕೊಂಡು ಕಣ್ದೆರೆದು, ಗಾಬರಿಯಿಂದ ಅತ್ತಿತ್ತ ನೋಡಿ, ಬಾಗಿಲು ಇನ್ನೂ ಮುಚ್ಚಿದೆ ಎಂಬುದಕ್ಕೆ ಸಮಾಧಾನವಾದಂತೆ ಉಸುರ್ಗರೆದು ಕೈಯೊಳಗೆ ಹಿಡಿದುಕೊಂಡಿದ್ದ ಪುಸ್ತಕವನ್ನು ಓದಲು ಪ್ರಯತ್ನ ಮಾಡತೊಡಗಿದಳು.

೩

ಊಟ ಬೇಗ ಮುಗಿಯಿತು, ಸಿನೆಮಾ ಸುಳ್ಳಾಯಿತು, ಬರೆಯುವು ದೆಂದು ಹೇಳಿ ಬಾಗಿಲು ಮುಚ್ಚಿಕೊಂಡುದಕ್ಕೆ ಹೊರಗೂ ಹೋಗುವಂತಿಲ್ಲ, ಬೇಟೆಯ ನಾಯಿಗಳನ್ನು ತಪ್ಪಿಸಲು ಹೋರಿನಲ್ಲಿ ಹುದುಗುವ ಮೊಲದಂತೆ ಕುರ್ಚಿ-ಮೇಜುಗಳ ನಡುವೆ ಸಿಕ್ಕುಬಿದ್ದೆನಲ್ಲ ಎಂದು ರಾಮಣ್ಣನು ಕೋಣೆ ಯಲ್ಲಿ ಚಡಪಡಿಸುತ್ತಿದ್ದನು. ಕೊನೆಗೆ ಮೇಜಿನ ಮೇಲೆ ಮೊಳಕೈಗಳನ್ನೂರಿ, ತಲೆಯನ್ನು ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡು, ಆಕಾಶವನ್ನು ನೋಡಲು ಹವಣಿಸುವವನಂತೆ ಎದುರಿನ ಗೋಡೆಯನ್ನು ನೋಡಿದನು. ಅವ ನಿಗೆ ಕಂಡದ್ದು ಗೋಡೆಗೆ ತೂಗುಹಾಕಿದ ಸರಲೆಯ ಭಾವಪಟ. ಎಚ್ಚೆತ್ತವ ನಂತೆ ಮತ್ತೊಮ್ಮೆ ಹೆಂಡತಿಯ ಚಿತ್ರವನ್ನು ನೆಟ್ಟ ನೋಟದಿಂದ ದಿಟ್ಟಿಸಿದನು. ಇದೇನು ? ಸರಲೆಯ ತುಟಿಗಳು ಬಿರಿದುವೆ ? ತಾನು ಬರೆಯದೆ ಗೋಳಾಡು ವುದನ್ನು ನೋಡಿ ಆಕೆ ಮುಗುಳ್ನಗೆ ಬೀರುತ್ತಿರುವಳೆ ? " ನಾನು ಹೇಗೆ ಬರೆ ಯಲಿ ? ಸರಲಾ, ನಿನಗೆ ಗೊತ್ತಿದ್ದೂ ನಗುವೆಯಲ್ಲ ? " ಎಂದು ಹಟಮಾರಿ ಹುಡುಗನ ದನಿಯಲ್ಲಿ ಉಸುರ್ಗರೆದನು.

ರಾಮಣ್ಣನು ಹೆಂಡತಿಯ ಚಿತ್ರವನ್ನು ನೋಡಿ ಹಾಗೆ ಉಸಿರಿದ್ದಕ್ಕೆ ಕಾರಣವಿಲ್ಲದಿರಲಿಲ್ಲ. ತನ್ನ ಲೇಖನದ ತಂತ್ರವೆಲ್ಲ ಸರಲೆಗೆ ಗೊತ್ತಿತ್ತು. ಇಷ್ಟೇಕೆ ? ಸರಲೆ ಸ್ವತಃ ಆ ತಂತ್ರದ ಒಂದು ಭಾಗದಂತಿದ್ದಳು.

" ಸರಲಾ, ನನಗ ಬರೀಬೇಕಾಗೇದ " ಎನ್ನುತ್ತಿದ್ದ ರಾಮಣ್ಣ.

" ಏನು ಕತೆಯೊ, ನಾಟಕಾನೊ, ಕಾದಂಬರೀನೋ—ಏನ್ಬರೀತೀರಿ ?" ಎಂದು ಯಾವಾಗಲೂ ಆ ಮಾತಿಗೆ ಸರಲೆಯ ಪ್ರಶ್ನೆ.

" ಹಹ ! ಅಂದ್ರೆ ? ಬರೀತೀನಿ ಅಂದ್ರ, ನಿನಗೇನು ಕಾರಕೂನನ ಹಾಂಗ ಲೆಕ್ಕ ಇಲ್ಲ ರಿಪೋರ್ಟ ಬರೀತೀನಿ ಅನ್ನಿಸಿತೇನು ? " ಎಂದು ರಾಮಣ್ಣ ಗುಡುಗುವ.

" ಅಲ್ಲ—ನಿನ್ನೆ ಏನೇನೊ ಹೇಳಿದ್ದಿರಿ—ಅದರದೇ ಕತೆ ಮಾಡ್ತೀರೊ, ನಾಟಕಾ ಮಾಡ್ತೀರೊ ಅಂತ ಕೇಳಿದೆ." ಸರಲಾನ ಉತ್ತರ.

ಆಗ ರಾಮಣ್ಣನ ನೆನಪಿಗೆ ಬರುವುದು ತಾನು ಬರೆಯಬೇಕಿದ್ದ ವಿಷಯ ಯಾವುದು ಎಂದು. ಆದರೆ ಹೆಂಡತಿಯ ಮುಂದೆ ಅದನ್ನು ಒಪ್ಪುವುದು

ಹೇಗೆ ? ಅದಕಾಗಿ ತುಸು ಸಿಟ್ಟಿನಿಂದಲೆ ಹೇಳುತ್ತಿದ್ದ, "ಹುಚ್ಚಿ ! ನಾಟಕಾನೇ ಬರೀತೀನಿ ಅಂತ ಹೇಳಲಿಲ್ಲೇನು ?" ಎನ್ನುವ.

"ಮತ್ತೆ ನಾಟಕ ಮಾಡಿದರೆ ಎಷ್ಟೋ ತೋರಿಸಲಿಕ್ಕೆ, ತಿಳಿಸಲಿಕ್ಕೆ ಬರೋದಿಲ್ಲ ಅಂದಿದ್ದಿರಿ. ಅದಕ್ಕ ಕಾದಂಬರಿ ಬರೀತೀರೇನು ಅಂತ ಕೇಳಿದೆ" ಎನ್ನುವಳು ಸರಲಾ.

ಎಂತಹ ಮೋಜು ! ತಾನು ನಾಟಕರೂಪದಲ್ಲಿ ಬರೆಯುವುದು ಎಂದು ಹೇಳಿರಲಿಲ್ಲ, ಅದು ತನ್ನ ಸುಳ್ಳು; ನಾಟಕದಲ್ಲಿ ಶಕ್ಯವಿಲ್ಲ ಎಂದು ತಾನು ಹೇಳಿದ ಎಂಬ ಸರಲೆಯ ಮಾತೂ ಸುಳ್ಳು. ಆದರೂ ಇಂತಹ ಸುಳ್ಳುಗಳನ್ನು ಲಕ್ಷ್ಯಕ್ಕೆ ತಾರದೆ, "ಅದಕೇ ನಿನ್ನೆ ಸುರು ಮಾಡಲಿಲ್ಲ. ಕಾದಂಬರಿ ಬರೆಯಬೇಕೆಂದು ನಿನ್ನೆಯೆ ಗೊತ್ತುಮಾಡಿದೆ. ಅದನ್ನೆ ಈ ಹೊತ್ತಿನಿಂದ ಬರೀತೀನಿ ಅಂದೆ" ಎಂದು ಸಾಧಿಸುವ.

"ಅಯ್ಯ ! ಕಾದಂಬರೀನೇ ಬರೀತೀರಾ !" ಎಂದು ಸರಲೆ ಮುಖವನ್ನೂ ಕಣ್ಣುಗಳನ್ನೂ ಅರಳಿಸುವಳು. ಅವಳಿಗಾದ ಆ ಆನಂದ–ಅಭಿಮಾನಗಳನ್ನು ಕಂಡು ಅದಕ್ಕಾಗಿಯಾದರೂ ತಾನು ಕಾದಂಬರಿಯನ್ನೆ ಬರೆಯಬೇಕೆಂದು ನಿಶ್ಚಯಿಸುತ್ತಿದ್ದ.

"ಸರಲಾ, ನೀನು ನನ್ನ ಸ್ಫೂರ್ತಿಯಾಗಿದ್ದಿ" ಎಂದು ಈಗ ರಾಮಣ್ಣನು ಭಾವಪಟದ ಸರಲೆಯ ಮುಂದೆ ಒಪ್ಪಿಕೊಂಡನು.

ಒಂದೇ–ಎರಡೇ–ಎಷ್ಟು ವಿಧವಾಗಿ ಸರಲೆಯಿಂದ ಸಹಾಯ ದೊರೆಯುತ್ತಿತ್ತು ? ಬರೆಯದ ಭಾಗವನ್ನು ಬರೆದಂತೆ ಆಕೆಯ ಮುಂದೆ ಹೇಳಿದಾಗ ಒಂದೊಂದು ಸಲ ಆಕೆಗೆ ಉತ್ಸಾಹವಾಗುತ್ತಿರಲಿಲ್ಲ. ಕ್ರಮೇಣ ಆಕೆಯ ವಿಚಾರದಂತೆ ಕತೆಯ ದಿಶೆಯನ್ನು ಬದಲಾಯಿಸುತ್ತಿದ್ದ. ಪುಸ್ತಕವನ್ನು ಮುಗಿಸುವಾಗಂತೂ ಆಕೆಯದೆ ಕೊನೆಯ ನಿರ್ಣಯ. ಮುಕ್ತಾಯದವರೆಗೆ ತಾನು ಕತೆಯನ್ನು ಹೇಳುವ, ಆಗ ಆಕೆ ಒಮ್ಮೆಲೆ "ಸಾಕು, ಮುಂದ್ಹೇಳಬ್ಯಾಡರಿ. ಹೀಂಗ ಆಯಿತಹುದಲ್ಲೊ ಕಡೆಗೆ ?" ಎಂದು ಚಿಕ್ಕ ಹುಡುಗರಂತೆ ಚಪ್ಪಾಳೆ ತಟ್ಟುವಳು. "ಭಲೆ ! ನನ್ನ ಸಹವಾಸದಿಂದ ನೀನೂ ಸಾಹಿತಿಯಾದಿ ?" ಎಂದು ಆಕೆಯ ಬೆನ್ನು ತಟ್ಟಿ ಕೋಣೆಗೆ ಹೋಗಿ ಆಕೆಯ ಸೂಚನೆಯಂತೆಯೆ—ಅದನ್ನು ಒಪ್ಪುತ್ತಿರಲಿಲ್ಲ ಮಾತ್ರ—ಕತೆಯನ್ನು

ಮುಕ್ತಾಯಗೊಳಿಸುತ್ತಿದ್ದ. ಚಹದ ಹೊತ್ತಿಗೊ, ರಾತ್ರಿ ಊಟವಾದ ಮೇಲೊ ಅದನ್ನು ತಂದು, "ಆಗ ನೀ ಹೇಳಿದ್ದಿಯಲ್ಲ? ಇಲ್ಲಿ ನೋಡು, ನಾನೂ ಹಾಂಗೇ ಮುಗಿಸಿದ್ದೆ ಕತೆಯನ್ನ!" ಎಂದು ಜಂಬದಿಂದ ಓದಿ ತೋರಿಸುವ.

"ಸರಲಾ, ಅದು ಮೋಸವಲ್ಲ, ಹುಡುಗ ಬುದ್ಧಿ. ಈಗ ಆ ಹುಡು ಗಾಟಕ್ಕೆ ಪುಟುವನ್ನು ಕೊಡಲು ಯಾರೂ ಇಲ್ಲ. ನಾನು ಹೇಗೆ ಬರೆಯಲಿ?" ಎಂದು ಚಿತ್ರದ ಎದುರು ಮತ್ತೆ ದೂರಿಕೊಂಡ.

ಕುಳಿತು ಕುಳಿತು ಬೇಸರವಾಯಿತು ರಾಮಣ್ಣನಿಗೆ. ತಾನೊಬ್ಬನೆ ಸಿನೆಮಾಕ್ಕೆ ಹೋದರೆ ಹೇಗೆ? ಅಬ್ಬ! ಅದಂತೂ ಪ್ರಮಾದವೆನ್ನಿಸುವುದು. ಏನಿಲ್ಲ, ಈ ಹುಡುಗೆಯ ಗಂಟು ಹಾಕಿಕೊಂಡುದು ತಪ್ಪು. ಆದರೇನು? ಹೊರಗೆ ಹಾಕಬೇಕೆ? ಆಕೆ ಎಲ್ಲಿಗೆ ಹೋಗಬೇಕು? ಇದಲ್ಲದೆ ಜನರಾದರೂ ಆಡಿಕೊಳ್ಳದೆ ಬಿಟ್ಟಾರೆಯೆ? ಹೆಂಡತಿ ತೀರಿದಾಕ್ಷಣ ಪಾಪ! ಅನಾಥ ಹುಡುಗೆಯನ್ನು ಅಡವಿಗೆ ಅಟ್ಟಿದ ರಾಮಣ್ಣ—ಎಂದು. ಎಲ್ಲಕ್ಕೂ ಹೆಚ್ಚಿನ ತೊಡಕೆಂದರೆ, ಸಾಯುವವರೆಗೂ ಕುಮುದಳ ಸಹವಾಸ ತಪ್ಪಿಲ್ಲ ಎಂಬುದು. ಯಾಕೆಂದರೆ, ಕುಮುದಳ ಮದುವೆಯಾಗುವುದು ಶಕ್ಯವಿಲ್ಲ ಎಂಬುದನ್ನು ರಾಮಣ್ಣನು ಚನ್ನಾಗಿ ಅರಿತಿದ್ದನು. ಸರಲೆ ಹಾಸಿಗೆ ಹಿಡಿದಂದಿನಿಂದ ಜನರು ಆಡಿಕೊಳ್ಳುತ್ತಿದ್ದರು, ಕೊನೆಕೊನೆಗೆ ಅದು ರಾಮಣ್ಣನವರೆಗೂ ಬಂದಿತು, ಕುಮುದಳ ಮತ್ತು ತನ್ನ ಸಂಬಂಧದ ಬಗ್ಗೆ ಬೆಳೆಯುತ್ತಿದ್ದ ಸಂಶಯ. ಯಾವುದು ಜನರಿಗೆ ಸಂಶಯವಿದ್ದಿತೊ ಅದು ರಾಮಣ್ಣನಿಗೆ ಅನುಭವದ ಮಾತಾಗಿತ್ತು. "ಸರಲಾ, ಅದೂ ನಿನ್ದೆ ತಪ್ಪು" ಎಂದು ರಾಮಣ್ಣ ಭಾವ ಪಟಕ್ಕೆ ಆಹ್ವಾನ ಕೊಡುವವನಂತೆ ಹೇಳಿದ. ತಟ್ಟನೆ ಅವನ ಮೈ ನಡುಗಿತು. "ಕುಮುದಳನ್ನ ನೀವು ಮದುವೆ ಯಾಕೆ ಆಗೋದಿಲ್ಲ" ಎಂದು ಆ ಭಾವ ಪಟದಲ್ಲಿಯ ತುಟಿಗಳು ನುಡಿದಂತೆ ಭಾಸವಾಯಿತು. ಛೆ! ಈ ವಿಚಾರ ಯಾಕೆ ಬಂದಿತು ಇಂದು? ಕುಮುದಳ ಕೂಡ ಮದುವೆ? ಅಶಕ್ಯ. "ಸರಲಾ, ನಿನಗೇ ಗೊತ್ತಿದೆ. ನಿನ್ನ ನನ್ನ ಸಹವಾಸದಿಂದ ನಾವಿಬ್ಬರೂ ಒಂದಾದಂತೆ ಆಗಿದ್ದಿವಿ. ಈ ಹೊತ್ತು ನೀನು ದೇಹದಿಂದ ಬೇರೆಯಾಗಿ ಇಲ್ಲ; ಆದರೇನು? ನನ್ನೊಳಗೆ ಮೈಗೂಡಿಸಿಕೊಂಡುಬಿಟ್ಟಿರುವೆ. ನಾನು ಇರುವವರೆಗೆ ನೀನು ನನ್ನಲ್ಲಿ ಇರುವಾಳೆ, ನೀನು ಹಾಗೆ ಇರುವಾಗ ಇನ್ನೊಬ್ಬರಿಗೆ ಅಲ್ಲಿ ಜಾಗೆ

ಎಲ್ಲಿಂದ ಬರಬೇಕು ? ಶಕ್ಯವಿಲ್ಲ, ಸರಲಾ, ಕುಮುದಳ ಕೂಡ ಮದುವೆ ಶಕ್ಯ ಇಲ್ಲ. ಇಷ್ಟೇಕೆ ? ಇನ್ನೊಂದು ಮದುವೀನೇ ಶಕ್ಯವಿಲ್ಲ " ಎಂಬ ವಿಚಾರದ ಉದ್ವೇಗದಿಂದ ರಾಮಣ್ಣನ ಕಣ್ಣಳಲ್ಲಿ ನೀರಿನ ಮಂಜೊಡೆಯಿತು. " ಆದರೆ, ಇದೆಲ್ಲ ತಪ್ಪು ನಿನ್ದೆ " ಎಂದು ಉದ್ವೇಗವನ್ನು ತಡೆದುಕೊಳ್ಳಲು ನೆಪವಾಗಿ ದೂರಿಕೊಂಡ.

ಶಾಂತ ಮನಃಸ್ಥಿತಿಯಲ್ಲಿದ್ದಾಗ ತಾನು ಈ ಮಾತನ್ನು ಆಡುತ್ತಿರಲಿಲ್ಲ ಎಂದು ರಾಮಣ್ಣನು ಬಲ್ಲ. ಯಾಕೆಂದರೆ, ಇನ್ನೊಬ್ಬರ ಮೇಲೆ ತಪ್ಪು ಹೊರಿಸುವುದು ದುರ್ಬಲತೆಯ ಲಕ್ಷಣವಲ್ಲವೆ ? ಹಾಗೆ ನೋಡಿದರೆ ಈ ವಿಷಯದಲ್ಲಿ ಯಾರದು ತಪ್ಪು ? ಯಾರದೂ ಅಲ್ಲ, ತನ್ನಷ್ಟಕ್ಕೆ ತಾನೇ ನಡೆಯುವುದು, ಅನುಕೂಲವಿದ್ದರೆ ಒಪ್ಪು, ಇಲ್ಲದಿದ್ದರೆ ತಪ್ಪು ! ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾಣಿ ಮಾಯಯಾ— ಎಂದು ಗೀತೆಯಲ್ಲಿ ಹೇಳಿಲ್ಲವೆ ? ಅಲ್ಲಿ ಒಳಗೆ ದೇವನಿದ್ದಾನೆ, ಅವನು ಪ್ರಾಣಿಗಳನ್ನು ಕುಣಿಸುತ್ತಾನೆ ಎಂದಿದೆ; ಇಲ್ಲಿ ದೇವನ ಮಾತಿಲ್ಲ, ಆದರೆ ಇದೂ ಒಳಗಿನದೊಂದು ಶಕ್ತಿಯೆ. ಪ್ರವಾಲಶೋಭಾ ಇವ ಪಾದಪಾನಾಂ ಶೃಂಗಾರಚೇಷ್ಟಾ ವಿವಿಧಾ ಬಭೂವುಃ ಎಂದು ಕಾಲಿದಾಸನು ಹೇಳಿದ್ದು ಇನ್ನಿಷ್ಟು ಸಮಂಜಸವಿದೆ. ಗಿಡಕ್ಕೆ ಚಿಗುರು ಮೂಡುವುದು ಎಷ್ಟು ಪ್ರಕೃತಿಸಹಜವೊ ಅಷ್ಟೆ ಪ್ರಾಣಿಗೆ ಶೃಂಗಾರಚೇಷ್ಟೆ ಸಹಜ....ಛೆ ! ಇದೆಲ್ಲ ಆತ್ಮಸಮರ್ಥನೆಯ ಸಮಾಧಾನವಾಗಿದೆ, ಅದೂ ದುರ್ಬಲತೆಯ ಲಕ್ಷಣ ಎಂದು ರಾಮಣ್ಣನು ಆ ಸರಣಿಯನ್ನು ಬಿಟ್ಟುಕೊಟ್ಟನು. ಆದರೂ ಒಂದು ದೃಷ್ಟಿಯಿಂದ ತಪ್ಪು ಸರಲೆಯ ಪಾಲಿಗೆ ಬಿಟ್ಟಿದ್ದಲ್ಲ ಎಂದು ಮತ್ತೆ ಭಾವಪಟವನ್ನು ನೋಡುತ್ತ ವಿಚಾರಮಾಡಿದನು. ಆ ದಿನ ನಡೆದ ಸಂಗತಿ ಮಹತ್ತ್ವದ್ದಲ್ಲ, ಅದು ನಡೆಯಬೇಕಿರಲಿಲ್ಲ, ನಡೆದುದೂ ಅಕಸ್ಮಾತ್ತಾಗಿ. ಸುಮಾರು ೨-೨॥ ವರ್ಷಗಳ ಮುಂಚಿನ ಸಂಗತಿ. ಸರಲೆ ಆಗಲೇ ಹಾಸಿಗೆ ಹಿಡಿದಿದ್ದಳು. ಪಾಪ ! ಮೂರು ವರ್ಷ ಹಾಸಿಗೆ ಹಿಡಿದು ಕ್ಷೀಣವಾಗುತ್ತ ಸತ್ತುಹೋದ ಹೆಂಡತಿಯ ಮೇಲೆ ತಪ್ಪನ್ನು ಹೊರಿಸಬಹುದೆ ? ತಪ್ಪನ್ನು ಹೊರಿಸುವುದಲ್ಲ, ಘಟನೆಯನ್ನು ತಿಳಿದುಕೊಳ್ಳುವುದು ಎಂದು ಸಮಾಧಾನವನ್ನು ತಂದುಕೊಂಡ. ಅಂದು ಹಾಸಿಗೆಯಲ್ಲಿ ಸರಲೆ ಒರಗಿದ್ದಳು, ಬದಿಗೆ ಕುಮುದಳು ಕುಳಿತಿದ್ದಳು. ರಾಮಣ್ಣ ಹೊರಗಿನಿಂದ

ಬಂದ, ಬಂದವನೆ ಸರಲೆಯ ಕಡೆಗೆ ಧಾವಿಸಿ, ಹಾಸಿಗೆಯ ಇನ್ನೊಂದು ಬದಿಗೆ ಬಂದು ಕುಳಿತುಕೊಳ್ಳುತ್ತ " ಈ ದಿನ ಜ್ವರ ಬಂದಿತ್ತೇನು ? " ಎಂದ. ಸರಲೆ ಮುಗುಳ್ನಗೆಯಿಂದ ತಲೆ ಅಲ್ಲಾಡಿಸಿದಳು. ಆದರೂ ರಾಮಣ್ಣನಿಗೆ ಸಮಾಧಾನವಿಲ್ಲ. " ಈಗ ಜ್ವರ ಇಲ್ಲವಲ್ಲ " ಎನ್ನುತ್ತ ಹೊದಿಕೆಯ ಕೆಳಕ್ಕೆ ಕೈಹಾಕಿ ಸರಲೆಯ ಮೈಮುಟ್ಟಿ ನೋಡಲು ಕೈಚಾಚಿದ. ಅದೇ ಕಾಲಕ್ಕೆ ಕುಮುದಳೂ ಆ ಕೆಲಸದಲ್ಲಿಯೆ ತೊಡಗಿದ್ದಳೇನೊ ? ಒಮ್ಮೆಲೆ ಇಬ್ಬರ ಕೈಗೆ ಕೈ ತಾಕಿತು. ಒಂದು ಕ್ಷಣ ರಾಮಣ್ಣ ಅವಾಕ್ಕಾದ. ತನಗೆ ಮುಟ್ಟಿದ ಕೈಗೆ ಕೂಡಲೆ ಬೆವರೊಡೆದದ್ದು ಕಂಡುಬಂದಿತು. ಮುಖ ಮೇಲೆ ಮಾಡಿ ಕುಮುದಳನ್ನು ನೋಡಿದ, ಅವಳೂ ಪೆಚ್ಚು ಕಳೆಯಿಂದ ಇವನನ್ನೆ ನೋಡುತ್ತಿದ್ದಳು. " ಅಲ್ಲ–ಬೆವರು—" ಎಂದವನೆ ತಡೆದು ಸುಧಾರಿಸಿಕೊಂಡು, " ಅಂದ್ರೇನು ಬೆವರು ಬಿಟ್ಟು ಇಳೀತೋ, ಏನು ಜ್ವರ ಬಂದಿರಲೇ ಇಲ್ಲವೊ ? " ಎಂದು ಸರಲೆಯನ್ನು ಕೇಳಿದ. ಅವಳ ಮುಖ ಮುಗುಳ್ನಗೆಯಿಂದ ಅರಳಿತ್ತು. ಅಶಕ್ತತೆಗಾಗಿ ಹೆಚ್ಚು ಸ್ಪೃಹಣೀಯವಾಗಿ ಕಂಡಿತು. ಆಕೆ ನಗುತ್ತಲೆ " ಇಲ್ಲ ಎಂದು ಮೊದಲೇ ಹೇಳಲಿಲ್ಲವೆ ? " ಎಂದಳು. ಆ ಮಾತಿನ ರೀತಿ, ಆ ಮುಗುಳ್ನಗೆ–ಇವುಗಳಿಂದ ರಾಮಣ್ಣನಿಗೆ ಸಂಶಯ ಬಂದಿತು. ಸರಲೆಗೆ ತಿಳಿದಿರಬಹುದೆ ? ಒಂದು ಕಣ್ಣೆವೆ-ಗಳಿಗೆಯಲ್ಲಿ ಇಬ್ಬರನ್ನು ಪೆಚ್ಚು ಮಾಡಿದ, ತೀರ ಅಕಲ್ಪಿತವಾಗಿ ಮಿಂಚಿದ ಆ ಘಟನೆ—ಅದರ ಪರಿಣಾಮ—ಸರಲೆಗೆ ಹೊಳೆದಿತ್ತೆ ? ಹೊಳೆದಿತ್ತು, ಅದಕಾಗಿಯೆ ಆಕೆ ಮುಂದೆ ಎಚ್ಚರದಿಂದಿರಬೇಕಿತ್ತು, ನನ್ನನ್ನೂ ಎಚ್ಚರಿಸಬೇಕಿತ್ತು, ಹಾಗೆ ಮಾಡಲಿಲ್ಲ, ಆದ್ದರಿಂದ ಇಂದಿನ ಪರಿಸ್ಥಿತಿಗೆ ಆಕೆಯ ಆ ತಪ್ಪೇ ಕಾರಣ—" ತಿಳೀತೇನು ? ನೀ ಒಂದ್ಮಾತಾಡಿದ್ದರ ಉಳೀತಿತ್ತು " ಎಂದು ಭಾವಪಟಕ್ಕೆ ಬುದ್ಧಿಪಾಠವನ್ನು ಹೇಳಿದನು.

ಹೊರಗೆ ಹೋಗುವ ಹಾಗಿಲ್ಲ, ಬರೆಯುವುದೂ ಇಲ್ಲ, ಕಣ್ಮುಂದೆ ಭಾವಪಟವಿದ್ದರೆ ಸರಲೆಯ ಸ್ಮರಣೆ ಬಿಟ್ಟದ್ದಲ್ಲ, ಮಾಡುವುದಾದರೂ ಏನು—ಎಂದು ತುಸು ಸಿಡುಕಿನಿಂದ ರಾಮಣ್ಣ ಕುರ್ಚಿಯಿಂದ ಎದ್ದ. ಗಡಿಯಾರವನ್ನು ನೋಡಿಕೊಂಡ. ಇನ್ನೂ ೮॥ ಗಂಟೆ ! ಮಲಗುವ ಸಮಯವೂ ಅಲ್ಲ. ಮಲಗುವ ವಿಚಾರ ಬಂದೊಡನೆ ಮತ್ತೆ ತಿರುಗಿ ನಿಂತು " ಎಲ್ಲ ನಿನ್ನ ತಪ್ಪು ಅಂದೆ " ಎಂದು ಭಾವಪಟದೆದುರು ಒಳದನಿಯಲ್ಲಿಯೆ ಅಬ್ಬರಿಸಿ ಮತ್ತೆ ಕುರ್ಚಿಯಲ್ಲಿ ಬಿದ್ದುಕೊಂಡ.

೪

ಕುಮುದ ಉಸುರ್ಗರೆದಳು. ಪುಸ್ತಕ ಎಲ್ಲಿದೆಯೊ? ಮನಸ್ಸು ಎಲ್ಲಿದೆಯೊ? ಏನು ಮಾಡುವುದು? ಹೋಗುವುದೆಲ್ಲಿ? ಇತ್ತಿತ್ತಲಾಗಿ ಯಾರ ಕಡೆ ಹೋಗಲೂ ಮನಸ್ಸಾಗುತ್ತಿರಲಿಲ್ಲ. ತಾನು ಹೋದೊಡನೆ ಕೂಡಿದ ಹೆಂಗಸರು ತಟ್ಟನೆ ಮಾತನ್ನು ತಡೆದು ಹುಸಿನಗೆಯಿಂದ ತನ್ನನ್ನು ಬರಮಾಡಿ ಕೊಳ್ಳುತ್ತಿದ್ದರು. ಅದುವರೆಗೆ ಅವರು ತನ್ನ ಸಲುವಾಗಿಯೆ ಮಾತನಾಡು ತ್ತಿದ್ದರೆಂಬುದು ಕುಮುದಳಿಗೆ ತಿಳಿಯದಿರುತ್ತಿರಲಿಲ್ಲ. ಅನಿರ್ವಾಹ. ಮಾಡು ವುದು ಬೇಕು, ಆಡಿಸಿಕೊಳ್ಳುವುದು ಬೇಡ ಎಂದರೆ ವ್ಯವಹಾರವು ಮನೆಯು ಸೊತ್ತೆ? ಏನೆ ಇರಲಿ, ಹೋಗಲು ಅಷ್ಟೊಂದು ಮನಸ್ಸು ಹಾತೊರೆಯು ತ್ತಿರಲಿಲ್ಲ. ಇಷ್ಟಾಗಿ, ಈಗ ರಾತ್ರಿಯ ೮॥ ಗಂಟೆ. ಹೋಗಬೇಕೆಂದರೂ ಶಕ್ಯ ವಿಲ್ಲ. ಊಟ ಮುಗಿದಿದೆ. ಮಲಗುವುದೊಂದೇ ತನ್ನ ಪಾಲಿಗೆ ಉಳಿದಿದೆ. "ಮಲಗುವುದೆಂ"ದಾಕ್ಷಣ ಕುಮುದಳ ಮೈ ನಡುಗಿತು, ಮುಖ ಬೆವ ರಿಟ್ಟಿತು. ಇಂದಿಗೆ ಎರಡು ವರ್ಷಗಳಾದುವು— ಕುಮುದ ಮತ್ತು ರಾಮಣ್ಣ ಒಂದೆಡೆ ಮಲಗುತ್ತಿದ್ದು. ಎಂತಹ ಮೋಸ! ಪಾಪ! ಸರಲಕ್ಕ ಹಾಸಿಗೆ ಹಿಡಿದ ಪ್ರಾಣಿ. ಅವಳಿಗೆ ತಿಳಿಯುವುದೆ ಶಕ್ಯವಿದ್ದಿರಲಿಲ್ಲ. ಹಾಗೂ ಹೀಗೂ— ಒಂದು ದಿನ ರಾಮಣ್ಣನ ಕೈಗೆ ತನ್ನ ಕೈ ತಾಕಿದಂದಿನಿಂದ— ಇಬ್ಬರಿಗೂ ತಿಳಿಯ ದಂತೆ ಈ ಘಟನೆ ನಡೆದುಹೋಗಿತ್ತು. ಮೊದಮೊದಲು ಕುಮುದಳಿಗೆ ಇದೇನು, ಹೇಗೆ ನಡೆಯಿತು— ಎಂಬುದರ ಎಚ್ಚರ ಕೂಡ ಇದ್ದಿರಲಿಲ್ಲ. ಅಷ್ಟೊಂದು ಸುಖದ ಸವಿಗನಸುಗಳಲ್ಲಿ ತನ್ಮಯಳಾಗಿದ್ದಳು. ಕೈಗೆ ಕೈ ಸೋಂಕಿದಾಗ ತಪ್ಪಿದ ಎಚ್ಚರವು ಮೊನ್ನೆ-ಮೊನ್ನಿನ ವರೆಗೂ ಮರಳಿರಲಿಲ್ಲ. ಮತ್ತೆ ಮೈ ನಡುಗಿತು. ಆಗ ರಾಮಣ್ಣನ ಬರವನ್ನು ನಿರೀಕ್ಷಿಸುತ್ತ ನಿದ್ದೆಯ ಸೋಗಿನಲ್ಲಿ ಮಲಗು ತ್ತಿದ್ದ ಸುಖ ಎಲ್ಲಿ? ಈಗ ರಾಮಣ್ಣನು ಮಗ್ಗುಲಲ್ಲಿ ಬಂದನೆಂದರೆ ಯಾವಾಗ ಬೆಳಗಾದೀತೆಂದು ಅಲ್ಲಿಯ ವರೆಗೆ ಬಾರದಂತೆ ನಿದ್ದೆಯನ್ನು ತಡೆ ಯುವ ದುಃಖ ಎಲ್ಲಿ? ಆದರೆ ಇಂದಿನ ದುಃಖದಲ್ಲಿ ಅಂದಿನ ಸುಖದ ಸವಿ ನೆನಹುಗಳು ಕುಮುದಳನ್ನು ಬಿಟ್ಟಿರಲಿಲ್ಲ. ಈಗಲೂ ಆ ಅನುಭವವನ್ನು ನೆನೆ ದರೆ ಅವಳ ಮೈ ಪುಲಕಿತವಾಗುತ್ತಿತ್ತು. ಕೈಗೆ ಕೈ ಸೋಂಕಿದ ಮೊದಲ ಅನುಭವವಂತೂ—! ಅದೊಂದು ಅನುಭವವನ್ನು ಪಡೆದಾಕ್ಷಣ ತಾನು

ಸತ್ತಿದ್ದರೂ ತನ್ನ ಜನ್ಮ ಸಾರ್ಥಕವಾದಂತೆ ಎಂದು ಕುಮುದಳಿಗೆ ಎನ್ನಿಸು ತ್ತಿತ್ತು. ಸಾವು-ಜೀವ! ಅದೊಂದು ಕ್ಷಣ ತಾನು ಜೀವದಿಂದಿರುವಳೆ ಇಲ್ಲವೆ ಎಂಬುದರ ಎಚ್ಚರ ಕೂಡ ಇದ್ದಿರಲಿಲ್ಲ. ಮೈ ಪುಲಕಿತವಾಗಿತ್ತು, ತೊಡೆ ಗಳು ನಡುಗುತ್ತಿದ್ದುವು, ಎದೆ ಹಿಗ್ಗಿ ಹುಚ್ಚೆದ್ದು ಕುಣಿದಾಡುವುದೇನೊ ಎನ್ನುವಂತೆ ಹಾರುತ್ತಿತ್ತು, ತುಟಿ ಕಂಪಿಸುತ್ತಿದ್ದುವು, ನಾಲಗೆ ಒಣಗಿದಂತಿ ದ್ದರೂ ಬಾಯಿಗೆ ನೀರೂರಿದಂತೆನ್ನಿಸಿತ್ತು; ಎಲ್ಲಕ್ಕೂ ಹೊಸತಾದ ಅನುಭವ ವೆಂದರೆ ಯಾವುದಕ್ಕಾಗಿ ತನಗೆ ವಿಶೇಷವಾಗಿ ಲಜ್ಜೆ ಎನ್ನಿಸುತ್ತಿತ್ತೊ—ಆ ಅಂಗಾಂಗ ವಿಶೇಷವಾದ ಎರಡೂ "ಎದೆ"ಗಳಲ್ಲಿ ಮಿಂಚಿದ ಒಂದು ಸುಖ ಕರವಾದ ವೇದನೆ. ಅಂದಿನಿಂದ ತಾನು ರಾಮಣ್ಣನ ಸೊತ್ತಾದಳು. ದೇಹ ದಿಂದಲ್ಲ, ಹೃದಯದಿಂದ. ಕೈಬೆರಳಿನ ಸೋಂಕಿನಿಂದಲೆ ಇಡಿಯ ದೇಹಕ್ಕೆ ಹೊಸ ಜೀವವನ್ನು ಕೊಟ್ಟವನಿಗೆ ಇಡಿಯ ದೇಹವನ್ನೆ ಅರ್ಪಿಸುವುದು ಕಠಿಣವಾಗಿರಲಿಲ್ಲ.

ಒಮ್ಮೊಮ್ಮೆ ಕುಮುದಳಿಗೆ ಆಶ್ಚರ್ಯವೆನ್ನಿಸುತ್ತಿತ್ತು. ಇದೆಲ್ಲ ನಡೆದು ಹೋದುದು ಹೇಗೆ? ಸರಲಕ್ಕನು ಹಾಸಿಗೆ ಹಿಡಿದು ನಿಷ್ಕ್ರಿಯಳಾಗಿದ್ದ ಳೆಂದೆ? ಇಲ್ಲವೆ ತಾನು ಈ ಮನೆಯಲ್ಲಿ ಇರಲು ಬಂದುದಕ್ಕಾಗಿಯೆ? ಇಲ್ಲವೆ ಕೇವಲ ಕೈ-ಕೈಗಳ ಸ್ಪರ್ಶದಿಂದ ಚಿಗುರಿತೆ? ಆದರೆ ಯಾವುದೊ ಅಕಲ್ಪಿತ ರೀತಿಯಿಂದ ತಾನು ಸರಲಕ್ಕನ ಮನೆಗೆ ಇರಲು ಬಂದುದು, ಅಷ್ಟೇ ಅಕಲ್ಪಿತ ವಾಗಿ ಸರಲಕ್ಕನು ಹಾಸಿಗೆ ಬಿಡದ ರೋಗಿಯಾಗುವುದು, ಕೈಗೆ ಕೈ ತಾಕುವ ಆಕಸ್ಮಿಕ ಘಟನೆ ನಡೆಯುವುದು—ಇಷ್ಟೆಲ್ಲ "ಆಕಸ್ಮಿಕ" ಸಂಗತಿಗಳು ಒಂದು ನಿಯತಗತಿಯಲ್ಲಿ ನಡೆದುವಲ್ಲ? ರಾಮಣ್ಣನು ಹೇಳಿದ ದುಷ್ಯಂತ-ಶಕುಂತಲೆ ಯರ ಕತೆಯಂತೆ ತನ್ನದೂ ಕತೆ ಎಂದು ಕುಮುದಳು ನಂಬಿಕೊಂಡಿದ್ದಳು. ರಾಜಧಾನಿಯ ಅರಸನೆಲ್ಲಿ? ಅಡವಿಯ ಹುಡುಗಿಯೆಲ್ಲಿ? ಕಣ್ವಋಷಿ ಆಶ್ರಮ ದಲ್ಲಿ ಇಲ್ಲದ ದಿನವೆ ಆ ಅರಸನು ಅಲ್ಲಿ ಬರುವುದೇನು? ಇದೆಲ್ಲ ನೋಡಿದರೆ ದುಷ್ಯಂತ ಶಕುಂತಲೆಯರು ಕೂಡಿಬರುವುದು ದೈವದ ಎಣಿಕೆಯಾಗಿತ್ತೆಂದೇ ಹೇಳಬಹುದು. ಯಾರೂ ದಿಕ್ಕಿಲ್ಲದ ಅನಾಥೆಯಾದ ತನ್ನದೂ ದೈವದ ಎಣಿಕೆ ಯಾಕಾಗಿರಬಾರದು? ತನ್ನ ಮತ್ತು ರಾಮಣ್ಣನಲ್ಲಿ ಪರಸ್ಪರ ಮತ್ತು ಸಹಜ ಪ್ರೇಮ ಅಂಕುರಿಸಿರಬಾರದೇಕೆ? ೧೫-೧೬ ವರ್ಷದ ಕುಮುದಳಿಗೆ ಇದು

ಬಗೆಹರಿಯದ ವಿಚಾರವಾಗಿತ್ತು, ಆದರೂ ಆಕೆಯ ಮನಸ್ಸನ್ನು ಕಲಕುವ ವಿಚಾರವಾಗಿತ್ತು. ಕ್ರಮೇಣ ಅಂತಹ ಪ್ರೇಮ ತಮ್ಮಿಬ್ಬರಲ್ಲಿ ಊರಿದೆ ಎಂದು ಆಶೆ ನಂಬುಗೆಯಾಯಿತು, ನಂಬುಗೆಯಿಂದ ಆಶೆ ಪ್ರಜ್ವಲಿಸಿತು. ಕುಮುದಳ ಮೈ ಕ್ರಮೇಣ ಸೊರಗತೊಡಗಿತು, ಅವಳ ಮುಖದಲ್ಲಿ ಸದಾಕಾಲವೂ ಒಂದು ಅಲಕ್ಷ್ಯದ ಉದ್ವಿಗ್ನತೆಯ ಕಳೆ ಕಾಣುತ್ತಿತ್ತು. "ಪಾಪ! ಹುಡುಗಿಗೆ ನನ್ನ ಜೋಡಿ ಮನೆ ಹಿಡಿದ್ದಿಡಿದು ಸಾಕಾಗಿಹೋಗಿರಬೇಕು, ಮಾರಿಯು ಮ್ಯಾಲಿನ ಕಳೇನೇ ಹೋಗೇದ. ಎಂದಾದರೂ ಒಮ್ಮೆಯಾದರೂ ಹೊರಗ ಕರೆದುಕೊಂಡು ಹೋಗಿರಲ್ಲ" ಎಂದು ಸರಲಕ್ಕ ರಾಮಣ್ಣನಿಗೆ ಹೇಳಿದಾಗ ಕುಮುದಳು ಲಜ್ಜೆಯಿಂದ ನೆಲಕ್ಕೆ ಕುಸಿದಳು; ರಾಮಣ್ಣನು ಉತ್ತರವನ್ನು ಕೊಡಲು ಯಾವ ಆತುರವನ್ನೂ ತೋರಿಸಲಿಲ್ಲ ಎಂಬುದನ್ನು ಕಂಡು ಕುಸಿದವಳು ಹಾಗೇ ನೆಲದಲ್ಲಿ ಕೆಳಗಿಳಿದಂತಾಯ್ತು; ಕೊನೆಗೆ "ನೋಡೋಣ" ಎಂದಿಷ್ಟೆ ಎಂದಿದ್ದ ರಾಮಣ್ಣ.

ಮೊದಲ ಸಲ ರಾಮಣ್ಣನ ಜೊತೆಗೆ ತಿರುಗಾಡಿ ಬಂದದ್ದೂ ಮರೆಯದ ಮಾತೇ. ಅದಕಾಗಿ ತಾನೆಷ್ಟು ಉತ್ಸುಕಳಾಗಿದ್ದಳು! ಆದರೇನು? ಮನೆಯಿಂದ ಹೊರಬಿದ್ದು ತಿರುಗಿ ಮನೆಯಲ್ಲಿ ಕಾಲಿಡುವವರೆಗೆ ಒಂದು ತುಟಿ ಎರಡಾಗಲಿಲ್ಲ ತನ್ನದು! "ಸರಲಾ, ನಿನ್ನ ಈ ಹುಡುಗೆ ಮೂಕ ಅದನೊ ಕಿವುಡ ಅದನೊ? ನಿನಗ ಗೊತ್ತಿರಬೇಕಿಲ್ಲ?" ಎಂದು ರಾಮಣ್ಣನು ನುಡಿದಾಗ ಮಾತ್ರ ತಾನು ಅಲ್ಲಿಂದ ಓಡಿಹೋಗಿ ತನ್ನ ಕೋಣೆಯಲ್ಲಿ ಕುಳಿತದ್ದೂ, ಕುಳಿತೊಡನೆ ತಡೆಯದಂತಾಗಿ ಬಿಕ್ಕಿ ಬಿಕ್ಕಿ ಅತ್ತದ್ದೂ ಒಂದು ದೊಡ್ಡ ಕತೆಯೆ ಆಯಿತು. "ಆಕೆಯ ಬ್ಯಾಸರ ಕಳೀಲಿಕ್ಕೆ ಜೋಡಿ ಕರೆದುಕೊಂಡು ಹೋಗಿರಿ ಎಂದರೆ ಅಳಿಸಿಬಿಡೋದು ಹುಡುಗೇನ್ನ. ನಿಮ್ದೂ ಒಳ್ಳೇ ನಡತೆ!" ಎಂದು ಸರಲಕ್ಕ ನುಡಿದದ್ದಕ್ಕೆ ನೊಂದ ರಾಮಣ್ಣ ತನ್ನ ಕೋಣೆಗೆ ಬಂದಿದ್ದ. "ಎಲ! ಖರೇನೇ ಅಳತೀ ಏನು?" ಎಂದಿದ್ದ ತನ್ನ ಮುಖವನ್ನು ನೋಡಿ. ಬೆನ್ನು ಮೇಲೆ ಕಯ್ಯಾಡಿಸಿದ್ದ ಸಂತೈಸಲು. ಎಂತಹ ದುಃಖದ ಭಾರವನ್ನಾದರೂ ಹೊತ್ತೇನು ಎಂದು ಪುಲಕಿತವಾಗಿತ್ತು ತನ್ನ ಬೆನ್ನು. ಕಣ್ಣೀರು ಮಾತ್ರ ಮತ್ತೆ ತಟಕಿಕ್ಕಿತ್ತು. ಆಗ ರಾಮಣ್ಣ "ಕೆಳಗ ನಡೀ, ಕಣ್ಣೀರು ಒರಸಿಕೊ" ಎಂದು ಕಣ್ಣೀರನ್ನು ಒರೆಸಲು ತನ್ನ–ಕುಮುದಳ–ಸೆರಗನ್ನು ಮುಟ್ಟುವಾಗ

ತಾನು ನಾಚಿಕೆಯಿಂದ ದೂರ ಸರಿಯಲು ಹೋದಳು-ಆಗ ಅವನ ಕೈ ಮತ್ತೆ ತಾಕಿತು—ಈ ಸಲ ತನ್ನ "ಎದೆ"ಗೆ! ಆಗ ಮಾತ್ರ ಕುಮುದಳ ಕಾಲ್ಗಳಲ್ಲಿಯ ತ್ರಾಣವೆ ಹೋದಂತಾಯಿತು. ಕೊನೆಗೆ—ಏನಾಯಿತೊ? ಮೂರ್ಛೆ ಬಂದಿತೊ, ಬರುವುದರಲ್ಲಿದ್ದಿತೊ—ಅದೂ ತಿಳಿಯಲಿಲ್ಲ. ಎಚ್ಚರ ಬಂದಂತಾದಾಗ ರಾಮಣ್ಣನು ತನ್ನನ್ನು ಮಂಚದ ಮೇಲೆ ಕುಳ್ಳಿರಿಸಿ, ತಾನೂ ಬದಿಯಲ್ಲಿ ಕುಳಿತು, ಕೈಯಲ್ಲಿ ನೀರಿನ ಪಾತ್ರೆಯನ್ನು ಹಿಡಿದಿದ್ದ.

ಪಾಪ! ಸರಲಕ್ಕನದಾದರೂ ತಪ್ಪೇನು? ಕುಮುದಳ ಪ್ರಕೃತಿ ಸ್ವಸ್ಥವಿಲ್ಲ ಎಂಬುದೊಂದೇ ಕಾರಣಕ್ಕಾಗಿ ಆಕೆ ಕುಮುದಳನ್ನು ರಾಮಣ್ಣನ ಜೊತೆಗೆ ಹೊರಗೆ ಹೋಗಲು, ತಿರುಗಾಡಿ ಬರಲು, ಸಿನೇಮಾ ನೋಡಲು, ಪುಸ್ತಕವನ್ನು ಓದಲು ಪ್ರೋತ್ಸಾಹಿಸುತ್ತಿದ್ದಳು. "ನಾನೊಬ್ಬಾಕೆ ಹಾಸಿಗೆ ಹಿಡಿದೀನಿ ಅಂತ ನೀ ಯಾಕ ಮನೆಯ ಮೂಲೆ ಹಿಡಿದು ಬೆಳ್ಳಗಾಗ್ತೀ? ಒಂದು ತಾಸು ಹೀಂಗ ಅಡ್ಡಾಡಿ ಬಂದರಾಯಿತು. ನಾಯೇನು ಇಷ್ಟರಾಗೇ ಸಾಯ್ಲಿಕ್ಕೆ ಕೂತಿಲ್ಲ" ಎಂದು ಸರಲಕ್ಕ ಮೇಲಿಂದ ಮೇಲೆ ಹೇಳುತ್ತಿದ್ದಳು. ಅಂತೂ ಕುಮುದಳಿಗೆ ರಾಮಣ್ಣನ ಸಹವಾಸ ದೊರೆಯಿತು. ಸಹವಾಸ ದೊರೆಯಿತು, ಅದರ ಲಾಭ ಮಾತ್ರ ದೊರೆಯಲಿಲ್ಲ. ಎಳೆ ಹರೆಯದ ಕುಮುದಳಿಗೆ ಯಾವುದೊ ಒಂದು ವ್ಯಥೆ ಎನ್ನಿಸುತ್ತಿತ್ತು. ಮೊದ ಮೊದಲು ರಾಮಣ್ಣನ ಸಾಮೀಪ್ಯವಿಲ್ಲದಿದ್ದರೆ ಕಳವಳಗೊಳ್ಳುವ ಕುಮುದಳಿಗೆ ಈಗ ರಾಮಣ್ಣನ ಸಹವಾಸದಿಂದಲೆ ಹೆಚ್ಚು ಕಳವಳವಾಗತೊಡಗಿತು. ಒಮ್ಮೊಮ್ಮೆ ತಟ್ಟನೆ ಎದ್ದು ಹೋಗಿ ಅವನ ಎರಡೂ ಗಲ್ಲಗಳನ್ನು ಗಟ್ಟಿಯಾಗಿ ಹಿಡಿಯಬೇಕು ಎಂದೆನ್ನಿಸುವುದು; ಒಮ್ಮೊಮ್ಮೆ ಅವನ—ಅಸ್ತವ್ಯಸ್ತವಾಗಿ ಹರಡಿ ಬೆಳೆದ—ತಲೆಗೂದಲನ್ನು ಸಾವರಿಸಬೇಕು ಎನ್ನಿಸುವುದು; ಎಷ್ಟೋ ಸಲ ಬರೆಯುವ ಅವನ ಕೈಯನ್ನು ಹಿಡಿದೆತ್ತಿ, ಆ ಕೈಯಿಂದ ತನ್ನ ಕೆನ್ನೆಗೆ ಬಲವಾಗಿ ಏಟನ್ನು ಕೊಟ್ಟುಕೊಳ್ಳಬೇಕು ಎನ್ನಿಸುವುದು; ಹಾಗೆನ್ನಿಸಿದಾಗೆಲ್ಲ ಅತ್ಯಂತ ಸಂಕಟದಿಂದ ತನ್ನನ್ನು ತಡೆದುಕೊಳ್ಳುತ್ತಿದ್ದಳು. ಆಗಾಗ, ತಡೆದುಕೊಳ್ಳುವ ಯತ್ನಗಳಿಂದ ನಿರ್ವಿಣ್ಣಳಾಗುತ್ತಿದ್ದಳು.

ಒಂದು ದಿನ. ತಾನೂ ರಾಮಣ್ಣನೂ ಸರಲಕ್ಕನ ಬದಿಗೆ ಕುಳಿತಿದ್ದರು. ಕೆಲಹೊತ್ತಿನ ಮೇಲೆ ಸರಲಕ್ಕನು ನಿದ್ದೆ ಹೋದಳು. ಆಗ ರಾಮಣ್ಣನು ಕಳ್ಳ

ದನಿಯಲ್ಲಿ "ಸದ್ದು ಮಾಡದೆ ನಮ್ಮ ಕೋಣೆಗೆ ಹೋಗೋಣ ನಡೀ" ಎಂದಿದ್ದ. ಸರಲಕ್ಕನ ನಿದ್ದೆಗೆ ಭಂಗ ಬರಬಾರದೆಂದು ರಾಮಣ್ಣನು ಹಾಗೆ ಮಾತಾಡಿದ್ದರೂ ಅಂದು ಆ ಕಳ್ಳದನಿಯನ್ನು ಕೇಳಿ ತನ್ನ ಮೈ ಜುಂ ಎಂದಿತ್ತು. ಎದ್ದಳು, ಹಾಗೇ ನಡೆದಳು, ರಾಮಣ್ಣನ ಹಿಂದಿನಿಂದ. ನೋಡಿದರೆ ಮೈ ಮರೆತು ತಾನೂ ರಾಮಣ್ಣನ ಕೋಣೆಗೇ ಬಂದಿದ್ದಾಳೆ! ರಾಮಣ್ಣನಿಗೂ ಆಶ್ಚರ್ಯವಾಗಿರಬೇಕು.

"ಓದಲಿಕ್ಕೆ ಯಾವುದಾದರೂ ಪುಸ್ತಕ ಬೇಕಾಗಿತ್ತೇನು ?" ಎಂದು ಕೇಳಿದ್ದ.

"ಹುಂ" ಎಂದು ತಾನು ಹೇಳಿದಳು.

"ಯಾವುದು ಬೇಕು, ನೋಡಿ ತೆಗೆದುಕೊ" ಎಂದ.

ಪುಸ್ತಕಗಳ ಕಪಾಟಿನ ಬಾಗಿಲನ್ನು ತೆಗೆದು ಕುಮುದಳು ನೋಡತೊಡಗಿದಳು. ನೋಡುವುದು ಇಡುವುದು, ಎತ್ತುವುದು ಇಡುವುದು—ಕುಮುದಳ ನಿರ್ಣಯಬುದ್ಧಿಯೆ ಹೋಯಿತೇನೊ ?

"ಯಾಕ ? ಯಾವುದು ಸಿಗವಲ್ಲದೇನು ?'' ಎಂದ ರಾಮಣ್ಣ.

"ಯಾವುದು ? ಏನು ?" ಎಂದು ಹುಚ್ಚಳಂತೆ ಕುಮುದಳು ನುಡಿದಳು.

ರಾಮಣ್ಣ ನಕ್ಕ. "ನಾನೇ ನೋಡಿಕೊಡ್ತೇನಿ ಹಾಗಿದ್ದರ" ಎಂದು ರಾಮಣ್ಣ ಕಪಾಟಿನ ಹತ್ತಿರ ಬಂದ. ಕಪಾಟಿನ ಎರಡು ಬಾಗಿಲುಗಳ ನಡುವೆ ನಿಂತ ತಾನು ರಾಮಣ್ಣನಿಗಾಗಿ ಜಾಗೆ ಮಾಡಲು ದೂರ ಸರಿಯಬೇಕಲ್ಲ ? ಆದರೆ ಇಷ್ಟರಲ್ಲಿಯೆ ಅವನು ಹತ್ತಿರ ಬಂದುದರಿಂದ ಅವಳ ಕಾಲ್ಗಳ ಶಕ್ತಿ ಕುಗ್ಗಿದಂತಾಯಿತು. ಬದಿಗೆ ಸರಿಯದಾದಳು, ಹಿಂದೆ ನೋಡದಾದಳು. ಆದರೂ ರಾಮಣ್ಣನ ಬಿಸಿಯುಸಿರು ತನ್ನ ಭುಜಗಳನ್ನು ತಟ್ಟುತ್ತಿದೆ; ತನ್ನ ಹಿಂದೆಯೆ ನಿಂತಿದ್ದಾನೆ ರಾಮಣ್ಣ. ತೀರ ಹತ್ತಿರದಲ್ಲಿರುವನೆ ? ತುಸು ಮಗ್ಗುಲಿಗೆ ನಿಂತಿರುವನೆ ? ಎದುರು ತೆರೆದ ಕಣ್ಣಿಗೆ ಏನೂ ಕಾಣದಂತಾಗಿದೆ. ಹಿಂದೆ ಬಿಸಿಯುಸಿರು ಭುಜವನ್ನು—ಅಲ್ಲ, ಹೃದಯವನ್ನು—ಸುಡುತ್ತಿದೆ. ತಡೆಯದಂತಾಯಿತು, ಉಸಿರುಗಟ್ಟಿದಂತಾಯಿತು. ಒಮ್ಮೆಲೆ ಮುಳುಗಿದವನು ಮೇಲಕ್ಕೆದ್ದು ಉಸಿರಿಡಲು ಹಾತೊರೆವಂತೆ ಚಡಪಡಿಕೆಯಿಂದ ಮುಖವನ್ನು ಪುಸ್ತಕಗಳಿಂದ ತಿರುಗಿಸಿದಳು.

"ಇದು ಬೇಕೇನು ?" ಎಂದ ರಾಮಣ್ಣ.

ತೆರೆದ ತನ್ನ ಬಾಯಿಯಿಂದ ಶಬ್ದಗಳೇ ಬರಲೊಲ್ಲವು. ಒಂದೇ ಸವನೆ ರಾಮಣ್ಣನನ್ನು ದಿಟ್ಟಿಸುತ್ತ ನಿಂತಳು. ರಾಮಣ್ಣ ಚಕಿತನಾದನೊ, ಗಾಬರಿಯಾದನೊ ! ಅವನ ಮುಖಚರ್ಯೆಯೂ ಬದಲಾಯಿತು. ಅದು ಆಶ್ಚರ್ಯವೂ ಅಲ್ಲ, ಗಾಬರಿಯೂ ಅಲ್ಲ ಎಂದು ಕುಮುದಳಿಗೆ ತಿಳಿಯಲು ತಡವಾಗಲಿಲ್ಲ. ಯಾಕೆಂದರೆ, ಇಷ್ಟರಲ್ಲಿಯೆ ರಾಮಣ್ಣನ ಕೈಗಳು ತನ್ನನ್ನು ಬಿಗಿದಿದ್ದವು, ಮುಖವು ತನ್ನ ಮುಖವನ್ನು ಮುತ್ತಿತ್ತು. ಇದುವರೆಗೆ ಉಸಿರುಗಟ್ಟಿದಂತೆನ್ನಿಸಿದ ತನಗೆ ಈಗ ಉಸಿರುಗಟ್ಟಲು ಕಾರಣವಿದ್ದರೂ ಕುಮುದಳಿಗೆ ಜೀವ ಚೇತರಿಸಿಕೊಂಡಂತಾಗಿತ್ತು.

೫

ಬರೆಯುವಂತಿಲ್ಲ, ಮಲಗುವಂತಿಲ್ಲ; ಇಷ್ಟೇಕೆ ?— ಅವೆರಡನ್ನೂ ನೆನೆದುಕೊಳ್ಳುವಂತಿಲ್ಲ. ಎಂದೊ—ಎಂದೊ—ಅದೆಲ್ಲ ಹಳೆಯ ಕತೆಯಾದಂತಾಗಿದೆ. ನಿಜವಾಗಿ ನೋಡಿದರೆ, ಕೇವಲ ಮೂರೇ ವರ್ಷಗಳ ಮುಂಚಿನ ಅನುಭವ. ಆಗ ಬರೆಯುವುದೆಂದರೆ ಕೇವಲ ಒಳಗಿನ ಸ್ಫೂರ್ತಿಯದೊಂದೇ ವಿಷಯವಾಗಿರಲಿಲ್ಲ. ಒಂದು ಹೊಸ ಅಭ್ಯಾಸವೆ ಆದಂತಾಗಿತ್ತು. ಎಷ್ಟೋ ಸಲ, ಪತ್ರಿಕೆಗಳಿಗೆ ಲೇಖಗಳನ್ನು ಬರೆಯುವಾಗ (ಯಾಕೆಂದರೆ ಅದಕ್ಕೂ ಒಳಗಿನ ಸ್ಫೂರ್ತಿಗೂ ಸಂಬಂಧವೆ ಇದ್ದಿರಲಿಲ್ಲ )— ಅಂತಹದನ್ನು ಬರೆಯಲು ಕೂಡ ಅವನಿಗೆ ಉತ್ಸಾಹವಿರುತ್ತಿದ್ದಿತು. ಯಾಕೆಂದು ಹೇಳಬೇಕೆ ? ಬರೆದು ಬರೆದು ಮೈ-ಮಿದುಳುಗಳು ಬರಿದಾಗಿ ದಣಿದು ಹಣ್ಣಾದಾಗ ಸರಲೆಯ ಮಗ್ಗುಲಿನಲ್ಲಿ ಮಲಗುವ ಸುಖದ ಆಸೆ ಇರುತ್ತಿದ್ದಿತು. ತಿನಿಸಿನ ಆಸೆಗಾಗಿ ಹುಡುಗರಿಂದ ಕೆಲಸವನ್ನು ಮಾಡಿಸಿಕೊಳ್ಳುವಂತೆ ಈ ಆಸೆಗಾಗಿ ಅವನು ಬೇಕಾದ್ದನ್ನು ಬರೆಯಬಹುದಾಗಿತ್ತು. ಬರೆಯುವುದನ್ನು ಮುಗಿಸಿ, ಕುರ್ಚಿಯಿಂದೆದ್ದು, ರಾತ್ರಿ ಮತ್ತು ದಣಿವು ಎರಡೂ ಏರಿದ್ದಕ್ಕಾಗಿ ತುಸು ತತ್ತರಿಸುತ್ತ, ಒಂದೇ ಸವನೆ ಲೇಖನದ ವಿಚಾರಗಳಲ್ಲಿ ತೊಡಗಿದ್ದಕ್ಕೆ ಶೂನ್ಯಮನಸ್ಕನಂತೆ ಪೆಚ್ಚಾಗಿ, ಒಂದು ಕೈಯನ್ನು ಮೆಲ್ಲಗೆ ಹಾಸಿಗೆಯ ಮೇಲೆ ಆಡಿಸಬೇಕೆಂದಾಗ ( ಪಾಪ ! ಸರಲೆ ಯಾವಾಗಲೊ ನಿದ್ರೆ ಹೋಗಿರಬೇಕಲ್ಲವೆ ? )

"ಬರೆಯೋದು ಮುಗಿತೇನು ?" ಎಂದು—ಅರೆನಿದ್ದೆಯ ಮಧುರಸ್ವರದಲ್ಲಿ ಸರಲೆ ಕೇಳುವಳು. ಆಗ ಅವನ ಎಲ್ಲ ದಣಿವು ಹೋದಂತಾಗುವುದು. ಆವರಿಸಿದ ನಿದ್ದೆ ಜಾರಿಹೋಗುವಷ್ಟು ಸುಖವೆನ್ನಿಸುವುದು.

"ಬರೆಯೋದು ಮುಗೀತೇನು ?" ತನಗೆ ಜಾಗೆ ಮಾಡಲು ಮಲಗಿದಲ್ಲಿಯೆ ತುಸು ಸರಿಯುತ್ತ ಸರಲೆ ಮತ್ತೊಮ್ಮೆ ಕೇಳುವಳು.

"ಹುಂ" ಎಂದು ತಾನು ದನಿಯುನ್ನೆಳೆಯುವನು.

"ಗುಂಗು ಬಹಳ ಏರೇದೇನು ?"

"ಆಂ ?"

"ನನ್ನ ಮಾತು ಕೇಳಿಸಲೊಲ್ಲದೊ ? ಏನು ಇನ್ನೂ ಈ ಜಗತ್ತಿಗೇ ಇಳಿದಿಲ್ಲೊ ?"

"ಕೇಳಿಸಿತು. ಮುಗೀತು ಅನ್ನೋದಕ್ಕೇ ಹುಂ ಅಂದೆನಲ್ಲ ?" ಎಂದು ತಾನೂ ಕಾಲು ಚಾಚುತ್ತ ಹೇಳುವನು.

"ಕತೆ ರಂಗಿಗೆ ಬಂದಿದೆ ಏನು ?"

"ಕತೆ ಅಲ್ಲ, ಪತ್ರಿಕೆಗಾಗಿ ಲೇಖ."

"ಅಯ್ಯ ! ಅದನ್ನ ಬರೀಲಿಕ್ಕೂ ಅಪರಾತ್ರಿ ತನಕ ಅಮಲು ಏರಿತೆ ನಿಮಗ ?"

"ಅಂದರ ? ಅದೇ ನಿಜವಾದ ಬರೆಹ. ತಟ್ಟನೆ ದುಡ್ಡು ಸಿಗೋದು."

"ಹಂ—ದುಡ್ಡು ಯಾರಿಗೆ ಬೇಕಾಗೇದ."

"ಯಾರಿಗಂದ್ರ ? ನನಗ."

"ಅವ್ವಯ್ಯ—ಈ ಬುದ್ಧಿ ಎಂದಿನಿಂದ ಬಂದಿತು ?"

"ನನಗ ಅಂದ್ರ—ನನ್ನ ಹೆಂಡಿರುಮಕ್ಕಳಿಗೆ. ತಿಳೀತೇನು ?"

"ಅವರಿಗೆ ಬೇಕು ಅಂತ ನಿಮಗ ಯಾರು ಹೇಳಿದರು ?"

"ಯಾರು ಹೇಳಲಿಕ್ಕೆ ಬೇಕೇನು ? ಹೆಂಡಿರುಮಕ್ಕಳಿಗೆ ಸುಖ ಸಿಗದಿದ್ದರ ಗಂಡ ಬರೆಯಬೇಕ್ಯಾಕ ? ಹೌದಂತೀಯೊ ಇಲ್ಲೊ ?"

"ಅಯ್ಯ ! ಹಾಂಗ ಬರೆಯೋದು ನಂನಿಂ ಕೈಯಾಗಿನ ಮಾತ ? ಅದನ್ನು ದೇವರೇ ಬರೆದು ಕಳಿಸಿರತಾನ—ಹುಟ್ಟಿನ ಜೋಡಿ, ಹಣೇ ಪ್ಯಾಲೆ."

"ಅಂದ್ರ.... ಈಗ ನೀ ಸುಖದಿಂದಿದ್ದೀ ಅನ್ನು. ಹಂ ?"

" ಯಾಕಿರಬಾರದು ? ಬರೆಯೋದರಿಂದ ನಿಮಗ ಸುಖ ಅನ್ನಿಸ್ತದ, ನಿಂ ಸುಖ ಅಂದ್ರ ನಂ ಸುಖ."

" ಭಲೆ ! ಅಲ್ಲ—ಕೃಷ್ಣ ಅರ್ಜುನನಿಗೆ ಗೀತಾ ಹೇಳುವಾಗ ರಥದ ಕೆಳಗೆ ಅಡಗಿ ಕೂತಿದ್ದೇನು ? ಅಂ ? ಹಹ ! "

ಈ ಮಾತಿಗೆ ಸರಲಾ ಆಕಳಿಸುವಳು.

" ಸಾಕು, ನಿದ್ದೆ ಬಂದಿದೆ ಮಲಗರಿನ್ನು." ಎನ್ನುತ್ತ ಆಕೆ ಸಾವರಿಸುತ್ತಿರುವಾಗಲೆ ರಾಮಣ್ಣನ ಗೊರಕೆಗೆ ಪ್ರಾರಂಭವಾಗಿರುವುದು. " ಅಯ್ಯ ! ರಾತ್ರಿ ನಾ ಹಂಗೇ ಮಾತಾಡ್ತೀನಿ—ಇವರಿಗೆ ನಿದ್ದೀನೆ ಹತ್ತಿಬಿಟ್ಟದ ! ಯಾವಾಗೊ ಏನೊ ! ಮಲಗಿದವರ ನಿದ್ದೆ ಕೆಡಿಸೋದು, ತಾವು ಮಾತ್ರ ಗಡದ್ದ ಮಲಗೋದು." ಎಂದು ಮರುದಿವಸ ಸರಲೆ ಮೂದಲಿಸಿ ಮಾತಾಡಿದಾಗಲೆ ರಾಮಣ್ಣನಿಗೆ ತನ್ನ ಸುಖದ ಕಲ್ಪನೆ ಬರುವುದು. ಎಷ್ಟೋ ಸಲ ಸರಲೆ ಹಂಗಿಸಿ ಮಾತನಾಡಿದಾಗ ತಾನೂ ಅವಳನ್ನು ಕೆಣಕುವನು, " ನಿನಗ ರೂಢಿ ಮಾಡಿಕೊಡ್ತೀನಿ " ಎನ್ನುವನು. ಆಗ ಸರಲೆ " ಯಾತರ ರೂಢಿ " ಎಂದು ಕೇಳಿದೊಡನೆ, " ನಾಳೆ ಮಕ್ಕಳಾದರೆ ? ಈಗಿನಿಂದಲೆ ನಿದ್ದೆ ಕೆಡಿಸಿಕೊಳ್ಳೋ—" ಇಂತಹ ಮಾತು ಸಾಮಾನ್ಯವಾಗಿ ಮುಗಿಯುತ್ತಿರಲಿಲ್ಲ. ಸರಲೆ ಸರ್‍ರನೆ ಬಂದು ಹುಸಿ ಸಿಟ್ಟಿನಿಂದ ತನ್ನ ಬಾಯಿಯನ್ನು ಕೈಯಿಂದ ಗಟ್ಟಿಯಾಗಿ ಮುಚ್ಚುವಳು. ಬಾಯಿಯನ್ನು ಮುಚ್ಚಿದರೇನಾಯಿತು ? ಮಾತಿಗಿಂತ ಕೃತಿ ಮುಖ್ಯ ಎನ್ನುವವನಂತೆ ರಾಮಣ್ಣನು ಎರಡೂ ಕೈಗಳಿಂದ ಆಕೆಯನ್ನು ಬಿಗಿದೆಳೆದುಕೊಳ್ಳುತ್ತಿದ್ದ.

ಒಂದು ಸಲವಂತೂ ಸರಲೆಯೆ ತನ್ನ ಸಾಹಿತ್ಯಿಕ ತೊಡಕನ್ನು ಬಿಡಿಸಿದ್ದಳು. ಆಗ ತಾನೊಂದು ನಾಟಕವನ್ನು ಬರೆಯುತ್ತಿದ್ದ—ಉಹುಂ—ನಾಟಕವಲ್ಲ—ಆ ಸಲ—ಯಾವುದು ?–ಹಾಂ–" ಆದಿಮಾಯೆ " ಎಂಬ ಕಾದಂಬರಿಯನ್ನು ಬರೆಯುತ್ತಿದ್ದ; ಮುವ್ವರು ಅಣ್ಣ-ತಮ್ಮಂದಿರು, ನೆರೆಮನೆಯ ಹುಡುಗಿ; ಎಲ್ಲರೂ ಕೂಡಿಯೆ ಬೆಳೆಯುವರು; ಮುಂದೆ ತನ್ನ ಕತೆ ಆಧುನಿಕ ದ್ರೌಪದಿಯ ಕತೆಯಾಗುವುದು, ಸಮಾಜದಲ್ಲಿ ಅಲ್ಲೋಲಕಲ್ಲೋಲವನ್ನೆಬ್ಬಿಸುವುದು, ಎಂದು ತುಸು ಅಧೈರ್ಯ ಮತ್ತು ತುಸು ಅಭಿಮಾನಗಳಿಂದಲೆ ಸರಲೆಯ ಮುಂದೆ ಕತೆಯನ್ನು ಹೇಳಿದ್ದ.

" ಅಂಥಾಂಗ, ಬರೀಲಿಕ್ಕಾದ್ರೂ ಸುರೂ ಮಾಡ್ರಿ, ನೋಡೋಣ" ಎಂದಿದ್ದಳು.

" ಅಲ್ಲ, ನೋಡೋಣೇನು ? ನನ್ನ life insure ಮಾಡಿಯೆ ಕಾದಂಬರಿಯನ್ನ ಪ್ರಕಟಮಾಡಬೇಕಾಗುವುದು " ಎಂದು ತಾನು ನಗೆಯಾಡಿದ್ದ.

" ಅಂಥಾದ್ದೇನದ ಅದರೊಳಗ ?"

" ಅಂಥಾದ್ದೇನಂದರ ? ಹುಟ್ಟಿದ ಮಕ್ಕಳು ಯಾರಿಗೆ ವಾರಸದಾರರು?"

" ಆಂ ?.... ಅಯ್ಯ ! ತಗೀರಿ ! ನೀವೇನು ಕತೆ ಬರೀತೀರ್ಯೋ ಕ್ಲಬ್ಬಿನಾಗಿನ ಹರಟೆ ಹೊಡೀತೀರ್ಯೋ ?" ಎಂದಿದ್ದಳು.

ಅಲ್ಲಿಗೆ ಆ ಮಾತು ಮುಗಿದು ಕಾದಂಬರಿಯ ಲೇಖನ ಪ್ರಾರಂಭವಾಯಿತು. ರಾಮಣ್ಣ ತನ್ನ ಮನಸ್ಸಿನೊಳಗಿನ ಮೊದಲಿನ ವಿಚಾರದಂತೆಯೆ ಕತೆಯನ್ನು ಬೆಳೆಸಿದ. ಆದರೆ ಕೊನೆಕೊನೆಗೆ ಅವನಿಗೇ ಸಮಾಧಾನವಾಗಲಿಲ್ಲ. ಮುವ್ವರ ಮೇಲೂ ಪ್ರೇಮವಿದ್ದ ಹುಡುಗೆಯ ಗತಿ ನಮ್ಮ ಸಮಾಜದಲ್ಲಿ ಏನಾಗುವುದು ? ಒಂದು ವೇಳೆ ಕೊನೆಗೆ ಆಕೆ ಆತ್ಮಹತ್ಯೆಯನ್ನು ಮಾಡಿಕೊಂಡರೆ, ದ್ರೌಪದಿಯ ಸಂಕೇತ ನಿರರ್ಥಕವಾಗುವುದು. ಆತ್ಮಹತ್ಯೆ ಮಾಡದೆ ಜೀವಂತ ಉಳಿದರೆ ಆಕೆಗೆ ಸಮಾಜದಲ್ಲಿ ಗೌರವದ ಸ್ಥಾನ ದೊರೆಯದು. ಹೀಗಾಗಿ ಕತೆಯನ್ನು ಹೇಗೆ ಮುಗಿಸಬೇಕೆಂಬುದೆ ರಾಮಣ್ಣನಿಗೆ ತಿಳಿಯದಾಯಿತು. ಕೊನೆಯ ಪುಟಗಳನ್ನು ಬರೆಯಲು ಯತ್ನಿಸಿದ, ಯಾವ ವಿಚಾರವೂ ಹೊಳೆಯಲೊಲ್ಲದು. ಮೂರು-ನಾಲ್ಕು ತಾಸುಗಳವರೆಗೆ ತಲೆ ತುರಿಸಿಕೊಂಡು ರಾತ್ರಿ ಎರಡು ಗಂಟೆಯ ಸುಮಾರಿಗೆ ನಿರುಪಾಯನಾಗಿ, ನಿರ್ವಿಣ್ಣನಾಗಿ ಮಲಗಲು ಸಜ್ಜಾದ.

" ಮುಗೀತೇನು ಬರಿಯೋದು ?"

ಯಾವಾಗಲೂ ಸಮಾಧಾನವನ್ನುಂಟುಮಾಡುವ ಸರಲೆಯ ಈ ವಾಕ್ಯದಿಂದ ಅಂದು ರಾಮಣ್ಣನಿಗೆ ಕೋಪ ಬಂದಿತು.

" ಹಂ—ಮುಗೀತದ ! ಅದೇನು ಅಡಿಗೆ ಅಂತ ತಿಳಿದೀಯೇನು, ಇಷ್ಟು ವ್ಯಾಳ್ಯಾ ಕುದಿಸಿದಮ್ಯಾಲೆ ಆಯಿತು ಅನ್ನಲಿಕ್ಕೆ ?"

" ಅಯ್ಯ ! ನನಗೇನು ಗೊತ್ತು ? ಕಡೀದಷ್ಟೆ ಉಳಿದದ, ಮುಗಿಸ್ತೀನಿ ಅದನ್ನ ಅಂದಿದ್ದಿರಿ, ಅದಕ್ಕ ಕೇಳಿದೆ " ಎಂದಳು ಸರಲೆ.

“ಕಡೀದಷ್ಟೆ ಅಂದ್ರೇನು ? ಎಲ್ಲಾ ಚಮತ್ಕೃತಿ ಇರೋದು ಕಡೆಯ ಪುಟಗಳೊಳಗೆ. ಅದಕ್ಕ ಬಹಳ ವಿಚಾರ ಮಾಡಿ ಬರೆಯಬೇಕಾಗುವುದು.... ಹುಂ....ರಾತ್ರಿ ಬಹಳಾಗೇದ, ಮಲಗೋಣಿನ್ನು.”

ಸರಲೆ ಆಕಳಿಸಿ ಮಾತನಾಡಿದಳು, “ನನಗೂ ನಿದ್ದೆ ಅದ ಕಣ್ಣೊಳಗ. ಆದರೂ ಕಡೆಗೆ ನಿಮ್ಮ ಕತೆಯೊಳಗಿನ ಹುಡುಗೆ ಏನ್ಮಾಡ್ತಾಳ ಅಂತ ಆತುರ ಇತ್ತು, ನೀವೂ ಮುಗಿಸಿ ಬಂದಿರಿ ಅಂತ ತಿಳಿದೆ, ಕೇಳಿದೆ.”

ರಾಮಣ್ಣನಿಗೆ ತಡೆಯದಾಯಿತು. “ಅದನ್ನಷ್ಟು ಕೇಳಿದರೇನೆ ನಿನಗ ನಿದ್ದೆ ಬರೋದೇನು ? ಕೇಳು ಹಾಂಗಾದರ. ಕಡೆಗೆ ವಿಷ ತಗೊಂಡು ಸಾಯ್ತಾಳ ಆಕೆ” ಎಂದ.

“ಆಂ ? ಅಯ್ಯ ! ಸುಮ್ಮಸುಮ್ಮನೆ ಹೋಯಿತಲ್ಲ ಒಂದು ಒಳ್ಳೇ ಜೀವನ !”

ರಾಮಣ್ಣನಿಗೆ ಆಶ್ಚರ್ಯವಾಯಿತು. ಸರಲೆಯ ದನಿಯಿಂದ ಆಕೆಯ ಕಣ್ಣಿಗೆ ನೀರು ದೂರ ಇಲ್ಲ ಎಂದೆನಿಸುವಂತಿತ್ತು.

“ಕತೆಯೊಳಗಿನ ಹುಡುಗೆ. ಇದ್ದರೇನು ? ಸತ್ತರೇನು ?” ಎಂದು ಮಾತು ಮುಗಿಸುವ ನಗೆಯಿಂದ ನುಡಿದ.

“ಕತೆಯೊಳಗಿನ ಹುಡುಗೆ ಅದರೇನಾಯಿತು ? ಸುಮ್ಮಸುಮ್ಮನೆ ಯಾಕ ಸಾಯಬೇಕು ? ಒಂದು ಜಡ್ಡಿಲ್ಲ, ಒಂದು ಜಾಪತ್ತಿಲ್ಲ—”

ರಾಮಣ್ಣ ಆಕಳಿಸಿದ, ತುಸು ಬೇಸರದ ದನಿಯಲ್ಲಿಯೆ ಹೇಳಿದ, “ಪಾಪ ಮಾಡಿದ್ದಳು, ಅದಕ್ಕ ಸತ್ತಳು.”

“ಪಾಪ ಮಾಡಿದ್ದಳು ? ನನಗೇನು ಗೊತ್ತು ? ನೀವು ನನಗ ಕತೆ ಹೇಳುವಾಗ ಆಕೆ ಪಾಪ ಮಾಡಿದ್ದು ಹೇಳಿದ್ದಿಲ್ಲ.”

ರಾಮಣ್ಣನ ನಿದ್ರೆ ಹೋದಂತಾಯಿತು, ಎದ್ದು ಕುಳಿತ, ತುಸು ಸಿಡುಕಿನ ದನಿಯಿಂದಲೆ ಹೇಳಿದ, “ಮುವ್ವರ ಜೋಡಿ ಪ್ರೇಮ ಮಾಡಿದರ ಪಾಪ ಅಲ್ಲ ?”

“ಏನಂದಿರಿ ? ಪ್ರೇಮಕ್ಕಾಗಿ ಹುಟ್ಟಿದ ಹೆಣ್ಣು ಪ್ರೇಮ ಮಾಡಿದರ ಪಾಪ ?”

" ಅಂದ್ರೇನು ? ಒಬ್ಬನ ಕೂಡ ಇದ್ದರೆ ಮದುವೆ, ಒಬ್ಬನಿಗಿಂತ ಹೆಚ್ಚಾ ದರೆ ವ್ಯಭಿಚಾರ ಅಲ್ಲ ? ವ್ಯಭಿಚಾರ ಪಾಪ ಅಲ್ಲ ? " ಹೆಂಡತಿಯ ದಡ್ಡತನ ಕ್ಕಾಗಿ ರಾಮಣ್ಣ ತಿರಸ್ಕಾರದ ಉಸಿರೆಳೆದ.

" ಅಂದ್ರೇನು ? ವ್ಯಭಿಚಾರ ಮಾಡದೆ ಪ್ರೇಮ ಮಾಡ್ಲಿಕ್ಕೆ ಬರೋದಿಲ್ಲ ಅಂತೀರೇನು ? "

" ನಿನಗೇನು ತಿಳೀತದ ಬಿಡು ಅದೆಲ್ಲ ! "

" ಗಂಡಸಿಗೆ ಪ್ರೇಮನೂ ಒಂದೇ, ವ್ಯಭಿಚಾರನೂ ಒಂದೇ ಅಂತ ಅನ್ನಿಸುತ್ತಿದ್ದರ ನನ್ನಂಥಾ ಹೆಂಗಸಿಗೆ ಅದು ಹ್ಯಾಂಗ ತಿಳೀಬೇಕು ? " ಎಂದಿದ್ದಳು.

ರಾಮಣ್ಣನಿಗೆ ಸಿಟ್ಟು ಬಂದಿತ್ತು, ನಿದ್ದೆಯೂ ಬಂದಿತ್ತು. ದೊಡ್ಡ ದೊಂದು ಆಕಳಿಕೆಯಿಂದ ತನ್ನ ಅಸಹಕಾರವನ್ನು ಸ್ಪಷ್ಟಮಾಡಿ ಮಲಗಿಬಿಟ್ಟ.

ಆದರೆ ಆ ರಾತ್ರಿ ನಿದ್ರೆ ಬರಲಿಲ್ಲ; ಪ್ರೇಮ ಬೇರೆ, ವ್ಯಭಿಚಾರ ಬೇರೆ ಎಂಬ ಮಾತಿನಲ್ಲಿ ಯಾವುದೊ ದೊಡ್ಡ ತತ್ತ್ವ ಅಡಕವಾಗಿದ್ದಂತೆ ತೋರ ಹತ್ತಿತು ಅವನಿಗೆ. ತನ್ನ ಕತೆಗೆ ಆ ತತ್ತ್ವವನ್ನು ಅನ್ವಯಿಸಿ ನೋಡಬೇಕೆಂಬ ವಿಚಾರ ಹೊಳೆಯಿತು. ಬೆಳಗಾಗುವವರೆಗೆ ವಿಚಾರಮಗ್ನನಾಗಿದ್ದ. ಎದ್ದೊ ಡನೆ ಚಹ ಕುಡಿದು, ಸರಲೆಯ ಕೂಡ ಮಾತನಾಡದೆ ಕೋಣೆಯನ್ನು ಹೊಕ್ಕು ಬರೆಯಲು ಪ್ರಾರಂಭಿಸಿದ; ಕ್ರಮೇಣ ಇಡಿಯ ಕತೆಯನ್ನೆ ಬದಲಾಯಿಸಿದ. ಆದರೆ ಎಂಟು ದಿನಗಳವರೆಗೆ ಸರಲೆಯ ಕೂಡ ಹೆಚ್ಚಿನ ಮಾತು ಆಡಿರಲಿಲ್ಲ. ಆಕೆಯ ಮನಸ್ಸು ತುಸು ನೊಂದುಕೊಂಡಂತಿತ್ತು. ಕೊನೆಗೊಮ್ಮೆ ಬದಲಾದ ಕಾದಂಬರಿ ಮುಗಿಯಿತು. ಮುಗಿದೊಡನೆ ಸರಲೆಯ ಕಡೆ ಬಂದ.

" ಆ ಕಾದಂಬರಿ ಮುಗೀತು ನೋಡು, ಸರಲಾ " ಎಂದ.

ಆಕೆ ಮಾತನಾಡಲಿಲ್ಲ.

" ಹ್ಯಾಂಗ ಮುಗೀತದ ಅನ್ನೋದನ್ನ ನೋಡೋ ಆತುರ ಅದ ಅಂದಿದ್ದಿ ಅಂತ ಅದನ್ನ ಮುಗಿಸಿದ ಕೂಡಲೆ ಹೇಳಲಿಕ್ಕೆ ಬಂದರೆ—" ಎಂದು ತಪ್ಪಿ ಲ್ಲದೆ ದಂಡಿಸಲ್ಪಟ್ಟ ಹುಡುಗನಂತೆ ದನಿಯನ್ನೆಳೆದ.

" ನನಗೇನ್ಮಾಡೋದು ? ಕಾಲೇಜದ ಕಟ್ಟೆ ಹತ್ತಲಾರದ ಹೆಂಗಸು ನಾನು. ಅಂಥಂಥಾ ದೊಡ್ಡ ಪುಸ್ತಕದ ಪರೀಕ್ಷಾ ನನಗೇನಾದೀತು ? "

"ಅಂದ್ರ ? ನಾಯೇನು ಕಾದಂಬರೀನೇ ನಿನಗ ಓದಿ ತೋರಿಸಲಿಕ್ಕೆ ಬಂದೀನಿ ಅಂತ ತಿಳಿದಿ ಏನು ? "

" ಇಲ್ಲದಿದ್ದರ ನನಗ ಯಾಕ ಹೇಳಲಿಕ್ಕೆ ಬಂದಿರಿ ? "

"ಕಾದಂಬರಿ ಮುಗಿದಿದೆ. ಅದು ನಿನಗ ತಿಳಿಯೋದೇ ಇಲ್ಲ—" ಕೊಂಕು ನಗೆಯಿಂದ, "ನಾನೂ ಅದನ್ನ ನಿನಗ ಓದಿ ತೋರಿಸೋದೇ ಇಲ್ಲ. ಮುನ್ನುಡಿ ಬರೆದೀನಿ, ಅದನ್ನು ಕೇಳು ಅಂದೆ."

" ಮುನ್ನುಡಿ ? ನನ್ದೇನು ಸಂಬಂಧ ? "

" ಅದನ್ನೆ ಕೇಳು ಅಂದೆ " ಎಂದು ಓದಲು ಪ್ರಾರಂಭಿಸಿದ. ಪ್ರಾಸ್ತಾವಿಕವಾದ ಆಭಾರಮನ್ನಣೆಯ ತರುವಾಯ ಮುನ್ನುಡಿಯ ಕೊನೆಗೆ ಹೀಗೆ ಬರೆದಿದ್ದ. " ಈ ಕತೆ ಈಗ ಪ್ರಕಟವಾಗುತ್ತಿರುವ ರೂಪದ ಎಲ್ಲ ಶ್ರೇಯಸ್ಸು ಇನ್ನೊಬ್ಬರದಿದೆ. ಮೊದಲೊಮ್ಮೆ ನಾನು ಬೇರೊಂದು ರೀತಿಯಲ್ಲಿ ಬರೆದು ಮುಗಿಸಲು ಅಸಮರ್ಥನಾದಾಗ ಆ ಇನ್ನೊಬ್ಬರು ನನಗೆ ಈ ರೀತಿ ಬದಲಾಯಿಸಿ ಬರೆಯಲು ಹೇಳಿದರು. ಹಾಗೆ ಬರೆದಿದ್ದೇನೆ. ನನಗಂತೂ ಸಮಾಧಾನವಾಗಿದೆ. ಆದುದರಿಂದ ಕೊನೆಯದಾಗಿ ಅವರಿಗೆ—ಎಂದರೆ ನನ್ನ ಸುಖದುಃಖದ ಪಾಲುಗಾರ್ತಿಯಾದ, ನನ್ನ ಕುಂದುಕೊರತೆಗಳನ್ನು ಸಹನೆಯಿಂದ ಸರಿಪಡಿಸಿ ನನ್ನನ್ನು ಹಾದಿಗೆ ಹಚ್ಚಲು ನನ್ನ ಕೈಹಿಡಿದಳೇನೊ ಎನ್ನುವಂಥವಳಾದ ನನ್ನ ಸಹಧರ್ಮಚಾರಿಣಿಯಾದ—"

ಆಭಾರ ಮನ್ನಿಸಿದ್ದನ್ನು ಓದಲು ಸರಲೆ ಅವಕಾಶವನ್ನೆ ಕೊಡಲಿಲ್ಲ. " ಎಲ್ಲಿ ಅದ ತರ್‍ರಿ ಅದನ್ನ. ಇದೇನು ಹುಚ್ಚುಚ್ಚಾರ ! " ಎಂದು ಕಾಗದವನ್ನು ಸೆಳೆಯಲು ಯತ್ನಿಸಿದಾಗ ಅದೇ ಕೈಯನ್ನು ಹಿಡಿದ ರಾಮಣ್ಣನು ಅವಳನ್ನು ಸೆಳೆದಪ್ಪಿಕೊಂಡ.

ಹಿಂದಿನ ಇಂತಹ ನೆನಹುಗಳೆಲ್ಲ ಒಂದನ್ನೊಂದು ನೂಕುತ್ತ ಕಾಣಿಸಿಕೊಳ್ಳುತ್ತಲಿವೆ. ಯಾಕೊ ? ರಾಮಣ್ಣನು ಸರಲೆಯ ಭಾವಪಟವನ್ನು ದಿಟ್ಟಿಸುತ್ತಾನೆ, ಆಕೆಯಿಂದ ಉತ್ತರ ಬರಬಹುದೇನೊ ಎಂಬಂತೆ. ದಿಟ್ಟಿಸುತ್ತಿದ್ದಂತೆಯೆ ಏನೊ ಹೊಳೆದು ಮುಗುಳ್ನಗೆಯಿಂದ ಅವನ ಮುಖವು ಮೆಲ್ಲನೆ ಅರಳುತ್ತಲಿದೆ. ಭಾವಪಟವನ್ನು ನೋಡಿದಂತೆ ಅದರ ಮೂಲವಾದ ಫೋಟೋದ ನೆನಪಾಗುವುದು. ಫೋಟೊ ತೆಗೆಸುವುದೆಂದರೆ ಸರಲೆಗೆ ಪ್ರಾಣ

ಸಂಕಟ. ಯಾವಾಗಲೂ ನಗೆಮೊಗದಿಂದ ಇರುತ್ತಿದ್ದರೂ ಎದುರು ಕ್ಯಾಮೆರಾ ನಿಂತರೆ ಹೆದರಿದಂತೆ ಪೆಚ್ಚಾಗುತ್ತಿದ್ದಳು. ಆ ಹೆದರಿಕೆ ತೋರಗೊಡಬಾರ ದೆಂಬ ಹಟದಿಂದ ಮುಖದಲ್ಲಿ ಗಂಭೀರ ಕಳೆಯನ್ನು ತರಲು ಯತ್ನಿಸು ತ್ತಿದ್ದಳು. ಸಹಜವಾಗಿ ಆವರಿಸಿದ ಪೆಚ್ಚುಕಳೆ, ಪ್ರಯತ್ನದಿಂದಲೂ ಸಾಧ್ಯ ವಾಗದ ಕೃತ್ರಿಮ ಧೈರ್ಯದ ಕಳೆ—ಇವೆರಡರ ಬೆರಕೆಯಿಂದ ಬೇರೊಂದು ಕಳೆಯೆ ಮೂಡುತ್ತಿತ್ತು. ಅದನ್ನೆ ಭಾವಪಟದಲ್ಲಿ ನೋಡುವಾಗ ಈಗಲೂ ರಾಮಣ್ಣನಿಗೆ ನಗೆ ಬಾರದಿರಲಿಲ್ಲ. ಆ ಕಳೆಯಿಂದ ಸರಲೆಯು ಒಂದು ಕೂಸಿ ನಂತೆ ಮುಗ್ಧಳಾಗಿ ತೋರುತ್ತಿದ್ದಳು. ಆದರೂ ಸರಲೆಯ ಮುಖದ ನಿಜ ವಾದ ಕಾಂತಿ ರಾಮಣ್ಣನ ಸ್ಮೃತಿಯ ಮುಂದೆ ನಿಲ್ಲದೆ ಹೋಗಲಿಲ್ಲ. ಆ ಕಾಂತಿಯಿಂದ ಆಕೆ — ಸರ್ವಾಂಗಸುಂದರಳಲ್ಲದಿದ್ದರೂ — ನೋಡಲು ಮುದ್ದಾಗಿ ಕಾಣುತ್ತಿದ್ದಳು. ಮಾತನಾಡುವಾಗ ತುಟಿಗಳನ್ನು ತುಸು ಮುಂದೆ ಚಾಚುವ ರೂಢಿ ಇದ್ದಿತು. "ಯಾವಾಗಲೂ ಒಲೆಯ ಮುಂದೆ ಕೂತು ಊದಿ ಊದಿ ನಿನ್ನ ತುಟಿಗಳಿಗೆ ಅದೇ ಆಕಾರ ಶಾಶ್ವತವಾಗಿ ಬಂದುಬಿಟ್ಟಿ ತೇನೊ!" ಎಂದು ಅನೇಕ ಸಲ ರಾಮಣ್ಣ ನಗೆಯಾಡಿದ್ದ. ಮಾತು ನಗೆ ಗಾಗಿ ಇದ್ದರೂ ಆಕೆಯ ಮುದ್ದುಮಾಟ ಮಾತ್ರ—ಮಾತಾಡುವಾಗ ಲಂತೂ—ಹೆಚ್ಚು ಸ್ಪೃಹಣೀಯವೆನ್ನಿಸುತ್ತಿತ್ತು. ರಾತ್ರಿ ಮಲಗಿದಲ್ಲಿ ಮಾತಾಡು ವಾಗ—ಬೆಳಕಿಲ್ಲದಿದ್ದರೂ—ಅದೇ ಚಿತ್ರ ರಾಮಣ್ಣನ ಎದುರು ನಿಲ್ಲು ತ್ತಿತ್ತು. ಅದಕಾಗಿಯೂ ಅವಳ ಮಾತುಗಳಿಂದ ತನಗೆ ಸಮಾಧಾನವಾಗು ತ್ತಿತ್ತೇನೊ!

ರಾಮಣ್ಣ ಉಸಿರೆಳೆದ. ಎಷ್ಟೆಂದು ನೆನಪುಗಳನ್ನು ತಂದುಕೊಳ್ಳು ವುದು? ಅಲ್ಲ—ತಾನು ತಂದುಕೊಂಡಿಲ್ಲ ತಾವಾಗಿಯೆ ಏಳುತ್ತಿವೆ. ಯಾವ ಮಾತಿಗಾದರೂ ಆಕೆಯ ನೆನಪು ತಪ್ಪದಾಗಿದೆ. ಆಕೆಯ ಮಾತು, ಮುನಿಸು, ಮುಖಚರ್ಯೆ, ನಗೆ—ಇವೆಲ್ಲ—. ರಾಮಣ್ಣನು ತಡೆದನು. ಅವನ ಅಂತ ರಂಗ ಹಗುರಾದಂತಾಯಿತು. ಏನೊ ಒಂದು ವಿಚಾರ ಹೊಳೆದಿದೆ, ಅಲ್ಲ— ಹೊಳೆಯುತ್ತಲಿದೆ. ತಟ್ಟನೆ ಹೊಳೆದರೆ ಬರೆಯುವ ಮನಸ್ಸಾದರೂ ಆಗ ಬಹುದು, ಬೇಸರ ಕಳೆಯಬಹುದು, ಎಂದು ಆ ಒಳಗಿನ ವಿಚಾರವನ್ನು ಹುಡುಕಿ ಹೊರಗೆಳೆಯುವುದಕ್ಕಾಗಿ ಎಂಬಂತೆ ಕಣ್ಣಗಳನ್ನು ಒಂದು ನಿಮಿಷ

ಮುಚ್ಚಿಕೊಂಡನು, ಕೂಡಲೆ ತೆರೆದನು. ವಿಚಾರ ಹೊಳೆಯಿತು. ಆಶ್ಚರ್ಯ ವನ್ನುಂಟುಮಾಡುವಂತಹ ವಿಚಾರ. ಸರಲೆಯ ನೆನಪುಗಳೆಂದರೆ ಯಾವಾಗಲೂ ಆಕೆಯ ಮಾತು, ಆಕೆಯ ಮುನಿಸು, ಆಕೆಯ ಮುಖಚರ್ಯೆ, ಆಕೆಯ ನಗೆ—ಇವುಗಳ ನೆನಪೇ. ಆರು ವರ್ಷಗಳ ಸರಸ ದಾಂಪತ್ಯಜೀವನ ವನ್ನು ಆಕೆಯೊಡನೆ ಕಳೆದಿದ್ದರೂ ಒಮ್ಮೆ ಕೂಡ ಆ ರೀತಿಯಲ್ಲಿ ಸರಲೆಯ ನೆನಪು ಬಂದಿರಲಿಲ್ಲವಲ್ಲ ? ಹಾಗಿದ್ದರೂ ಬಂದ ನೆನಪಿನಿಂದ ತನಗೆ ಸಮಾಧಾನವೆ ಆಗುತ್ತಿದೆ. ಆದರೆ—ಅದೇ ತನಗೆ ಕುಮುದಳ ಬಗ್ಗೆ ವಿಚಾರ ಬಂದರೆ ಬೇರೆ ಸಂದರ್ಭದ ವಿಚಾರವೇ ಇಲ್ಲ. ಸರಲೆ ತನಗೆ ಸ್ಫೂರ್ತಿಯ ಹೆಣ್ಣಾಗಿದ್ದರೆ, ಕುಮುದಳು ತನ್ನ ಸಂಭೋಗದ ಹೆಣ್ಣಾಗಿರುವಳೆ ? ಛೆ! ಇದೆಂತಹ ವಿಚಾರ ! ನಿಜವಿದ್ದರೆ ಸರಲೆಗೆ ದ್ರೋಹ, ನಿಜವಿಲ್ಲದಿದ್ದರೆ— “ ನಿಜವಿಲ್ಲದಿದ್ದರೆ ” ಎಂಬುದು ಬರಿಯ ಮಾತಿನ ರೀತಿ ಎಂಬುದು ರಾಮಣ್ಣನಿಗೆ ತಟ್ಟನೆ ಹೊಳೆಯಿತು. ಮೂರು ವರ್ಷಗಳಿಂದಲೂ ವಸ್ತುಸ್ಥಿತಿಯಾದ ಮಾತು ನಿಜವಲ್ಲ ಎನ್ನುವುದು ಹುಚ್ಚುತನವಾಗುವುದು. ಆ ಮಾತು ನಿಜ. ಹಾಗಿದ್ದರೆ ಸರಲೆಗೆ ತಾನು ದ್ರೋಹಿಯೆ ? ಸರಲೆಗಾಗಿ ತನ್ನಲ್ಲಿ ಪ್ರೇಮವಿದ್ದಿಲ್ಲವೆ ? ಭಾವಪಟವನ್ನು ದಿಟ್ಟಿಸಿದ. “ ಪ್ರೇಮ ಬೇರೆ, ವ್ಯಭಿಚಾರ ಬೇರೆ ” ಎಂದಂತಾಯಿತು ಸರಲೆ. ಅಹುದು, ಆಕೆಯ ತುಟಿಗಳು ಕೂಡ ದುಂಡಾಗಿ ಮುಂದೆ ಬಂದಂತೆ ಕಂಡಿತು. “ ಸರಲೇ, ನನ್ನ ಕತೆಗಳ ತೊಡಕನ್ನು ಬಿಡಿಸುವಂತೆ ನನ್ನ ಜೀವನದ ತೊಡಕನ್ನೂ ಬಿಡಿಸಬೇಕೆಂದು ನನಗೆ ಈ ಸಮಾಧಾನದ ಮಾತನ್ನು ಹೇಳುತ್ತಿರುವೆಯಾ ? ” ಎಂದು ಭಾವಪಟಕ್ಕೆ ಕೇಳಿ ಉತ್ತರವನ್ನು ಅಪೇಕ್ಷಿಸುವವನಂತೆ ದಿಟ್ಟಿಸುತ್ತ ಕುಳಿತನು.

೬

ನಿಜವಿದ್ದ ಮಾತೆಂದರೆ ಈ ರಾತ್ರಿ ಸಿನೆಮಾಕ್ಕೆ ಹೋಗಬೇಕೆಂದು ಕುಮುದಳ ಮನಸ್ಸಿನಲ್ಲಿದ್ದಿತು. ಎರಡು ದಿನಗಳಿಂದಲೂ ಈ ಸಂಧಿಯನ್ನು ನಿರೀಕ್ಷಿಸುತ್ತ ಕುಳಿತಿದ್ದಳು. ಎರಡು ದಿನಗಳ ಹಿಂದೆಯೆ ಹೋಗುವ ಆಸೆಯಾಗಿದ್ದಿತು. ಬಾಯಿಬಿಟ್ಟು ರಾಮಣ್ಣನ ಮುಂದೆ ಆಡಿಯೂ ಇದ್ದಳು, ಆದರೆ ಅವನು “ನಡೆ” ಎನ್ನುವುದರ ಬದಲು “ನೋಡೋಣ” ಎಂದಿದ್ದ.

ಮನಸ್ಸು ತುಸು ನೊಂದಿತ್ತು. ಆದರೂ ಸರಲಕ್ಕನು ತೀರಿ ಇನ್ನೂ ಮೂರು ತಿಂಗಳಾಗಿದೆ, ರಾಮಣ್ಣನಿಗಾದರೂ ಸಂಕೋಚವಿರಬಹುದು ಎಂದುಕೊಂಡು ಒತ್ತಾಯಪಡಿಸಿರಲಿಲ್ಲ. ಈ ಸಂಜೆ ಬೇಗ ಅಡಿಗೆ-ಊಟಗಳನ್ನು ಮುಗಿಸಿದ್ದೂ ಅದೇ ಆಸೆಯಿಂದ. ಆದರೆ ರಾಮಣ್ಣನ ಬಾಯಿಯಿಂದ ಮಾತ್ರ ಆ ಸೂಚನೆಯೆ ಬರಲೊಲ್ಲದು. ಮತ್ತೆ ತಾನೇ ಕೇಳಬೇಕೆ ? ದಿನಾಲು ಹೀಗೆ ಬಾಯ್ಬಿಡುವುದು ಒಳಿತೆ ? ಆದರೆ ಮನಸ್ಸು ತಡೆಯಲೊಲ್ಲದು. ಸುತ್ತುಸುತ್ತಾಗಿ ಏನನ್ನೊ ಅಂದಳು. ರಾಮಣ್ಣನು ಲಕ್ಷ್ಯವಿಲ್ಲದವನಂತೆ ನಟಿಸಿದ. ಕೊನೆಗೆ ಬೇಸರದ ಉಸಿರೆಳೆದಳು. ಆಗ ಮಾತ್ರ ರಾಮಣ್ಣ " ಸಿನೆಮಾಕ್ಕೆ ಹೋಗೋಣವೆ ?" ಎಂದ. ಆದರೆ ಅವನು ಕೇಳಿದ ರೀತಿ, ಅವನ ಮಾತಿನ ದನಿ, ಬಿಗಿದ ಮುಖಚರ್ಯೆ, ಬೇಸರದ ನಿಟ್ಟುಸಿರು— ಇದನ್ನೆಲ್ಲ ನೋಡಿ ತನಗೆ ಅಸಹ್ಯವೆನ್ನಿಸಿತು. ತಾನೂ ಉತ್ಸಾಹವನ್ನು ತೋರಗೊಡದೆ, ನಿರಾಶೆಗೆ ಅವಕಾಶ ದೊರೆಯದಂತೆ " ಹುಂ " ಎಂದು ಉಸಿರೆಳೆದಳು. ಆಗ " ಹಾಗಾದರೆ ನಡೆ " ಎಂದಿಷ್ಟೆ ರಾಮಣ್ಣನು ನುಡಿದಿದ್ದರೆ ತಾನು ಎಲ್ಲವನ್ನೂ ನುಂಗಿಕೊಂಡು ಪುಟಿದೇಳುತ್ತಿದ್ದಳು. ಆದರೇನು ? " ಸಿನೆಮಾಕ್ಕ—ಅಲ್ಲ—ಅಂದ್ರೆ ಎಲ್ಲಿಯಾದರೂ ಹೊರಗೆ ಹೋಗೋಣವೆ ?" ಎಂದ ! ಕೇವಲ ತನ್ನ ಕಾಟವನ್ನು ತಪ್ಪಿಸಿಕೊಳ್ಳಲು ರಾಮಣ್ಣನು ಮನೆಬಿಟ್ಟು ಹೊರಡಲು ಸಿದ್ಧನಾಗಿದ್ದಾನೆ ಎಂಬುದು ಆಗ ತನಗೆ ಸ್ಪಷ್ಟವಾಯಿತು. ಆಮೇಲೆ ತನಗೂ ಸಿಟ್ಟು-ನಿರಾಸೆ-ಅವಮಾನ ಎಲ್ಲವೂ ಎನ್ನಿಸಿತು. ತುಸು ತಿರಸ್ಕಾರವೂ ಎನ್ನಿಸಿತು. ದನಿಯಿಂದ ಇದೆಲ್ಲ ಹೊರಬಿದ್ದೀತೆಂದು ಹೆದರಿ ಈ ಸಲ ತಾನು ಉತ್ತರವನ್ನೆ ಕೊಡಲಿಲ್ಲ. ಮುಂದೆ ಏನೇನೊ ಮಾತಾಡಿದ ರಾಮಣ್ಣ. ಆದರೆ ಆ ಮಾತಿನ ಕಡೆ ತನ್ನ ಲಕ್ಷ್ಯಕೂಡ ಇದ್ದಿರಲಿಲ್ಲ. ಕೊನೆಗೆ ತಡೆಯದಾಗಿ ಆಕಳಿಕೆಯಿಂದ ತನ್ನ ಅಭಿಪ್ರಾಯವನ್ನು ಸೂಚಿಸಿಯೆ ಬಿಟ್ಟಳು ! ಅವನಿಗಾದರೂ ತಿಳಿಯಲಿ, ಯಾವ ಆಟವನ್ನಾದರೂ ಇಬ್ಬರೂ ಆಡಬಹುದೆಂದು—ಎಂದುಕೊಂಡಳು. ಕೊನೆಗೆ ರಾಮಣ್ಣನೂ ಬರೆಯುವ ನೆವದಿಂದ ಜಾರಿಕೊಂಡ. ಕುಮುದಳು ಒಂದು ನಿಮಿಷ, ಮನಸ್ಸನ್ನು ಗಟ್ಟಿಮಾಡಲು ಏನೊ ಎಂಬಂತೆ, ಕಣ್ಣಳನ್ನು ಮುಚ್ಚಿದಳು. ಇದುವರೆಗೆ ರಾಮಣ್ಣನ ಸಾನ್ನಿಧ್ಯ-ಸಹವಾಸಗಳಿಂದಲೆ ಪ್ರಬುದ್ಧಳಾದ ಕುಮುದಳಿಗೆ—ಮನಸ್ಸಿನಲ್ಲಿ ಯಾವ ವಿಚಾರವಿದ್ದರೂ—ಪ್ರತ್ಯಕ್ಷವಾಗಿ ರಾಮಣ್ಣನು

ಸುತ್ತುಮುತ್ತು ಕಾಣದಿದ್ದರೆ, ಬಿಸಿಲು ಕಾಣದ ಬಳ್ಳಿಯಂತೆ ಬಾಡುತ್ತಿತ್ತು ಅವಳ ಹೃದಯ. ಆ ಅನುಭವಕ್ಕಾಗಿಯೆ ಕುಮುದ ಹಣ್ಣಾಗಿದ್ದಳು. ರಾಮಣ್ಣ ಕೋಣೆಗೆ ಹೊರಟ ಕ್ಷಣ, ಅವನ ಸಾಕ್ಷಾತ್ತಾದ ಸಾನ್ನಿಧ್ಯ ಕಣ್ಮರೆಯಾಗುವುದೆಂದೆನ್ನಿಸಿದಾಕ್ಷಣ, ಗಾಬರಿಗೊಂಡ ಅವಳ ಹೃದಯವು ಅವನ ಹಿಂದಿನಿಂದಲೆ ಓಡಿತ್ತು; ಓಡಿ ಅವನ ಕಾಲನ್ನು ಹಿಡಿದು ಅವನು ಅಲ್ಲಿಂದ ಹೋಗದಂತೆ ಮಾಡಬೇಕು, ಅವಶ್ಯವೆನ್ನಿಸಿದರೆ ತನ್ನ ತಪ್ಪನ್ನು ( ತಾನು ಯಾವ ತಪ್ಪನ್ನು ಮಾಡಿದ್ದಾಳೆ ?—ಆದರೂ ) ಒಪ್ಪಿಕೊಳ್ಳಬೇಕು, ಅವನನ್ನು ಒಲಿಸಿ ರಮಿಸಿ ಸಿನೆಮಾಕ್ಕೆ ಹೋಗಬೇಕು, ಅಲ್ಲಿ ಕತ್ತಲಲ್ಲೂ ಕಣ್ಣನ್ನು ಮುಚ್ಚಿ ಅವನ ಸ್ಪರ್ಶ ಸುಖವನ್ನನುಭವಿಸುತ್ತ ನಿದ್ರೆಹೋಗಬೇಕು ಎಂದೆನ್ನಿಸಿತ್ತು. ಆದರೆ ಒಂದು ಕ್ಷಣ ಮಾತ್ರ. ಮರುಗಳಿಗೆಯಲ್ಲಿ ಆ ಹೃದಯವನ್ನು ಹಿಂದೆಳೆದಳು, ಬುದ್ಧಿಯು ಬಂಡನ್ನೆಬ್ಬಿಸಿತು. ಹೀಗೆ ಮಾಡಿದರೆ ಆತ್ಮದ್ರೋಹವಾಗುವುದು ಎಂದು ಬುದ್ಧಿಯು ವಾದಿಸಿತು. ಪಾಪ !—ಸುಖದುಃಖಗಳ ಸೆಳವಿನಲ್ಲಿ ಸಿಕ್ಕು ಹಣ್ಣಾದ ಹೃದಯವು ಬುದ್ಧಿಯ ಎದುರು ನಿರ್ವಿಣ್ಣವಾಗಿತ್ತು. “ ಈ ಪರಿಯಿಂದ ಯಾರಿಗೆ ಬೇಕಾಗಿದೆ ಸಿನೆಮಾ ?” ಎಂದುಕೊಂಡಳು ಕುಮುದ.

ಇದೆಲ್ಲ ಗಂಟೆ–ಅರ್ಧಗಂಟೆಯ ಮುಂಚಿನ ತಾಕಲಾಟ. ಈಗ ಮಾತ್ರ ಕುಮುದಳ ಹೃದಯ-ಬುದ್ಧಿಗಳು ಮತ್ತೆ ಸಮರಸವಾಗಿವೆ. ಅದಕಾಗಿಯೆ ಶಾಂತಚಿತ್ತಳಾಗಿ ಈಗ ಅವಳು ವಿಚಾರ ಮಾಡಬಲ್ಲಳು. ಮನುಷ್ಯಪ್ರಾಣಿಯ ಒಳಜಗತ್ತು ಎಂತಹದಿದೆ ಎಂಬುದರ ಅರಿವು ಆಕೆಗಿದ್ದಿರಲಿಲ್ಲ, ಆದರೆ ಆ ಜಗತ್ತಿನಲ್ಲಿಯ ಒಂದೊಂದು ಅನುಭವವನ್ನು ಮಾತ್ರ ಆ ಮಟ್ಟಿಗೆ ಆಕೆ ತಿಳಿದುಕೊಳ್ಳಲು ಶಕ್ತಳಾಗಿದ್ದಳು. ಒಮ್ಮೊಮ್ಮೆ ಎರಡು ಪರಸ್ಪರ ವಿರುದ್ಧ ಅನುಭವಗಳನ್ನು ಕಂಡು ಆಶ್ಚರ್ಯಪಡುವಳು. ಇಂದು ತನಗೆ ಎನಿಸಿದ್ದು, ತಾನು ನಡೆದುಕೊಂಡಿದ್ದು ಈಗ ವಿಚಾರ ಮಾಡಿದಲ್ಲಿ ಕುಮುದಳಿಗೆ ಅತ್ಯಂತ ಆಶ್ಚರ್ಯಕಾರಕವೆನ್ನಿಸಿತು. “ ಸಿನೆಮಾಕ್ಕೆ ಹೋಗೋಣವೆ ” ಎಂಬಂತಹ ರಾಮಣ್ಣನ ಮಾತಿಗೆ ಒಂದಾನೊಂದು ಕಾಲದಲ್ಲಿ ಯಾವ ಅರ್ಥವಿದ್ದಿತು ? ಅರ್ಥವೆ ಇದ್ದಿರಲಿಲ್ಲ ಎನ್ನಬಹುದು. ಯಾವ ಶಬ್ದಗಳೆ ಇರಲಿ, ರಾಮಣ್ಣನ ಬಾಯಿಯಿಂದ ಬಂದುವು ಎಂದ ಮಾತ್ರಕ್ಕೆ ತಾನು ಮೈಮರೆಯುತ್ತಿದ್ದಳು. ಶಬ್ದಗಳು ಯಾವುವು, ಅವುಗಳ ಹಿಂದಿನ ಆಶಯವೇನು, ಅವುಗಳನ್ನು ನುಡಿಸಿದ ದನಿ

ಎಂತಹದು, ಆ ದನಿಯು ಜೊತೆಗಿದ್ದ ಮುಖಚರ್ಯೆ ಎಂತಹದು—ಇಂತಹ ವಿಚಾರಗಳಂತೂ ದೂರದಲ್ಲಿಯೆ ಉಳಿದುವು, ತಾನು ಪೂರ್ತಿಯಾಗಿ ಕೇಳು ತ್ತಿರಲಿಲ್ಲ ಕೂಡ. ಆ ಕಾಲದಲ್ಲಿ ಸಿನಮಾಕ್ಕ ನಡೆ ಎಂದರೆ ಯಾವ ಉತ್ಸಾಹ ದಿಂದ ನಡೆಯುತ್ತಿದ್ದಳೊ ಅದೇ ಉತ್ಸಾಹದಿಂದ " ಜೀವವನ್ನು ಕೊಡು " ಎಂದರೆ ಸಾಯಲು ಸಿದ್ಧಳಿದ್ದಳು. ಕಾಲದ ಅವಧಿಯಿಂದ ನೋಡಿದರೆ ಎರಡೋ ಮೂರೋ ವರ್ಷಗಳಾಗಿವೆ; ಆದರೆ ಮನಃಸ್ಥಿತಿಯ ದೃಷ್ಟಿಯಿಂದ ನೋಡಿದರೆ ಅದೇನೊ ಸಾವಿರಾರು ವರ್ಷಗಳ ಮುಂಚಿನ ಮಾತು ಎನ್ನಿಸುವುದು.

ಸಾವಿರಾರು ವರ್ಷಗಳಿರಲಿ, ಸಾವಿರಾರು ದಿನಗಳ ಮುಂಚಿನ ಮಾತು ಕೂಡ ಅಲ್ಲ, ಇನ್ನೂ ಮೂರು ವರ್ಷ ಕೂಡ ಪೂರ್ತಿಯಾಗಿಲ್ಲ, ಎಂದರೆ ದಿನ ಗಳು ಕೂಡ ಇನ್ನೂ ಸಾವಿರದ ಸಂಖ್ಯೆಯನ್ನು ಮುಟ್ಟಿಲ್ಲ. ತನಗೆ ಚನ್ನಾಗಿ ನೆನಪಿನಲ್ಲಿದೆ. ಒಂದು ಸಂಜೆ ಮಲಗುವ ಮುಂಚೆ ತಾನು ರಾಮಣ್ಣನ ಕೋಣೆಗೆ ಹೋದುದು, ಕಪಾಟಿನ ಎದುರು ನಿಂತು ಪುಸ್ತಕಗಳನ್ನು ಹುಡು ಕುತ್ತಿರುವುದು, ಆಗ— ಹೇಗೋ ಏನೊ—ರಾಮಣ್ಣನು ತನ್ನನ್ನು ಬಲವಾಗಿ ಬಿಗಿದಪ್ಪಿ ಮುದ್ದಿಟ್ಟ ಮೇಲೆ ಎಚ್ಚರ ಬಂದಂತಾಗಿ, ಮೈಯೆಲ್ಲ ಬೆವರಾಗಿ, ನಾಚಿಕೆಯಿಂದ ನಿರ್ವಿಣ್ಣಳಾಗಿ ಆ ಕೋಣೆಯಿಂದ ಓಡಿಹೋದಳು. ಅಹುದು- ಅದೇ ರಾತ್ರಿ. ಕೋಣೆಗೆ ಬಂದೊಡನೆ ಭಯ ಮತ್ತು ಸುಖ—ಎರಡೂ ಭಾವನೆಗಳ ಎಳೆದಾಟದಲ್ಲಿ ಸಿಕ್ಕಿದ್ದಳು. ಆಕೆಗೆ ಆ ಮಾತು ತಿಳಿದಿತ್ತೊ ಇಲ್ಲವೊ—ಆದರೆ ಅಪ್ಪಿ ಮುದ್ದಿಟ್ಟುದನ್ನು ನೆನೆದಾಗ ಒಂದು ತರದ ಹೆದರಿಕೆ ಯಿಂದ ಆಕೆಯ ಮೈ ನಡುಗುತ್ತಿತ್ತು, ನೆನಹನ್ನು ಮೆಲುಕಾಡಿಸುವಾಗ ಮುಖವು ಸುಖೋಲ್ಲಾಸದಿಂದ ಅರಳುತ್ತಿತ್ತು. ಓಡಿಬಂದು ಹಾಸಿಗೆಯ ಮೇಲೆ ಕುಳಿತವಳು ಹಾಗೆಯೆ ಅಡ್ಡಾಗಿದ್ದಳು, ದೀಪವನ್ನೂ ಆರಿಸಿರಲಿಲ್ಲ; ಹೆದರಿಕೆ, ರಾಮಣ್ಣನು ಬಂದರೆ ಹೇಗೆ—ಎಂದು. ಜೊತೆಗೆ ಇನ್ನೂ ಒಂದು ಹೆದರಿಕೆ, ದೀಪವಿಲ್ಲದ್ದನ್ನು ಕಂಡು ತಾನು ಮಲಗಿರಬಹುದೆಂದು ತಿಳಿದು ರಾಮಣ್ಣನು ಬರದಿದ್ದರೆ—ಎಂದು. ಬಂದರೆ ಏನು— ಎಂದು ಹೆದರಿಕೆ; ಕೆಲ ಹೊತ್ತಿನ ತರುವಾಯ ಅವನು ಬರುವ ಸುಳಿವೇ ಇಲ್ಲವೆಂದು ನಿರಾಶೆ. ಮೆಲ್ಲನೆ ಹೆಜ್ಜೆಗಳನ್ನಿಡುತ್ತ ಬಾಗಿಲವರೆಗೆ ನಡೆದಿದ್ದಳು, ಅದನ್ನು ತೆರೆದು ಹೊರಗೆ ಹಣಿಕಿಕ್ಕುವ ಧೈರ್ಯ ಮಾತ್ರ ಆಗಿರಲಿಲ್ಲ. ತಿರುಗಿ ಹಾಸಿಗೆಯವರೆಗೆ

ನಡೆದಳು, ನಡೆವಾಗ ಒಮ್ಮೊಲೆ ಹಿಂತಿರುಗಿ ನೋಡುವಳು, ಬಾಗಿಲು ತೆರೆದ ಸದ್ದಾಗಲಿಲ್ಲವೆ ?, ಎನ್ನಿಸಿ ಮನಸ್ಸು, ದೇಹ ಎರಡೂ ಜೋಕಾಲಿಯಂತೆ ಹೊಯ್ದಾಡಿ ದಣಿದು ತಾನು ಮಲಗಿದ್ದೇ ತನಗೆ ಗೊತ್ತಿರಲಿಲ್ಲ. ಬೆಳಿಗ್ಗೆ ಎಚ್ಚರಾದಾಗ ಮಾತ್ರ ಒಮ್ಮೆಲೆ ಹೆದರಿ ಸುತ್ತಲೂ ನೋಡಿದ್ದಳು. ಎಲ್ಲವೂ ಇದ್ದಂತಿದ್ದಿತು. ರಾಮಣ್ಣನ ಭೆಟ್ಟಿಯ ಚಿಹ್ನಗಳೆ ಇದ್ದಿರಲಿಲ್ಲ.

ರಾಮಣ್ಣನ ಭೆಟ್ಟಿ, ಆ ಬಗ್ಗೆ ವಿಚಾರ, ಅದಕ್ಕೆ ತಕ್ಕ ಅನುಭವ—ಇದೊಂದರದೂ ನಿಶ್ಚಿತ ಕಲ್ಪನೆ ಇಲ್ಲದ್ದರಿಂದ ಕುಮುದಳಿಗೆ ಮಾರುದಿನ ಬಹಳೊತ್ತು ರಾತ್ರಿ ಅನುಭವದ ಸ್ಮೃತಿ ಪೀಡಿಸಲಿಲ್ಲ. ಆದರೆ ಒಂದು ಸಂಗತಿ ಮಾತ್ರ ಈಗಲೂ ಅವಳ ಕಣ್ಣು ಕಟ್ಟಿದಂತಿದೆ. ಅಂದು ಬೆಳಗಿನಿಂದ ಸಂಜೆಯವರೆಗೆ ಮನೆಗೆಲಸಕ್ಕಾಗಿ ತಾನು ತೋರಿಸಿದ ಉತ್ಸಾಹವನ್ನಾಗಲಿ, ಪಟ್ಟ ಪರಿಶ್ರಮವನ್ನಾಗಲಿ ಮುಂಚೆ ಎಂದೂ ಕಂಡಿರಲಿಲ್ಲ. ಜೊತೆಗೆ, ದುಡಿದಷ್ಟು ಉಲ್ಲಾಸವೆ ಹೆಚ್ಚುತ್ತಿತ್ತು ಹೊರತು ದಣಿವಾಗುತ್ತಿರಲಿಲ್ಲ. ಸರಲಕ್ಕ ಹಾಸಿಗೆ ಹಿಡಿದಂದಿನಿಂದ ಅಡುಗೆಮನೆಯ ಪೂರ್ತಿ ಜವಾಬ್ದಾರಿ ಕುಮುದಳದೆ ಆಗಿತ್ತು. ಮಿಕ್ಕ ಕೆಲಸಕ್ಕಾಗಿ ಮನೆಯಾಳು, ಕಸ-ಮುಸುರೆಯಾಕೆ ಇಬ್ಬರೂ ಇದ್ದರು. ಆದರೆ ಅಂದು ಅಡುಗೆ-ಊಟದ ಕೆಲಸವನ್ನು ಮಾಡುವುದಲ್ಲದೆ ಕುಮುದ ಇನ್ನೂ ಎಷ್ಟೊ ಮಾಡಬೇಕಿದ್ದ ಕೆಲಸಗಳನ್ನು ಶೋಧಿಸಿ ತೆಗೆದಳು.

" ಯಾಕ, ಕುಮುದಾ ? ಸುಮ್ನೆ ಇಲ್ಲಿ ನನ್ನ ಮಗ್ಗಲಿಗೆ ಕೂತು ವಿಶ್ರಾಂತಿ ತಗೋಬಾರದ ? " ಎಂದಿದ್ದಳು ಸರಲಕ್ಕ.

" ಯಾರಾರೆ ನೋಡಿದರ ಏನೆಂದಾರು ? " ಎಂದಳು ತಾನು

" ನೋಡುವವರು ಯಾರು ? ಅಂತಾರ ಯಾಕ ? " ಎಂದು ಸರಲಕ್ಕ ಕುಮುದಳ ಸಂದರ್ಭ ತಿಳಿಯದೆ ಕೇಳಿದ್ದಳು.

" ನೋಡುವವರು ಯಾರು ಅಂದ್ರ ? ಹೆಂಡತಿ ಹಾಸಿಗೆ ಹಿಡಿದಂದಿನಿಂದ ಒಂದು ಕೋಣೆ ವ್ಯವಸ್ಥಿತ ಇಲ್ಲ, ಒಂದು ಅರಿವೆ ಸ್ವಚ್ಛ ಇಲ್ಲ— ಅಂದ್ರಂಪ್ರ ಹ್ಯಾಂಗ, ತಾಯೀ ? " ಎಂದು ನಗೆಯಾಟದ ದನಿಯಲ್ಲಿಯೆ ಹೇಳಿದಳು.

" ಸಾಕ ಬಿಡ ! ನಿನ್ನೇನು ದುಡೀಲಿಕ್ಕೆ ತಂದಾರೇನು ಈ ಮನೆಗೆ ? "

" ಅಯ್ಯ, ಇದೇನ, ಅಕ್ಕಾ ? ದುಡೀಲಿಕ್ಕೆ ತಂದಾರಂತ ಹೇಳೋದಿಲ್ಲ. ನೀ ಓಡಾಡುವಾಗ ಮನೆ ಹ್ಯಾಂಗ ಇರ್‍ತಿತ್ತು ನಾನೇ ನೋಡೀನಲ್ಲ ? ನನ್ನ

ಇಲ್ಲಿ ತಂದ ಉಣಿಸಿ, ಕೂಡಿಸಿದರ ತಂಗಿಗೆ ಏನು ಕೆಲಸೇ ಕಲಿಸಿಲ್ಲ ಈಕೆ ಅನ್ನಬಹುದು ಮಂದಿ ನಿನಗ. ಮನೆ ಹೀಂಗ ಅವ್ಯವಸ್ಥಿತ ಕಂಡರ ಅನ್ನದೇ ಬಿಟ್ಟಾರ ?" ಎಂದು—ಈವರೆಗೆ ವಿಚಾರ ಮಾಡಿರದಿದ್ದರೂ—ಮಾತು ಕುಮುದಳ ಬಾಯಿಯಿಂದ ಬಂದಿತು.

ಸರಲಕ್ಕನಿಗೆ ಎಷ್ಟು ಆನಂದವಾಗಿತ್ತು ಆಗ ! ತಡೆಯುವ ಶಕ್ತಿ ಇಲ್ಲದ್ದಕ್ಕೆ ಕಣ್ತುಂಬಿ ನೀರು ನಿಂತು ಮಾತು ಬಾರದಂತೆ ಆಕೆಯ ಗಂಟಲು ಬಿಗಿದಿತ್ತು. ಕೈಸನ್ನೆಯಿಂದಲೆ ಹಾಸಿಗೆಯ ಹತ್ತಿರ ಬಾ ಎಂದು ಸೂಚಿಸಿದ್ದಳು. ಆಗ ತಾನು ಅಲ್ಲಿ ಹೋಗಿ ಕುಳಿತಿದ್ದರೆ ತನಗೂ ಅಳು ತಡೆಯುತ್ತಿರಲಿಲ್ಲ. ಅದಕಾಗಿ, " ಬಂದೆ, ಇನ್ನೊಂದು ಸ್ವಲ್ಪ ಉಳಿದಿದೆ. ಆವ್ಯಾಲೆ ಸಂಜೀತನಕ ನಿನ್ನ ಮಗ್ಗಲಾಗೇ ಕೂಡ್ತೀನಿ ಮಾತಾಡ್ತಾ" ಎನ್ನುತ್ತ ಮತ್ತೆ ಕೆಲಸದಲ್ಲಿ ತೊಡಗಿದ್ದಳು.

ಅಂದು ಎಲ್ಲ ಕೋಣೆಗಳೊಳಗಿನ ಸಾಮಾನುಗಳನ್ನು ತೆಗೆದು, ದೂಳ ಜಾಡಿಸಿ ಓರಣದಿಂದಿಟ್ಟಿದ್ದಳು. ಮುಖ್ಯವಾಗಿ ರಾಮಣ್ಣನ ಕೋಣೆಯೊಳಗಿನ ಪುಸ್ತಕಗಳನ್ನೂ ಬಟ್ಟೆಗಳನ್ನೂ ಶಿಸ್ತಾಗಿ ಸಾವರಿಸಿದ್ದಳು. ಅಡುಗೆಮನೆಯಲ್ಲಿಯ ಪಾತ್ರೆಗಳನ್ನೂ ಒಂದು ವ್ಯವಸ್ಥೆಯಲ್ಲಿರಿಸಿದ್ದಳು. ದೀಪಗಳ ಹೊದಿಕೆಗಳನ್ನು ತಿಕ್ಕಿದ್ದಳು. ಮಂಚಗಳ ಮೇಲಿನ ಹಾಸಿಗೆಗಳನ್ನೆಲ್ಲ ತೆಗೆದಿಟ್ಟು, ಮಂಚಗಳನ್ನೊರೆಸಿ, ಮೇಲೆ ಹಾಸಿಗೆಗಳನ್ನು ಮಡಿಕೆ ಇಲ್ಲದಂತೆ ಹಾಸಿಟ್ಟಿದ್ದಳು. ಒಂದು ಕೆಲಸ ಮುಗಿದೊಡನೆ ಇನ್ನೊಂದಕ್ಕೆ ತೊಡಗುವುದು, ಕೆಲಸವಿಲ್ಲದೆ ಕುಳಿತರೆ ಏನಾದೀತೋ ಎಂದು ಹೆದರಿದವಳಂತೆ. ಒಮ್ಮೊಮ್ಮೆ ಮಾಡಿದ್ದು ಸರಿಬಾರದೆ, ಸರಿ ಅಲ್ಲ ಎಂದು ಸಂಶಯ ಬಂದರೆ ಮತ್ತೆ ಮೊದಲಿನಿಂದ ಮಾಡುವುದು. ಅಂತೂ ಸಂಜೆಯವರೆಗೆ ದುಡಿದೂ ದುಡಿದು ಹಣ್ಣಾಗದೆ ಸಂತಸದಿಂದ ಉಬ್ಬಿ ಶಕ್ತಿ ಹೆಚ್ಚಿದಂತೆ ಅನುಭವ ಬಂದಿತ್ತು. ಕೊನೆಗೆ ಎಲ್ಲವನ್ನೂ ಮುಗಿಸಿ ಸರಲಕ್ಕನ ಹತ್ತಿರ ಬಂದಾಗ, ಆಕೆ ತನ್ನ ಮೈ-ಕೈಗಳನ್ನು ಮುಟ್ಟಿ ಮುಟ್ಟಿ ನೋಡಿದ್ದಳು.

" ಯಾಕ, ಅಕ್ಕಾ ? ಜನ್ಮದಾಗ ಒಂದು ದಿವಸ ದುಡಿದದ್ದಕ್ಕ ನನ್ನ ಕೈ ಮುರಿದುವು ಅಂತ ಹೆದರಿದ್ದಿ ಏನು ?" ಎಂದು ನಗೆಯಿಂದ ಕೇಳಿದ್ದಳು.

ಸರಲಕ್ಕನು ಒಮ್ಮೆಲೆ ಉತ್ತರವನ್ನು ಕೊಡಲಿಲ್ಲ. ಕೈಯಿಂದ ತನ್ನನ್ನು ಮುಟ್ಟುತ್ತಿದ್ದರೂ ಮನಸ್ಸು ಮತ್ತೆಲ್ಲಿಯೊ ಇದ್ದಂತಿತ್ತು. ಕೊನೆಗೊಮ್ಮೆ ಉಸುಗರ್ರೆದಳು. ಕುಮುದಳಿಗೆ ಹೆದರಿಕೆಯಾಯಿತು. ಅಕ್ಕನ ಮನಸ್ಸಿನಲ್ಲಿ ಯಾವ ವಿಚಾರವಿದ್ದಿರಬಹುದು ? ತನ್ನ ಮನದೊಳಗಿನ ವಿಚಾರಕ್ಕೆಯೆ ಉತ್ತರವನ್ನು ಕೊಡುವಂತೆ ಸರಲಕ್ಕ ನುಡಿದಳು "ನನ್ನಕಿಂತ ಛಲೋ ನೋಡಿಕೋತಿ ನೋಡು, ಕುಮುದಾ, ಮನೇನ್ನ" ಎಂದು.

"ಹೋಗೇ ! ಏನಾದ್ರೊಂದು ಮಾತಾಡಬ್ಯಾಡ !"

"ಏನಾದ್ರೊಂದು ಯಾಕ ? ಒಂದಿವಸಾದ್ರೂ ಇಷ್ಟು ನಾ ಓಡಾಡಿದ್ದು ನನಗೇನು ನೆನಪಿಲ್ಲವ್ವ !"

"ದಿನಾ ಶಿಸ್ತ ಇಡವ್ರಿಗೆ ಓಡಾಡೋದು ಬೇಕ ಇಲ್ಲ. ನಮ್ಮಂಥಾವೇ ನೋಡು, ಹಬ್ಬಕ್ಕೊಮ್ಮೆ ಹುಣ್ಣಿವೆಗೊಮ್ಮೆ ರಂದೀ ಎಲ್ಲ ಸ್ವಚ್ಛ ಮಾಡ್ಲಿಕ್ಕೆ ಓಡಾಡೋದು" ಎಂದಿದ್ದಳು ಕುಮುದ.

"ಆಯ್ತು, ನಿನಗಾದ್ರೂ ಈ ಮನೆಯ ಕೆಲಸದ ರೂಢಿ ಆಗ್ತದ, ಆಗ್ಲಿ."

"ಒಂದಿವಸ ಒನ್ನಾಲ್ಕು ಸಾಮಾನು ಅತ್ತಿಂದಿತ್ತ ಎತ್ತಿಟ್ಟದ್ದಕ್ಕ ಎಷ್ಟು ದೊಡ್ಡ ಗುಣ ಮಾಡತೀಯೋ, ಅಕ್ಕಾ ?"

"ಅದಕೇ ಹೇಳಿದೆನಲ್ಲ, ಛಲೋನೇ ಆಯ್ತಂತ ? ಇನ್ನೇನು ನಾ ನೆಟ್ಟಗಾಗಿ ಏಳೋದು ಅಷ್ಟರಾಗೇ ಅದ, ಮನೇ ನೋಡೋದು—"

ಕುಮುದ ಒಮ್ಮೆಲೆ ಸರಲಕ್ಕನ ಬಾಯಿಯನ್ನು ಮುಚ್ಚಿ "ಇರ್ಲಿ ಬಿಡೆ! ಏನಾದ್ರೊಂದು ಕೆಟ್ಟ ಕೆಟ್ಟ ಮಾತು ಆಡಬೇಡ, ಅಕ್ಕಾ."

"ಬಾಯಿಯಿಂದಾಡದಿದ್ರೂ ಮುಚ್ಚಿಡತದೇನು, ಕುಮುದಾ? ನನ್ದೇನು ನೆಟ್ಟಗಾಗೋ ಜಡ್ಡಲ್ಲ."

"ನೀ ಹೀಂಗ ಮಾತಾಡಿದರ ನಾ ಎದ್ದು ಹೋಗ್ತೀನಿ ನೋಡು, ಅಕ್ಕಾ" ಎಂದು ತಾನು ಸಿಟ್ಟಿನಿಂದ ನುಡಿದಿದ್ದಳು.

"ಸಿಟ್ಟಿಗೇಳಬ್ಯಾಡ, ತಾಯೀ, ಸಿಟ್ಟಿಗೇಳಬ್ಯಾಡ. ನೀ ಬಿಟ್ಟುಹೋದರ ಈ ಮನೆ ನಡೆಸಿಕೊಂಡು ಹೋಗವರು ಯಾರು—ನಾ ಹೋದಮ್ಯಾಲೆ" ಎನ್ನುತ್ತ, ಸರಲಕ್ಕ ಒಮ್ಮೆಲೆ ಮಗ್ಗುಲಾಗಿ ಮುಖವನ್ನು ಮುಚ್ಚಿಕೊಂಡಿದ್ದಳು.

ಈ ಮಾತುಗಳಿಂದ ಕುಮುದಳಿಗೆ ತುಸು ಕಸಿವಿಸಿಯಾಗಿತ್ತು. ಮಗ್ಗುಲಾಗಿ ಮುಖ ಮುಚ್ಚಿದ ಸರಲಕ್ಕ ಎಷ್ಟೊತ್ತಿನವರೆಗೂ ತನ್ನೊಡನೆ ಮಾತನಾಡಲಿಲ್ಲ ಎಂಬುದರಿಂದ ಕುಮುದಳಿಗೆ ತುಸು ಹೆದರಿಕೆಯೂ ಆಯಿತು. ಇದುವರೆಗೆ ಮನೆಯನ್ನು ತೋರಣದಿಂದ ಸಜ್ಜುಗೊಳಿಸಿದ್ದಕ್ಕಾಗಿ ಅನುಭವಿಸುತ್ತಿದ್ದ ಉತ್ಸಾಹವು ಕುಗ್ಗಿದಂತಾಯಿತು. ಸರಲಕ್ಕ ಹೀಗೇಕೆ ಮಾತಾಡಿರಬಹುದು? ತಾನು ಮಾಡಿದ್ದು ಆಕೆಗೆ ಸರಿಬಂದಿರಲಿಕ್ಕಿಲ್ಲವೆ? ಅಥವಾ—? ಕುಮುದಳು ಗಾಬರಿಯಾದಳು. ಇದುವರೆಗೆ ತಾನು ಕೂಡ ವಿಚಾರ ಮಾಡಿರಲಿಲ್ಲ. ಈಗ, ಸಂಜೆ ಸರಿಯುತ್ತ ನಡೆದಂತೆ, ರಾಮಣ್ಣನು ಹೊರಗಿನಿಂದ ಬರುವ ವೇಳೆ ಸಮೀಪಿಸಿದಂತೆ, ಬೇಡವೆಂದು ಹಿಡಿದೆಳೆದಾಗೂ ಕತ್ತನ್ನು ಚಾಚಿ ಚಾಚಿ ಕದ್ದು ಹಣಿಕಿಕ್ಕಲು ಯತ್ನಿಸುವದೇನೋ ಎನ್ನುವಂತೆ ತನ್ನ ಎದೆ ಹಾರುತ್ತಿರುವಾಗ, ಯಾವುದೋ ಒಂದು ಆಕಾಂಕ್ಷೆ ಹಸಿವೆಯಂತೆ ಒಳಗೆ ಪೀಡಿಸುತ್ತಿರುವಾಗ—ಆಗ ಕುಮುದಳಿಗೆ ಸಂಶಯ ಬಂದಿತು, ಹೆದರಿಕೆಯಾಯಿತು, ಮುಂಚಿನ ರಾತ್ರಿಯ ನೆನಪು ಒತ್ತಿ ಹಿಡಿದ ರಬರ್ ಚಂಡು ಹಿಡಿತವನ್ನು ಸಡಿಲಿಸಿದಾಗ ಸಿಡಿವಂತೆ ಪುಟಿದೆದ್ದಿತು. ಇದೇನು? ಇಡಿಯ ದಿನ ತಾನು ದುಡಿದದ್ದು ನಿನ್ನೆ ರಾತ್ರಿಯ ಅನುಭವದಿಂದ ಪ್ರೇರಿತಳಾಗಿಯೆ? ತಾನು ದುಡಿಯಬೇಕು, ಅದನ್ನು ನೋಡಿ ರಾಮಣ್ಣನು ಮೆಚ್ಚಬೇಕು, ಎಂಬುದಕ್ಕಾಗಿಯೇ? ಇಲ್ಲವಾದರೆ ಅವನ ಬರವಿನ ನಿರೀಕ್ಷೆ ತನಗೇಕೆ? ಕ್ರಮೇಣ ಹತ್ತಿರ ಬರುವವನ ಹೆಜ್ಜೆಗಳಂತೆ ತನ್ನ ಎದೆಯು ಹಾರಾಟದ ಸದ್ದು ಹೆಚ್ಚೆಚ್ಚು ಸ್ಪಷ್ಟವಾಗಿ ಕೇಳುತ್ತಿತ್ತು. ತನ್ನ ಮಾತು ಹಾಗಿರಲಿ, ಅದರಂತೆ ಸರಲಕ್ಕನಿಗೆ ಸಂಶಯ ಬಂದಿರಬಹುದೆ? ಇಲ್ಲವಾದರೆ ಸಾಯುವ ಮಾತನ್ನೂ, ತನ್ನ ತರುವಾಯ ಮನೆ ನಡೆಸಿಕೊಂಡು ಹೋಗುವ ವಿಷಯವನ್ನೂ ಆಕೆ ಎತ್ತಿದ್ದೇಕೆ? ಅಹುದು, ತನ್ನ ನಡತೆಗೆ ಏನೆ ಕಾರಣವಿರಲಿ, ಸರಲಕ್ಕನಿಗೆ ಮಾತ್ರ ಹಾಗೆ ಸಂಶಯ ಬಂದಿರಲೇಬೇಕು. ಮುಖ ಮುಚ್ಚಿಕೊಂಡು ಮಲಗಿದವಳು ಇನ್ನೂ ಮುಸುಕನ್ನು ತೆಗೆದಿಲ್ಲ, ತನ್ನನ್ನು ನೋಡಿಲ್ಲ. ಕುಮುದಳು ನಿಜವಾಗಿಯೆ ಗಾಬರಿಯಾದಳು. ತನ್ನ ವಿಚಾರ, ರಾಮಣ್ಣನಿಗಾಗಿ ತನ್ನ ಹೃದಯದೊಳಗೆ ನಡೆದ ಹೊಯ್ದಾಟ—ಇದೆಲ್ಲ ಸರಿಯೊ ತಪ್ಪೊ ಎಂಬ ಪ್ರಶ್ನೆ ಆಕೆಗಿದ್ದಿರಲಿಲ್ಲ. ಆ ದೃಷ್ಟಿಯಿಂದ, ಇಲ್ಲವೆ ಸಮಾಜದ ನೈತಿಕ ಜೀವನದ ದೃಷ್ಟಿ

ಯಿಂದ ವಿಚಾರ ಮಾಡುವ ಯೋಗ್ಯತೆಯು ಅವಳಿಗಿದ್ದಿರಲಿಲ್ಲ. ಇದಲ್ಲದೆ ಕೆಳಗಿನಿಂದ ಮನೆಯು ಬೆಂಕಿಯಿಂದ ಧಗಧಗಿಸುತ್ತಿರುವಾಗ, ಜಿಗಿದರೆ ಸಾಯುವೆನೊ ಉಳಿಯುವೆನೊ ಎಂಬ ತರ್ಕವನ್ನು ಮೇಲಿನಂತಸ್ತಿನವನು ಮಾಡುವುದಿಲ್ಲ. ಕೆಳಗೆ ಮನೆ ಸುಡುತ್ತಿದೆ, ಹತ್ತಿರ ಕಿಟಕಿ ಇದೆ—ಇವೆರಡನ್ನೂ ಕಂಡಾಕ್ಷಣ ಪ್ರಾಣಿಸಹಜವಾದ ಗುಣಕ್ಕಾಗಿ ಅವನು ಕೆಳಗೆ ಜಿಗಿದೇ ಬಿಡುವನು. ಎಲ್ಲವನ್ನೂ ಮೀರಿ ನಿಂತ ಪ್ರಾಣತತ್ತ್ವ ಶಕ್ತಿ ಅದು. ಕುಮುದಳಿಗೆ ತಿಳಿಯುವುದೆ ಶಕ್ಯವಿದ್ದಿರಲಿಲ್ಲ; ತಿಳಿದಿದ್ದರೂ ಅವಳು ಏನು ಮಾಡಲೂ ಶಕ್ಯವಿದ್ದಿರಲಿಲ್ಲ. ಕುಮುದಳನ್ನು ಪೀಡಿಸುತ್ತಿದ್ದುದು ಈ ತತ್ತ್ವವಿಚಾರವಲ್ಲ; ಅನಾಥೆಯಾದ ತನ್ನನ್ನು ತಂದಿಟ್ಟುಕೊಂಡು ಬದುಕಿಸಿ ಬೆಳೆಯಿಸುವ ಸರಲಕ್ಕ ತನ್ನ ಮೇಲೆ ಸಿಟ್ಟಾದರೆ ಹೇಗೆ—ಎಂಬುದೊಂದೇ ಹೆದರಿಕೆ. ಆ ಹೆದರಿಕೆಗಾಗಿ ಆಕೆ ರಾಮಣ್ಣನ ಬರುವಿಗಾಗಿ ಈಗ ಕಕ್ಕಾವಿಕ್ಕಿಯಾಹಳು. ರಾಮಣ್ಣನು ಬಂದ ಮೇಲೆ ಸರಲಕ್ಕ ಒಮ್ಮೆಲೆ ಎಲ್ಲವನ್ನೂ ಹೇಳಿಬಿಟ್ಟರೆ ? ತನ್ನ ಮೇಲಿನ ಸಿಟ್ಟನ್ನು ಆಡಿಕೊಂಡರೆ ? ಕೊನೆಗೆ—ಆ ಪ್ರಸಂಗವನ್ನು ತಪ್ಪಿಸಲು ತನ್ನ ಕಯ್ಯಲ್ಲಿಲ್ಲದಿದ್ದರೂ—ಅದನ್ನು ಎದುರಿಸುವುದಾದರೂ ಬೇಡ ಎಂದು ಮೆಲ್ಲನೆ ಅಲ್ಲಿಂದೆದ್ದು ತನ್ನ ಕೋಣೆಗೆ ಹೋಗಿದ್ದಳು. ಆದರೂ ರಾಮಣ್ಣ ಬಂದ ಸದ್ದಾದೊಡನೆ ತಡೆದಿರಲಿಲ್ಲ. ಒಂದೆರಡು ನಿಮಿಷ ಹೇಗೋ ತಡೆದಿದ್ದಳು; ಅಷ್ಟರಲ್ಲಿ ಅಬ್ಬರ ಕೇಳಬರಬಹುದೆಂದು. ಆದರೆ ಅದಕ್ಕೆ ಬದಲಾಗಿ ರಾಮಣ್ಣನು ಗಟ್ಟಿಯಾಗಿ ನಗುವುದು ಕೇಳಬಂದಿತು. ಕುಮುದಳಿಗೆ ಆಶ್ಚರ್ಯ. ಮಾತನ್ನು ಕೇಳುವ ಆತುರ, ಹೊರಬರಲು ಹೆದರಿಕೆ; ಮೇಲೆ ರಾಮಣ್ಣನು ಯಾಕೆ ಗಹಗಹಿಸಿ ನಗುವನೆಂಬುದರ ಕಲ್ಪನೆಯೂ ಇಲ್ಲ. ಕೊನೆಗೆ ಸರಲಕ್ಕನ ಹೆಸರಿನಿಂದ ರಾಮಣ್ಣ ತನ್ನನ್ನು ಕರೆದಾಗಲೆ ಆಕೆಗೆ ಹೋಗಬೇಕಾಯಿತು, ಹೋಗಿ ಸರಲಕ್ಕನ ಎದುರು ನಿಲ್ಲುವವರೆಗೆ ಕಾಲ್ಗಳು ನೆಲದೊಳಗೆ ಸಿಕ್ಕಿಬಿದ್ದಂತೆ ಜಡವೆನಿಸಿ ಎತ್ತದಂತಾಗಿದ್ದುವು. ನಡೆದಂತೆ ನಡೆದಂತೆ ತಾನು ನೆಲದೊಳಗೆ ಇಳಿಯುತ್ತಿರುವಂತೆಯೆ ಭಾಸವಾಯಿತು....

ಕುಮುದ "ಹಂ" ಎಂದು ದನಿ ತೆಗೆದು, ಕಣ್ಣರಳಿಸಿ ನೋಡಿದಳು. ಕೈಯಲ್ಲಿ ಪುಸ್ತಕ, ಕುರ್ಚಿಯಲ್ಲಿ ಕುಳಿತದ್ದು. ದೀರ್ಘವಾಗಿ ಉಸಿರೆಳೆದಳು. ಹಿಂದಿನ ನೆನಪು, ಅದನ್ನು ಅನುಭವಿಸುತ್ತ ಕಣ್ಣಿಗೆ ಮಬ್ಬು ಬಂದಿದೆ! ಗಡಿ

ಯಾರವನ್ನು ನೋಡಿದಳು, ರಾತ್ರಿ ೯॥ ಗಂಟೆ. ಆಯಿತು, ಹಾಗೂ ಹೀಗೂ ಮಲಗುವ ವೇಳೆಯು ಸಮೀಪ ಬಂದಿತಲ್ಲ ಎಂದು ನಿಟ್ಟುಸಿರಿಟ್ಟು ಎದ್ದಳು. ಸಿನೆಮಾಕ್ಕೆ ಹೋಗಬೇಕೆಂದಿದ್ದಳಲ್ಲವೆ ತಾನು ? ಸರಿಯಾಯ್ತು, ಹಿಂದಿನ ನೆನಪುಗಳ ಸಿನೆಮಾಚಿತ್ರವನ್ನು ನೋಡಿದಂತಾಯಿತಲ್ಲ ಎಂದು ವಿಷಾದ ದಿಂದ ತುಟಿಗಳನ್ನು ಬಿರಿದು ತನ್ನ ಕೋಣೆಗೆ ನಡೆದಳು.

೭

ಕೆಸರಿನಲ್ಲಿ ಕಾಲು ಸಿಕ್ಕವನಂತಾಯಿತು ರಾಮಣ್ಣನ ಸ್ಥಿತಿ. ಹೆಂಡತಿಯ ಭಾವಪಟದೆದುರು ಕುಳಿತು ಹಿಂದಿನ ನೆನಹುಗಳನ್ನು ತಡೆಯಲು ಅಸಮರ್ಥ ನಾದನು. ಒಂದು ನೆನಹು ಮತ್ತೊಂದಕ್ಕೆ ಎಳೆಯುತ್ತಿತ್ತು. ಸರಲೆ ತೀರಿ ದಂದಿನಿಂದ ತನ್ನ ಜೀವನದಲ್ಲಿ ಏನೋ ಒಂದು ತೊಡಕು ಉಂಟಾಗಿದೆ ಎಂಬ ಭಾವನೆ ಮಾತ್ರ ಅವನಿಗಿದ್ದಿತು. ಆದರೆ ಇದೇ ತನ್ನ ತೊಡಕು ಎಂಬುದು ಅವನಿಗೆ ಇದುವರೆಗೆ ಸ್ಪಷ್ಟವಾಗಿ ಹೊಳೆದಿದ್ದಿಲ್ಲ, ಇದುವರೆಗೆ ಅವನು ಬಾಯಿ ಯಿಂದ ಅದನ್ನು ಆಡಿಯೂ ಇರಲಿಲ್ಲ. ಆದರೆ ವಿಚಾರದ ಭರದಲ್ಲಿ "ನನ್ನ ಜೀವನದ ತೊಡಕನ್ನೂ ಬಿಡಿಸಬೇಕೆಂದು ಈ ಸಮಾಧಾನದ ಮಾತನ್ನು ಹೇಳುತ್ತಿರುವೆಯಾ ?" ಎಂದು ಸರಲೆಯ ಭಾವಪಟವನ್ನುದ್ದೇಶಿಸಿ ನುಡಿದ ಮೇಲೆ, ಆ ಶಬ್ದಗಳು ಸಾವಕಾಶವಾಗಿ ಅವನ ಮಿದುಳಿಗೆ ಮುಟ್ಟಿದಾಗ ಅವ ನಿಗೆ ಮೊದಲ ಸಲ ಹೊಳೆಯಿತು, ಕ್ಲೊರೊಫಾರ್ಮಿನ ಮಬ್ಬಿನಿಂದ ಎಚ್ಚೆತ್ತ ವನಂತಾಯಿತು. ಕುಮುದಳು ತನಗೆ ತೊಡಕಾಗಿದ್ದಾಳೆ ಎಂದು ಇದುವರೆಗೂ ಅವನಿಗೆ ಎನ್ನಿಸಿರಲಿಲ್ಲ; ಅನೇಕ ವರ್ಷಗಳಿಂದ ಮನೆಯೊಳಗೆ ಇದ್ದುಕೊಂಡ ಆ ಹುಡುಗೆ ಅವನಿಗೊಂದು ರೂಢಿ ಎನ್ನಿಸಿತ್ತು. ಮೊದಲು ಆಕೆ ತನ್ನ ಮನೆಗೆ ಬಂದಾಗ ಹುಡುಗೆಯಾಗಿ ಕಂಡಿದ್ದಳಲ್ಲವೆ ? ಅದೇ ಚಿತ್ರವೆ ಅವನ ಮನಸ್ಸಿ ನಲ್ಲಿ ಉಳಿದಿತ್ತು. ಬೆಳೆಯುವ ವಯಸ್ಸಿಗೆ ಬಂದ ಕುಮುದಳು ಸ್ವಲ್ಪಾವಧಿ ಯಲ್ಲಿಯೆ ಹೆಣ್ಣಿನ ಶಕ್ತಿಗಳಿಂದ ಕೂಡಿಕೊಂಡು ಬೆಳೆದಳಾದರೂ, ಸರಲೆಯ ಸಹವಾಸದ ಅಭ್ಯಾಸವಿದ್ದ ತನಗೆ ಆ ಬೆಳೆವಣಿಗೆ ಕಂಡಿರಲಿಲ್ಲವೇನೊ ? ಆಗಾಗ ಆಕೆ ತನ್ನ ಮುಂದೆ ಇನ್ನೂ ಹುಡುಗೆ ಎನ್ನುವಂತೆಯೆ ಅವಳೊಡನೆ ನಗೆಯಾಡುತ್ತಿದ್ದನು. ಇದಲ್ಲದೆ ಹೆಚ್ಚಾಗಿ ಆಕೆಯನ್ನು ತಾನು ನೋಡುತ್ತಿರು

ವುದೂ ಸರಲೆಯ ಮುಗ್ಧಲಿಗೆ ತಾವಿಬ್ಬರೂ ಕುಳಿತಾಗಲೆ. ಇವೆಲ್ಲ ಕಾರಣಗಳಿಗಾಗಿ ಕುಮುದಳ ಬಗ್ಗೆ ಅವನ ದೃಷ್ಟಿಗೆ ಯಾವ ಕುತೂಹಲವೂ ಇದ್ದಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಅಂತಹ ಘಟನೆ ಅಕಸ್ಮಾತ್ತಾಗಿ ನಡೆದುದಕ್ಕೆ ಅವನು ಚಕಿತನಾದ, ಒಪ್ಪಲು ಮನಸ್ಸಿಲ್ಲದಿದ್ದರೂ ತುಸು ಭಯಭೀತನಾದ. ಆ ದಿನವನ್ನೂ ಆ ಘಟನೆಯನ್ನೂ ಅವನು ಎಂದಿಗೂ ಮರೆಯುವುದು ಶಕ್ಯವಿರಲಿಲ್ಲ. ನಿಜವಾಗಿ ನೋಡಿದರೆ, ಆ ದಿನಕ್ಕೂ ಉಳಿದ ದಿನಗಳಿಗೂ ವ್ಯತ್ಯಾಸವೂ ಇರಲಿಲ್ಲ. ಕುಮುದಳು ಅನೇಕ ಸಲ ತನ್ನ ಕೋಣೆಗೆ ಬರುತ್ತಿದ್ದಳು, ಎಷ್ಟೋ ಸಲ ತಾನು ಬರೆಯುತ್ತಿದ್ದಾಗ ತನ್ನ ಹತ್ತಿರ ಬಂದು ನಿಂತು ಮಾತನಾಡುತ್ತಿದ್ದಳು, ಪುಸ್ತಕವನ್ನು ಕೇಳಿ ಒಯ್ಯುತ್ತಿದ್ದಳು, ಪುಸ್ತಕ ತುಸು ಗಡುಚಾಗಿದ್ದರೆ ಮುಂಚಿತ ಕತೆಯನ್ನು ಕೇಳಿಕೊಂಡು ಹೋಗುತ್ತಿದ್ದಳು, ಇನ್ನೆಷ್ಟೋ ಸಲ ತಾನಾಗಿಯೆ ಅವಳಿಗೆ ರಾಮಾಯಣ–ಮಹಾಭಾರತಗಳಲ್ಲಿಯ ಕತೆಗಳನ್ನು ಹೇಳಿದ್ದನು. ಇದೆಲ್ಲ ನಿಜ. ಆದರೆ— 'ನಿಜ' ಎಂದು ಹೇಳುವುದಾದರೂ ಹೇಗೆ ? ಒಂದೇ ಒಂದು ಸಲ ಅಕಸ್ಮಾತ್ತಾಗಿ ಕೈಗೆ ಕೈ ತಗುಲಿ, ತತ್‌ಕ್ಷಣ ದೃಷ್ಟಿಗೆ ದೃಷ್ಟಿ ಕೂಡಿದಾಗ ಅದೆಲ್ಲ ಕನಸಿನ ಕತೆಯಂತೆ ಮರೆತುಹೋಯಿತು. ಆ ಕ್ಷಣದಿಂದ ಕುಮುದಳು ತನಗೆ ಬೇರೆಯಾಗಿಯೆ ಕಂಡಳು. ವಯಸ್ಸಿನಿಂದ, ಜ್ಞಾನದಿಂದ, ಅನುಭವದಿಂದ ಹಿರಿಯನಾದ ತನ್ನ ಮುಂದೆ ಕುಮುದಳು ಹೇಗೆ ಕಂಡರೂ ಹುಡುಗಿಯೆ—ಎಂದು ಸಮಾಧಾನವನ್ನು ತಂದುಕೊಂಡಿದ್ದನು. ಆದರೇನು ? ಆ ರಾತ್ರಿ ಎಂದಿನಂತೆ ಪುಸ್ತಕವನ್ನು ಒಯ್ಯಲು ಬಂದಾಗ, ಕಪಾಟಿನ ಎದುರು ತಾನು ಪಶುವಿನಂತೆಯೆ ವರ್ತಿಸಿದನಲ್ಲ ? ಎರಡು-ಮೂರು ವರ್ಷಗಳ ತರುವಾಯ, ಇಂದು ಮನಃಸ್ಥಿತಿ ಬೇರೆಯಾಗಿ, ಆ ಅನುಭವದ ವಿಚಾರ ಮಾಡಿದರೂ ರಾಮಣ್ಣನಿಗೆ ಅದು ಸ್ಪಷ್ಟವಾಗಲಿಲ್ಲ. ಆ ದಿನ ತಾನು ಆಕೆಯನ್ನು ಒಮ್ಮೆಲೆ ಅಪ್ಪಿಕೊಂಡು ಮುದ್ದಿಟ್ಟುದೇಕೆ ? ಬುದ್ಧಿ ಪಕ್ವವಾಗಿದೆ, ಮನಸ್ಸು ಸುಸಂಸ್ಕೃತವಾಗಿದೆ, ಆದರೆ ದೇಹದ ಮೇಲೆ ಮಾತ್ರ ಮನಃಷ್ಯನ ನಿಯಂತ್ರಣವು ಎಂದಿಗೂ ಶಕ್ಯವಿಲ್ಲ ಎಂದೆನ್ನಿಸಿತು ರಾಮಣ್ಣನಿಗೆ. ಮನವೆಂಬ ಮರ್ಕಟವ ತಡೆಯಲಾರೆನು ದೇವ ಎಂದ ದಾಸಯ್ಯಗಳಿಗೆ ಈ ಗೂಢವೆ ತಿಳಿದಿರಲಿಲ್ಲವೇನೊ !—ಮನಸ್ಸನ್ನು ತಡೆಯುವುದು ಶಕ್ಯವಿದೆ, ಬುದ್ಧಿ ಇದ್ದವನಿಗೆ ತಿಳುಹಿಸಿಕೊಡುವುದು ಶಕ್ಯವಿದ್ದಂತೆ; ಆದರೆ ದೇಹವನ್ನು

ತಡೆಯುವುದು ಹೇಗೆ ? ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ನರಂ ನ ರಂಜಯತಿ ಎಂಬ ಮಾತು ಸುಳ್ಳಲ್ಲ. ದೇಹವು ದಡ್ಡನಂತೆ, ಹೇಳಿದರೆ ತಿಳಿಯುವುದಿಲ್ಲ; ದೇಹವು ಪಶುವಿನಂತೆ, ನಿಸರ್ಗವನ್ನೆ ಹಿಂಬಾಲಿಸಿ ನಡೆಯುವುದು; ದೇಹವು ಗಿಡ-ಬಳ್ಳಿಗಳಂತೆ, ಹುಟ್ಟಿದಂದಿನಿಂದ ಬೆಳೆಯುವುದೊಂದೇ ಹಟ. ಇಂತಹ ದೇಹಶಕ್ತಿ ಅಂದು ತನ್ನ ಬುದ್ಧಿ-ಮನಸ್ಸುಗಳನ್ನು ಜಯಿಸಿರಬೇಕು. ಹುಟ್ಟಿದ ಜೀವ ಮತ್ತೊಂದು ಜೀವವನ್ನು ಹುಟ್ಟಿಸಲೇಬೇಕು, ಅದಕಾಗಿಯೆ ತನ್ನ ಬೀಜಗಳನ್ನು ಉದುರಿಸಿ ಗಿಡ ಸಾಯುವುದು; ಹುಟ್ಟಿದ ದೇಹ ಮತ್ತೊಂದು ದೇಹವನ್ನು ಹುಟ್ಟಿಸಲೇಬೇಕು. ದೇಹದ ಹುಟ್ಟುಗುಣವದು. ತನ್ನ ದೇಹವೂ ಹಾಗೇ ನಡೆದುಕೊಂಡಿತು ಆ ರಾತ್ರಿ ಸರಲೆ ಹಾಸಿಗೆ ಹಿಡಿದಂದಿನಿಂದ ತನ್ನ ದೇಹದ ಹಸಿವು ಹೆಚ್ಚಿರಬೇಕೇನೊ ! ಸರಲೆಯ ಹತ್ತಿರ ಕೂಡುವುದು, ಆಕೆಯ ಕೈ ಮುಟ್ಟುವುದು, ಆಕೆಯೊಡನೆ ಮಾತನಾಡುವುದು ಇಂತಹ ಸಾನ್ನಿಧ್ಯ-ಸಹವಾಸಗಳಿಂದ ಆ ಹಸಿವು ಮರೆತಿರಬೇಕೆ ಹೊರತು ಹಿಂಗಿರಲಿಕ್ಕಿಲ್ಲ. ಇಲ್ಲವಾದರೆ ಮೊದಲ ಸಲ ಅನ್ನ ದೃಷ್ಟಿಗೆ ಬಿದ್ದೊಡನೆ ಹಪಾಪಿ ಹದ್ದಿನಂತೆ ಹಾರಿ ಅದನ್ನು ಹೊಡೆಯುತ್ತಿರಲಿಲ್ಲ. ಅಂದು ಕುಮುದಳನ್ನು ಮೊದಲ ಸಲ ಬಿಗಿದಪ್ಪಿದಾಗ ತನ್ನ ನಡತೆಗಾಗಿ ತನಗೆಯೆ ಆಶ್ಚರ್ಯವಾಗಿತ್ತು. ಗಟ್ಟಿಗಟ್ಟಿಯಾಗಿ ಅವಳನ್ನು ಹಿಡಿದು, ಅವಳ ಹಣೆ- ತುಟಿ-ಕಣ್ಣೆವೆ-ಗಲ್ಲ ಗದ್ದ-ಭುಜ-ಎದೆ ಇವುಗಳನ್ನು ಒಂದೇ ಸವನೆ ಚುಂಬಿಸುವಾಗ ತಾನು ಆಕೆಗೆ ರಾಕ್ಷಸನಂತೆ ಕಂಡಿರಬಹುದಲ್ಲವೆ ? ಅದಕಾಗಿಯೆ ಆ ಹುಡುಗಿ ಹೆದರಿ ಓಡಿದಳೇನೊ ಎಂದೆನ್ನಿಸಿತ್ತು.

ಕುಮುದಳು ತನ್ನ ತೋಳ-ಸೆರೆಯಿಂದ ಓಡಿಹೋದ ಮೇಲೆ ರಾಮಣ್ಣನಿಗೆ ಎಚ್ಚರ ಬಂದಂತಾಗಿತ್ತು. ಮೊದಲ ಕ್ಷಣ ತಾನು ಏನು ಮಾಡಿದನೆಂಬುದರ ಅರಿವೇ ಅವನಿಗಿದ್ದಿರಲಿಲ್ಲ. ಮೈ ಬೆವರಿದಾಗ ಜ್ವರ ಇಳಿದಂತಾಗಿ ಎಚ್ಚರಾಯಿತು. ತಾನು ಮಾಡಿದ್ದು ತಪ್ಪು ಎನ್ನಿಸಿತು. ಒಂದೆಡೆ ಹಾಸಿಗೆ ಬಿಟ್ಟು ಸರಿದಾಡಲು ಅಸಮರ್ಥಳಾದ ಸರಲೆಗೆ ದ್ರೋಹ, ಇನ್ನೊಂದೆಡೆಗೆ ಆಶ್ರಯ ಕೊಟ್ಟುದಕ್ಕೆ ಬೆಲೆ ಬೇಡಿದಂತಾಗಿ ಕುಮುದಳಿಗೆ ಅನ್ಯಾಯ ! ಈ ವಿಚಾರ ಬಂದೊಡನೆ ತಿರಸ್ಕಾರದ ನಗೆ ಮೂಡಿತ್ತು ರಾಮಣ್ಣನ ಮುಖದ ಮೇಲೆ. ಮನುಷ್ಯನ ಸಂಸ್ಕೃತಿ ಎಂದರೆ ಎಂತಹ ಆತ್ಮವಂಚನೆ ! ಸತ್ಯವನ್ನು ಮುಚ್ಚಿಡು

ವುದೆ ಬುದ್ಧಿವಂತಿಕೆ ಎಂಬುದಕ್ಕೆ ಎಂತಹ ದೃಷ್ಟಾಂತ ! “ದ್ರೋಹ—ಅನ್ಯಾಯ” ಎಂಬ ಶಬ್ದಗಳನ್ನೇನೊ ತಾನು ಉಪಯೋಗಿಸಿದ. ಅವು ಬರೀ ಶಬ್ದ ಮಾತ್ರ; ಕಲ್ಪನೆಗಳನ್ನು ಹುಟ್ಟಿಸುವ ಸಾಧನ ಮಾತ್ರ ! ಆ ಶಬ್ದಗಳಿಂದ ತನ್ನ ಸುಸಂಸ್ಕೃತ ಬುದ್ಧಿಗೆ ಸಮಾಧಾನವಾಯಿತೇನೊ ನಿಜ. ಆದರೆ ವಾಸ್ತವಿಕ ಸತ್ಯವು ಆ ಕಲ್ಪನೆಗಳಲ್ಲಿಲ್ಲ. ವಾಸ್ತವಿಕ ಸತ್ಯವು ತನ್ನ ದೇಹದ ಮೇಲೆದ್ದ ರೋಮಾಂಚದಲ್ಲಿದೆ, ತನ್ನ ಸಮಾಧಾನದ ಸಂಕೇತಗಳಾದ ಬೆವರುಹನಿಗಳಲ್ಲಿದೆ, ನೆನಪಿನಿಂದ ಕಚ್ಚುತ್ತಿರುವ ತನ್ನ ತುಟಿಗಳಲ್ಲಿದೆ, ಆ ತುಂಬಿದ ಸ್ತನಗಳ ಸ್ಪರ್ಶದಿಂದ ಚೇತರಿಸಿಕೊಂಡ ತನ್ನ ವಕ್ಷಃಸ್ಥಲದಲ್ಲಿದೆ, ಆ ಮೆತ್ತನ್ನ ತೋಳುಗಳನ್ನು ಬಿಗಿದಪ್ಪಿ ದಣಿದು ಕೃತಾರ್ಥವಾದವೆಂದು ಜೋತುಬಿದ್ದ ತನ್ನ ಕೈಗಳಲ್ಲಿದೆ ವಾಸ್ತವಿಕ ಸತ್ಯ ! ಈಗ ಮಾತ್ರ ರಾಮಣ್ಣನು ನಿಜವಾಗಿಯೆ ಬೆದರಿದನು. ಮಾಡಿದ ಕೆಲಸ ಕೆಟ್ಟುದೆಂದಾಗಲೂ ಮನಸ್ಸಿಗೆ ಸಮಾಧಾನವಾಗುವುದೆಂದರೆ— ಅದು ಯಾವುದರ ಲಕ್ಷಣ ? ತಾಮಸ ಸಮಾಧಾನವದು-ಛಿ ! ಮತ್ತೆ ಬರೀ ಪೊಳ್ಳು ಶಬ್ದಗಳು....ಹೋಗಲಿ— ಎಂದುಕೊಂಡಿದ್ದ. ಯಾಕೆ ? ಒಮ್ಮೆ ಏನೊ ನಡೆದುಹೋಯಿತು, ಇನ್ನೊಮ್ಮೆ ಹಾಗೆ ನಡೆಯುದಂತೆ ನೋಡಿದರಾಯಿತು, ಇದೇನು ದಿನನಿತ್ಯದ ಅನುಭವವಲ್ಲ, ಬುದ್ಧಿಪೂರ್ವಕವಾಗಿ ಮಾಡಿದ್ದಲ್ಲ, ಯಾಕೆ ಈ ಹಾಳು ವಿಚಾರ ಎಂದು ಎಲ್ಲವನ್ನೂ ಮರೆಯಲು ನಿರ್ಧರಿಸಿ ತನ್ನ ಕೆಲಸಕ್ಕೆ ತೊಡಗಿದ್ದ.

ಆದರೆ ಮರೆಯುವುದು ಶಕ್ಯವಾಗಲಿಲ್ಲ, ಮನಸ್ಸು ಮತ್ತೊಂದು ಕೆಲಸದಲ್ಲಿ ತೊಡಗಲು ಸಿದ್ಧವಿರಲಿಲ್ಲ. ಎಷ್ಟು ಯತ್ನವನ್ನು ಮಾಡಿದರೂ ಕುಮುದಳನ್ನು ಆಲಿಂಗಿಸಿದ ಅನುಭವವನ್ನು ಮೆಲುಕಾಡಿಸುವುದರಿಂದ ಮನಸ್ಸನ್ನು ಬಿಗಿಹಿಡಿಯುವುದಾಗಲಿಲ್ಲ. ಕೊನೆಗೆ ಸಿಟ್ಟಿಗೆದ್ದಿದ್ದನು, ತನ್ನನ್ನು ತಾನು ಬೈದುಕೊಂಡಿದ್ದನು, ಯಾವ ಪ್ರಯೋಜನವೂ ಸಾಧಿಸಿರಲಿಲ್ಲ. ತನ್ನ ತಪ್ಪನ್ನು ಬಹಿರಂಗವಾಗಿ ಒಪ್ಪಿಕೊಂಡರೆ ಮನಸ್ಸು ಹಾದಿಗೆ ಬರಬಹುದೆಂಬ ವಿಚಾರದಿಂದ ಕುಮುದಳ ಕ್ಷಮೆಯನ್ನು ಬೇಡಲು ನಿರ್ಧರಿಸಿದ; ಅವಳ ಕೋಣೆಗೆ ಹೊರಟ. ಮತ್ತೆ ತಡೆದ. ಕ್ಷಮೆ ಬೇಡುವುದಕ್ಕಾಗಿಯೊ ? ದೇಹದ ಹಸಿವನ್ನು ಹಿಂಗಿಸುವುದಕ್ಕಾಗಿಯೊ ? ಯಾವ ವಿಚಾರದಿಂದ ತಾನು ಅವಳ ಕಡೆ ಹೊರಟಿರುವನೆಂಬುದರ ಬಗ್ಗೆ ಅವನಿಗೇ ಸಂಶಯ ಬಂದಿತು, ತಡೆದ. ಪಾಪ ! ಎಷ್ಟಾ

ದರೂ ಆಶ್ರಿತಳು, ವಯಸ್ಸಿನಿಂದ ಚಿಕ್ಕವಳು, ತನ್ನಲ್ಲಿ ಆದರ-ವಿಶ್ವಾಸಗಳನ್ನಿಟ್ಟವಳು; ಎಷ್ಟು ಹೆದರಿದಳೊ ! ಏನು ತಿಳಿದುಕೊಂಡಿರಬಹುದೊ ! ಆಕೆಯನ್ನು ಸಂತೈಸುವುದು ತನ್ನ ಕರ್ತವ್ಯ ಎಂದು ಮತ್ತೆ ಹೆಜ್ಜೆಯನ್ನು ಮುಂದಿಟ್ಟ. ಆದರೆ "ಸಂತೈಸುವುದು" ಎಂಬ ವಿಚಾರಕ್ಕೆ ಪ್ರತಿಯಾಗಿ ತನ್ನ ಕೈ ಅವಳ ಮೈಯನ್ನು ಮುಟ್ಟಲು ಈಗಲೇ ಸಿದ್ಧವಾಗಿದೆ ಎಂಬುದು ಲಕ್ಷ್ಯಕ್ಕೆ ಬಂದೊಡನೆ ಮತ್ತೆ ಹೆಜ್ಜೆಯನ್ನು ಹಿಂದಿರುಗಿಸಿದ. ಹತಾಶನಾದ, ರೇಗಿದ, ಇದೊಂದು ತನಗೆ ಅವಮಾನ ಎಂದು ಒಳಗಿಂದೊಳಗೆಯೆ ಅಬ್ಬರಿಸಿದ. ತಾನು, ತನ್ನ ಶಿಕ್ಷಣ, ತನ್ನ ಸಂಸ್ಕೃತಿ, ತನ್ನ ವ್ಯವಸಾಯ— ಇವೆಲ್ಲ ಯಾವ ಕಡೆ, ಮನಸ್ಸಿನೊಳಗೆ ತಾಂಡವವಾಡುತ್ತಿದ್ದ ವಿಚಾರ ಯಾವ ಕಡೆ ? ಒಮ್ಮೆ, ಹಾಸಿಗೆ ಹಿಡಿದ ಸರಲೆಯ ಮೇಲೆಯೆ ಇದರ ನೈತಿಕ (ಏನು ಅನೈತಿಕವೊ ?) ಜವಾಬ್ದಾರಿ, ಎಂದುಕೊಂಡ; ಆದರೆ ಇಂದಿನವರೆಗೂ ಇಂತಹ ವಿಚಾರಕ್ಕೆ ಆಸ್ಪದವಿದ್ದಿರಲಿಲ್ಲ, ಈ ಕುಮುದಳ ಸಾನ್ನಿಧ್ಯದಿಂದಲೆ ನಡೆಯಿತು, ಆದುದರಿಂದ ಇದರ ಹೊಣೆ ಕುಮುದಳದು, ಎಂದು ವಾದಿಸಿಕೊಂಡ; ಕಾಮಜೀವನವು ತನ್ನನ್ನು ಅಪಹಾಸ್ಯಕ್ಕೀಡುಮಾಡಿತಲ್ಲ, ಎಂದು ಚಡಪಡಿಸಿದ. ಅಂತೂ ಹೇಗೊ ಆ ರೀತಿ ಅಲ್ಲಿಗೆಯೆ ಆ ಕತೆ ಮುಗಿದಂತಾಗಿತ್ತು. ಮುಗಿದಂತಾಗಿತ್ತು, ಆದರೆ ಮುಗಿದಿರಲಿಲ್ಲ ಎಂಬುದನ್ನು ಎರಡು-ಮೂರು ವರ್ಷ ಗತಿಸಿದ ತರುವಾಯ, ಇಂದು ಕೂಡ ಅವನು ಒಪ್ಪಿಕೊಳ್ಳಬೇಕಾಯಿತು. ಹೇಗೊ ಚಡಪಡಿಸುತ್ತ ಹಾಸಿಗೆಯ ಮೇಲೆ ಒರಗಿದಾಗ ಬೇರೊಂದು ವಿಚಾರ ಬಂದಿತು, ಚಟ್ಟನೆ ಎದ್ದು ಕುಳಿತ. ಇದೆಂತಹ ತೊಡಕು ? ಇದುವರೆಗೆ ಹೊಳೆದಿರಲೇ ಇಲ್ಲ ! ಕುಮುದಳು ಇಲ್ಲಿಂದ ಓಡಿ ಹೋದದ್ದು ಎಲ್ಲಿ ? ತನ್ನ ಕೋಣೆಗೊ ? ಸರಲೆಯ ಕಡೆಗೊ ? ಕುಮುದ ಗಾಬರಿಗೊಂಡಿದ್ದಳೆಂಬುದರ ಬಗ್ಗೆ ಅವನಿಗೆ ಸಂಶಯವಿದ್ದಿರಲಿಲ್ಲ. ಹೆದರಿದ ಹುಡುಗಿ ಸರಲೆಯ ಕಡೆ ಧಾವಿಸಿದ್ದರೆ ? ನಡೆದುದೆಲ್ಲವನ್ನೂ ಆಕೆಯ ಮುಂದೆ ಹೇಳಿದ್ದರೆ ?....ರಾಮಣ್ಣ ಈಗ ಕುಳಿತಲ್ಲಿಯೆ ಚಳಿಜ್ವರ ಬಂದಂತೆ ಗಡಗಡ ನಡುಗಿದ. ಹೋಗಿ ನೋಡಿ ಬರೋಣವೆ ?—ಎಂದ....ಎದ್ದು ಮೆಲ್ಲಗೆ ಹೊರಬಿದ್ದ ಕೋಣೆಯಿಂದ. ಒಂದು ನಿಮಿಷ ತಡೆದ. ಕುಮುದಳು ಕೋಣೆಯಲ್ಲಿರುವಳೆ ಇಲ್ಲವೆ ನೋಡಿಬಿಟ್ಟರಾಯಿತು ಎಂಬ ವಿಚಾರ ಬಂದಿತು. ಕೂಡಲೆ

ದೆವ್ವಿಗೆ ಹೆದರಿದವನಂತೆ ಸರಲೆಯ ಕೋಣೆಯ ಕಡೆ ಧಾವಿಸಿದ. ಕುಮುದಳ ಕೋಣೆಗೆ ಹೋಗಿದ್ದರೆ ತಾನು ಹೇಗೆ ನಡೆದುಕೊಳ್ಳಬಹುದೆಂಬುದರ ವಿಶ್ವಾಸ ತನಗೇ ಇದ್ದಿಲ್ಲವಾದ್ದರಿಂದ ಅವನು ಅಷ್ಟೊಂದು ಹೆದರಿ ಸರಲೆಯ ಕೋಣೆಗೆ ಧಾವಿಸಲು ಧೈರ್ಯಮಾಡಿದ್ದ. ಮನೆಯಲ್ಲಿ ದೆವ್ವ ಕಂಡಂತಾಗಲು ಪುಕ್ಕನು ಕೂಡ ಹೊರಗೆ ಕತ್ತಲಲ್ಲಿ ಓಡುವ ಧೈರ್ಯ ಮಾಡುವುದಿಲ್ಲವೆ ? ಅಂತೂ ಸರಲೆಯ ಕೋಣೆಯಲ್ಲಿ ಯಾವ ಸದ್ದೂ ಇರಲಿಲ್ಲ. ಯಾರಿಗೆ ಗೊತ್ತು ? ತನಗೆ ಹೆದರಿ ಕುಮುದಳು ಇಂದು ಇಲ್ಲಿಯೆ ಮಲಗಿದ್ದರೆ ? ನೋಡಿಯೆ ಬಿಡೋಣ—ಎಂದು ಮೆಲ್ಲನೆ ಬಾಗಿಲನ್ನು ತೆರೆದಿದ್ದ.

" ಯಾರು ? "

ಸರಲೆಯ ದನಿಯನ್ನು ಕೇಳಿ ಬೆಚ್ಚಿಬಿದ್ದ. ಈಗ ಯಾರು ಮಾತನಾಡಿದರೂ ತನಗೆ ಛೀ ಹಾಕುವವರೆ ಎಂಬ ವಿಚಾರ ಅಂತರಂಗದ ಹಿನ್ನೆಲೆಯಲ್ಲಿ ಸುಳಿಯುತ್ತಿತ್ತೇನೊ ? ಅದಕಾಗಿಯೆ ಕಳವು ಮಾಡುವಾಗಲೆ ಸಿಕ್ಕ ಕಳ್ಳನಂತೆ ಬೆದರಿದ್ದ.

" ಯಾರು ? ಅಂ ? ಅಲ್ಲ—ಯಾರಿಲ್ಲ—ನಾನೇ " ಎನ್ನಬೇಕಾಯಿತು ಅವನಿಗೆ.

" ಯಾಕ ? ಈವತ್ತು ಬರೀಲಿಕ್ಕೆ ಮನಸ್ಸೇ ಆಗವಲ್ಲವೇನು ? "

ಗಾಯದ ಮೇಲೆ ಉಪ್ಪನ್ನು ಸುರುವಿದಂತಾಯಿತು ರಾಮಣ್ಣನಿಗೆ.

" ಇಲ್ಲ, ಬರೀತಾನೇ ಕೂತಿದ್ದೆ, ನಿನ್ನ ದನಿ ಕೇಳಿಸಿಧಾಂಗ ಆಯ್ತು, ಏನು ಬೇಕಾಗೇದೇನು ಅಂತ ನೋಡ್ಲಿಕ್ಕೆ ಬಂದಿದ್ದೆ."

" ಅಯ್ಯ ! ನನಗೂ ಏನೋ ಸದ್ದು ಕೇಳಿಸಿಧಾಂಗ ಆಯ್ತು....ಕುಮುದನೂ ಇನ್ನೂ ಮಲಗಿಲ್ಲೊ ಏನೊ ? "

" ನಾ ನೋಡಿಲ್ಲ, ಬರೀತಾ ಕೂತಿದ್ದೆ. ಕರೀಲೇನು ಆಕೇನ್ನ ? "

ಆ ಕೊನೆಯ ವಾಕ್ಯ ಹೊರಬಿದ್ದೊಡನೆ ನಾಲಗೆಯನ್ನು ಕತ್ತರಿಸಿ ಕೊಂಡುಬಿಡಬೇಕು ಎಂದೆನ್ನಿಸಿತ್ತು ಅವನಿಗೆ.

" ಅಯ್ಯ ! ಅದನ್ನೇನ ಕರೀತೀರಿ, ಪಾಪ ! ಸಣ್ಣ ಹುಡುಗೆ—ಮಲಗಿ ಕೊಳ್ಳಲಿ ಬಿಡಿರಿ. "

" ಅಲ್ಲ, ನಿನಗೇನಾದ್ರೂ ಬೇಕಾಗಿದ್ದರ, ಅಂದೆ. "

ಸರಲೆ ಆ ಮಾತಿಗೆ ಮುಗುಳ್ನಗೆಯನ್ನು ಬೀರಿದಳು.

“ನನಗೇನು ಬೇಕಾಗೋದು? ನೀವಿದ್ದೀರಿ, ಕುಮುದ ಇದ್ದಾಳ. ನೀವಿಬ್ಬರೂ ಕೂಡಿ ಮನೇ ನಡೆಸಿಕೊಂಡು ಹೋಗ್ತೀರಿ. ಇನ್ನೇನು ನನಗ ಚಿಂತೆ ಇಲ್ಲ. ಈಗ ನನ್ನ ಕಣ್ಣು ಮುಚ್ಚಿದರ ಸಾಕು” ಎಂದಳು.

ಗುಡುಗು—ಅಲ್ಲ, ಅದು ತನ್ನ ಎದೆ ಹೊಡೆದುಕೊಳ್ಳುವ ಸದ್ದು! ಸರಲೆಯ ಆ ಮಾತಿನಿಂದ ರಾಮಣ್ಣನ ಹೃದಯ ಸಿಡಿದು ಚೂರು ಚೂರಾ ದಂತಾಯಿತು. ಯಾಕೆ ಈ ಮಾತು? ಇದರ ಅರ್ಥವೇನು? ಸರಲೆಗೆ ಗೊತ್ತಾಗಿರಬಹುದೆ? ತನ್ನ ಮೇಲೆ ಸಂಶಯ ಬಂದಿರಬಹುದೆ? ರಾಮಣ್ಣ ಹೆಂಡತಿಯ ನಿರ್ವಿಣ್ಣ, ಮುಗ್ಧ ಮುಖವನ್ನು ನೋಡಿದ. ಏನೋ ಒಂದು ಕಸವಿಸಿಯಾದಂತಾಗಿತ್ತು. ಸರಲೆಯ ಹತ್ತಿರ ಬಂದು ಅವಳ ಹಣೆಯ ಮೇಲೆ ಕೈಯಿಟ್ಟ.

“ಹುಚ್ಚಿ, ಹುಚ್ಚಿ ನೀನು ಅಂದೆ. ಬಿಸಿಲು ಇದ್ದರ ಗಿಡ-ಬಳ್ಳಿ ಬದು ಕ್ತಾವ. ಹಾಂಗ ನಿನ್ನ ತೆರೆದ ಕಣ್ಣಿನ ಬಿಸಿಲು ಇರೋತನಕಾನೇ ನಾವು ಉಸಿ ರಾಡಿಸೋದು, ಹಾರಾಡೋದು” ಎಂದಿದ್ದ.

ಸರಲೆಯು ತನ್ನ ಕೈಯಿಂದ ಗಂಡನ ಕೈಯನ್ನು ತಟ್ಟುತ್ತ,

“ಇಷ್ಟೊಂದು ಹೆಸರಾದ ಲೇಖಕರಿಗೆ ಇಷ್ಟು ಸವಿ ಮಾತಾಡೋದು ಕಠಿಣ ಏನು?” ಎಂದು ನಗೆಮೊಗದಿಂದ ಕೇಳಿದ್ದಳು.

“ಸವಿ ಮಾತು? ಸವಿ ನನ್ನ ಮಾತಿನೊಳಗ ಇಲ್ಲ” ಎಂದಿದ್ದ.

“ಮತ್ತೆಲ್ಲಿರತದ?” ಎಂದು ಕೇಳಿದಳು.

ತಟ್ಟನೆ ಬಾಗಿ ಅವಳ ಹಣೆಗೆ ಮುದ್ದಿಟ್ಟು

“ಸವಿ ಎಲ್ಲಿ ಇರ್ತದ ಅನ್ನೋದು ಅಲ್ಲಿ ಕೂತು ಅನುಭವಿಸೋ ಭೃಂಗಕ್ಕ ಗೊತ್ತು, ಕಮಲಿಗೆ ಏನು ತಿಳಿಯೋದು?” ಎಂದು ಅವಳ ಹೊದಿಕೆಯನ್ನು ಸರಿಪಡಿಸಿ ಹೊರಟ.

“ಈಗ ಬರ್‍ಬಾರ್ದ ಸಾವು, ಎಂಥಾ ಮರೀಲಾರದಂಥಾ ಹಣೆಬರೆಹ ಸಿಕ್ಕದ?”

“ಏನಂದಿ? ಹಣೆಬರೆಹ?”

ನಗುತ್ತ ತಾನು ಮುತ್ತಿಟ್ಟ ಹಣೆಯ ಭಾಗವನ್ನು ಸರಲೆಯು ಸೂಚಿಸಿದ್ದಳು. ಆಗ ರಾಮಣ್ಣನಿಗೆ ಕೋಣೆಗೆ ಹೋಗಿ ಒರಗಿದೊಡನೆ ಗಾಢವಾದ ನಿದ್ರೆ ಆವರಿಸಿತ್ತು.

ಇದೆಲ್ಲ ನೆನಹನ್ನು ಅನುಭವಿಸುತ್ತ ರಾಮಣ್ಣ ಮತ್ತೆ ಭಾವಪಟವನ್ನು ನೋಡಿದ. "ಸರಲಾ, ನಿನ್ನ ಹಣೆಬರಿಹ ಅಷ್ಟು ಒಳ್ಳೆಯದೆಂದು ಅಂದು ಹೇಳಿದಿ, ಮುಂದೆ ಕಣ್ಮರೆಯಾದಿ! ಆದರೆ ಇಂದಿಗೂ ಜೀವಂತನಾಗಿದ್ದು ಅದನ್ನು ನೆನೆಯುವ ನನ್ನ ಹಣೆಬರಿಹದ ಕಲ್ಪನೆ ನಿನಗಿದೆಯೆ ?" ಎಂದು ಮನಸ್ಸಿನಲ್ಲಿಯೆ ಸತ್ತ ಹೆಂಡತಿಯ ಚಿತ್ರಕ್ಕೆ ಸವಾಲನ್ನು ಹಾಕಿದ್ದ. ಶುದ್ಧಾಂತಃಕರಣದ ಸರಲೆಯ ಮಾತುಗಳಿಂದ ತನ್ನ ಕ್ಷುಬ್ಧ ಹೃದಯ ಶಾಂತವಾಗಿ, ಹಗುರಾಗಿ ತಾನು ಆ ರಾತ್ರಿ ಗಾಢವಾಗಿ ಮಲಗಿದ್ದರೂ ಮರುದಿನ ಎಚ್ಚೆತ್ತ ಮೇಲೆ ರಾಮಣ್ಣನ ಹೃದಯ ಮತ್ತೆ ಅಳುಕಿತ್ತು. ಈಗ ಆ ಮಾತನ್ನೆಲ್ಲ ಒಪ್ಪಿಕೊಳ್ಳಲು ಆತಂಕವೇನು ? ಒಪ್ಪಿಕೊಳ್ಳುವುದೂ ತನ್ನ ಹೃದಯದ ಸಾಕ್ಷಿಯಾಗಿಯೆ. ಸರಲೆಯ ಬಗ್ಗೆ ಅವನು ಸಂಶಯ ತೊರೆದು ನಿರ್ಭೀತನಾಗಿದ್ದರೂ ಮರುದಿನ ಅವನನ್ನು ಬೇರೊಂದು ಭಯವು ಮುತ್ತಿತ್ತು. ಕುಮುದಳನ್ನು ಎದುರಿಸುವುದು ಹೇಗೆ ? ರಾತ್ರಿ ಆ ರೀತಿ ರಾಕ್ಷಸನಂತೆ ನಡೆದುಕೊಂಡು ಈಗ ಮುಖವನ್ನು ತೋರಿಸುವುದು ಹೇಗೆ ? ಅವಳಿಂದ ಮುಖವನ್ನು ತಪ್ಪಿಸುವುದಾದರೂ ಹೇಗೆ ? ಬೆಳಗಿನ ಚಹದಿಂದ ರಾತ್ರಿಯ ಊಟದವರೆಗೆ ಎಲ್ಲವನ್ನೂ ಆಕೆಯೆ ನೋಡಿಕೊಳ್ಳುವಳು. ಕೊನೆಗೆ ರಾಮಣ್ಣ ಸರಲೆಯ ಮೊರೆಯನ್ನೆ ಹೊಕ್ಕಿದ್ದ. ಎದ್ದು ಕೋಣೆಯಿಂದ ಹೊರಬಿದ್ದವನೆ ಸರಲೆಯ ಹತ್ತಿರ ಬಂದು ಕುಳಿತಿದ್ದ. ಅಲ್ಲಿಯೆ ಚಹ ಕುಡಿದಿದ್ದ. ಆದರೆ ಕ್ರಮೇಣ ರಾಮಣ್ಣ ಬೆಪ್ಪಾಗಬೇಕಾಗಿ ಬಂದಿತ್ತು. ತಾನು ಕುಮುದಳಿಗೆ ಹೆದರಿದ್ದನಲ್ಲವೆ ? ಆದರೆ ಆಕೆಯ ನಡೆ-ನುಡಿಗಳನ್ನು ನೋಡಿದರೆ ತನ್ನ ಬೆದರಿಕೆಗೆ ಕಾರಣವೆ ಇದ್ದಿರಲಿಲ್ಲ ಎನ್ನಿಸಿತ್ತು ಅವನಿಗೆ. ಕುಮುದಳ ಮುಖದ ಮೇಲೆ ತಡೆದುಹಿಡಿದ ಸಂತಸದ ಕಳೆ ! ರಾಮಣ್ಣನಿಗೆ ಸಂಶಯ ಬಂದಿತ್ತು. ತನಗೆಯೆ ಈಗ ಕುಮುದಳು ಬೇರೆಯಾಗಿ ಕಾಣುತ್ತಾಳೆಯೆ ? ಇಲ್ಲವೆ ನಿಜವಾಗಿಯೆ ಆ ಕಳೆ ಇದೆಯೆ ? ತುಸು ಧೈರ್ಯ ತಂದುಕೊಂಡು ದಿಟ್ಟಿಸಿ ನೋಡಿದ ಅವಳನ್ನು. ಆಗ ಅವಳು ನಾಚಿದರೂ ಮುಗುಳ್ನಗೆಯನ್ನು ಬೀರಿ ಮುಖವನ್ನು ತಿರುಗಿಸಿದ್ದಳು !

ರಾಮಣ್ಣ ತಲೆಯನ್ನು ಜಾಡಿಸಿದ. ನೆನಪುಗಳ ಒತ್ತಡ ತಡೆಯದಂತಾಯಿತೇನೊ! ಕುರ್ಚಿಯಿಂದೆದ್ದು ಅತ್ತಿತ್ತ ಹೆಜ್ಜೆಯನ್ನಿಡತೊಡಗಿದ. "ಮುಗುಳ್ನಗೆಯನ್ನು ಬೀರಿ ಮುಖವನ್ನು ತಿರುಗಿಸಿದ್ದಳು ಅಂದೆ" ಎಂದ ಗಟ್ಟಿಯಾಗಿ. ಅಷ್ಟು ದಿನಗಳ ತರುವಾಯವೂ ಅವನಿಗೆ ಆ ಚಿತ್ರ ಮರೆತಿರಲಿಲ್ಲ. ಅದೇ ಕುಮುದಳನ್ನು ಇಂದು ತಾನು ಸಿನೆಮಾಕ್ಕೆ ಕರೆದೊಯ್ಯಲು ಸಿದ್ಧನಿರಲಿಲ್ಲ! ಕಾಲಚಕ್ರ ಯಾವ ರೀತಿ ತಿರುಗಿದೆ? ಅಂದು ಸರಲೆ ಸಾಕ್ಷಾತ್ತಾಗಿ ಹೃದಯದ ಆತಂಕದಂತೆ ಕಣ್ಣೆದುರಿದ್ದಳು. ಆದರೂ ಕುಮುದಳ ಬೇಟೆಯಾಡಿದ ತಾನು. ಈಗ "ಇದೇನು ?" ಎಂದು ಕೇಳಬಹುದಾದ ಸರಲೆ ಜೀವದಿಂದಿಲ್ಲ. ಆದರೆ ಬೆನ್ನಟ್ಟಿದವರನ್ನು ತಪ್ಪಿಸಲು ಓಡುವ ಬೇಟೆಯ ಮೃಗ ತಾನಾಗಿದ್ದಾನೆ! ಕಾಲಚಕ್ರವೆ? ಅಂದು ಮಾತ್ರ ಕುಮುದಳ ನಾಚಿಕೆಯು ಮತ್ತು ಮುಗುಳ್ನಗೆಯ ಮುದ್ರೆಯನ್ನು ನೋಡಿದಾಗ "ಪ್ರಕೃತಿಯ ಜಾಲ" ಎಂದುಕೊಂಡಿದ್ದ. ಇಂದಿನಂತೆ ಕಾಲಚಕ್ರದ ವಿಚಾರ ಇಲ್ಲವೆ ಸಂದರ್ಭ ಬಂದಿರಲಿಲ್ಲ. ಇದೊಂದು ಪ್ರಕೃತಿಯ ಜಾಲ ಎಂದುಕೊಂಡಿದ್ದ. ಬಿಸಿಲಿನ ದಾಹ ಬಳ್ಳಿಗೆ ಪ್ರಾಣದಾಯಕ, ಗಂಡಸಿನ ಆಕ್ರಮಣ ಹೆಣ್ಣಿಗೆ ಪ್ರಾಣದಾಯಕ; ಇದೊಂದು ಪ್ರಕೃತಿಯ ಜಾಲ ಎಂದುಕೊಂಡಿದ್ದ. ಅದೇನೆ ಇರಲಿ, ಕುಮುದಳಿಂದ ಯಾವ ಭಯವೂ ಇಲ್ಲ ಎಂದು ಮನಸ್ಸು ಹಗುರಾಗಿ ಇಡಿಯ ದಿನವನ್ನು ಉಲ್ಲಾಸದಲ್ಲಿ ಕಳೆದಿದ್ದ. ಸಂಜೆಗೆ ಮನೆಗೆ ಮರಳಿದಾಗ ಇನ್ನೂ ಒಂದು ಮೋಜು ಕಾದಿತ್ತು. "ಮೋಜು" ಎಂದು ಆಗ ಎನ್ನಿಸಿತ್ತು. ಈಗ ಅದೂ ಒಂದು ತೊಡಕೇ ಆಗಿತ್ತು ಎಂದು ಹೊಳೆಯಿತು ಅವನಿಗೆ. ಆ ಸಂಜೆ ಮನೆಗೆ ಬಂದರೆ ಮನೆಯ ಸ್ವರೂಪವೆ ಬದಲಾಗಿದೆ! ನೋಡಿದಲ್ಲೆಲ್ಲ ಸ್ವಚ್ಛತೆ, ಶಿಸ್ತು, ಓರಣ! "ಎಲ ಇದೇನು ? ಈವೊತ್ತು ಇಡೀ ಮನೀನ್ನೇ ಅಗಸನಿಗೆ ಕೊಟ್ಟಿದ್ದಿರ್ಯೊ ಏನು ?" ಎಂದು ಸರಲೆಗೆ ಕೇಳಿದ್ದ.

"ಯಾಕ ? ಅಗಸನ್ನ ನೆನಪಾಯ್ತು ? ನೀವೂ ರಾಮನ್ಹಾಂಗೆ ಅಗಸನಿಗಾಗಿ ಹೆಂಡ್ತೀನ್ನ ಬಿಡುವವರೊ ಏನು ?" ಎಂದು ಸರಲೆಯೂ ನಗೆಯಾಡಿದ್ದಳು.

ಒಂದು ನಿಮಿಷ ರಾಮಣ್ಣ ಗಾಬರಿಯಾಗಿದ್ದ. ಆದರೆ ಅಷ್ಟರಲ್ಲಿ ಸರಲೆಯೆ ಮಾತನ್ನು ಮುಂದರಿಸಿದ್ದಳು.

" ಇಷ್ಟು ಯಾಕೆ ನೋಡ್ತೀರಿ ? ಮನೀನ್ನ ಸ್ವಚ್ಛ ಮಾಡಿದವರು ಮತ್ತೊಬ್ರಿದ್ದಾರ. ಆ ಶಕ್ತಿ ನಿಂ ಮಾಡಿಕೊಂಡ ಹೆಂಡತೀಗೆ ಉಳಿದಿಲ್ಲ. ಆದಕ್ಕಂದೆ-- ಕೈಲಾಗದ ಹೆಂಡ್ತೀನ್ನ ಬಿಟ್ಟು—"

ಸರಲೆಯ ಮಾತು ಮುಗಿದಿದ್ದಿಲ್ಲ. ಯಾಕೆಂದರೆ, ಅಷ್ಟಕ್ಕೆ ಎಲ್ಲವೂ ಹೊಳೆದು ತಾನು ಗಹಗಹಿಸಿ ನಕ್ಕಿದ್ದ. ಕುಮುದಳು ಇದನ್ನೆಲ್ಲ ಮಾಡಿದವಳು ಎಂದು ಹೊಳೆದಿತ್ತು ಅವನಿಗೆ. ಆದರೆ ಅಂದು ತಾನು ನಕ್ಕದ್ದು ಸರಲೆಯ ಮೋಜಿನ ಮಾತಿಗಾಗಿಯೆ ? ಇಲ್ಲವೆ ಕುಮುದಳ ಬಗ್ಗೆ ಹುಟ್ಟಿದ ಭರವಸೆಗಾಗಿಯೆ ? ಇಂದು ಕೂಡ ರಾಮಣ್ಣನಿಗೆ ನಿರ್ದಿಷ್ಟವಾಗಿ ತಿಳಿಯಲು ಶಕ್ಯವಾಗಲಿಲ್ಲ....ಕೋಣೆಯಲ್ಲಿ ಅಡ್ಡಾಡುವುದನ್ನು ತಡೆದ. ಗಡಿಯಾರವನ್ನು ನೋಡಿದ, ೯॥ ಗಂಟೆ. ಉಸುರ್ಗರೆದ. ಇನ್ನು ಸಿನೆಮಾದ ಹೆದರಿಕೆಯೆ ಇಲ್ಲ, ಈ ಹಾಳು ಹಿಂದಿನ ಕತೆ ಸಾಕು, ಏನಾದರೂ ಓದೋಣ ಎಂದು ಪುಸ್ತಕವನ್ನೆತ್ತಿಕೊಂಡು ಮತ್ತೆ ಕುರ್ಚಿಯ ಮೇಲೆ ಕುಳಿತುಕೊಂಡ; ಸಮಾಧಾನವಾಗಲಿಲ್ಲೇನೊ ! ಎರಡೂ ಕಾಲ್ಗಳನ್ನೆತ್ತಿ ಮೇಜಿನ ಮೇಲಿಟ್ಟು ಕುರ್ಚಿಯ ಬೆನ್ನಿಗೆ ಒರಗಿ ಓದಲು ತೊಡಗಿದ.

## ೮

ಮನಸ್ಸಿನಲ್ಲಿ ಚಿಮ್ಮುತ್ತಿದ್ದ ಜೀವನದ ನೆನಪುಗಳೆ ಇಂದು ತನ್ನ ಪಾಲಿಗೆ ಸಿನೆಮಾ ಎಂದು ಹೇಳಿಕೊಂಡ ಕುಮುದಳಿಗೆ ಆ ಮಾತನ್ನೂ ಅಂದು ಕೊಂಡಿದ್ದು ತಪ್ಪಾಯಿತೇನೊ ಎನ್ನಿಸಿತು. ಯಾಕೆಂದರೆ, ಆ ನೆನಪುಗಳನ್ನು ಮರೆಯಬೇಕೆಂದು ಈಗ ತನ್ನ ಕೋಣೆಗೆ ಬಂದು ಹಾಸಿಗೆಯ ಮೇಲೆ ಕುಳಿತೊಡನೆ ಸಿನೆಮಾದ ಮಾತು ನೆನಪಿಗೆ ಬಂದಿತ್ತು. ಸರಲಕ್ಕನ ಮುಂದೆ ತಾನೊಮ್ಮೆ ಅಂದಿದ್ದಳು, " ಸಿನೆಮಾದೊಳಗ ಪಾರ್ಟ ಮಾಡೋದು ಛಲೋ ಕಾಣ್ತದ " ಅಂತ. ಆ ದಿನ—ಯಾವ ದಿನ ಅದು ?—ಹಾಂ—ತಾನು ಒಂದು ದಿವಸ, ಹಿಂದಿನ ರಾತ್ರಿ " ಏನೊ " ಆದುದಕ್ಕೆ ಉಬ್ಬಿ ಮೈಮುರಿ ದುಡಿದಿದ್ದಳಲ್ಲ ? ಆಗ ಸರಲಕ್ಕ ಏನೇನೊ ಮಾತಾಡಿದ್ದಕ್ಕೆ ತಾನು ಕೋಣೆಗೆ ಓಡಿದ್ದಳು ? ಆಮೇಲೆ ರಾಮಣ್ಣ ಬಂದಿದ್ದ ? ಯಾರು ಏನೆನ್ನುವರೊ ಎಂದು ಹೆದರಿ ಕುಳಿತಿದ್ದಳು ತಾನು ? ಆಗ ರಾಮಣ್ಣ ನಕ್ಕ ? ಹಾಂ—ಅದೇ

ದಿನ, ಸಂಜೆಯ ಊಟದ ವೇಳೆಗೆ ಏನೋ ಮಾತು ನಡೆದಿತ್ತು ? ಊಟದ ವೇಳೆಗೆ ಅಲ್ಲ, ಈಗ ನೆನಪಿಗೆ ಬಂದಿತು. ರಾಮಣ್ಣನು ಊಟ ಮುಗಿಸಿಕೊಂಡು ಸರಲಕ್ಕನ ಹತ್ತಿರ ಕುಳಿತಿದ್ದ. ಅಡುಗೆಯ ಮನೆಯೊಳಗೆ ತಾನೊಬ್ಬಳೆ ಊಟ ಮಾಡುತ್ತಿದ್ದಳು. ಆಗ ಹೊರಗೆ ಗಂಡ-ಹೆಂಡಿರು ಮಾತಾಡುತ್ತಿರುವುದು ತನಗೆ ಕೇಳಿಸಿತು. ಅಂತಹ ಮಾತು ನಡೆದಾಗ ತಾನು ಯಾವಾಗಲೂ ಬುದ್ಧಿಪೂರ್ವಕ ಕೆಲಸದಲ್ಲಿ ತೊಡಗಿ ಅಲಕ್ಷ್ಯವನ್ನು ತಂದುಕೊಳ್ಳುತ್ತಿದ್ದಳು, ಗಂಡ-ಹೆಂಡಿರ ಮಾತನ್ನು ಕೇಳಬಾರದೆಂಬ ಸೌಜನ್ಯದಿಂದ. ಆ ದಿನ ಮಾತ್ರ ಯಾಕೊ ತುಸು ಕುತೂಹಲವೆನ್ನಿಸಿತ್ತು. ಇದಲ್ಲದೆ ಊಟಕ್ಕೆ ಕುಳಿತದ್ದರಿಂದ ಬೇರೆ ಕೆಲಸದಲ್ಲಿಯೂ ತೊಡಗಲು ಬರುವಂತಿಲ್ಲ. ಅಥವಾ— ತನ್ನ ವಿಷಯವಾಗಿಯೆ ಮಾತನಾಡುತ್ತಿದ್ದರೆ ? ಅಂತೂ ಆ ದಿನ ತಿನ್ನುವ ತುತ್ತಿನ ಸದ್ದನ್ನು ಕೂಡ ತಡೆದು ಅವರಿಬ್ಬರ ಮಾತನ್ನು ಲಕ್ಷ್ಯಗೊಟ್ಟು ಕೇಳುತ್ತಿದ್ದಳು.

" ಮನೇ ಹ್ಯಾಂಗ ಸ್ವಚ್ಛ ಮಾಡ್ಯಾಳೆ ಈವೊತ್ತು ಕುಮುದ, ನೋಡಿದಿರಿಲ್ಲೊ ?" ಸರಲಕ್ಕನ ದನಿ.

" ಯಾಕ ? ನೀ ಹೇಳಿದ್ದಿ ಏನು ?" ರಾಮಣ್ಣನ ಪ್ರಶ್ನೆ.

" ಸಾಕು ತಗೀರಿ ! ಸಿಕ್ಕ್ಯಾಪಟ್ಟೆ ಕೆಲಸ ಹೇಳಲಿಕ್ಕೆ ನನಗೇನು ಹುಚ್ಚು ಹಿಡಿದಿದೆ ಏನು ?"

" ಅಂದ್ರ ? ಈವೊತ್ತೇ ಯಾಕೆ ಬಂದಿತು ಈ ಹುರುಪು ?"

" ಹುರುಪು ಯಾತರದು ? ನಮ್ಮ ಮನೀವಳಗ ಹೊತ್ತೇ ಹೋಗೋದಿಲ್ಲ ಆಕೆಗೆ. ಸುಡ್ಲಿ, ನಾ ಒಂದು ಹಾಸಿಗೆ ಹಿಡಿದು ಬಿದ್ದೀನಿ, ನನ್ನ ಸುತ್ತಲೂ ಓಡಾಡೋದು ! ಹೊರಗ ಹೋಗ್ಲಿಕ್ಕೆ ಸಹಿತ ಆಕೆಗೆ ವ್ಯಾಳ್ಯಾ ಸಿಗೋದಿಲ್ಲ.... ಆಯ್ತು— ಇನ್ನು ನೀವಂತೂ ನೀವೇ ನೀವು !"

" ಅಂದ್ರ ? ನನಗೇನ್ಮಾಡಂತೀ ? ಆಕೆಯ ಜೋಡಿ ಆಡಂತೀ ಏನು ?" ರಾಮಣ್ಣನು ನಗುತ್ತ ಕೇಳಿದ್ದನ್ನು ಕೇಳಿ ಕುಳಿತಲ್ಲಿಯೆ ಕುಮುದಳ ಮೈ ಜುಮ್ಮೆಂದಿತ್ತು.

" ಏನಾದ್ರೊಂದು ಮಾತಾಡಬ್ಯಾಡಿರಿ. ನಿಮಗಂತೂ ಮಂದೀನ್ನ ಹಚ್ಚಿಕೊಳ್ಳೋದೇ ಬ್ಯಾಡ. ನಿಮ್ಮ ತಮ್ಮ-ತಂಗಿ ಬಂದಿದ್ದರ ಹೀಗೇ ಅವರ್ನ ಅವರಷ್ಟಕ್ಕೇ ಬಿಟ್ಟು ಪಿರಿ ಪಿರಿ ತಿರುಗುತ್ತಿದ್ದಿರೇನು ?"

" ಅಲ್ಲ—ಅಂದ್ರ—ನಾಯೇನು ಮಾಡ್ಬೇಕಂತೀ ಹೇಳಲ್ಲ ?"

" ಏನಂದ್ರೇನು ? ಇಷ್ಟು ವರುಷ ಆಯಿತು ಹುಡುಗಿ ಮನೆಯೊಳ ಗಿದ್ದು. ಏನು ಹೊರಗಿನಾಕೆಯೆ ? ಏನು ಮತ್ತ ಯಾರಾದ್ರೂ ಇದ್ದಾರೆಯೆ ಆಕೆಗೆ ? ನಾವೇ ಹಚ್ಚಿಕೊಳ್ಳಲಿಲ್ಲ ಅಂದ್ರ—"

ರಾಮಣ್ಣ ನಡುವೆಯೆ ಬಾಯಿ ಹಾಕಿ ಮಾತನಾಡಿದ್ದ. " ಹಚ್ಚಿ ಕೊಳ್ಳೋದು ಹಚ್ಚಿಕೊಳ್ಳೋದು ಅಂದ್ರೇನು ? ಹೋದಲ್ಲಿ ಬಂದಲ್ಲಿ ಕಿಸೇಕ್ಕ ಅಂಟಿಸಿಕೊಂಡು ಹೋಗೋದ ?"

" ನಾಯೇನು ಪುಸ್ತಕಾ ಬರಿಯೋವಾಕೆ ಅಲ್ಲ, ನನಗ ನಿಮ್ಮ ಒಳ್ಳೊಳ್ಳೆ ಶಬ್ದನೂ ಗೊತ್ತಿಲ್ಲ. ಹಚ್ಚಿಕೊಳ್ಳೋದೂ ಅಂತ ನಾಲ್ಕು ಮಂದಿ ಹೇಳೋ ಹಾಂಗೇ ನಾನೂ ಹೇಳ್ತೇನಿ....ಕಿಸೇಕ್ಕ ಯಾಕ ಅಂಟಿಸಿಕೋತೀರಿ ?.... ನನಗ್ಗೊತ್ತು ! ಯಾವಾಗಲೂ ನಿಮ್ಮ ಲಕ್ಷ್ಯ ನಿಮ್ಮ ಕಿಸೇದ ಮ್ಯಾಲೆ !"

" ಅಲ್ಲ— ಎಲ್ಲಿಂದೆಲ್ಲಿಗೆ ಹೊರಟೆ ? ನಿನ್ನ ತಂಗಿಯ ಸಲುವಾಗಿ ಮಾತು ಸರುವು ಮಾಡಿ ಈಗ ನನ್ನ ಕಿಸೇಕ್ಕ ಗಂಟುಬಿದ್ದೆಯಲ್ಲ ! ಆಂ ? ಹಹ !"

ಆ ಮಾತಿಗೆ ತನಗೂ ನಗೆ ಬಂದಿತ್ತೆಂಬುದನ್ನು ನೆನೆದ ಕುಮುದಳ ಮುಖದ ಮೇಲೆ ಈಗ—ಅದರ ನೆನಪಿನಿಂದ—ಮುಗುಳ್ನಗೆ ಮೂಡಿತು. ಸರ ಲಕ್ಕನಾದರೂ ಮಾತಿನಲ್ಲಿ ಎಷ್ಟು ಚತುರಳಾಗಿದ್ದಳು.

" ಹೌದು. ನಿಮಗ ಯಾರ ಸಲುವಾಗಿ ಒಂದುಡ್ಡು ಖರ್ಚು ಮಾಡ್ಲಿಕ್ಕೆ ಬ್ಯಾಡ " ಎಂದಿದ್ದಳು.

" ಈಗ ಯಾತಕ್ಕ ಬೇಕಾಗೇದ ? "

" ನನಗ ಯಾತಕ್ಕ ಬೇಕಾದೀತು ? ಹಾಸಿಗೆ ಹಿಡಿದು ಸಾಕುಸಾಕಾಗಿ ಕಡೆಗೆ ಒಂದಿವಸ ವಿಷ ತಗೋಳ್ಳಲಿಕ್ಕೆ ಬೇಕಾದ್ರ ಬೇಕಾಗಬಹುದು. "

ಕುಮುದಳಿಗೆ ತುತ್ತು ಗಂಟಲಲ್ಲಿ ಇಳಿಯದಂತಾಗಿ ಉಸಿರು ಸಿಕ್ಕಂತಾ ಗಿತ್ತು ಆ ಮಾತನ್ನು ಕೇಳಿ.

" ಇಲ್ಲಿ ನೋಡು, ಸರಲಾ, ಸುತ್ತಿಸುತ್ತಿ ಮಾತಾಡೋದಂದ್ರ ನಿನಗೂ ಆಯಾಸ ಹೆಚ್ಚು, ಸ್ಪಷ್ಟ ಹೇಳಲ್ಲ ? ನಿನ್ನ ಸಲುವಾಗಿ ಖರ್ಚ ಮಾಡ್ಲಿಕ್ಕೆ ನಾ ಎಂದಾದರೂ ಹಿಂದ್ಮುಂದೆ ನೋಡಿರುವೆನೆ ?"

" ನನಗೇನ್ಮಾಡೋದು—ಅಂತೀನಿ—ಮತ್ತ ನನ್ನ ಸಲುವಾಗಿ ಅಂತೀರಲ್ಲ ? ಕುಮುದನ ಮಾತು ಹೇಳಿದೆ. ಇಡೀ ದಿನ ದುಡೀಬೇಕು ! ಹೊತ್ತು ಹೋಗದಿದ್ದರ ಇನ್ನಿಷ್ಟು ದುಡೀಬೇಕು ! ಏನು ಒಂದು ಹೊರಗ ಹೋಗೋದ ? ಒಂದು ಸಿನೆಮಾನ ? ಮನೆಯೊಳಗ ಹುಡುಗರಾದ್ರೂ ಇದ್ದರ ಆಕೆಗೆ ಜೋಡಿ ಇರ್ತಿತ್ತು—"

" ಛಿ ! ಹುಚ್ಚಿ ! ಮಾತಾಡಿದರ ಆಯಾಸ ಆಗ್ತದ ಅಂದ್ರ ಅಳತೀ ಏನು ? ಆಕೆ ಸಿನೆಮಾಕ್ಕ ಹೋಗಬೇಕಂತಾಳೇನು ? ಬೇಕಾದಾಗ ಹೋಗಲಿ, ಅದಕೇನು ? ಛೆ ! ನಾ ಏನು ದೊಡ್ಡ ವಿಷಯ ಅದನೊ ಅಂತ ಹೆದರಿದ್ದೆ. ಇಂಥಾದ್ದಕ್ಕೆ ಅಳತೀಯಾ ?" ಮುಂದೆ ಸರಲಾ " ಇಶ್ಯ ! ಇದೇನು ಬಿಡಿರಿ!" ಎಂದದ್ದಷ್ಟೆ ಕೇಳಿಸಿತ್ತು. ಆಮೇಲೆ ಕೆಲಹೊತ್ತು ಅವರಿಬ್ಬರೂ ಏನೊ ಪಿಸುಗುಟ್ಟಿದಂತೆ ಕೇಳಬಂದಿತು. ಕೊನೆಗೆ ತಾನು ಊಟವನ್ನು ಮುಗಿಸಿ ಬರುವಷ್ಟರಲ್ಲಿ ರಾಮಣ್ಣ ತನ್ನ ಕೋಣೆಗೆ ಹೋಗಿದ್ದ. ಮರುದಿನ ತಾನು ರಾಮಣ್ಣನ ಜೊತೆಗೆ ಸಿನೆಮಾ ನೋಡಲು ಹೋಗುವುದು ಗೊತ್ತಾಗಿದೆ ಎಂದು ಸರಲಕ್ಕ ಹೇಳಿದ್ದಳು.

" ಅವರಿಗೂ ಒಬ್ಬರೇ ಕೂತು ನೋಡ್ಲಿಕ್ಕೆ ಬ್ಯಾಸರ ಬರ್ತದ. ನನ್ನ ಕೇಳಿದರು, ನಾ ಹೇಳಿದೆ ನಿನ್ನ ಕರೆದುಕೊಂಡು ಹೋಗ್ಲಿಕ್ಕೆ ಅಡ್ಡಿ ಇಲ್ಲ ಅಂತ" ಎಂದು ಸರಲಕ್ಕ ನುಡಿದಾಗ ಕುಮುದಳಿಗೆ ಅಕ್ಕನ ಸೌಜನ್ಯದ ನಡತೆಗಾಗಿ ಮುಗುಳ್ನಗೆ ತಡೆದಿದ್ದಿಲ್ಲ. ಮರುದಿನ ಸಂಜೆ ಸಿನೆಮಾ ನೋಡಿ ಬಂದ ತರುವಾಯ ಕುಮುದ ಸರಲಕ್ಕನ ಕಡೆ ಧಾವಿಸಿದ್ದಳು.

" ನೋಡಿಬಂದೆಯೇನೆ ?"

" ನೋಡಿಬಂದೆ; ಅಕ್ಕಾ. ಇಂಗ್ರೇಜಿ ಫಿಲ್ಮ್ ಇತ್ತು. ಬಹಾಳ ಛಲೋದಿತ್ತು" ಎಂದು ಉತ್ಸಾಹ ತುಳುಕುತ್ತ ತಾನು ಉತ್ತರಿಸಿದ್ದಳು.

" ಇಂಗ್ರೇಜಿ ಫಿಲ್ಮ್ ಅಂದ್ರ—ಕತೆ ಎಲ್ಲಾ ತಿಳೀತೇನು ?"

" ಎಲ್ಲಾ ತಿಳಿಸಿಕೊಟ್ಟರು ನನಗ."

" ಹುಂ....ಏನಿತ್ತು ಕತೆ ?"

ದಾಂಪತ್ಯಜೀವನದ ಒಂದು ನೋಟ ಚಿತ್ರಪಟದ ಕತೆಯಾಗಿತ್ತು. ಗಂಡ, ಹೆಂಡತಿ; ಪರಸ್ಪರ ಗಾಢವಾದ ಪ್ರೇಮ; ಒಮ್ಮೆ ಗಂಡನು ಒಬ್ಬ

ಮಾಟಗಾತಿರ್ಯ ಮೋಹಕ್ಕೆ ಬಲಿಬೀಳುತ್ತಾನೆ; ಅಂದಿನಿಂದ ಹೆಂಡತಿಯನ್ನು ಕಂಡರೆ ಅಸಹ್ಯಪಡುತ್ತಾನೆ; ೮ ವರ್ಷದ ಮಗನೊಬ್ಬನು; ಹೆಂಡತಿಯನ್ನೂ ಮಗನನ್ನೂ ಮನೆಯಿಂದ ಹೊರದೂಡುತ್ತಾನೆ; ಅನೇಕರು ಆ ಹೆಂಡತಿಗೆ ಇಂತಹ ಗಂಡನನ್ನು ಬಿಟ್ಟುಕೊಡಲು ಉಪದೇಶ ಮಾಡುತ್ತಾರೆ; ಆದರೆ ಹೆಂಡತಿ ಒಪ್ಪುವುದಿಲ್ಲ; ಗಂಡನ ನಿಜವಾದ ಪ್ರೇಮ ಇನ್ನೂ ತನ್ನಲ್ಲಿಯೆ ಇದೆ ಎಂದು ಬಲವಾಗಿ ನಂಬಿರುತ್ತಾಳೆ; ಇಂದಿಲ್ಲ ನಾಳೆ ಆ ಮಾಟಗಾತಿರ್ ತನ್ನ ಗಂಡನನ್ನು ಕಷ್ಟದಲ್ಲಿ ಕೆಡವಿ ಹೋಗುವಳೆಂಬ ವಿಚಾರದಿಂದ ಯಾವಾಗಲೂ ಗಂಡನನ್ನು ರಕ್ಷಿಸುವ ಸಿದ್ಧತೆಯಲ್ಲಿಯೆ ಇರುತ್ತಾಳೆ; ಆದರೆ ಗಂಡನಿಗೆ ಮಾತ್ರ ಹೆಂಡತಿಗಾಗಿ ಎಳ್ಳಷ್ಟೂ ಕನಿಕರವಿಲ್ಲ; ಮಗನಿಗೂ ಹೆಂಡತಿಗೂ ಸಾಕಷ್ಟಾಗಿ ತಿನ್ನಲು ಅನ್ನ, ತೊಡಲು ಬಟ್ಟೆ ದೊರೆಯದೆ ಹೋದರೂ ಅವನಿಗೆ ಬುದ್ಧಿ ಬರುವುದಿಲ್ಲ; ಅಂತೂ ಕೊನೆಗೆ ಒಂದು ದಿನ ಆ ಮಾಟಗಾತಿರ್ ಇವನ ದುಡ್ಡನ್ನೆಲ್ಲ ಹಾಳುಮಾಡಿ, ಉಳಿದಷ್ಟನ್ನು ಎತ್ತಿಹಾಕಿ ಓಡಿಹೋಗುವಳು; ಇವನು ಹತಾಶಯನಾಗುವನು; ಇನ್ನು ಹೋಗುವುದೆಲ್ಲಿ ? ಉಪಜೀವನ ನಡೆಯುವುದು ಹೇಗೆ ? ಹೆಂಡತಿಯ ಮುಖವನ್ನು ನೋಡಲು ಕೂಡ ಅವನಿಗೆ ನಾಚಿಕೆ; ಕೊನೆಗೆ ನಿರ್ವಿಣ್ಣನಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೆಂದಾಗ ಹೆಂಡತಿ ಕಾಣಿಸಿಕೊಳ್ಳುವಳು; ಮುಂದೆ ಎಲ್ಲರೂ ಸುಖದಿಂದಿರುವರು.

" ಕಡೆಕಡೆಗಂತೂ ಕಣ್ಣೀರು ತಡೀತಿದ್ದಿಲ್ಲ ನೋಡು, ಅಕ್ಕಾ. ಹೆಂಡತಿ ಆದಾಕೆ ಎಷ್ಟು ಛಲೋ ಪಾರ್ಟ ಮಾಡಿದಳಂತೀ ! ನನಗನ್ನಿಸ್ತದ ಆಕೆ ಖರೇನೇ ಅಂಥಾ ಹೆಂಗಸಿದ್ದಿರಬೇಕು !"

" ಹೋಗೆ ಹುಚ್ಚಿ !" ಎಂದು ಸರಲಕ್ಕ ನಕ್ಕಿದ್ದಳು.

" ಇಲ್ಲಾ ಅಂದ್ರ ಅಷ್ಟು ಛಲೋ ಪಾರ್ಟ ಮಾಡ್ಲಿಕ್ಕೆ ಹ್ಯಾಂಗ ಬರ್ತದ?" ಎಂದು ಬೆಪ್ಪುಬೆರಗಾಗಿ ತಾನು ಕೇಳಿದ್ದಳು.

" ಹ್ಯಾಂಗೇನು ? ಆ ಹೆಂಗ್ಸರು ಅಂಥಾವ್ರೆ ಇರ್‍ತಾರ. ಅವರಿಗೆ ಸಿನೆಮಾದೊಳಗಿನ ಪಾರ್ಟ ಒಂದ್ಬಿಟ್ಟು ಮತ್ತೆ ಎಲ್ಲಿಯೂ ಛಲೋ ಇರೋದೇ ಗೊತ್ತಿರೋದಿಲ್ಲ. "

" ಅಂದ್ರೇನ, ಅಕ್ಕಾ ? ಹೀಂಗ ಹೆಂಡತಿ ಪಾರ್ಟ ಮಾಡುವಾಕೆಗೆ—"

"ಎಷ್ಟು ಮದುವೆ ಆಗಿಹೋಗೇವೊ ಏನೊ !" ಎಂದು ಸರಲಕ್ಕ ಮಾತು ಕೂಡಿಸಿದಾಗ ನಾನು ಹುಚ್ಚಳಂತಾಗಿರಬೇಕು. ಯಾಕೆಂದರೆ, ಆಗ ತನ್ನ ಮುಖವನ್ನು ನೋಡಿ ಸರಲಕ್ಕ ನಗತೊಡಗಿದ್ದಳು.

"ಇಷ್ಟು ಯಾಕ ಗಾಬರಿ ಆದೆಯೆ ? ಸುಳ್ಳಲ್ಲ. ಇವರಿಗೆ ಕೇಳು ಬೇಕಾದರ. ಆ ಮಂದಿ ಎಲ್ಲಾ ಎಷ್ಟು ಸಾರಿ ಮದುವೆ ಮಾಡಿಕೋತಾರ, ಮಾಡಿಕೊಂಡ ಮದುವೆ ಎಷ್ಟು ಸಾರಿ ಮುರೀತಾರ, ಅಂತ."

"ಅಯ್ಯ ! ಹೀಂಗೇನು ?" ತಾನು ಅತ್ಯಂತ ನಿರಾಶೆಯಿಂದಲೆ ಕೇಳಿರಬೇಕು. ಯಾಕೆಂದರೆ, ಆ ಮಾತಿಗೆ "ನಿನಗ್ಯಾಕ ಇಷ್ಟು ಕೆಟ್ಟು ಅನಿಸ್ತದ ?" ಎಂದು ಸರಲಕ್ಕ ಕೇಳಿದಳು.

ಆಗ ಕುಮುದಳು ತನ್ನ ಮುಗ್ಧತನವನ್ನು ಆಡಿತೋರಿಸಿದ್ದಳು. ಸಿನೆಮಾದೊಳಗಿನ ಕತೆಯು ಪರಿಣಾಮದಿಂದ ಸಿನೆಮಾದೊಳಗೆ ಪಾರ್ಟು ಮಾಡುವುದು ಅತ್ಯಂತ ಒಳ್ಳೆಯ ಕೆಲಸ ಎನ್ನಿಸಿತ್ತು ಕುಮುದಳಿಗೆ.

"ಹಾಂಗಿದ್ದರ ಅದರದೆ ಕತೆ ಮಾಡತಿದ್ದರು, ಮದುವೆ ಮಾಡಿಕೊಂಡು ಪ್ರೇಮದಿಂದ ಇದ್ದವರು ಛಲೋ ಅನ್ನೋ ಕತೆ ಯಾಕ ಮಾಡಬೇಕಾಗಿತ್ತು?" ಎಂದು ಸರಲಕ್ಕ ನುಡಿದಾಗ ತನ್ನ ಭ್ರಮನಿರಸನವಾದಂತಾಗಿತ್ತು.

ಸರಲಕ್ಕ ಅಷ್ಟಕ್ಕೆ ಬಿಟ್ಟಿರಲಿಲ್ಲ. ತಾನು ನೋಡಿ ಬಂದ ಕತೆಯಿಂದಲೆ ಒಳ್ಳೆಯ ಪಾಠವನ್ನೆ ಹುಡುಕಿ ಕಂಡವಳಂತೆ ಎಷ್ಟೊ ಮಾತುಗಳನ್ನು ಹೇಳಿದ್ದಳು.

"ನೋಡು, ಕುಮುದಾ, ನೀ ನೋಡಿ ಬಂದ ಕತೇವಳಗ ಹೇಳಿಧಾಂಗ ಹೆಂಗಸಿಗೆ ಗಂಡ, ಮಕ್ಕಳ ಹೊರತು ಬ್ಯಾರೆ ಸುಖಾ ಇಲ್ಲ ನೋಡು. ಹೆಂಗಸಿನ ಕರುಳು ಅಂದ್ರ ಯಾವಾಗಲೂ ತಾಯಿಯ ಕರುಳೇ ಅದು. ನೋಡಿದಿಯಲ್ಲ, ಅಂಥಾ ಪರಿ ತನ್ನನ್ನು ಪೀಡಿಸಿದ್ದರೂ ಕಡೆಗೆ ಆ ಹೆಂಡತಿ ತನ್ನ ಗಂಡನ್ನ ಉಳಿಸಿಕೊಂಡು ಒಂದಳು ? ಗಂಡ ಅಂತ ಎಷ್ಟು ಅಧಿಕಾರದಿಂದ ಮೆರೆದರೂ ಕಷ್ಟ ಬಂದಾಗ ಕೈಹಿಡಿದು ಸಂತೈಸುವವಳು ಹೆಂಡತೀನೇ. ಇವರು ಇಷ್ಟು ಕತೆ ಬರೀತಾರಲ್ಲ ? ಇವರ ಕತೆಗಳೊಳಗ ಒಂದು ಹೆಂಗಸಿಗಾದರೂ ಸುಖ ಆದದ್ದು ಓದೀ ಏನು ? ನಾನೂ ಒಮ್ಮೆ ಅಂದಿದ್ದೆ ಅವರ್ಮುಂದೆ, ಇಷ್ಟು ಯಾಕ ಹೆಂಗಸರನ್ನ ಗೋಳಿಗಿಡಿಸ್ತೀರಿ ಅಂತ. 'ಯಾಕಂದ್ರೇನು ? ಅವರು ಮಾಡಿ

ಧ್ದಕ್ಕ ಅವರು ಅನುಭೋಗಿಸ್ತಾರ' ಅಂದರು. ಮಾಡೋದೇನು ? ಮಟ್ಟೋದೇನು ? ಎಲ್ಲಾ ಕಟ್ಟುಕತೆ ! ಹೆಂಗಸಿಗೆ ಯಾವುದು ಬೇಕು ಅನ್ನೋದೇ ಗೊತ್ತಿಲ್ಲದೆ ಬರೆದರೆ ಅಡ್ಡ ದಾರೀ ಹಿಡಿಧ್ಹಾಂಗೇ. ಬರೆಯುವವರೆ ಅಡ್ಡ ದಾರೀ ಹಿಡಿದ ಮ್ಯಾಲೆ ಅವರ ಕತೆಯೊಳಗಿನ ಪಾತ್ರಗಳೂ ಅಡ್ಡ ದಾರೀನೇ ಹಿಡಿಯೋವು ! ಅಲ್ಲೇನು, ಹೇಳು. 'ನಿನಗೇನು ತಿಳೀತದ ? ಇಂದಿನ ಕಾಲದಾಗ ನೀನು ಹಳೇಪದ್ಧತಿ ಹೆಂಗಸು !' ಅಂತ ನನಗೆ ನಕ್ಕರು. ನಾನು ಅಂದ್ಬಿಟ್ಟೆ, 'ಹಳೇದೇನು ? ಹೊಸಾದೇನು ? ಹೆಣ್ಣು ಅಂದ್ರ ಹೆಣ್ಣೇ. ಹೊಸ ಕಾಲ ಅಂತ ಹೆಂಗಸರಿಗೆ ಮೀಸೆ ಬರ್ತಾವೇನು ?' ಅಂತ. ಸರಲಕ್ಕನ ಮಾತಿಗೆ ಕುಮುದಳು ಬಿದ್ದುಬಿದ್ದು ನಕ್ಕಿದ್ದಳು. ಆದರೆ ಅಂದು ಹಾಸ್ಯಕಾರಕ ಎಂದೆನ್ನಿಸಿದ ಮಾತೇ ಇಂದು ಕುಮುದಳಿಗೆ ತತ್ತ್ವಪೂರಿತ ಮಾತು ಎಂದೆನ್ನಿಸುತ್ತದೆ. ಆದರೆ ಯಾರಿಗೆ ಹೇಳುವುದು ? ಸರಲಕ್ಕ ಸುಖ-ದುಃಖದ ಈ ಲೋಕವನ್ನೆ ಬಿಟ್ಟುಹೋಗಿದ್ದಾಳೆ. ಕುಮುದ ಅಣಕಿನ ಮುಗುಳ್ನಗೆಯನ್ನು ನಕ್ಕಳು. "ಲೋಕವನ್ನೆ ಬಿಟ್ಟು ಹೋಗಿದ್ದಾಳೆ" ಅಂತೆ ! ಸರಲಕ್ಕ ಜೀವದಿಂದಿದ್ದರೂ ಆಕೆಗೆ ಏನನ್ನು ಹೇಳುವುದು ? ಹೇಗೆ ಹೇಳುವುದು ? "ನಿನ್ನ ಗಂಡನಲ್ಲಿ ನನ್ನ ಮನಸ್ಸು ನೆಟ್ಟಿದೆ" ಎಂದು ಹೇಳುವುದೆ ? "ನನ್ನನ್ನು ನಿನ್ನ ಗಂಡನು ಕೂಡಿಕೊಂಡಿದ್ದಾನೆ. ನಾನು ಮನಸ್ಸು ಮಾಡಿದರೆ ನನಗೆ ಗಂಡ-ಮಕ್ಕಳ ಸುಖ ದೊರೆಯುವುದು. ನಿನ್ನ ಉಪದೇಶವನ್ನು ನಾನು ನಡೆಸಿರುವೆ, ಅಕ್ಕಾ" ಎಂದು ಹೇಳಬಹುದಾಗಿತ್ತೆ ? ಗಂಡ, ಮಕ್ಕಳು ಎರಡನ್ನೂ ಸೇರಿಸಿ ಹೇಳಿದ್ದಳಲ್ಲವೆ ಸರಲಕ್ಕ ? ಮದುವೆಯ ಗಂಡನಿಲ್ಲದೆ ಮಕ್ಕಳಿದ್ದರೆ ಸುಖವಿಲ್ಲ, ಮಕ್ಕಳಿಲ್ಲದೆ ಗಂಡನಿದ್ದರೂ ಸುಖವಿಲ್ಲ, ಮಕ್ಕಳಿದ್ದು ಗಂಡನಿದ್ದು ಮದುವೆಯ ಸಂಬಂಧವಿಲ್ಲದಿದ್ದರೂ ಸುಖವಿಲ್ಲ ! ಎಷ್ಟು ಪರತಂತ್ರವಾಗಿದೆ ಹೆಣ್ಣಿನ ಬಾಳು ! ಅಷ್ಟೆ ತೊಡಕಿನದೂ ಆಗಿದೆ. ಸರಲಕ್ಕನ ಆ ಮಾತುಗಳನ್ನೆಲ್ಲ ನೆನೆದಾಗ ಮಕ್ಕಳಿಲ್ಲದ್ದಕ್ಕೆ ಆಕೆಗೂ ಸುಖವಿರಲಿಲ್ಲ ಎಂದು ಕುಮುದಳಿಗೆ ಹೊಳೆದಿತ್ತು. ಅದಕಾಗಿಯೆ ಇಂದು ಸಿನೆಮಾ ಸೇರಬೇಕೆಂಬ ಹಿಂದಿನ ಮಾತು ಸ್ಮರಣೆಗೆ ಬಂದಿತೇನೊ ! ಯಾವುದರಿಂದಲೂ ಹೆಣ್ಣಿಗೆ ಸುಖದ ಭರವಸೆ ಇಲ್ಲದಿದ್ದರೆ ಸಿನೆಮಾ ವ್ಯವಸಾಯದಲ್ಲಿ ತೊಡಗುವುದೆ ಒಳ್ಳೆಯದಲ್ಲವೆ ? ಕನಿಷ್ಠಪಕ್ಷಕ್ಕೆ ಯೋಗ್ಯತೆ ಇದ್ದಲ್ಲಿ, ಯತ್ನ ಮಾಡಿದಲ್ಲಿ ದುಡ್ಡು ದೊರಕಬಹುದು, ಹೆಸರನ್ನು ಗಳಿಸಬಹುದು.

ವಿಚಾರದ ಭರದಲ್ಲಿ ತಾನು ಹಾಸಿಗೆಯನ್ನು ಬಿಟ್ಟು ಮೇಜಿನ ಮೇಲಿದ್ದ ಕನ್ನಡಿಯ ಎದುರು ನಿಂತುದು ಕುಮುದಳ ಲಕ್ಷ್ಯಕ್ಕೆ ಬಂದಿತು. ಒಂದು ನಿಮಿಷ ಎದುರು ತನ್ನ ಪ್ರತಿಬಿಂಬವಿದೆ ಎಂಬುದು ಲಕ್ಷ್ಯಕ್ಕೆ ಬಾರದೆ ಮತ್ತೆ ಯಾರೊ ಬಂದಿದ್ದಾರೆಂದು ಬೆಚ್ಚಿಬಿದ್ದಳು. ಮರುಗಳಿಗೆಯಲ್ಲಿ ತಿಳಿದು ಬಂದಿತು. ಯಾರು ಬರುವವರು ತನ್ನ ಕಡೆ ? ಜನರು ಎಂದಿನಿಂದಲೊ ಆಡಿ ಕೊಳ್ಳುತ್ತಿದ್ದಾರೆ. ನೆರೆಯ ಹೆಂಗಸರು ತನ್ನನ್ನು ಕಂಡರೆ ಮೈಲಿಗೆ ಎಂಬಂತೆ ಸಾವರಿಸಿಕೊಂಡು ಎದ್ದು ಹೋಗುತ್ತಾರೆ. ತನಗೆ ಯಾರೂ ಇಲ್ಲ ! ರಾಮ ಣ್ಣನೂ ತನ್ನವನಲ್ಲ. ಎಂತಹ ಹುಚ್ಚಿ ತಾನು ! ಒಂದಾನೊಂದು ಕಾಲದಲ್ಲಿ ರಾಮಣ್ಣ ತನ್ನವ ಎಂದೇ ತಿಳಿದಿದ್ದಳು. ರಾಮಣ್ಣನಿಗಾಗಿ ತನಗಿದ್ದಂತೆಯೆ ಅವ ನಿಗೂ ತನಗಾಗಿ ಹುಚ್ಚು ಇದೆ ಎಂದು ಬಲವಾಗಿ ನಂಬಿದ್ದಳು. ಇಷ್ಟೇಕೆ ? ಏನೇನೊ ಕನಸಿನ ರಾಜ್ಯವನ್ನು ಕಟ್ಟಿಕೊಂಡಿದ್ದಳು.

ಮತ್ತೆ ಕನ್ನಡಿಯಲ್ಲಿ ನೋಡಿದಳು. ಯಾರ ಮುಖ ಇದು ? ಈ ಬಾಡಿದ ಮುಖ, ಈ ಜೋಲು ಮೋರೆ ತನ್ನದಲ್ಲ " ಕುಮುದಾ, ಎಲ್ಲಿ ನನ್ನ ದೃಷ್ಟಿ ತಾಕುವುದೊ ನಿನಗ, ಮೋಡಿ !" ಎಂದು ಎಷ್ಟು ಸಲ ಸರಲಕ್ಕ ಅಂದಿರಲಿಲ್ಲ! ಸಾಯುವ ಒಂದು ತಿಂಗಳು ಮುಂಚೆ ಅದೇ ಮಾತನ್ನು ಸರಲಕ್ಕ ನುಡಿದಿದ್ದಳು. ಇಂದಿಗೆ ನಾಲ್ಕೇ ತಿಂಗಳು, ಇಷ್ಟರಲ್ಲಿ ಎಂತಹ ವ್ಯತ್ಯಾಸವಾಗಿದೆ ! ಸತ್ತ ಸರ ಲಕ್ಕನದೆ ದೃಷ್ಟಿ ತಾಕಿದೆಯೆ ? ಅಥವಾ— ಸರಲಕ್ಕನಿಗಾಗಿ ಬಗೆದ ದ್ರೋಹ ಕ್ಕಾಗಿ ಶಾಪ ತಟ್ಟಿದೆಯೆ ?

ತನ್ನ ನಡತೆಯಲ್ಲಿ ಏನೊ ತಪ್ಪಿದೆ ಎಂದು ಇತ್ತಿತ್ತ, ವಿಶೇಷವಾಗಿ ಸರ ಲಕ್ಕ ತೀರಿಕೊಂಡನಂತರ ಕುಮುದಳನ್ನು ಒಂದು ವಿಚಾರವು ಪೀಡಿಸುತ್ತಿತ್ತು. ಹಾಸಿಗೆ ಹಿಡಿದ ಹೆಂಡತಿಯ ಗಂಡನನ್ನು, ಅದೂ ತನ್ನನ್ನು ಸಾಕಿ ಸಲುಹಿದ ಸರಲಕ್ಕನ ಗಂಡನನ್ನು ಈ ರೀತಿ ಒಲಿಸಿಕೊಳ್ಳುವುದು— ದ್ರೋಹ ಎಂಬ ಕಲ್ಪನೆ ಆಕೆಗೆ ಬಾರದಿದ್ದರೂ, ಅದೊಂದು— ಪಾಪ ಎಂದೆನ್ನಿಸಿತು ಕುಮುದ ಳಿಗೆ. ತಾನು ಮಾಡಿದ್ದು ಪಾಪ, " ನೀನು ಮಾಡಿದ್ದು ಪಾಪ, ನಿನ್ನ ಮುಖ ವನ್ನು ನೋಡಲಾಸಲ್ಲ " ಎಂದು ಪ್ರತಿಬಿಂಬಕ್ಕೆ ರೇಗಿ ಮತ್ತೆ ಹಾಸಿಗೆಯ ಮೇಲೆ ಬಂದು ಕುಳಿತಳು. ತಾನು ಮಾಡಿದ್ದು— ಅಲ್ಲ, ತಾನು ಮಾಡಿದ್ದಾ ದರೂ ಏನು ? ಅದು ಹೇಗೆ ಪಾಪ ? ತನ್ನದೇನು ತಪ್ಪು ? ಹಾಗೆ ನೋಡಿದರೆ

ತನ್ನದು ಯಾವ ತಪ್ಪೂ ಇಲ್ಲ. ಈಗಲೂ ತನಗೆ ನೆನಪಿದೆ. ಯಾವುದಕ್ಕೆ ತಾನು ಪಾಪವೆನ್ನುವಳೊ ಅದರ ಪ್ರಾರಂಭ ಹೇಗಾಯಿತು, ಯಾರಿಂದಾಯಿತು ಎಂಬುದು ಇಂದಿಗೂ ಕುಮುದಳ ಕಣ್ಣು ಕಟ್ಟಿದಂತಿದೆ. ಆ ವಿಚಾರವೆ ಬೇಡ ಎನ್ನಿಸಿತು. ಆದರೂ ಆ ನೆನಪಿಗಾಗಿ ಹೃದಯ ಹಾತೊರೆಯುತ್ತಿತ್ತು........

ಸಿನೆಮಾ ನೋಡಿ ಬಂದ ಮರುದಿವಸ ನಡೆದ ಸಂಗತಿ. ಸಿನೆಮಾ ನೋಡಿದ್ದಕ್ಕೆಂದೊ, ರಾಮಣ್ಣನ ಜೊತೆ ಒಂದೆಡೆ ಕುಳಿತು ಬಂದುದಕ್ಕೊ— ಅಂತೂ ಮರುದಿವಸ ಕುಮುದ ಅತ್ಯಂತ ಉತ್ಸಾಹದಲ್ಲಿದ್ದಳು. ಆ ಉತ್ಸಾಹ ಹೆಚ್ಚೆಚ್ಚಾಗಿ ಪುಟಿಯಲು ಇನ್ನೂ ಒಂದು ಕಾರಣವಿದ್ದಿತು. ಪ್ರಯತ್ನಮೀರಿಯೂ ಯಾವಾಗಲಾದರೊಮ್ಮೆ ರಾಮಣ್ಣನ ದೃಷ್ಟಿಗೆ ತನ್ನ ದೃಷ್ಟಿ ಕೂಡಿದಾಗ ಅವನು ನಗೆಮೊಗದಿಂದ ತನ್ನನ್ನು ನೋಡುತ್ತಿರುವುದು ಕಂಡುಬಂದಿತು. ಅದರಿಂದ ನಾಚಿ ಮುಖ ತಿರುಗಿಸಿ ಅವನ ದೃಷ್ಟಿಯನ್ನು ತಪ್ಪಿಸಲು ಯತ್ನಿಸಿದರೂ ಮತ್ತೆ ಯಾರೊ ಬಲವಾಗಿ ಎಳೆದಂತಾಗಿ, ತಟ್ಟನೆ ನಾಚಿಕೆಯು ತಡೆಯಬೇಕೆಂದಾಗ ಕೆಳನೋಟದಿಂದ ಅವನನ್ನು ನೋಡಿದರೆ ಇನ್ನೂ ಅದೇ ನಗೆಮೊಗ! ಇಡೀ ದಿನವೆಲ್ಲ ನೆಲದ ಮೇಲೆ ನಡೆದಂತೆಯೆ ಎನ್ನಿಸಿರಲಿಲ್ಲ! ದಿನದ ನಡಿಗೆಯಾದರೂ ತನಗೆ ಮಾತ್ರ ತನ್ನ ಹೆಜ್ಜೆ ಕುಣಿತದ ಹೆಜ್ಜೆಯಾಗಿದೆ ಎಂಬಂತೆ ತೋರುತ್ತಿತ್ತು. ಇಷ್ಟೊಂದು ದಿನವೆಲ್ಲ ನಗೆಬಿಸಿಲು ಬೆಳಗಿದ ಮೇಲೆ ಮೋಡ ಬಂದರೆ ಆಶ್ಚರ್ಯವೇನು? ಅಂತಹದೊಂದು ಮೋಡವೂ ಕವಿದಿತ್ತು. ಹಿಂದಿನ ದಿನದ ತನ್ನ ಮಾತನ್ನು ನೆನೆಯುತ್ತ ಸರಲಕ್ಕ ರಾಮಣ್ಣನೊಡನೆ ಮಾತನಾಡುತ್ತಿದ್ದಳು. ರಾಮಣ್ಣ ಸಂಜೆಯ ಊಟ ಮುಗಿಸಿ ಹೊರಗೆ ಹೊರಟಿದ್ದ. ಆಗ ಮಾತನಾಡುತ್ತ "ನಮ್ಮ ಕುಮುದಾ ಸಿನಿಮಾದಾಗ ಪಾರ್ಟ ಮಾಡಬೇಕಂತಾಳ" ಎಂದಿದ್ದಳು. ಅದಕ್ಕೆ ರಾಮಣ್ಣ—ಯಾವ ಉತ್ತರವನ್ನು ಕೊಟ್ಟಿದ್ದ?....ಆಂ? ಅಲ್ಲ....ಯಾವುದೊ ಉತ್ತರವನ್ನು ಕೊಟ್ಟಿದ್ದ. ಅದು ನಗೆಮಾತಾಗಿದ್ದರೂ ಮನಸ್ಸನ್ನು ನೋಯಿಸುವಂತಹದಿದ್ದಿತು. ಯಾವುದು ಆ ಮಾತು?.... (ಸುಡಲಿ, ಬೇಕೆಂದದ್ದು ಯತ್ನಿಸಿದರೂ ನೆನಪಾಗುವುದಿಲ್ಲ, ಬೇಡಾದ ನೆನಪು ಕರಗಸದಂತೆ ಕೊರೆಯುವುದು). ಹೋಗಲಿ, ಮಾತು ಮುಖ್ಯವಾಗಿರಲಿಲ್ಲ. ಆ ಮಾತಿಗೆ ಸರಲಕ್ಕ ನಕ್ಕದ್ದು, ತನ್ನ ಮನಸ್ಸಿಗೆ ಇನ್ನಿಷ್ಟು ನೋವಾದದ್ದು ಮುಖ್ಯ. ಮಾತನಾಡಿ ರಾಮಣ್ಣ ಹೊರಟುಹೋದ. ತನ್ನ ಊಟದ ಸಿದ್ಧತೆ

ಯನ್ನು ನಡೆಸಿದ ಕುಮುದಳಿಗೆ ಊಟ ಬೇಡ ಎನ್ನಿಸಿತು. ಉಳಿದ ಕೆಲಸವನ್ನು ಸಾವರಿಸತೊಡಗಿದ್ದಳು. ಹೊರಗಿನಿಂದ ಸರಲಕ್ಕ ನಗುತ್ತ " ಕೇಳಿದಿಯೇನ, ಕುಮುದಾ ? " ಎಂದಿದ್ದಳು. ಆ ಮಾತಿಗೆ ತಾನು ಉತ್ತರವನ್ನು ಕೊಟ್ಟಿರಲಿಲ್ಲ. ಕೆಲಸವನ್ನು ಸಾವರಿಸಿ ಹೊರಗೆ ಬಂದು,

" ನಿನಗ ಏನು ಬೇಕೇನು, ಸರಲಕ್ಕಾ ? " ಎಂದಳು.

" ಅಯ್ಯ ! ಇದೇನು ? ಇಷ್ಟರಾಗ ಊಟ ಆಯಿತೇನ ! " ಎಂದು ಸರಲಕ್ಕ ಚಕಿತಳಾಗಿ ಕೇಳಿದ್ದಳು.

" ಇಲ್ಲ—ನನಗ ಹಸಿವೆ ಇಲ್ಲ. "

" ಹಸಿವೆ ಹ್ಯಾಂಗ ಇಲ್ಲ ? "

" ಏನೊ ! ನನಗ ತಲೆಶೂಲಿ ಎದ್ದಿದೆ. "

" ತಲೆಶೂಲಿ ! ತಲೆಶೂಲಿ ಏಳಲಿಕ್ಕೆ ಏನಾಯ್ತು ? ಏನಾದರೊಂದು ಹೇಳಬ್ಯಾಡ. ಇಷ್ಟೊತ್ತಿನತನಕ ಛಲೊ ನಗತಿದ್ದಿ, ಮಾತಾಡತಿದ್ದಿ— "

" ಇಲ್ಲ, ಖರೇನೆ ನನಗ ತಲೆಶೂಲಿ ಎದ್ದದೆ " ಎಂದು ಹಟದಿಂದ ಹೇಳಿದ್ದಳು ತಾನು. ಸರಲಕ್ಕ ಒಂದು ನಿಮಿಷ ತನ್ನನ್ನು ದಿಟ್ಟಿಸಿ, " ಏನು, ಅವರ ಮಾತಿಗೆ ಸಿಟ್ಟು ಬಂದಿತೊ ? " ಎಂದಳು.

" ಯಾರ ಮಾತು ? "

ತನ್ನ ದನಿಯಲ್ಲಿಯ ವಂಚನೆ ಸರಲಕ್ಕನಿಗೆ ತಿಳಿಯಿತೇನೊ !

" ಸಾಕ್ಬಿಡೆ ! ಗೊತ್ತಾಯಿತು ! " ಎಂದಿದ್ದಳು.

" ಇಲ್ಲ, ನನಗ ಖರೇನೆ— "

" ಹುಚ್ಚಿ ! ಇಷ್ಟು ದಿವಸ ಈ ಮನೇವಳಗ ಇದ್ದು ಅವರ ಸ್ವಭಾವ ಗೊತ್ತಾಗಿಲ್ಲ ? ಬರೀ ಮಾತಿನ ಮೋಜು ಅದು, ಮನಸ್ಸಿನಾಗ ಏನೂ ಇರೋದಿಲ್ಲ. "

" ಇಲ್ಲ, ಅಕ್ಕಾ, ನೀ ಏನಂತೀ ನನಗ ತಿಳಿನೇ ಒಲ್ಲದು. "

" ಅಯ್ಯ ! ನನ್ಮುಂದ ಢೋಂಗ ಮಾಡ್ತೀ ಏನು ? ನನಗೆಲ್ಲಾ ಗೊತ್ತಾಯ್ತು. ಅವರ ಮಾತಿಗೇ ನೀನು ಸಿಟ್ಟಾದದ್ದು ! ಅಯ್ಯ ! ಹುಚ್ಚಿ ! ಅವರು ಹಾಂಗ ಮಾತಾಡಿದರ ಅವರಿಗೇ ಗೊತ್ತಿರೋದಿಲ್ಲ. ಏನಾದರೂ ಒಂದು ಮನಸ್ಸಿನೊಳಗ ಉತ್ಸಾಹ ಇತ್ತಂದರ, ಏನಾರೆ ಹೊಸದಾಗಿ ಬರಿ

ಯೋದು ಹೊಳೆದಿದ್ದರೆ ಅದನ್ನು ಸುರುವು ಮಾಡೋತನಕ ಸಿಕ್ಕವರಿಗೆ, ಸಿಕ್ಕದ್ದಕ ಏನಾದರೂ ವಟವಟ ಮೋಜು ಮಾತಾಡ್ತಾರ. ಹಾಂಗೇ ಮಾತಾಡಿದರು. ನಿನ್ನ ಹೆಸರಿಗಾಗಿ ಅವರ ಲಕ್ಷ್ಯ ಸಹಿತ ಇರಲಿಕ್ಕಿಲ್ಲ. ನನಗೊತ್ತಿಲ್ಲ? ಇಂದಿಲ್ಲ ನಾಳೆ ನಿನಗೂ ರೂಢಿ ಆದೀತು ಅವರ ಸ್ವಭಾವ" ಎಂದು ನಗುತ್ತ, "ಹೋಗು, ನಿನ್ನ ತಾಟ ಇಲ್ಲಿಯೆ ತಗೊಂಡು ಬಾ, ನನ್ನ ಜೋಡಿ ಮಾತಾಡತಾ ಊಟ ಮಾಡೀಯಂತ. ಹ್ಯಾಂಗ ಹಸಿವೆ ಆಗಿಲ್ಲ ನೋಡ್ತೀನಿ" ಎಂದಿದ್ದಳು. ಆದರೆ ತನಗೆ ಮಾತ್ರ ಮನಸ್ಸಾಗಿರಲಿಲ್ಲ. ಒಳಗಿನ ನೋವಿನ ಒತ್ತಡಕ್ಕಾಗಿ ಅಲ್ಲಿ ಹೆಚ್ಚೊತ್ತು ನಿಲ್ಲುವುದು ಶಕ್ಯವಿರಲಿಲ್ಲ. "ಇಲ್ಲ, ನನಗ ಬಹಳೇ ತಲೆ ಶೂಲಿ ಅದ. ಏನಾದ್ರೂ ಬೇಕಾದರ ಕರೆ, ಬರ್ತೀನಿ" ಎಂದು ತನ್ನ ಕೋಣೆಗೆ ಧಾವಿಸಿದಳು.

ಕೋಣೆಯಲ್ಲಿ ಮನಸ್ಸು ಸ್ಥಿರವಾಗಿ ನಿಲ್ಲಲೊಲ್ಲದು. ಕತ್ತಲಾಗಿದ್ದರೂ ಕೋಣೆಯಲ್ಲಿ ದೀಪವನ್ನು ಹಚ್ಚದೆ ಹಾಗೆಯೆ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಳು. ಲಕ್ಷ್ಯವೆಲ್ಲ ಹೊರಬಾಗಿಲಿನ ಸದ್ದಿನ ಕಡೆಗೆಯೆ. ಕೊನೆಗೊಮ್ಮೆ ಹೊರಬಾಗಿಲಿನ ಸದ್ದಾಯಿತು. ಮೆಲ್ಲನೆ ಎದ್ದಳು. ಸದ್ದು ಮಾಡದೆ ಸರಲಕ್ಕನ ಕೋಣೆಯ ಹೊರಗೆ ಹುದುಗಿ ನಿಂತುಕೊಂಡಳು. ಒಳಗೆ ಏನೇನೊ ಮಾತು ನಡೆದಿತ್ತು. ಸ್ಪಷ್ಟವಾಗಿ ಕೇಳುತ್ತಿರಲಿಲ್ಲ ಕೊನೆಗೆ, "ಛೆ! ಛೆ! ಇದೇನು? ಮನಸ್ಸು ನೊಂದಿದ್ದರ ತಪ್ಪಾಯ್ತು ಅಂತ ಹೇಳ್ತೀನಿ....ಹುಂ.... ಕರಕೊಂಡೇ ಬರ್ತೀನಿ" ಎಂದು ರಾಮಣ್ಣನ ಮಾತು ಕೇಳಬಂದಿತು. ಆ ದನಿ ಹೆಚ್ಚೆಚ್ಚು ಸಮೀಪವೆನ್ನಿಸಿ, ರಾಮಣ್ಣ ತನ್ನ ಕಡೆಗೇ ಹೊರಟಿದ್ದಾನೆ ಎಂದು ಗಾಬರಿಯಾಗಿ ತುದಿಗಾಲ್ಗಳ ಮೇಲೆ ಕೋಣೆಗೆ ಓಡಿದಳು, ಹಾಗೆಯೆ ಹಾಸಿಗೆಯ ಮೇಳೆ ಬಿದ್ದುಕೊಂಡಿದ್ದಳು.

ಕಾಲ ಅನಂತವಾಗಿದೆ ಎಂಬುದರ ಅರ್ಥ ಕುಮುದಳಿಗೆ ಆಗ ತಿಳಿದಿರಬೇಕು. ಒಂದೆರಡು ನಿಮಿಷಗಳಲ್ಲಿಯೆ ರಾಮಣ್ಣ ತನ್ನ ಕೋಣೆಗೆ ಬಂದರೂ ಕುಮುದಳಿಗೆ ಅನಾದಿ ಕಾಲದಿಂದ ದಾರಿ ಕಾಯ್ದಂತೆ ಭಾಸವಾಗಿತ್ತು. ಅವಸರದಿಂದ, ಗಾಬರಿಯಿಂದ ಓಡಿ ಬಂದದ್ದರಿಂದ ಎದೆ ಬಡೆದುಕೊಳ್ಳುತ್ತಿತ್ತು. ಆ ಸದ್ದು ರಾಮಣ್ಣನಿಗೆ ಕೇಳಿಸಬಾರದೆಂಬ ಹೆದರಿಕೆಯಿಂದ ಕೈಗಳನ್ನು ಎದೆಯ ಮೇಲಿಟ್ಟುಕೊಂಡಳು. ಅಷ್ಟರಲ್ಲಿ ರಾಮಣ್ಣ ಬಂದ; ಕೋಣೆಯಲ್ಲಿ

ದೀಪವಿಲ್ಲದ್ದಕ್ಕೆ ಅವನು ಹೆದರಿದ್ದನೇನೊ ! ಯಾಕೆಂದರೆ ಮೆಲ್ಲನಿಯಲ್ಲಿಯೆ "ಕುಮುದಾ....ಕು-ಮು-ದಾ !" ಎಂದಿದ್ದ. ತಾನು ಉತ್ತರವನ್ನು ಕೊಟ್ಟಿರಲಿಲ್ಲ. ಏನೆಂದು ಉತ್ತರವನ್ನು ಕೊಡುವುದು ? ಹೆದರಿಕೆ ಎನ್ನಿಸಿತು. ಉತ್ತರವನ್ನು ಕೊಟ್ಟರೆ ಅವನು ಬಾಗಿಲಿನಲ್ಲಿಯೆ ನಿಂತು ಮಾತಾಡಬಹುದು, ಒಳಗೆ ಬರಲಿಕ್ಕಿಲ್ಲ ಎಂದೂ ಹೆದರಿಕೆಯಾಯಿತು. ತನ್ನ ಎದೆಯ ಡಬಡಬವನ್ನೆ ಕೇಳುತ್ತ ಸುಮ್ಮನೆ ಒರಗಿಕೊಂಡಳು. ರಾಮಣ್ಣ ಒಳಗೆ ಬಂದ, ಮತ್ತೆ ತನ್ನ ಹೆಸರನ್ನು ನುಡಿದ.

"ಎಲ್ಲಿದ್ದೀ, ಕುಮುದಾ ? ಇದೇನು, ಮಲಗಿಕೊಂಡೀಯೇನು ?" ಎನ್ನುತ್ತ ಹಾಸಿಗೆಯ ಬದಿಯ ಮೇಲೆ ಕುಳಿತು, "ತಲೆಶೂಲಿ ಅದ ಏನು ನಿನಗ ?" ಎಂದು ತನ್ನ ಎರಡೂ ಗಂಡಸ್ಥಲಗಳನ್ನು ಬೆರಳುಗಳಿಂದ ಒತ್ತಿ ಹಿಡಿದ. ( ಮೋಕ್ಷವೆಂದರೆ ಸುಖ-ದುಃಖ-ಕಾಲ-ದೇಶ ಮೊದಲಾದುವುಗಳ ತಾರತಮ್ಯವನ್ನು ಮೀರಿ ನಿಂತ ಒಂದು ನಿತ್ಯ-ಸಾತ್ತ್ವಿಕ-ಸುಖದ ಅವಸ್ಥೆ ಎಂದು ಕುಮುದಳಿಗೆ ತಿಳಿಯುವಂತಿದ್ದರೆ ಆ ಕ್ಷಣದಲ್ಲಿ ತನಗೆ ಮೋಕ್ಷ ಲಭಿಸಿತು ಎಂದು ಆಕೆ ಹೇಳಬಹುದಿತ್ತು. ಆದರೆ ಅಂತಹ ಕಲ್ಪನೆ ಇಲ್ಲದ್ದಕ್ಕೆ ) ಕುಮುದಳು ಜೀವವಿದ್ದೂ ಅಮರಳಾದಂತೆ ಮೈಮರೆತಿದ್ದಳು.

"ತಲೆನೋವು ನಿನಗ ? ಛಿ ! ಹುಚ್ಚಿ ! ತಲೆನೋವು ಬರಬೇಕಾದರೆ ಮುಂಚೆ ತಲೆ ಇರಬೇಕಾಗೋದು. ತಲೆ ಇದ್ದಿದ್ದರೆ ನನ್ನ ಮಾತಿನ ಅರ್ಥ ಸರಿಯಾಗಿ ತಿಳೀತಿತ್ತು. ಹೌದೊ—ಇಲ್ಲೊ ? ಆಂ ? ಏಳು, ಊಟಾ ಮಾಡು. ಪಾಪ ! ಸರಲಾ, ಎಷ್ಟು ಮನಸ್ಸಿಗೆ ಹಚ್ಚಿಕೊಂಡಾಳ."

ಮೊದಲಿನ ಮಾತಿಗೆ ನಗೆ ಬಂದಿತ್ತು, ಸರಲೆಯ ಸ್ಥಿತಿಯನ್ನು ಕೇಳಿ ಪಶ್ಚಾತ್ತಾಪವಾಗಿತ್ತು, ಆದರೂ ತಾನು ಎದ್ದಿರಲಿಲ್ಲ. ರಾಮಣ್ಣನು ರಮಿಸುವವನ ದನಿಯಲ್ಲಿ ಮಾತಾಡುತ್ತ ಕೊನೆಗೆ ತನ್ನನ್ನು ಕೈ ಹಿಡಿದು ಎಬ್ಬಿಸಹೋದನು; ಮೈತುಂಬ ಮಿಂಚಿನ ಸೆಳೆತ ಸುಳಿದಂತಾಯಿತು. ಕೈಗಳು ಸರಿದದ್ದಕ್ಕೆ ಎದೆ ಇನ್ನಿಷ್ಟು ಪುಟಿಯತೊಡಗಿತು. ತನ್ನ ಕೈಗಳನ್ನು ಎಳೆಯಬೇಕೆಂದಿದ್ದ ರಾಮಣ್ಣನ ಕೈಗಳು ಅನುಕೂಲದ ಆತಂಕ ಒದಗಿದಂತಾಗಿ ಇದ್ದಲ್ಲಿಯೆ ಸಮಾಧಾನದಸೊಕ್ಕಿನಿಂದ ಮುಟ್ಟಿ ಬಿಗಿದುವು....ಒಂದು ಕ್ಷಣ, ಒಂದು ಯುಗ—ಅಲ್ಲ, ಅಷ್ಟರಲ್ಲಿ "ಸರಲಾನ ಸಲುವಾಗಿ ಆದರೂ ಊಟ ಮಾಡಿ ಬಾ. ಬೇಕಾದರ ನನ್ನ ತಪ್ಪಿಗೆ

ಆ ಮ್ಯಾಲೆ ನಾ ಕ್ಷಮಾ ಬೇಡ್ತೇನಿ." ಎನ್ನುತ್ತ ರಾಮಣ್ಣ ತನ್ನನ್ನು ಕೋಣೆ ಯಿಂದ ಹೊರಗೆ ಸಾಗಿಸಿದ್ದ.

ಆ ರಾತ್ರಿ ಊಟ ಮಾಡಿದುದರ ಎಚ್ಚರವೆ ಇದ್ದಿರಲಿಲ್ಲ. "ಭಲೊ ಆಯ್ತು, ತಾಯೀ ! ಹೊಟ್ಟೆ ತುಂಬಿ ಊಟಮಾಡಿದಿ" ಎಂದು ಸರಲಕ್ಕ ನುಡಿದಾಗ ತಾನು ಊಟವನ್ನು ಮುಗಿಸಿದಳೆಂದು ತಿಳಿದುಬಂದಿತ್ತು. "ಇನ್ನ ತಲೆಶೂಲಿ ಇಲ್ಲ ಅಹುದಲ್ಲೊ ? ಹಸಿವೆ ಭಾಳ ಆಗಿದ್ದು ತಿಳೀಲಾರದೆ ತಲೆ ಶೂಲಿ ಅಂದಿತೊ ಏನೊ ಹುಡುಗೆ !" ಎಂದು ಸರಲಕ್ಕ ನಗೆಯಾಡಿದ್ದನ್ನು ಕೇಳಿ ತಾನು ಲಕ್ಷ್ಯವಿಲ್ಲದೆ ಎಲ್ಲಿ ಸಿಕ್ಯಾಬಟ್ಟೆ ತಿಂದೆನೊ ಎಂದು ಹೆದರಿಕೆ ಯಾಗಿತ್ತು. "ಹೊಟ್ಟೆ ತುಂಬಿ ಊಟ ಮಾಡತಿದ್ದರ ಯಾರ ಮಾತೂ ಮೈಗೆ ಹತ್ತೋದಿಲ್ಲ ನೋಡು" ಎಂದೂ ಸರಲಕ್ಕ ತನ್ನನ್ನು ಕೆಣಕಿದಳು. ಅಂತೂ ಹೇಗೊ ಹೇಗೋ ಊಟದ ಜವಾಬ್ದಾರಿಯಿಂದ ಪಾರಾಗಿ, ಸರಲಕ್ಕನ ಮನಸ್ಸಿ ನೊಳಗಿನ ಕಿಲ್ಬಿಷವನ್ನು ತೆಗೆದು ಹಾಕಿ ತನ್ನ ಕೋಣೆಗೆ ಬಂದಿದ್ದಳು. ಬಂದವಳೆ ಅತ್ಯಂತ ಪರಿಶ್ರಮವಾದವಳಂತೆ, ಯಾವುದೊ ಕುತ್ತಿನಿಂದ ಪಾರಾದವಳಂತೆ ಉಸಿರೆಳೆದು ಹಾಸಿಗೆಯ ಮೇಲೆ ಇದ್ದಕ್ಕಿದ್ದ ಹಾಗೆಯೆ ಮಲಗಿಕೊಂಡಳು. ದೀಪ ಹಚ್ಚಿದರೆ ಎಲ್ಲಿ ಒಳಗಿನ ವಿಚಾರ ಓಡಿಹೋಗುವುದೊ ಎಂಬ ಸಂದೇಹ ದಿಂದ ದೀಪವನ್ನು ಹಚ್ಚಿರಲಿಲ್ಲ. ಒಳಗೆ ಒಂದೇ ಒಂದು ವಿಚಾರ. "ಆ ಮ್ಯಾಲೆ ನಾ ಕ್ಷಮಾ ಬೇಡ್ತೇನಿ" ಎಂದಿದ್ದ ರಾಮಣ್ಣ. ಹಾಗಾದರೆ ಮತ್ತೆ ಕೋಣೆಗೆ ಬರಬಹುದಲ್ಲ ? ದೀಪ ಹಚ್ಚಿಡುವುದೆ ಒಳಿತು ಎಂದೆನ್ನಿಸಿತು; ಆದರೆ ಬೆಳಕಿನಲ್ಲಿ ತನ್ನ ನಾಚಿದ ಮುಖ ರಾಮಣ್ಣನಿಗೆ ಕಾಣಬಹುದು, ಅದ ಕಾಗಿ ದೀಪ ಬೇಡ ಎಂದುಕೊಂಡಳು. ಕತ್ತಲಲ್ಲಿಯೆ ಬಾಗಿಲನ್ನು ದಿಟ್ಟಿಸುತ್ತ ಮಲಗಿದಳು. ರಾಮಣ್ಣ ನಿಜವಾಗಿಯೆ ಬಂದರೆ ? ನಿಜವಾಗಿಯೆ ಕ್ಷಮೆ ಯನ್ನು ಬೇಡಿದರೆ ? ತಾನು ಏನನ್ನಬೇಕು ? ಛಿ ! ಎಂತಹ ಹುಚ್ಚು ವಿಚಾರ ! ರಾಮಣ್ಣನಂತಹನು ತನ್ನ ಕ್ಷಮೆ ಬೇಡುವುದೆಂದರೇನು ? ಮುಂದಾಗಿ ತಪ್ಪು ತನ್ನದು ಎಂದು ತಾನೇ ಹೇಳಬೇಕು. ಎಂತಹ ಮೋಜಿನ ರೀತಿ ರಾಮಣ್ಣನದು ! ತನಗೆ ತಲೆ ಇಲ್ಲ ಎಂದು ಹೇಳುವಾಗ ತಲೆಯ ಮೇಲೆಯೆ ಕೈಯನ್ನಾಡಿಸುತ್ತಿದ್ದನು! "ಕುಮುದಾ!" ಬೆಚ್ಚಿ ಬಿದ್ದಳು. ರಾಮಣ್ಣನ ದನಿ! ಅವ್ವಯ್ಯಾ—ಬಂದೇಬಿಟ್ಟರು !—ಎಂದು ಏಳಬೇಕೆಂಬಾಗ ಕಾಲ್ಗಳು ಅವಳ

ಇಚ್ಛೆಯನ್ನು ಪೂರಯಿಸುದಾಗಿದ್ದುವು. ಏಳಬೇಕು, ಎದ್ದು ತಾನೇ ಕ್ಷಮೆ ಕೇಳಬೇಕು ಎಂದು ಹಂಚಿಕೆ ಹಾಕುತ್ತಿದ್ದ ಕುಮುದಳ ಬಾಯಿಯಿಂದ ಶಬ್ದ-ಗಳೆ ಹೊರಟಿರಲಿಲ್ಲ. ಕೋಣೆಯ ತುಂಬ ಪಸರಿಸಿದ ಕತ್ತಲೆಯೆ ಅವಳಿಗೆ ಧೈರ್ಯವನ್ನು ತಂದುಕೊಟ್ಟಿತ್ತು, ತನ್ನ ದುರವಸ್ಥೆ ಯಾರಿಗೂ ಕಾಣಿಸದು ಎಂದು. ರಾಮಣ್ಣನಿಗೆ ಮಾತ್ರ ತಾನು ಏಳಲಾರದ್ದು ಕಾಣಿಸಿತ್ತೇನೊ ! ನೆಟ್ಟನೆ ಬಂದು ಹಾಸಿಗೆಯ ಬದಿಗೆ ಕುಳಿತುಕೊಂಡ.

" ತಲೆಶೂಲಿ ಹ್ಯಾಂಗ ಅದ ? ಅಂ ?"

ಏನೆಂದು ಉತ್ತರವನ್ನು ಕೊಡಬೇಕು ? ಹಣೆಯಿಂದ ಕೂದಲಗಳನ್ನು ತನ್ನ ಕೈಯಿಂದ ಮೇಲೆ ನೇವರಿಸುತ್ತಿದ್ದಾನೆ ರಾಮಣ್ಣ. ಅದಕಾಗಿ ಏನೂ ತಿಳಿಯದಂತಾಗಿದೆ. ಏನೆಂದು ಉತ್ತರವನ್ನು ಕೊಡಬೇಕು ?

" ನಿನ್ನ ಕ್ಷಮಾ ಕೇಳಲಿಕ್ಕೆ ಬಂದೀನಿ, ಕುಮುದಾ. ನೀ ಬಾಯಿಯಿಂದ ಹುಂ ಅಂತ ಹೇಳದ ಹೊರತು ಹೊರಬೀಳೋದಿಲ್ಲ " ಎಂದಿದ್ದ ರಾಮಣ್ಣ.

ಹಾಗಿದ್ದರೆ ತಾನು ' ಹುಂ ' ಎಂದಾದರೂ ನುಡಿಯಬೇಕಿತ್ತು ? ಅದೊಂದು ಶಬ್ದದ ಮೇಲೆಯೆ ತನ್ನ ಭವಿಷ್ಯ ನಿಲ್ಲಬೇಕಾಗಿತ್ತೆ ? ಬಾಯಿ ಕೂಡ ತೆರೆಯದಂತಾಗಿತ್ತು.

" ನಾನು ಹೋಗೋದಿಲ್ಲ ಅಂದ್ರ ಹೋಗೋದಿಲ್ಲ " ಎಂದು ರಾಮಣ್ಣ ಹಾಸಿಗೆಯ ಮೇಲೆ ಕಾಲು ಚಾಚಿ ಅಡ್ಡಾದ.

ಕುಮುದಳ ಮೈ ಥರಥರ ನಡುಗುತ್ತಿದ್ದಿತು. ಅದು ರಾಮಣ್ಣನಿಗೆ ತಿಳಿಯದಿರಲಿಲ್ಲ. " ಎಲ ! ಖರೇನೆ ಜ್ವರಗಿರ ಬರೋದಿಲ್ಲ ಹೌದಲ್ಲೊ ? " ಎನ್ನುತ್ತ ಹೊಟ್ಟೆಗೆ ಹೊರ ಅಂಗೈ ಹಚ್ಚಿದ. ತನ್ನ ಮೈ ನಡುಗುವುದು ನಿಂತಿತ್ತು.

" ನೀನು ಹುಂ ಕೂಡಾ ಅನ್ನೋದಿಲ್ಲ ? ಎಂತಹ ಹಟ ನಿನ್ನದು ?" ಎಂದು ಕಿವಿಯಲ್ಲಿಯೆ ಉಸಿರಿದ್ದ. ರಾಮಣ್ಣನ ಮುಖ ತನ್ನ ಮುಖಕ್ಕೆ ಈಗ ಹತ್ತಿರವಾಗಿತ್ತು. "ಹೇಳು, ನಡುಗುವ ನಾಟಕ ಮಾಡಬೇಡ " ಎನ್ನುತ್ತ ಎಡ ಮಗ್ಗುಲಾಗಿ ಬಲಗೈಯಿಂದ ತನ್ನನ್ನು ಬಿಗಿದು ಹಿಡಿದಿದ್ದ. ಕುಮುದಳ ಬಾಯಿಗೆ ಏನಾಗಿದ್ದಿತೊ ! ಅರಿತೆರೆದಿದೆ, ಒಂದು ಶಬ್ದ ಹೊರಬೀಳಲೊಲ್ಲದು!

"ನೀನು ಬಾಯಿ ಮುಚ್ಚಿಕೊಂಡರೆ ನಾನೂ ಬಾಯಿ ಮುಚ್ಚಿಕೋತೀನಿ" ಎಂದವನೆ ಬಾಯಿಗೆ ಬಾಯಿಯನ್ನಿಟ್ಟು ಬಲಗೈಯಿಂದ ಇನ್ನಿಷ್ಟು ಹತ್ತಿರ ತನ್ನನ್ನು ಎಳೆದುಕೊಂಡಿದ್ದ.

ಆ ರಾತ್ರಿ ಕುಮುದಳಿಗೆ ಯಾವುದೊ ಹೆಸರಿಡದಂತಹ ಹೆದರಿಕೆಯಾಗಿತ್ತು. ಸೃಷ್ಟಿಯು ಹೆಣ್ಣಿಗೆ ವಹಿಸಿಕೊಟ್ಟ ಧರ್ಮದ ಕಲ್ಪನೆಯು ಅವಳಿಗಿದ್ದಿರಲಿಲ್ಲ, ಅರಿವೂ ಪೂರ್ತಿಯಾಗಿರಲಿಲ್ಲ. ಆದರೆ ಆ ಧರ್ಮದ ಹಾದಿ ಮಾತ್ರ ಸುಗಮವಾದುದಲ್ಲ ಎಂದು ಒಮ್ಮೆ ಎನ್ನಿಸಿತ್ತು. ಯಾವುದು ನಿಜ? ದೇಹಕ್ಕಾದ ಪೀಡೆಯೊ? ಮನಸ್ಸಿಗಾದ ಆನಂದವೊ? ಒಮ್ಮೊಮ್ಮೆ ಪೀಡೆಯೆ ಆನಂದವೆನ್ನಿಸಿದಂತಾಗಿ ಏನೂ ತಿಳಿಯದಂತಾಗುತ್ತಿತ್ತು. ರಾಮಣ್ಣನ ಕೈಗಳು ತನ್ನ "ಎದೆ"ಗಳನ್ನು ಮುಟ್ಟಿದಾಗ, ಆ ಕೈಗಳಲ್ಲಿ ಎಂತಹ ಕಸುವಿದೆ ಎಂಬುದನ್ನು ಕಂಡಾಗ—ಅದೇನು ಸುಖವೊ? ದುಃಖವೊ? ಅವಳಿಗೆ ತಿಳಿದಿರಲಿಲ್ಲ. ತನ್ನ ಬಾಯಿಗೆ ಸೋಂಕಿದ ರಾಮಣ್ಣನ ಬಾಯಿ ತನ್ನ ಕೆಳದುಟಿಯನ್ನು ಕಚ್ಚಿದಾಗ ರಕ್ತದೊಡನೆ ಸುಖವೂ ಹೊರಚಿಮ್ಮಿತೇನೊ ಎನ್ನುವಂತಾಗಿತ್ತು. ಒಮ್ಮೆ ಅದಾವುದೊ ಒಂದು ತಡೆಯದ ವೇದನೆಯಾದಂತಾಗಿತ್ತು; ಆದರೆ ಅದು ವೇದನೆಯಲ್ಲ ಎನ್ನುವಂತೆ ತನ್ನ ಬಾಯಿಂದ ಅತ್ಯಂತ ಸಮಾಧಾನದಿಂದ ಸೂತ್ಕಾರ ಹೊರಬಿದ್ದಿತ್ತು. ಬೇಡ, ಬೇಡ ಎನ್ನುವಾಗಲೆ ಬೇಕೆಂಬ ಭಾವನೆ ತನ್ನ ತೊಡೆಯ ಮೇಲೆ ಕೂಸಿನಂತೆ ನಗುತ್ತಿತ್ತು. "ಕುಮುದಾ, ಕುಮುದಾ" ಎಂದು ರಾಮಣ್ಣನು ಉಸುರ್ಗರೆದ ತನ್ನ ಹೆಸರು ನೇರವಾಗಿ ತನ್ನ ಹೃದಯವನ್ನು ಮುಟ್ಟಿ ಅದನ್ನು ಹೊಡೆದೆಬ್ಬಿಸಿತ್ತೇನೊ! ಆ ಹೆಸರನ್ನು ರಾಮಣ್ಣನು ಉಸುರ್ಗರೆದ ಮಾತ್ರಕ್ಕೆ ಕುಮುದಳು ತನ್ನ ಎರಡೂ ತೋಳ್ಗಳಿಂದ ರಾಮಣ್ಣನನ್ನು ಬಲವಾಗಿ ಬಿಗಿದು ಸೆಳೆದುಕೊಂಡಳು. ಆಗ, ರಾಮಣ್ಣನ ಈ ದೇಹವನ್ನು ತನ್ನ ತೋಳ್ಗಳಿಂದ ಬಿಗಿದು ಮುರಿದು ಅದನ್ನು ತನ್ನಲ್ಲಿ ಮೈಗೂಡಿಸಿಕೊಳ್ಳಬೇಕು ಎನ್ನುವಷ್ಟು ಒಂದು ಕ್ರೂರವಾದ ಪ್ರೇಮದ ಹಂಬಲ ತನ್ನಲ್ಲಿ ಮೂಡಿತ್ತು.

"ಪ್ರೇಮ"—ಕುಮುದ ಕನಸಿನಿಂದ ಎಚ್ಚೆತ್ತವಳಂತೆ ಹಿಂದಿನ ಈ ನೆನಪನ್ನು ಕೊಡುಹಲು ತಲೆಜಾಡಿಸಿದಳು. ಉಸುರ್ಗರೆದಳು. ಪ್ರೇಮ! ಎರಡು ವರ್ಷ ಆ ಶಬ್ದಕ್ಕೆ ತಾನು ಆಹುತಿಯಾಗಿದ್ದಾಳೆ. ಅಂದು "ಕುಮುದಾ,

ಕುಮುದಾ" ಎಂದು ಕತ್ತಲಲ್ಲಿ ಹೃದಯವನ್ನ ತೆರೆದು ಉಸುರ್ಗರೆದ ರಾಮಣ್ಣ ಈಗ—ಹೋಗಲಿ, ಎಂದುಕೊಂಡಳು. ಇನ್ನು ಆ ವಿಚಾರ ಯಾಕೆ? ಆ ಮೊದಲ ರಾತ್ರಿಯ ತಪ್ಪು ನನ್ನದಲ್ಲ, ರಾಮಣ್ಣನು ಆ ರೀತಿ ವರ್ತಿಸಿದ್ದಿಲ್ಲ ವೆಂದರೆ ತನಗೆ ಧೈರ್ಯವೆ ಆಗುತ್ತಿರಲಿಲ್ಲ; ತಪ್ಪು ತನ್ನದಲ್ಲ, ತಾನು ಮನ ದಣಿಕೆಯಿಂದ ಪಾಪಕ್ಕೆ ಪ್ರೇರಿತಳಾದವಳಲ್ಲ— ಎಂದುಕೊಂಡಳು. ಆದದ್ದೆಲ್ಲ ಸುಳ್ಳು, ನಡೆದದ್ದಷ್ಟೆ ನಿಜ ಎಂದುಕೊಂಡು ಉಸುರ್ಗರೆದು ಹಾಸಿಗೆಯಿಂದ ಎದ್ದಳು. ಇನ್ನು ಎಚ್ಚರಿದ್ದರೆ ಈ ನೆನಪುಗಳ ಕಾಟ ತಪ್ಪದೆಂದು ಮಲಗುವ ಸಿದ್ಧತೆಯಲ್ಲಿ ತೊಡಗಿದಳು. ಯಾವ ವಿಚಾರ ಬಂದಿತೊ ಏನೊ! ಹಾಸಿಗೆಯ ಮೇಲಿನ ಹೊದಿಕೆಯನ್ನು ತೆಗೆಯಬೇಕೆಂದವಳು ಅದನ್ನು ಅರ್ಧಕ್ಕೆ ಎತ್ತಿ ಚಿತ್ರದ ಗೊಂಬೆಯಂತೆ ಹಾಗೇ ನಿಂತಳು.

## ೯

ಸುಲಭವಾಗಿ ದೊರೆಯುವ ವಸ್ತುವಿಗಾಗಿ ಮೊದಲು ಅತ್ಯಾಶೆ, ಇಷ್ಟು ಸುಲಭವಾಗಿ ದೊರೆತಿದೆ ಎಂಬುದಕ್ಕೆಯೆ ಆಮೇಲೆ ಅದರ ಬಗ್ಗೆ ತಿರಸ್ಕಾರ. ರಾಮಣ್ಣ ಚಕಿತನಾದ. ಯಾವ ಮಾತಿನ ಬಗ್ಗೆ ಈ ವಿಚಾರ ತನ್ನ ಮನಸ್ಸಿ ನಲ್ಲಿ ಬಂದಿತು? ತನ್ನ ಕೈಯೊಳಗಿದ್ದುದು ಪುಸ್ತಕ; ಅದನ್ನು ಓದಲು ತೊಡ ಗಿದ್ದ. ಆ ಪುಸ್ತಕದ ಬಗ್ಗೆ ಈ ವಿಚಾರ ಬರುವುದು ಶಕ್ಯವಿಲ್ಲ. ಹಾಗಿದ್ದರೆ ತಾನು ಬರೆಯುವ ಪುಸ್ತಕಗಳಿಗಾಗಿಯೆ? ಯಾಕೆಂದರೆ, ಅನೇಕ ಸಲ ಅವ ನಿಗೆ ಅಂತಹ ಅನುಭವ ಬಂದಿತ್ತು. ಒಂದು ಮಾತು ಅತ್ಯಂತ ಮಹತ್ತ್ವ ದ್ದೆಂದು ಹೊಳೆದು ಯಾವಾಗ ಅದನ್ನು ಕುರಿತು ಪುಸ್ತಕವನ್ನು ಬರೆದೇನು ಎಂದು ಆತುರ; ಆಮೇಲೆ ಒಮ್ಮೆ ಪ್ರಾರಂಭಿಸಿ ಕೆಲವೇ ದಿನಗಳಲ್ಲಿ ಅದನ್ನು ಮುಗಿಸಿದೊಡನೆ ಅದಕಾಗಿ ಜಿಗುಪ್ಸೆ. ಯಾಕೆ? ಕೆಲವೇ ದಿನಗಳಲ್ಲಿ ಮುಗಿ ಸಲ್ಪಡಬಲ್ಲ ಪುಸ್ತಕ ಮಹತ್ತ್ವದ್ದೆನ್ನಿಸೀತೆ— ಎಂದು. ಆದರೆ ಆ ವಿಚಾರ ವಾದರೂ ಈಗ ಯಾಕೆ ಬರಬೇಕು? ತನ್ನ ಕೈಯಲ್ಲಿ ಪುಸ್ತಕವಿದೆ ಎಂದೊ? ಹಾಂ—ತಿಳಿಯಿತು. "ಕೈಯಲ್ಲಿ ಪುಸ್ತಕ." ಪುಸ್ತಕಕ್ಕಿಂತ "ಕೈಯಲ್ಲಿ" ಎಂಬುದನ್ನೆ ತನ್ನ ಒಳಮನಸ್ಸು ಒತ್ತಿ ತೋರಿಸುತ್ತಿದೆ. ಇದುವರೆಗೆ ಹಿಂದಿನ ನೆನಪುಗಳನ್ನು ನೆನೆಯುತ್ತಿದ್ದ ಆ ಓಘದಲ್ಲಿ ೨—೨॥ ವರ್ಷಗಳ ಮುಂಚೆ

ಕುಮುದ ತನ್ನ "ಕೈಯಲ್ಲಿ" ಸಿಕ್ಕಳು ಎಂದು ಒಳಮನಸ್ಸು ತಾನಾಗಿಯೆ ನೆನೆದುಕೊಂಡಿದೆ. ಈಗ ತನಗೆ ಕುಮುದಳಿಗಾಗಿ ಒಂದು ತರದ ಜಿಗುಪ್ಸೆ ಇದ್ದುದು ನಿಜವಾದ್ದರಿಂದ, ಆ ಜಿಗುಪ್ಸೆಗಾಗಿ ಸಮಾಧಾನವನ್ನು ತಂದುಕೊಳ್ಳು ತ್ತಿತ್ತು ಒಳಮನಸ್ಸು. ಅದು ಹೊರಮನಸ್ಸಿಗೆ ಕೇಳಿಸಿತೇನೊ ! ಅದೇ ತನಗೆ ಹೊಳೆದ ವಿಚಾರವಾಗಿರಬಹುದೇನೊ ! "ಸುಲಭವಾಗಿ ದೊರೆಯುವ ವಸ್ತುವಿ ಗಾಗಿ ಮೊದಲು ಅತ್ಯಾಶೆ." ನಿಜ. ತನ್ನ ಮತ್ತು ಕುಮುದಳ ಸಂದರ್ಭದಲ್ಲಿ ಈ ಮಾತು ಅಕ್ಷರಶಃ ನಿಜವಾಗಿತ್ತು. ಹೇಗೊ ಏನೊ—ಅಂದು ಕಪಾಟಿ ನೆದುರಿನಲ್ಲಿ ಅವಳನ್ನು ಬಿಗಿದಪ್ಪಿದಾಗ ಆಕೆಯ ಮುಖಮುದ್ರೆಯನ್ನು ನೋಡಿ ರಾಮಣ್ಣನಿಗೆ ಒಳಗೊಳಗೆ ಒಂದು ಆಶೆ ಅಂಕುರಿಸಿತ್ತು. ಈಕೆ ಈ ಮೊದಲೇ ನನ್ನನ್ನು ಒಲಿದಿದ್ದಾಳೆ ಎಂದೂ ಎನ್ನಿಸಿತ್ತು. ಆದರೂ ಅಂತರಂಗದ ಈ ಸಾಕ್ಷ್ಯದ ಮೇಲೆ ರಾಮಣ್ಣನು ಪೂರ್ತಿಯಾಗಿ ವಿಶ್ವಾಸವನ್ನಿಟ್ಟಿರಲಿಲ್ಲ. ಯಾರಿಗೆ ಗೊತ್ತು ? ಒಂದು ವೇಳೆ ಸರಲೆಗೆ ಹೇಳಿದರೆ ?—ಎಂದು ಹೆದರಿದ್ದ. ಅದಕಾಗಿ—ಈಗಲೂ ರಾಮಣ್ಣನ ಮುಖದಲ್ಲಿ ಆ ನೆನಪಿಗಾಗಿ ಮುಗುಳ್ನಗೆ ಮೂಡುತ್ತಿದೆ—ಮರುದಿನ ತಾನು ಸರಲೆಯ ಸಮೀಪದಲ್ಲಿಯೆ ಹೆಚ್ಚಾಗಿ ಸುಳಿದಿದ್ದ. ಇಡೀ ದಿನ ಹೊರಗೆ ಅಡ್ಡಾಡಿದ್ದ. ಆದರೆ ಅಪ್ಪಿತಪ್ಪಿ ಒಮ್ಮೆ ಕುಮುದಳ ಕಡೆ ನೋಡಿದಾಗ ಆಕೆಯ ಕಣ್ಣಲ್ಲಿ ಹೆದರಿಕೆ ಇರಲಿಲ್ಲ, ಸಿಟ್ಟು ಇರಲಿಲ್ಲ, ಆ ಹುಬ್ಬುಗಳು ಸ್ವಾಗತದ ಕಮಾನಿನಂತೆ ಕಂಡಿದ್ದುವು ರಾಮಣ್ಣ ನಿಗೆ. ಒಳಗಿನ ಆಶೆಯನ್ನು ಕೆಣಕಿದಂತಾಯಿತು. ಆಗ ಮಾತ್ರ ಮೊದಲ ಮತ್ತು ಕೊನೆಯ ಸಲ ರಾಮಣ್ಣ ಯತ್ನ ಮಾಡಿದ್ದನೆನ್ನಬಹುದು, ತನ್ನ ಮನ ಸ್ಸನ್ನು ತಡೆಯಲು. ಬೇಡ, ಈ ಗೊಡವೆಯೆ ಬೇಡ, ಎಂದುಕೊಂಡಿದ್ದ. ಸರಲೆಯ ಮಗ್ಗುಲಲ್ಲಿ ಮಾತಾಡುತ್ತ ಕುಳಿತಾಗಲೂ ಹಿಂದಿನ ರಾತ್ರಿಯ ಸ್ಪರ್ಶ ಸುಖದ ಸವಿ ಬಾಯಿಗೆ ನೀರೊಡೆದಂತೆ ನೆನಪಾಗಿತ್ತು. ಆಗ ಸರಲೆಯ ಕೈಯನ್ನು ತನ್ನ ಕೈಯಿಂದ ಹಿಚುಕಿ ಆ ನೆನಪಿನ ಸುಖವನ್ನು ಮರೆಯಲು ಯತ್ನಿಸಿದ್ದ. ಸರಲೆಯು ನಗೆಮೊಗದಿಂದ ತನ್ನನ್ನು ನೋಡುತ್ತ "ದೇವರು ಬ್ಯಾಗ ನನಗ ಆ ಶಕ್ತಿ ಕೊಡಲಿ" ಎಂದಿದ್ದಳು. ಮೊದಲು ಸಂದರ್ಭ ತಿಳಿ ಯದೆ ರಾಮಣ್ಣ ಬೆಚ್ಚಿಬಿದ್ದು "ಏನಂದಿ ?" ಎಂದಿದ್ದ. ಸರಲೆ ಅದೇ ನಗೆ ಮೊಗದಿಂದ "ಏನಿಲ್ಲ" ಎನ್ನುತ್ತ ಈಗ ತನ್ನ ಕೈಯನ್ನು—ಪಾಪ ! ಅಶಕ್ತ

ಳಾಗಿದ್ದರೂ—ವಾತ್ಸಲ್ಯದ ಶಕ್ತಿಯಿಂದಲೊ ಏನೊ ಎನ್ನುವಂತೆ ಹಿಸುಕಿದ್ದಳು. ಆದಿನ ಮತ್ತೇನೊ ಒಂದು ವಿಶೇಷ ನಡೆದಿತ್ತು, ಮನೆಯ ವ್ಯವಸ್ಥೆಯ ಬಗ್ಗೆ. ಯಾವ ಮಾತು ? ಹೋಗಲಿ, ನೆನಪಿದ್ದ ಮಾತೆಂದರೆ, ಮರುದಿನ ಕುಮುದ ಳನ್ನು ಸಿನೆಮಾಕ್ಕೆ ಕರೆದೊಯ್ಯಬೇಕೆಂಬುದು. ಅದೂ ಸರಲೆಯ ಒತ್ತಾಯ !

ಈ ಮಾತು ನೆನಪಾದ ಕೂಡಲೆ ರಾಮಣ್ಣ ಮತ್ತೆ ಮುಖ ತಿರುಗಿಸಿ ಭಾವಪಟವನ್ನು ನೋಡಿದನು, ಉಸಿರೆಳೆದನು. "ಹುಚ್ಚಿ ! ನಾನು ಎಷ್ಟು ಪ್ರಯತ್ನಮಾಡಿದ್ದೆ ! ಅದನ್ನೆಲ್ಲಾ ಕೆಡಿಸಿಬಿಟ್ಟೆ ನೀನು ! ನಿನ್ನ ಕೈಯಿಂದಲೆ ನಿನ್ನ ಜೀವವನ್ನು ಇನ್ನೊಬ್ಬರಿಗೆ ಎತ್ತಿ ಕೊಟ್ಟೆ ನೀನು ! ಅದಕ್ಕೇ ಹೇಳತಾ ಇದ್ದೀನಿ, ಸರಲಾ, ಇದೆಲ್ಲಾ ನಿನ್ನ ತಪ್ಪು ಅಂತ." ಎಂದು ಭಾವಪಟಕ್ಕೆ ಕತೆ ಯನ್ನೂ ಬುದ್ಧಿಯ ಮಾತನ್ನೂ ಹೇಳಿದ.

ರಾಮಣ್ಣ ವಿಚಾರ ಮಾಡಿದ. ನಿಜವಾಗಿ ನಡೆದುದೆಲ್ಲ ಸರಲೆಯ ತಪ್ಪು ಎಂದೆನ್ನುವಾಗಲೂ ಸರಲೆಯ ಶುದ್ಧ ಅಂತಃಕರಣದ ನೆನಪು ಅವನನ್ನು ಪೀಡಿಸುತ್ತಿತ್ತು. ಶುದ್ಧ ಅಂತಃಕರಣದಿಂದ ಮಾಡಿದ್ದು ತಪ್ಪೆನ್ನಬಹುದೆ ? ಎನ್ನ ಬಾರದೇಕೆ ? ವ್ಯವಹಾರದ ರೀತಿಯೆ ವಿಪರೀತವಾಗಿದ್ದಾಗ ಜೀವನದ ರೀತಿಯೂ ವಿಪರೀತವಾಗಿರಬಾರದೇಕೆ ? ಅನ್ಯಾಯದಿಂದ ಗಳಿಸಿದ ಹಣದಿಂದ ದೇವಸ್ಥಲವನ್ನು ಕಟ್ಟಿಸಿದವನನ್ನು ಜನರು "ಪುಣ್ಯವಂತ" ಎಂದು ತಿಳಿ ಯುವುದಿಲ್ಲವೆ ? ಪಾಪದಿಂದ ಪ್ರೇರಿತನಾಗಿ ಪುಣ್ಯವನ್ನು ಮಾಡಬಹುದಾದರೆ ಪುಣ್ಯದಿಂದ ಪ್ರೇರಿತನಾಗಿಯೆ ಪಾಪವನ್ನು ಮಾಡಲಾಗದೇಕೆ ? ಹಿಂದಿದ್ದ ಶುದ್ಧ ಅಂತಃಕರಣವು ಮುಖ್ಯವೆ ? ಮುಂದೆ ಅದರಿಂದ ಘಟಿಸಿದ ಅನರ್ಥ ಮುಖ್ಯವೆ ? ದೇಶ-ಕಾಲಗಳ ಮೇರೆಯಿಂದಲೆ ಜ್ಞಾನ ದೊರೆಯುವ ಈ ಜಗ ತ್ತಿನಲ್ಲಿ ಕ್ರಿಯೆ ಮುಖ್ಯ, ಆದುದರಿಂದ ಘಟಿಸಿದ ಅನರ್ಥ ಮುಖ್ಯ, ಆದುದ ರಿಂದ—ರಾಮಣ್ಣ ತಡೆದ. ತನಗೆ ಹುಚ್ಚು ಮಾತ್ರ ಹಿಡಿಯಲಿಕ್ಕಿಲ್ಲವಷ್ಟೆ ? ಎಂತಹ ಮಾತು, ಯಾವ ಸಂದರ್ಭ, ಅವುಗಳ ಸಮಾಧಾನಕ್ಕಾಗಿ ತಾನು ಉರುಳಿಸುತ್ತಿರುವ ತತ್ತ್ವಜ್ಞಾನದ ಬಂಡೆಗಳೆಂತಹುವು! ಈ ಸ್ವಭಾವಕ್ಕಾಗಿಯೆ ಮನುಷ್ಯನು ಕೊನೆಗೆ ಜ್ಞಾನವನ್ನು ಮುಟ್ಟುವ ಬದಲು ಆ ಬಂಡೆಗಲ್ಲುಗಳ ಕೆಳಗೆ ಸಿಕ್ಕು ಪುಡಿಪುಡಿಯಾಗುತ್ತಾನೆ. ರಾಮಣ್ಣ ತನಗಾಗಿಯೆ ತಿರಸ್ಕಾರವನ್ನು ವ್ಯಕ್ತಪಡಿಸುವ ನಗೆಯಿಂದ ಮತ್ತೆ ಭಾವಪಟವನ್ನು ನೋಡಿದ. "ಸರಲಾ,

ನೋಡಿದೆಯಾ ನಿನ್ನ ಗಂಡನ ಅವಸ್ಥೆಯನ್ನು? ಬೇಕಾದದ್ದನ್ನು ಮಾಡುವ ಯೋಗ್ಯತೆಯುವ ಎಂದು ನೀನು ತಿಳಿದಿದ್ದೆ, ಆದರೆ ಬೇಡಾದದ್ದನ್ನು ಮಾಡಿ ಅದನ್ನು ದಕ್ಕಿಸಲಾರದೆ ನೆನಪುಗಳ ಅಜೀರ್ಣವಾಗಿ ಬಳಲುತ್ತಿದ್ದಾನೆ." ರಾಮಣ್ಣ ಎದ್ದು ಅತ್ತಿತ್ತ ತಿರುಗಾಡತೊಡಗಿದ, ಅಜೀರ್ಣಕ್ಕಾಗಿ ವ್ಯಾಯಾಮ ಬೇಕೆಂಬ ವಿಚಾರದಿಂದಲೊ ಏನೊ ಎನ್ನುವಂತೆ. ಬೆನ್ನಿಗೆ ಕೈಕಟ್ಟಿದ. ಹೆಜ್ಜೆಗಳನ್ನು ನೋಡುತ್ತ, ಮುಖವನ್ನು ಕೆಳಗೆ ಮಾಡಿ ಅತ್ತಿಂದಿತ್ತ ಸುಳಿದಾಡುವಾಗ, ಒಮ್ಮೆಲೆ "ಹಾಳು ಸಿನೆಮಾಕ್ಕ ಹೋದದ್ದೆ ಇದನ್ನೆಲ್ಲ ಮಾಡಿತು, ನಮ್ಮನ್ನ ಸಿನೆಮಾಕ್ಕ ಕಳಿಸಿದಾಕೆ ಸರಲಾನೇ" ಎಂದುಕೊಂಡ. ಸಿಟ್ಟು ಬಂದಿತು. ಯಾರಿಗಾಗಿ ಎಂಬುದು ಸ್ಪಷ್ಟವಿದ್ದಿರಲಿಲ್ಲವಾದ್ದರಿಂದ ಕುರ್ಚಿಯನ್ನು ಬಲವಾಗಿ ಎಳೆದು ಅಪ್ಪಳಿಸಿ ಆದರಲ್ಲಿ ಕುಕ್ಕರಿಸಿ ಎದುರುಗೋಡೆಯನ್ನು ದಿಟ್ಟಿಸುತ್ತ ಕುಳಿತ.

ಒಳಗೆ ಸಿನೆಮಾದ ವಿಚಾರ, ಹೊರಗೆ ಎದುರಿನಲ್ಲಿ ಗೋಡೆ. ದಿಟ್ಟಿಸಿ-ದಿಟ್ಟಿಸಿದಂತೆ ರಾಮಣ್ಣನಿಗೆ ಅಂದು ಕುಮುದಳನ್ನು ಸಿನೆಮಾಕ್ಕೆ ಕರೆದುಕೊಂಡು ಹೋದ ಅನುಭವವೇ ಮರುಕಳಿಸಿತು. ಈಗಲೂ ಕುಮುದ ತನ್ನ ಎಡಬದಿಯ ಕುರ್ಚಿಯ ಮೇಲೆ ಕುಳಿತಿರುವಳೇನೊ ಎಂಬಂತೆ ತುಸು ಎಡಕ್ಕೆ ಮೈಯನ್ನು ಬಾಗಿಸಿ ಸರಿದು ಕುಳಿತ. ಆ ದಿನ ಸಿನೆಮಾದಲ್ಲಿ ಕುಳಿತಾಗ ಅವಳ ಮೈಯನ್ನು ಮುಟ್ಟಬೇಕೆಂಬಾಸೆ, ಕೈಯನ್ನು ಕೈಯಲ್ಲಿ ತೆಗೆದುಕೊಳ್ಳಬೇಕೆಂಬಾಸೆ, ಒಮ್ಮೊಮ್ಮೆ ಎಡಗೈಯಿಂದ ಅವಳನ್ನು ಸುತ್ತಿ ಬಿಗಿಯಬೇಕೆಂಬಾಸೆ. ಇದೆಲ್ಲದರಿಂದ ಮನಸ್ಸನ್ನು ಹಿಂದೆಳೆಯಲು ಅವನು ಕುಮುದಳಿಗೆ ಕತೆಯನ್ನು ತಿಳಿಸಿಕೊಡುವುದರಲ್ಲಿ ಉತ್ಸಾಹಿತನಾದ. ಎಷ್ಟು ಮಾತಾಡಿದನು ಅಂದು! ಕುಮುದ ಮಾತ್ರ ಹುಂ ಕೂಡ ಎಂದಿರಲಿಲ್ಲ. ಆದರೆ ಒಂದೆರಡು ಸಲ ಕತ್ತಲಲ್ಲಿ ಮಾತನಾಡುವ ತನ್ನನ್ನು ನೋಡುತ್ತಿದ್ದಾಗ, ಪಟಪ್ರದರ್ಶನದ ಬೆಳಕಿನಲ್ಲಿ ಅವಳ ಎರಡು ಕಣ್ಣುಗಳು ಮಿಂಚಿದಾಗ, ಆ ಮುಖವನ್ನೆತ್ತಿ ಮುದ್ದಿಡಬೇಕೆಂದೆನ್ನಿಸಿತ್ತು. ತಟ್ಟನೆ ಉಗುಳ್ನುಂಗಿ ಮಾತನ್ನು ತಡೆದಿದ್ದ. ಇದು ಯಾರ ತಪ್ಪು? ತನ್ನದೊ? ಸರಲೆಯದೊ? ಇಷ್ಟು ಕಾಲಾವಧಿಯ ನಂತರ ರಾಮಣ್ಣನು ಈ ಪ್ರಶ್ನವನ್ನು ಕೇಳಿಕೊಳ್ಳುತ್ತಿದ್ದಾನೆ.

ಯಾರದೆ ತಪ್ಪಿರಲಿ, ಹಾಕಿಟ್ಟ ನಿಯಮದಂತೆ ಎನ್ನುವ ಹಾಗೆ ಘಟನೆ ನಡೆಯಿತಲ್ಲ ? ಕುಮುದಳಿಗೆ ಚಿತ್ರಪಟವನ್ನು ನೋಡುವ ಅಪರಿಚಿತ ಅನುಭವದಿಂದ ಉಲ್ಲಾಸ, ತನಗೆ ಕುಮುದಳನ್ನು ನೋಡಿ ಉಲ್ಲಾಸ. ಮರು ದಿನ ತಾನು ಅದೇ ಉಲ್ಲಾಸವೃತ್ತಿಯಲ್ಲಿದ್ದಾಗ ಯಾವ ಮಾತು ತನ್ನ ಬಾಯಿ ಯಿಂದ ಹೊರಟಿತ್ತೊ ! ಆ ಮಾತಿಗಾಗಿ—ಎಂತಹ ಮೋಜು !—ಆ ನೆನಪಿಗೆ ಬಾರದಂತಹ ಕ್ಷುಲ್ಲಕ ಮಾತಿಗಾಗಿ ಎಂದಿಗೂ ನೆನಪು ಮರೆಯದಂತಹ ಕತೆಗೆ ಪ್ರಾರಂಭವಾಯಿತು ! ಕುಮುದಳ—ಸಿಟ್ಟೊ ? ನಿಜವಾಗಿಯೆ ತಲೆ ಶೂಲಿಯೊ ?—ಅಸಮಾಧಾನವನ್ನು ಸಂತೈಸಲು ತಾನು ಅವಳ ಕೋಣೆಗೆ ಹೋದಾಗ ರಾಮಣ್ಣನಿಗೆ ಪೂರ್ತಿಯಾಗಿ ಭರವಸೆಯಾಯಿತು, ಕುಮುದಳು ತನಗೆ ಅಧೀನಳು ಎಂದು.... ಈಗಲೂ ಆ ಮೊದಲ ಅನುಭವ ನೆನಪಿದೆ. ರಮಿಸುತ್ತ ಆಕೆಯನ್ನು ಕೈಹಿಡಿದು ಎಬ್ಬಿಸಬೇಕೆಂದು ತಾನು ಕೈಚಾಚಿ ಆಕೆಯ ಕೈಯನ್ನು ಹಿಡಿಯಲು ಹೋದಾಗಿನ ಆ ಘಟನೆ ಈಗಲೂ ನೆನಪಿನಲ್ಲಿದೆ. ನೆನಪಿಗೆ ಬಂದರೆ—ತಾನೇನು ಸುಸಂಸ್ಕೃತ ಮನುಷ್ಯನೆ ? ಪಶುವೆ ? (ಆದರೆ ಪಶುವಿಗೆ ಇಂತಹ ಸ್ಮರಣೆ ಇರಬಹುದೆ ?)—ಈಗಲೂ ಆನಂದದಿಂದ ಮೈ ಜುಮ್ಮೆನ್ನುತ್ತಿದೆ. ಆಕೆಯು ತನ್ನ ಕೈಗಳನ್ನು ಎದೆಯ ಮೇಲಿಟ್ಟುಕೊಂಡು ಮಲಗಿದ್ದಳು. ಕೈ ಹಿಡಿಯಲು ತಾನು ಕೈ ಚಾಚಿದಾಗ ಆಕೆಯ ಕೈಬೆರಳು ಮಾತ್ರ ತನ್ನ ಕೈಗೆ ತಾಕಿದರೂ ಜೊತೆಗೆ ಆಕೆಯ ಸ್ತನಭಾಗವನ್ನೂ ತನ್ನ ಕೈ ಮುಟ್ಟಿತ್ತು. ಒಂದೇ ಒಂದು ನಿಮಿಷ ಅವಾಕ್ಕಾಗಿದ್ದ. ಎಲ್ಲಿ ಆಕೆ ಹೆದರು ವಳೊ ಇಲ್ಲವೆ ಕೂಗುವಳೊ ಎಂದು. ಆದರೆ ಅಷ್ಟರಲ್ಲಿ ಆಕೆ ತನ್ನ ಕೈ ಬೆರ ಳನ್ನು ಸರಿಸಿಕೊಂಡು ತನ್ನ ಕೈಗೆ ಪೂರ್ತಿ ಅವಕಾಶವನ್ನು ಮಾಡಿಕೊಟ್ಟಿದ್ದಳು. ಆಗ ರಾಮಣ್ಣನಿಗೆ ಪೂರ್ತಿಯಾಗಿ ಭರವಸೆಯಾಗಿತ್ತು, ಮೈಮರೆತಂತಾಗಿತ್ತು; ಆದರೂ ಅತ್ಯಂತ ಪರಿಶ್ರಮದಿಂದ, ಬುದ್ಧಿಪೂರ್ವಕವಾಗಿ ತಡೆದುಕೊಂಡಿದ್ದ. " ಕುಮುದಳನ್ನು ಕರೆತರುವೆ " ಎಂದು ಸರಲೆಗೆ ಹೇಳಿ ಬಂದಿದ್ದಾನೆ, ಈಗ ಹೊತ್ತು ಕಳೆಯುವ ಹಾಗಿಲ್ಲ, ಆದರೆ ದೊರೆಯುತ್ತಿದ್ದ ಅವಕಾಶವನ್ನು ದೂಡುವ ಹಾಗೂ ಇಲ್ಲ—ಎಂದುಕೊಂಡು ಒಂದು ಮಾತನ್ನು ಹೇಳಿ ಆಕೆ ಯನ್ನು ಎಬ್ಬಿಸಿದ್ದ. ಎಂತಹ ಚಮತ್ಕೃತಿಯ ಮಾತದು ! ನಿಜವಾದ ಸ್ಫೂರ್ತಿ ತನಗೆಂದಾದರೂ ಬಂದಿದ್ದರೆ ಆ ಮಾತನ್ನು ನುಡಿವಾಗ ಬಂದಿರಬೇಕು.

"ಸರಲೆಗಾಗಿ ಊಟ ಮಾಡು, ನಾನು ಆಮೇಲೆ ಕ್ಷಮೆಯನ್ನು ಬೇಡುವೆ." ಸ್ಫೂರ್ತಿಯ ರಹಸ್ಯ ತಿಳಿದಂತಾಗಿತ್ತು—ಅಥವಾ ಸ್ಫೂರ್ತಿ ಎಂಬುದು ಬೇರೆ ಏನೂ ಅಲ್ಲ. ನೈಸರ್ಗಿಕವಾದ ಕಾಮತೃಪ್ತಿಗಾಗಿ ಮೈಮರೆಯುವ ಪ್ರಕೃತಿ ಗುಣದಿಂದಲೆ ಸ್ಫೂರ್ತಿ ಹುಟ್ಟುವುದೆ ?

ಆಗ ಕೂಡ ಸ್ಫೂರ್ತಿಯ ವಿಚಾರ ಬಂದಿರಲು ಒಂದು ವಿಶೇಷ ಕಾರಣ ವಿದ್ದಿತು. ಆ ರಾತ್ರಿ ತಾನು ಕುಮುದಳನ್ನು ಕೂಡಿದ್ದು ಅನುಭವಿಕನಾದ ಅವ ನಿಗೂ ಒಂದು ಹೊಸ ಶಕ್ತಿಯನ್ನು ಕೊಟ್ಟಿತ್ತು. ಅಂದೇ ಒಂದು ಹೊಸ ಪುಸ್ತಕವನ್ನು ಬರೆಯಲು ಪ್ರಾರಂಭಿಸಿದ್ದ. ಆ ಪುಸ್ತಕವನ್ನು ತಾನು ಎಂದಿ ಗಿಂತಲೂ ಹೆಚ್ಚಾಗಿ ಮೈಮರೆತು ಬರೆಯುತ್ತಿದ್ದ. ರಾಮಣ್ಣನಿಗೆ ಆಶ್ಚರ್ಯ ವಾಗಿತ್ತು. ಒಂದು ದೃಷ್ಟಿಯಿಂದ, ಸಮಾಜವನ್ನು ಸುಗಮವಾಗಿ ಸಾಗಿಸುವು ದಕ್ಕಾಗಿ ಕಟ್ಟಿಕೊಂಡ ನಿಯಮಗಳ—ಲೌಕಿಕದ—ದೃಷ್ಟಿಯಿಂದ ತಾನು ಮಾಡಿದ್ದು ಅಪರಾಧ, ಪಾಪ; ಆದರೂ ತನ್ನ ಮನಸ್ಸು ಉಲ್ಲಸಿತವಾಗಿದೆ, ತನ್ನ ಬುದ್ಧಿ ಚುರುಕಾಗಿದೆ, ತನ್ನ ದೇಹ ಬಲಗೊಂಡಂತಾಗಿದೆ ! ಯಾಕೆ ? ಕುಮುದಳಲ್ಲಿ ತನ್ನ ಪ್ರೀತಿ ಇರಬಹುದೆ ?

ಈ ಪ್ರಶ್ನೆಕ್ಕೆ ಮರುದಿನ ಬೆಳಗಾದೊಡನೆ ಉತ್ತರ ದೊರೆಯಿತು. ನಿಚ್ಚಳ ವಾದ ಉತ್ತರ, ಕುಮುದಳಲ್ಲಿ ತನ್ನ ಪ್ರೀತಿ ಇಲ್ಲ ಎಂದು. ಯಾಕೆಂದರೆ ಎದ್ದೊಡನೆ ರಾಮಣ್ಣ ಸರಲೆಯ ಕಡೆಗೆಯೆ ಧಾವಿಸಿದ್ದ, ತಾನು ಪ್ರಾರಂಭಿಸಿದ ಪುಸ್ತಕದ ಬಗ್ಗೆ ಉತ್ಸಾಹದಿಂದ ಅವಳಿಗೆ ಹೇಳತೊಡಗಿದ, ಅವಳ ಅಭಿಮಾನ ಪೂರಿತ ದೃಷ್ಟಿ ತನ್ನಲ್ಲಿ ನೆಟ್ಟಾಗ ಜಗತ್ತಿನಲ್ಲಿ ಸರಲೆ ಮತ್ತು ತಾನು ಇಬ್ಬರ ಹೊರತು ಬೇರೆ ಯಾರೂ ಇಲ್ಲ ಎಂಬಂತೆ ಮೈಮರೆತಿದ್ದ. ಇಷ್ಟೇಕೆ ? ಇಡಿಯ ದಿನ ಸರಲೆಯ ಹತ್ತಿರ ಕುಳಿತ, "ಬರೆಯುವುದಿಲ್ಲವೆ ?" ಎಂದು ಕೇಳಿದಾಗ "ರಾತ್ರಿ ಬರೆಯುವೆ" ಎಂದು ಆಕೆಗೆ ಉತ್ತರ ಕೊಟ್ಟಿದ್ದ; "ಆದರೆ ಲಕ್ಷ್ಯ ಇಲ್ಲದೆ ನನ್ನನ್ನ ನೋಡಿಕೋತ ಇಲ್ಲಿ ಯಾಕೆ ಕೂತಿರಿ?" ಎಂದು ಆಕೆ ಹಂಗಿಸಿ ದಾಗ "ಲಕ್ಷ್ಯ ಹೊರಗ ಇಲ್ಲ, ಒಳಗ ಅದ, ಯಾಕಂದ್ರ ನೀನೂ ಒಳಗೆ ಇದ್ದೀ" ಎಂದಿದ್ದ; ಅದಕ್ಕೆ ಆಕೆ "ಸುರುವಾಯ್ತು ಸವಿಮಾತು" ಎಂದು ನಾಚಿ ನುಡಿದಾಗ, "ಸವಿಮಾತಲ್ಲ, ಸರಿಮಾತು. ಹುಚ್ಚೀ, ಒಳಗ ನೀನಿಲ್ಲದೆ ಹೊರಗ ಪುಸ್ತಕಾನೇ ಬರೋದಿಲ್ಲ" ಎನ್ನುತ್ತ ತಟ್ಟನೆ ಅವಳ ಹಣೆಯನ್ನು

ಚುಂಬಿಸಿದ್ದ. ಇದೆಲ್ಲದರಿಂದ ಸರಲೆಯಲ್ಲಿಯೆ ತನ್ನ ಪ್ರೀತಿ ದೃಢವಾಗಿದೆ ಎಂದು ತಿಳಿಯುವಷ್ಟರಲ್ಲಿ ಸಂಶಯಪಿಶಾಚಿಯು ಅವನ ಮೈಯಲ್ಲಿ ಹೊಕ್ಕಿತು. ಸರಲೆಯಲ್ಲಿ ಪ್ರೀತಿ ಎಂಬುದಕ್ಕೆ ನಾನು ಹೀಗೆ ವರ್ತಿಸುತ್ತಿರುವೆನೆ, ಇಲ್ಲವೆ ಸರಲೆಗೆ ಮಾಡಿದ ಅನ್ಯಾಯಕ್ಕಾಗಿ ನಷ್ಟಭರಣವನ್ನು ಕೊಡುತ್ತಿರುವೆನೆ ? ದಿನ ಬೆಳಕು ಕಳೆದಂತೆ ಈ ಸಂಶಯಕ್ಕೆ ಪುಟು ದೊರೆಯಿತು. ಬೆಳಗಿನಿಂದ ಅದು ವರೆಗೆ ಅವನು ಕುಮುದಳ ಕಣ್ಣನ್ನು ತಪ್ಪಿಸಿದ್ದರೂ ಹೊತ್ತು ಕಳೆದಂತೆ ಅವ ಳನ್ನು ನೋಡಬೇಕು ಎಂದೆನ್ನಿಸಿತ್ತು. ಆಗಾಗ ಬೇಕು-ಬೇಡ ಎಂಬ ಎರಡು ಹಗ್ಗಗಳಿಂದ ಬೇರೆಬೇರೆ ಕಡೆ ಎಳೆಯಲ್ಪಟ್ಟುದರಿಂದ ಮೂರನೆಯ ದಾರಿಯನ್ನೆ ಮನಸ್ಸು ಹಿಡಿದಿದೆ ಏನೊ ಎನ್ನುವಂತೆ ಓರೆನೋಟದಿಂದ ಕುಮುದಳನ್ನು ನೋಡುತ್ತಿದ್ದ. ಕೊನೆಗೆ ರಾತ್ರಿಯೂಟವಾದ ಮೇಲೆ ಕೆಲಹೊತ್ತು ಸರಲೆ ಯೊಡನೆ ಮಾತನಾಡಿ ಆಮೇಲೆ "ಇನ್ನು ಮಾತ್ರ ಬರೀಲಿಕ್ಕೆ ಸುರುವು ಮಾಡ್ತೀನಿ" ಎಂದು ಲಗುಬಗೆಯಿಂದ ಎದ್ದು, ಹೊರಬೀಳುವಾಗ ಬಾಗಿಲಿಗೆ ಮುಖ ತಿರುಗಿಸಿ ನಿಂತು "ನಾಳೆ ಹೇಳ್ತೀನಿ ನಿನಗ ಹ್ಯಾಂಗ ನಡೆದದ ಅನ್ನೋದು" ಎಂದು ಸರಲೆಗೆ ಬಾಯಿಯಿಂದ ಹೇಳುವಾಗ ಕಣ್ಗಳು ಎದುರು ಒಳಬಾಗಿಲನ್ನು ನೋಡುತ್ತಿದ್ದುವು; ಆ ಬಾಗಿಲಿಗೆ ತುಸು ಮರೆಯಾಗಿ ನಿಂತ ಕುಮುದಳನ್ನು ನೋಡಿ ನಗೆಯಿಂದ "ನನ್ನ ಕೋಣೆಗೆ ಹೋಗ್ತೀನಿ" ಎಂದಿದ್ದ, ಕುಮುದಳಿಗೆ ಆ ಸಂದೇಶ ಎನ್ನುವ ದೃಷ್ಟಿಯಿಂದ.

ದೇಹ, ಬುದ್ಧಿ ಇವೆರಡರ ತಿಕ್ಕಾಟದಿಂದ ರಾಮಣ್ಣ ಕೆಲವು ದಿನಗಳ ವರೆಗೆ ಗಾಸಿಯಾಗಿದ್ದ. ದೇಹಕ್ಕೆ ಬೇಕೆನ್ನಿಸಿದ್ದು, ಬುದ್ಧಿಗೆ ಬೇಡೆನ್ನಿಸುತ್ತಿತ್ತು; ಆದರೆ ಯಾವಾಗಲೂ ದೇಹದ ಬೇಡಿಕೆ ಸಂತೃಪ್ತವಾದ ತರುವಾಯದಲ್ಲಿಯೆ. ಎಷ್ಟೊ ಸಲ ಬುದ್ಧಿಯು ಬೇಡ ಎಂದು ವಾದಿಸಿದಷ್ಟೂ ದೇಹದ ಹಟ ಹೆಚ್ಚಾ ಗುತ್ತಿತ್ತು. ಆದರೂ ದೇಹ-ಬುದ್ಧಿಗಳು ಪರಸ್ಪರ ವಿರುದ್ಧವಾಗಿ ನಿಂತು ಹೋರಾಡುತ್ತಿವೆ ಎಂದೂ ಹೇಳುವಂತಿರಲಿಲ್ಲ. ಯಾಕೆಂದರೆ, ಪ್ರತಿಯೊಂದು ಸಲ ದೇಹವು ತೃಪ್ತಿವಡೆದು ತಣಿದಂತೆ ಬುದ್ಧಿ ಚುರುಕಾಗುತ್ತಿತ್ತು. ಬರೆಯುವ ಅನುಭವವಿದ್ದ ರಾಮಣ್ಣನಿಗೆ ಇದರಿಂದ ಆಶ್ಚರ್ಯವೆನ್ನಿಸಿದಷ್ಟೆ ಹೆದರಿಕೆಯೂ ಎನ್ನಿಸಿತ್ತು. ಮಾನವನ ಸುಸಂಸ್ಕೃತ ಬುದ್ಧಿಯ ಚಟುವಟಿಕೆಯ ಮೇಲೆ ಈ ರೀತಿ ದೇಹದ ಪ್ರಭಾವವಿರುವುದೆ ? ಈ ಮಾತು ನಿಜವಿದ್ದರೆ ನೈತಿಕ ಸಂಸ್ಕೃತಿ

ಎಂಬುದು ಹುರುಳಿಲ್ಲದ ಆತ್ಮವಂಚನೆಯಾಗುವುದು. ಛಿ ! ಇದು ಸರಿಯಾದ ವಿಚಾರವಲ್ಲ. ಹಸಿವೆ ನೈಸರ್ಗಿಕ ವಾಸನೆ ಎಂದು ಮನುಷ್ಯನು ಸಿಕ್ಕಲ್ಲಿ, ಸಿಕ್ಕಂತೆ, ಸಿಕ್ಕುವುದನ್ನು ತಿನ್ನುವುದಿಲ್ಲವಲ್ಲ ? ಬರಗಾಲದ ಕಾಲಕ್ಕೆ ಮಾತ್ರ ಅಂತಹ ನಡತೆ ಅಲ್ಲಲ್ಲಿ ಘಟಿಸಿದ್ದು ತಿಳಿದುಬರುವುದು. ಎಂದರೆ ? ಕಾಮ ವಾಸನೆಗೂ ಹಾಗೆಯೆ ಇದೆಯೆ ? ಹೆಂಡತಿಯು ಹಾಸಿಗೆ ಹಿಡಿದದ್ದು ತನ್ನ ಪಾಲಿಗೆ ಬರಗಾಲವಾಯಿತೆ ? ಅದಕಾಗಿಯೆ ತಾನು ಅಪವಾದದಂತೆ ನಡೆದು ಕೊಂಡಿರಬಹುದೆ ? ಯಾಕಿರಬಾರದು ? ಪ್ರತಿಯೊಂದು ನೈಸರ್ಗಿಕ ವಾಸ ನೆಗೂ ಸಕಾಲದಲ್ಲಿ ತೃಪ್ತಿ ಇಲ್ಲದಿದ್ದರೆ ಅದು ಮಾನವನನ್ನು ಹೀಗೆಯೆ ಹುಚ್ಚು ಹಿಡಿಸಿ ಕುಣಿಸಬಹುದೆ ?

ತನ್ನ ಜೀವನದಲ್ಲಿ ರಾಮಣ್ಣನು ಈ ದಿಶೆಯಲ್ಲಿ ವಿಚಾರ ಮಾಡಿದ್ದು ಅದೇ ಮೊದಲ ಸಲ, ಅದೇ ಕೊನೆಯ ಸಲ ಎಂದೂ ಹೇಳಬಹುದು. ಈಗಲೂ ಕುಮುದ ಮನೆಯಲ್ಲಿಯೆ ಇದ್ದಾಳೆ, ಸರಲೆಯ ತೊಡಕು ಕೂಡ ಇಲ್ಲ, ಆದರೆ ತನ್ನ ಮನಸ್ಸು ಕುಮುದಳನ್ನು ಬಯಸಲು ಸಿದ್ಧವಿಲ್ಲ. ಇಂದು ಸಿನೆಮಾಕ್ಕೆ ಹೋಗಬೇಕೆಂದು ಆಕೆಯ ಮನಸ್ಸಿನಲ್ಲಿ ತೀವ್ರವಾಗಿ ಇದ್ದಿತೇನೊ ! ಹೋಗ ಲಿಲ್ಲ, ಒಳಿತೆ ಆಯಿತು. ಹೋಗಿದ್ದರೆ, ಆಗಿದ್ದ ಹಿಂದಿನ ಅಂತಹದೆ ನೆನಪು ಮರುಕಳಿಸಿದ್ದರೆ, ತಾನು ಅಲ್ಲಿಂದೆದ್ದು ಓಡಿಹೋಗುತ್ತಿದ್ದ ಎಂದೆನ್ನಿಸಿತು ಅವ ನಿಗೆ. ಕುರ್ಚಿಯಿಂದ ಈಗಲೂ ಎದ್ದ. ಮತ್ತೆ ಅಡ್ಡಾಡತೊಡಗಿದ, ಭಾವ ಪಟಕ್ಕೆ ಇದಿರಾಗಿ ನಿಂತ, ಯಾವುದೊ ಒಂದು ವಿಚಾರದಿಂದ ತಲೆಯನ್ನಲ್ಲಾ ಡಿಸಿದ, ತಿರುಗಿ ಬಂದು ಕುರ್ಚಿಯಲ್ಲಿ ಕುಳಿತು ಏನನ್ನೊ ವಟಗುಟ್ಟಿದ.

ಏನು ತಾನು ವಟಗುಟ್ಟುತ್ತಿರುವುದು ?—ರಾಮಣ್ಣ ತನ್ನನ್ನು ತಾನೇ ನಗೆದನಿಯಲ್ಲಿ ಕೇಳಿಕೊಂಡ. ಆ ವಾಕ್ಯ ಯಾಕೆ ತನ್ನ ಸ್ಮರಣೆಗೆ ಬಂದಿತೊ ! ಓಹೊ ! "ಕಾಮ" ಎಂಬ ಶಬ್ದ ಮನಸ್ಸಿನಲ್ಲಿ ಸುಳಿದಾಡುತ್ತಿರುವುದರಿಂದ ಹೀಗಾಗಿರಬಹುದು....ಅದೇ ವಾಕ್ಯವನ್ನು ಈಗ ಗಟ್ಟಿಯಾಗಿ ಉಚ್ಚರಿಸಿದ; ಸೋಽಕಾಮಯತ । ಬಹು ಸ್ಯಾಂ, ಪ್ರಜಾಯೇಯ ಇತಿ....ಬರೆದವನು ಹೆಸರಿಗೆ ಋಷಿಯಾದರೂ ಬುದ್ಧಿ ಎಂತಹ ಕಿಡಿಗೇಡಿಯಾಗಿದೆ ! ಆದರೂ ಉಪ ನಿಷತ್ಕಾಲದ ಮುದಿಮಹರ್ಷಿ ಹೇಳಿದ ಈ ಮಾತಿನಲ್ಲಿ ಎಂತಹ ಸತ್ಯಾರ್ಥ ಗರ್ಭಿತವಾಗಿದೆ ! ಜಗತ್ತು ಹೇಗೆ ಹುಟ್ಟಿತು ಎಂಬುದನ್ನು ಎಲ್ಲವನ್ನೂ ಬಲ್ಲವ

ನಂತೆ ಎಲ್ಲರಿಗೂ ಗೊತ್ತಿದ್ದುದನ್ನೇ ಹೇಳಿದ ಈ ಗದ್ಯದ ಗಾಂಭೀರ್ಯ ಕಿಡಿಗೇಡಿತನವಲ್ಲದೆ ಮತ್ತೇನು? ಮೊದಲು "ಅದು" ಇದ್ದಿತಂತೆ—ಅಲ್ಲ—"ಸಃ" ಎಂದರೆ "ಅವನು" ಇದ್ದನಂತೆ; ಅವನು "ಕಾಮಿ" ಸಿದನಂತೆ, ನಾನು ಅನೇಕ ಆಗುವೆ, ಹುಟ್ಟಿಸುವೆ, ಎಂದು; ಸೃಷ್ಟಿ ಆಯಿತಂತೆ! ಎಷ್ಟು ಸುಗಮವಾಗಿದೆ ಜಗತ್ತಿನ ಮೂಲ! ಆದರೂ ಇದರಲ್ಲಿ ಹೊಸ ಮಾತು ಯಾವುದು? ಜಗತ್ತಿನಲ್ಲಿ ಸೃಷ್ಟಿಸುವ ಶಕ್ತಿ, ಕಾಮ ಇದೆಯಂತೆ; "ಕಾಮವಾಸನೆ" ಎಂಬ ಶಬ್ದವನ್ನು ಬಳಸಿದರೆ ಅದೇ ಮಾತು ಅಸಹ್ಯವೆನಿಸುವುದು. ಆದರೂ ಉಪನಿಷತ್ತಿನಲ್ಲಿ ಹೇಳಿದ ಕಾಮ ಮತ್ತು ಈ ಕಾಮವಾಸನೆ ಇವೆರಡೂ ಸೃಷ್ಟಿಸುವ ಒಂದೇ ಶಕ್ತಿ ಅಲ್ಲವೆ? ಇದು ಮೂಲಶಕ್ತಿ ಎಂದು ಹೇಳಿ ಮಹರ್ಷಿ ಮಹಾತ್ಮನು ಉಪಕಾರವನ್ನೇ ಮಾಡಿದ್ದಾನೆ. ಆಯಿತು. ಇಂದಿನ ವರೆಗಿನ ತನ್ನ ನಡತೆಗೆ ಉಪನಿಷತ್ತಿನ ಸರ್ಟಿಫಿಕೇಟು ಸಿಕ್ಕಂತಾಯಿತು!

ರಾಮಣ್ಣ ಕುರ್ಚಿಯಿಂದೆದ್ದ, ಮತ್ತೆ ಗಡಿಯಾರವನ್ನು ನೋಡಿಕೊಂಡ. ಹನ್ನೊಂದು ಗಂಟೆಯಾಗಿದೆ! ಎಂತಹ ಹುಚ್ಚ ತಾನು! ಇಷ್ಟೊತ್ತಿನವರೆಗೆ ನಿರರ್ಥಕವಾಗಿ ತಲೆಯನ್ನು ಕೆಡಿಸಿಕೊಂಡಿದ್ದಾನೆ! ತಾನು ಸರಲೆಯನ್ನು ಪ್ರೀತಿಸುವನೊ? ಕುಮುದಳನ್ನೊ? ಯಾರಿಗೆ ಬೇಕಾಗಿದೆ ಉತ್ತರ? ಅದರ ಅಗತ್ಯವಾದರೂ ಏನಿದೆ? ಸರಲೆ ತೀರಿಕೊಂಡು ನಾಲ್ಕು ತಿಂಗಳಾದುವು, ಕುಮುದಳ ಬಗ್ಗೆ ತನಗೆ ಆಸ್ಥೆಯೆ ಇಲ್ಲ. ಇದನ್ನರಿತೂ ವಿಚಾರವನ್ನು ಮಾಡುವುದೆಂದರೇನು? ನಿದ್ದೆ ಬರುವವರೆಗೆ ಒಂದು ಸಂಸ್ಕೃತ ಪುಸ್ತಕವನ್ನಾದರೂ ಓದೋಣ, ಉಪನಿಷತ್ತಿನ ವಾಕ್ಯ ನೆನಪಾಗಿ ಉಪಕಾರವೆ ಆಯಿತು ಎಂದು ಮೇಜಿನ ಬದಿಗಿದ್ದ ಶೆಲ್ಫಿನಿಂದ ಪುಸ್ತಕವೊಂದನ್ನು ಆಯ್ದುಕೊಳ್ಳುವುದರಲ್ಲಿ ತೊಡಗಿದ.

## ೧೦

ಮಲಗುವ ಸಿದ್ಧತೆಯಲ್ಲಿ ಹಾಸಿಗೆಯ ಮೇಲಿನ ಹೊದಿಕೆಯನ್ನು ತೆಗೆಯಬೇಕೆಂದು ಕೈ ಎತ್ತಿದಾಗ ಕೈಗೆ ಕಟ್ಟಿದ ಗಡಿಯಾರದ ಮುಳ್ಳುಗಳು ಕುಮುದಳ ಕಣ್ಣಿನ ಮುಂದೆ ಮಿಂಚಿದುವು; ಹನ್ನೊಂದು ಗಂಟೆಯಾಗಿದೆ! ರಾತ್ರಿಯ ಈ ಸಮಯ ಲಕ್ಷ್ಯಕ್ಕೆ ಬಂದೊಡನೆ ಕುಮುದಳು ಎಲ್ಲವನ್ನೂ ಮರೆತು ಚಿತ್ರದ

ಗೊಂಬೆಯಂತೆ ನಿಂತುಬಿಟ್ಟಳು. ಇದೇ ಸಮಯ; ತಾನು ಎಂದಿಗೂ ಮರೆಯ ಲಾರದ ಸಮಯ. ಕುಮುದ ಉಸುರ್ಗರೆದು ಇದ್ದಕ್ಕಿದ್ದ ಹಾಗೆ ಹಾಸಿಗೆಯ ಮೇಲೆ ಕುಳಿತಳು. ತಾನು ಸರಲಕ್ಕನ ವಿಷಯದಲ್ಲಿ ಪಾಪ ಬುದ್ಧಿಯಿಂದ ಪ್ರೇರಿತಳಾದವಳಲ್ಲ ಎಂದು ಒಂದು ನಿಮಿಷ ಮುಂಚಿತ ನಿರ್ಣಯಿಸಿ ದ್ದಳು. ಆ ನಿರ್ಣಯ ಈಗ ಕುಸಿದುಬಿದ್ದಿತು. ರಾತ್ರಿಯ ಹನ್ನೊಂದು ಗಂಟೆಯ ಸುಮಯವಾಗಿದೆ ಎಂಬುದು ಲಕ್ಷ್ಯಕ್ಕೆ ಬಂದಾಗ ಹಿಂದಿನ ಚಿತ್ರವೊಂದು ಹಠಾತ್ತಾಗಿ ಬಂದು ಕಣ್ಣುಮುಂದೆ ನಿಂತಿತು, ಅವಳ ಮನಸ್ಸಿನಲ್ಲಿ ತನ್ನ ಶುದ್ಧ ಅಂತಃಕರಣದ ಬಗ್ಗೆ ಇದ್ದ ಆತ್ಮವಿಶ್ವಾಸವನ್ನು ಬದಿಗೆ ಸರಿಸಿತು. ರಾತ್ರಿಯ ಹನ್ನೊಂದು ಗಂಟೆ. ಆ ದಿನವೂ ಇದೇ ಸಮಯ ವಾಗಿತ್ತು; ಎರಡು ಮೂರು ದಿನಗಳಾಗಿದ್ದುವು ತಾನು ರಾಮಣ್ಣನ ತೋಳಸೆರೆ ಯಾಳಾಗಿ. ಮೊದಲ ದಿನ ತಾನು ಹೆದರಿದ್ದಳು, ಪ್ರಾರಂಭದ ನೆನಪು ಆ ಹೆದರಿ ಕೆಗೆ ಪುಟುವನ್ನು ಕೊಟ್ಟಿತ್ತು; ಮರುದಿನ ಬೆಳಗಿನಲ್ಲಿ ಎದ್ದೊಡನೆ ತೊಡೆಗಳು ಥರಥರ ನಡುಗಿದ್ದುವು. ಸರಲಕ್ಕನನ್ನು ಎದುರಿಸುವುದು ಹೇಗೆ—ಎಂದೂ ಅಧೈರ್ಯ ಉಂಟಾಗಿತ್ತು. ರಾಮಣ್ಣನು ಈಗ ತನ್ನನ್ನು ಮಾತನಾಡಿಸಬಹುದೆ? ಕತ್ತಲಲ್ಲಿ ಕರುಣಾಳುವಾಗಿ ಕಂಡ ಅವನ ಮುಖ, ನಗೆಯಿಂದ ಮಿಂಚುತ್ತಿದ್ದ ಅವನ ಕಣ್ಗಳು ಬೆಳಗಿನಲ್ಲಿ ಬೇರೆಯಾಗಿ ಕಾಣುವವೆ? ಅವನನ್ನು ತಾನು ಎದುರಿಸುವುದು ಶಕ್ಯವೆ? ಎಂದು ಏನೇನೊ ಯೋಚಿಸುತ್ತ ದಿನನಿತ್ಯದ ಕೆಲಸ ದಲ್ಲಿ ತೊಡಗಿದ್ದಳು. ಆದರೆ ಸರಲಕ್ಕನೂ ರಾಮಣ್ಣನೂ ಎಂದಿನಂತೆಯೆ ಕಂಡ ರೆಂಬುದು ಆಕೆಗೆ ಆಶ್ಚರ್ಯವನ್ನುಂಟುಮಾಡಿದ್ದಿತು. ಎರಡನೆಯ ರಾತ್ರಿ ರಾಮಣ್ಣ ಮತ್ತೆ ಬಂದಿದ್ದ, ಆಗಲೂ ಅವನೊಡನೆ ಮಾತನಾಡುವ ಧೈರ್ಯ ವಾಗಿರಲಿಲ್ಲ; ಮೂರನೆಯ ರಾತ್ರಿ ಮಾತ್ರ—ಎಲ್ಲಿಂದ ಧೈರ್ಯ ಬಂದಿತೊ ತನಗೆ!—ರಾಮಣ್ಣನ ಬರವನ್ನು ನಿರೀಕ್ಷಿಸುತ್ತಲೆ ಕುಳಿತಿದ್ದಳು. ರಾಮಣ್ಣ ಬಂದವನೆ "ಸ್ಫೂರ್ತಿದೇವಿಯ ಕೃಪಾದೃಷ್ಟಿ ತೆರೆದು ನಿಂತಿದೆಯಲ್ಲ?" ಎಂದಿದ್ದ.

ಮಾತನಾಡಲು ಮನಸ್ಸಾದರೂ ಧೈರ್ಯಸಾಲದೆ ತಾನು ತಲೆಯ ನ್ನಲ್ಲಾಡಿಸಿದ್ದಳು.

"ಇದೇನು? ಓಹೊ! ತೆರೆದಿಟ್ಟ ನಿನ್ನ ಕಣ್ಗಳು ನಿನಗೇ ಕಾಣಿಸುವು ದಿಲ್ಲ, ಅಲ್ಲವೆ?" ಎಂದಿದ್ದ.

ಈ ಸಲ ಬಂದ ನಗೆಯನ್ನು ತಡೆಯುತ್ತ ತಲೆಯನ್ನಲ್ಲಾಡಿಸಿದ್ದಳು.

ರಾಮಣ್ಣ ಬಂದವನೆ ತನ್ನ ತಲೆಯನ್ನು ಗಟ್ಟಿಯಾಗಿ ಹಿಡಿದು, "ತಲೆ ಅಲ್ಲಾಡಿಸಲಿಕ್ಕೆ ಅಶಕ್ಯ ಆದ ಮ್ಯಾಲಾದರೂ ಬಾಯಿಯನ್ನ ತೆರೆದೀಯೊ ಇಲ್ಲೊ ? ಉಂ ?" ಎಂದು ಮುಖಕ್ಕೆ ಮುಖ ಹತ್ತಿರದಲ್ಲಿರಿಸಿ ಕೇಳಿದ್ದ.

"ನಿಂ ಮುಂದ ಮಾತಾಡೋ ಯೋಗ್ಯತಾ ನನಗ—" ಇದೇ ಅವಳ ಮೊದಲ ಮಾತು. ಅದೂ ವಾಕ್ಯ ಮುಗಿದಿರಲಿಲ್ಲ.

"ಬಾಯಿಯಿಂದ ನುಡಿದರೇನೇ ಮಾತಾಡಿಧಾಂಗ ಅಂತ ತಿಳಿದೀ ಏನು ನೀನು ?"

"ಅಂದ್ರೆ ?"

"ಅಂದ್ರೇನು ? ಈ ನಾಲ್ಕು ದಿವಸದೊಳಗ ನನ್ನಕಿಂತ ಹೆಚ್ಚು ನೀನೆ ಮಾತಾಡೀದಿ !" ಎಂದಿದ್ದ ರಾಮಣ್ಣ.

"ನನಗ ತಿಳಿಯೋದೇ ಇಲ್ಲ."

"ಅಬ್ಬ ! ತಿಳಿಯೋದಿಲ್ಲ ಅಂದಾಗ ಇಷ್ಟು ಮಾತಾಡಿದವಳು ತಿಳಿದ ಮ್ಯಾಲೆ ಎಷ್ಟು ಮಾತಾಡಬಹುದು !" ಕುಮುದಳಿಗೆ ಹೆದರಿಕೆಯಾಗಿತ್ತು. ತಾನೇನಾದರೂ ಕನಸಿನಲ್ಲಿ ಬಡಬಡಿಸಿರಬಹುದೆ—ಎಂದು.

"ಕನಸಿನಲ್ಲಿ ನಾನು ಏನಾದರೂ—" ಎಂದು ತಾನು ನುಡಿವಷ್ಟರಲ್ಲಿ ರಾಮಣ್ಣ ನಕ್ಕುಬಿಟ್ಟಿದ್ದ.

"ಹುಚ್ಚಿ ! ಕನಸಿನಲ್ಲಿ-ಅಂತೆ ! ಒಂದು ದೃಷ್ಟಿಯಿಂದ ಅದು ನನಗ ಕನಸು ಎನ್ನಿಸಬೇಕು. ನೀನು ಮಾತ್ರ ಎಚ್ಚರವಾಗಿಯೆ ಇದ್ದಿ. ಇಷ್ಟ್ಯಾಕೆ ಹೆದರಿ ನೋಡುವೆ ನನ್ನ ? ಅದಕ್ಕೇ ಹೇಳಲಿಲ್ಲವೇನು, ಬಾಯಿಯಿಂದ ನುಡಿದರೇನೆ ಮಾತಾಡಿಧಾಂಗ ಅಲ್ಲ ಅಂತ. ನೀನು ಇಟ್ಟ ಒಂದೊಂದು ಹೆಜ್ಜೆ ಮಾತಾಡತಿತ್ತು, ನೀನು ಬೀರಿದ ಒಂದೊಂದು ನೋಟ ಮಾತಾಡತಿತ್ತು, ನಿನ್ನ ಅರೆದೆರೆದ ತುಟಿಗಳೇ ಮಾತಾಡುತ್ತಿದ್ದುವು, ಇಷ್ಟು ಯಾಕೆ ? ನಿನ್ನ ಮೌನ ಕೂಡ ವಾಚಾಳಿಯಾಗಿತ್ತು. ಅವುಗಳೆಲ್ಲದರ ಮಾತನ್ನು ಕೇಳಿಯೆ ಅಲ್ಲವೆ ನಾನು ಹೀಗೆ ಹುಚ್ಚನಾದದ್ದು ? ಅಂ ? ಹೇಳೆ ! ಈಗ ಮಾತಾಡು—ಬಾಯಿಯಿಂದಲ್ಲ ಮತ್ತೆ" ಎನ್ನುತ್ತ ತನ್ನ ಬಾಯಿಯಿಂದ ಕುಮುದಳ ಬಾಯಿಗೆ ಸ್ನೇಹರಸದ ಬೀಗವನ್ನು ಹಾಕಿದ್ದ. ಆ ರಾತ್ರಿ ಕತ್ತಲಲ್ಲಿ ತಾವಿಬ್ಬರೆ ಮಲಗಿ

ದಾಗ ಮೆತ್ತನ್ನ ದನಿಯಲ್ಲಿ ರಾಮಣ್ಣ, ಎಂತಹ ಏಕಾಂತದ ಮಾತುಗಳನ್ನು ಹೇಳಿದ್ದ ! "ನೀನು ನನ್ನ ಸ್ಫೂರ್ತಿದೇವಿ. ಸುಳ್ಳಲ್ಲ, ಬೇಕಾದರೆ ನನ್ನ ಕೋಣೆಗೆ ಬಂದು ನೋಡು, ನಿನ್ನ ಸಹವಾಸದಿಂದ ಪ್ರೇರಿತನಾಗಿ ನಾನು ಹೊಸ ಪುಸ್ತಕವನ್ನು ಪ್ರಾರಂಭಿಸಿದ್ದೇನೆ....ಆಂ ?....ಹುಚ್ಚಿ ನೀನು ! ಒಂದು ರಾತ್ರಿ ನಿನ್ನನ್ನು ಕಾಣದಿದ್ದರೆ ನನ್ನ ಲೇಖನಿ ಕುಂಠಿತವಾಗುವುದು....ನಿನ್ನಿಂದ ಹೊಸ ಚೈತನ್ಯ ಬಂದಿದೆ ನನ್ನಲ್ಲಿ....ನನ್ನ ಸಾಹಿತ್ಯಜೀವನದ ಉಸಿರು ನೀನು...." ಎಂದು ಏನೇನೊ ನುಡಿದಿದ್ದ. ಆ ಮಾತಿನಿಂದ ತಾನೂ ಮೈಮರೆತಿದ್ದಳು. ಅಂದು ತಾನಾಗಿಯೆ ರಾಮಣ್ಣನನ್ನು ಬಿಗಿದಪ್ಪಿದಳು, ತನ್ನನ್ನು ಬಿಟ್ಟು ಹೋಗಬಹುದು ಎಂಬ ಭೀತಿ ಇದ್ದಿತೇನೊ ಎನ್ನುವಂತೆ. ಇದೆಲ್ಲ ಹೀಗೆ ನಡೆದದ್ದರಿಂದಲೆ ಮರುದಿನ ಆಕೆಗೆ ಆಶ್ಚರ್ಯವಾಗಿತ್ತು. ರಾಮಣ್ಣನು ಇನ್ನೂ ಬಂದಿರಲಿಲ್ಲ, ಕೈಗಡಿಯಾರವನ್ನು ನೋಡಿದ್ದಳು, ಸರಿಯಾಗಿ ರಾತ್ರಿಯ ಹನ್ನೊಂದು ಗಂಟೆಯಾಗಿತ್ತು ! ಇಷ್ಟು ತಡ ! ದಿನಾಲು ಇದಕ್ಕೂ ಮುಂಚಿತ ಬರಬೇಕಾಗಿದ್ದ ರಾಮಣ್ಣ ಇನ್ನೂ ಬರಲಿಲ್ಲವಲ್ಲ ! ನಿರೀಕ್ಷಣೆಯೂ ಅಸಹ್ಯವಾಯಿತು. ಒಂದು ನಿಮಿಷ ಉಸಿರನ್ನು ತಡೆದವಳಂತೆ ಸ್ತಬ್ಧಳಾಗಿ ಲಕ್ಷ್ಯಗೊಟ್ಟು ಕೇಳಿದ್ದಳು. ಎಲ್ಲಿಂದಲೊ ಗುಜುಗುಜು ಮಾತನಾಡಿದಂತೆ ಸದ್ದು ಕೇಳಬರುತ್ತಿದೆ ! ಇಷ್ಟೊತ್ತಿನಲ್ಲಿ ಯಾರು ಮಾತನಾಡುವವರು ? ಸರಲಕ್ಕನಂತೂ ಒಂಬತ್ತು ಗಂಟೆಗೆ ಮಲಗುವಳು. ಹಾಂ—ರಾಮಣ್ಣನೆ ಏನನ್ನೊ ಓದುತ್ತ ಕುಳಿತಿರಬೇಕು ! ಆ ಭರದಲ್ಲಿ ತನ್ನೆಡೆ ಬರುವುದನ್ನು ಮರೆತಿರಬೇಕು ! ಆಗ ಕುಮುದ ಕಿಡಿಗೇಡಿತನವನ್ನು ಮಾಡಲಿದ್ದ ಹುಡುಗನಂತೆ ಮುಗುಳ್ನಗೆಯನ್ನು ನಕ್ಕಿದ್ದಳು. ಇಷ್ಟೊಂದು ಎಲ್ಲವನ್ನೂ—ತನ್ನನ್ನೂ—ಮರೆತು ರಾಮಣ್ಣನು ಓದುತ್ತಿರುವನಲ್ಲವೆ ? ಮೆಲ್ಲಗೆ ನಡೆದು ಹೋಗಬೇಕು. "ನನಗೆ ಸ್ಫೂರ್ತಿದೇವಿ ಎಂದು ಕೊಟ್ಟ ಸರ್ಟಿಫಿಕೇಟನ್ನು ನೋಡಲು ಬಂದಿದ್ದೇನೆ. ನೀವೇ ಹೇಳಿದ್ದಿಲ್ಲವೆ ಕೋಣೆಗೆ ಬಂದು ನೋಡು ಎಂದು—" ಎಂದು ಹೇಳಿದರಾಯಿತು. ತನ್ನನ್ನು ನೋಡಿ ರಾಮಣ್ಣನು ಬೆಚ್ಚಿಬೀಳಬಹುದಾದ ಚಿತ್ರವನ್ನು ಕಲ್ಪಿಸಿಕೊಂಡು ಕುಮುದ ಒಳಗಿಂದೊಳಗೆಯೆ ನಕ್ಕಿದ್ದಳು. ಮೆಲ್ಲಗೆ ಹಾಸಿಗೆಯಿಂದೆದ್ದು, ಸದ್ದುಮಾಡದೆ ರಾಮಣ್ಣನ ಕೋಣೆಯ ಬಾಗಿಲಿಗೆ ಬಂದಳು, ಸಿಡಿಲು ಬಡೆದವರಂತೆ ಅವಾಕ್ಕಾಗಿ ನಿಂತಳು. ಕೋಣೆಯ

ಬಾಗಿಲು ಮುಚ್ಚಿತ್ತು, ಒಳಗೆ ದೀಪವೂ ಇದ್ದಿರಲಿಲ್ಲ. ಇದರಿಂದ ಎಷ್ಟು ನಿರಾಶೆಯಾಗಿತ್ತೊ ಅದರ ಎರಡಷ್ಟು ಅಸಹನೆಯು ಕೋಪ ಬಂದಿತ್ತು ಆಕೆಗೆ ಇನ್ನೊಂದನ್ನು ನೋಡಿ. ಅದೆಂದರೆ, ಗುಜುಗುಜು ಮಾತನಾಡುವ ಸದ್ದು ಸರ ಲಕ್ಕನ ಕೋಣೆಯಿಂದ ಕೇಳಬರುತ್ತಿದೆ, ಆ ಬಾಗಿಲೂ ಅರ್ಧ ತೆರೆದಿದೆ, ಒಳಗೆ ದೀಪ ಢಾಳವಾಗಿ ಉರಿಯುತ್ತಿದೆ ! ಅದನ್ನು ನೋಡಿ ಅಂದು ತನಗೆ ಕೋಪ ಬಂದದ್ದು ನಿಜ. ಬಿರಬಿರನೆ ಕೋಣೆಗೆ ಹೋಗಿ, ಬಾಗಿಲಿಗೆ ಒಳ ಕೊಂಡಿಯನ್ನು ಹಾಕಿ ದೀಪವನ್ನು ಆರಿಸಿ ಸತ್ತಂತೆ ಮಲಗಿಕೊಂಡು ಬಿಡ ಬೇಕು ಎಂದೆನ್ನಿಸಿತ್ತು. ಮರುಗಳಿಗೆಯಲ್ಲಿ ಯಾವುದೊ ಒಂದು ತಡೆಯದ ಕುತೂಹಲವು ಅವಳನ್ನು ಸರಲಕ್ಕನ ಕೋಣೆಯ ಬಾಗಿಲವರೆಗೆ ಎಳೆದೊ ಯ್ದಿತ್ತು. "ರಾಮಣ್ಣ ಸರಲಕ್ಕನೊಡನೆ ಮಾತನಾಡುತ್ತ ತನ್ನನ್ನು ಮರೆತಿ ದ್ದಾನೆ" ಎಂದು ಒಮ್ಮೆ, ರಾಮಣ್ಣ ತನ್ನ ಹೆಂಡತಿಯೊಡನೆ ಮಾತನಾಡುತ್ತಿ ದ್ದಾನೆ ಎಂದು ಇನ್ನೊಮ್ಮೆ ತನಗೆ ತಾನೇ ಹೇಳಿಕೊಳ್ಳುತ್ತ ಕುಮುದ ಅನು ಮಾನಿಸುತ್ತ ಬಾಗಿಲಿಗೆ ನಿಂತಾಗ "ಅಷ್ಟಾದರೆ ನಾ ಸುಖದಿಂದ ಕಣ್ಮುಚ್ತೀನಿ" ಎಂಬ ಸರಲಕ್ಕನ ಮಾತು ಕೇಳಬಂದಿತ್ತು. ಕುಮುದ ಮೊದಲು ಗಾಬರಿ ಯಾಗಿದ್ದಳು; ಇದೇನು ಅಕ್ಕನ ಕೊನೆಯ ಗಳಿಗೆಯೆ ಎಂಬ ಹೆದರಿಕೆಯಿಂದ ಕೋಣೆಯಲ್ಲಿಯೆ ನುಗ್ಗಿಬಿಡುವವಳಿದ್ದಳು. ಅಷ್ಟರಲ್ಲಿ ರಾಮಣ್ಣನ ಮಾತು ಕೇಳಿಸಿತ್ತು, "ಈಗ ಇದ್ದುದರ ಮುಂದೆ ನನಗ ಬೇರೆ ಯಾವ ಸುಖಾನೂ ಇಲ್ಲ" ಎಂದು. ಈಗ ಮಾತ್ರ ಕುಮುದಳಿಗೆ ತಡೆಯಲು ಅಶಕ್ಯವಾಗಿತ್ತು. ಮೆಲ್ಲನೆ ಹಣಿಕಿಕ್ಕಿ ನೋಡಿದ್ದಳು, ಒಂದು ನಿಮಿಷ ಮಾತ್ರ. ಆ ನಿಮಿಷದಲ್ಲಿ ಆಕೆಗೆ ಕಾಣಿಸಿದ ದೃಶ್ಯ ಅವಳನ್ನು ಅಲ್ಲಿಂದ ಬಲವಾದ ಬಿರುಗಾಳಿಯಂತೆ ಎತ್ತಿ ತನ್ನ ಕೋಣೆಯಲ್ಲಿ ಹಾಸಿಗೆಯ ಮೇಲೆ ಒಯ್ದೊಗೆದಿತ್ತು....

ಕುಮುದ ಮತ್ತೆ ಕೈಗಡಿಯಾರವನ್ನು ನೋಡಿಕೊಂಡು ಉಸುರ್ಗರೆದು ಎದ್ದಳು. ಇನ್ನು ಗಟ್ಟಿ ಮನಸ್ಸು ಮಾಡಿ ಮಲಗಿದ್ದರೆ ಆ ಹಿಂದಿನ ನೆನಪು ತನ್ನನ್ನು ಪೀಡಿಸದೆ ಬಿಡುವಂತಿಲ್ಲ ಎಂಬುದು ಆಕೆಗೆ ತಿಳಿದಿತ್ತು. ಆ ನೆನಪು ಎಂದರೆ ನಿಜವಾಗಿಯೆ ಪೀಡೆಯಾಗಿತ್ತು, ಅದರಲ್ಲೂ ಸರಲಕ್ಕ ತೀರಿಕೊಂಡಂದಿ ನಿಂದ ಅದೊಂದು ಭಯಾನಕ ಅನುಭವವೆನ್ನಿಸುತ್ತಿತ್ತು. ಆ ದಿನ ತಾನು ಎಂತಹ ಅನ್ಯಾಯವನ್ನು ಮಾಡಿದ್ದಳಲ್ಲ? ತನಗೆ ಒಂದು ನಿಮಿಷದಲ್ಲಿ ಕಂಡ

ದೃಶ್ಯ ಯಾವುದು ? ಅದೂ ಹೋಗಲಿ, ಅಂತಹ ಕುತ್ಸಿತ ಕುತೂಹಲವಾದರೂ ಯಾಕೆ ಬೇಕಿತ್ತು ? ಪಾಪ ! ತಿಂಗಳುಗಟ್ಟಲೆಯಾಗಿ ಹಾಸಿಗೆ ಹಿಡಿದ ಸರಲಕ್ಕ; ಆಕೆಯ ಮನಸ್ತಾಪ ಎಷ್ಟಿರಬಹುದು ! ಅಂತಹ ಒಂದು ಸಂದರ್ಭದಲ್ಲಿ ಗಂಡ ಆಕೆಯನ್ನು ಸಂತೈಸಿದರೆ ತಪ್ಪೇನು ? ಅದು ತಪ್ಪು, ಎನ್ನಲು ಇನ್ನೊಬ್ಬರಿಗೆ ಅಧಿಕಾರವಿದೆಯೆ? ಇಷ್ಟಾದರೂ ತಾನು ಕಂಡದ್ದೇನು? ಗಂಡನ ತೊಡೆಯ ಮೇಲೆ ತಲೆಯನ್ನಿಟ್ಟು ಪ್ರೇಮರಸಗಳಿಂದ ಮಿಂಚುವ ಕಣ್ಣಳ ಮುಖವನ್ನು ಮೇಲೆತ್ತಿ ಗಂಡನ ಮುಖವನ್ನು ನೋಡುತ್ತ ಸರಲಕ್ಕ ಮಲಗಿದ್ದಾಳೆ. ಗಂಡನು ಒಂದು ಕೈಯನ್ನು ಅವಳ ತಲೆಗೂದಲ ಮೇಲಾಡಿಸುತ್ತ ಇನ್ನೊಂದು ಕೈಯಿಂದ ಹೆಂಡತಿಯ ಕೈಯನ್ನೆತ್ತಿ ತನ್ನ ಗಲ್ಲಕ್ಕೆ ಇಟ್ಟುಕೊಂಡಿದ್ದಾನೆ, ನಗೆಮೊಗದಿಂದ ಹೆಂಡತಿಯ ಮುಖವನ್ನು ನೋಡುತ್ತಿದ್ದಾನೆ. ಇಷ್ಟೆ ತಾನು ಕಂಡ ದೃಶ್ಯ.

ಆದರೆ ಅಂದು ಮಾತ್ರ ಆ ದೃಶ್ಯ ಅವಳಿಗೆ ಬೆಂಕಿಯಂತೆ ಕಂಡಿತ್ತು. ತುಂಬಿದ ವಿಚಾರಗಳಿಂದ ತುಳುಕಿ ಸ್ಫುರಿಸುವಂತೆ ಅವಳ ಹೃದಯವು ಬಡೆದುಕೊಳ್ಳುತ್ತಿದ್ದಿತು. ಒಂದನ್ನೊಂದು ನೂಕನುಗ್ಗಲಾಟವಾಡುತ್ತ •ವಿಚಾರಗಳು ಹೃದಯದಿಂದ ಪುಟಿದೇಳುತ್ತಿದ್ದುವು. ಇದ್ದುದರ ಮುಂದ ಬೇರೆ ಸುಖಾನೇ ಇಲ್ಲ ಅಂತ ! ಅವನನ್ನ ಇನ್ನೊಮ್ಮೆ ಕೋಣೆಯೊಳಗ ಕಾಲಿಡಗೊಡಬಾರದು. ಅವನ ಕೈ ತನ್ನ ಮೈಯನ್ನು ಇನ್ನೆಂದಿಗೂ ಮುಟ್ಟಬಾರದು. ಹ್ಯಾಂಗ ನೋಡತಿದ್ದುವು ಆ ಕಣ್ಣು ! ಎದೆಯೊಳಗ ಶೂಲ ಚುಚ್ಚಿಧಾಂಗ ಆಗಿತ್ತು. ಮೋಸಗಾರ ! ಕಪಟಿ ! ತಾನಿಲ್ಲಿ ಹಾದೀ ಕಾಯತಾ ಕಣ್ಣಿಗೆ ಕಣ್ಣೆವೆ ಬಡೀತಾ ಕೂತಾಳ ! ಅಂಥಾದ್ದೇನು ಏಕಾಂತೊ ಹಾಸಿಗೆ ಹಿಡಿದ ಹೆಂಡತೀ ಜೋಡಿ ! ಇನ್ನೊಮ್ಮೆ—ಎಂದೆಂದಿಗೂ—ಸಾಯೋತನಕಾ— ಕಣ್ಣೆತ್ತಿ ನೋಡಬಾರದು ಅವನನ್ನು, ತುಟಿ ಬಿಚ್ಚಿ ಮಾತಾಡಬಾರದು ಅವನ ಕೂಡ. ಬಂದಾದರೂ ಬರಲಿ ! ಸಿಟ್ಟಿನ ವಿಚಾರಭರದಲ್ಲಿ ಕುಮುದಳ ಲಕ್ಷ್ಯಕ್ಕೆ ಬಂದಿತ್ತು, ತಾನು ತನ್ನ ಕೋಣೆಯ ಬಾಗಿಲದ ಒಳಕೊಂಡಿಯನ್ನು ಹಾಕಿಕೊಂಡಿದ್ದಳೆಂಬುದು. ಹಾಗಾದರೆ ಅವನು ಬರುವುದು ಹೇಗೆ ? ಅವನು ಬರಲು ಅವಕಾಶವಿಲ್ಲದಿದ್ದರೆ ತನ್ನ ಮನಸ್ಸಿನೊಳಗಿನ ಮಾತುಗಳನ್ನು ಅವನಿಗೆ ಆಡಿ ತೋರಿಸುವುದು ಹೇಗೆ ? ಒಂದುವೇಳೆ ಬಾಗಿಲು ಮುಚ್ಚಿದ್ದನ್ನು ನೋಡಿ, "ಒಳ್ಳೆಯದೆ ಆಯಿತು " ಎಂದುಕೊಂಡು ಹೊರಗಿಂದ್ಹೊರಗೆಯೆ ಹೋಗಿಬಿಡಬಹು

ದಲ್ಲ ? ಅವನಿಗೆ ಅಂತಹ ಅವಕಾಶವನ್ನೆ ಕೊಡಬಾರದು. ಇಲ್ಲಿಯವರೆಗೂ ಅವನು ನಡೆದು ಬರಲಿ, ನಾನು ಮಲಗಿದ್ದನ್ನು ಕಣ್ಣಾರೆ ಕಾಣಲಿ, ಆಗ ನನ್ನ ಹತ್ತಿರ ಬರಲಿ, ನೋಡೋಣ—ಎಂದುಕೊಂಡು ಕುಮುದಳು ಎದ್ದು ಕೊಂಡಿ ಯನ್ನಷ್ಟೆ ಅಲ್ಲ, ಬಾಗಿಲನ್ನೂ ತೆರೆದಿಟ್ಟು ದೀಪವನ್ನು ಹಚ್ಚಿಟ್ಟು, ಹಾಸಿಗೆಯ ಮೇಲೆ ಮಲಗಿಕೊಂಡಿದ್ದಳು. "ಹಾಸಿಗೆ ಬಿಟ್ಟು ಏಳಲಾರದ ಹೆಂಡತಿ ! ಯಾರ ಹೆದರಿಕೆ ?" ಎಂದು ಕುದಿಯುತ್ತಿದ್ದ ಸಂತಾಪದಿಂದ ಹೇಳಿಕೊಂಡಿ ದ್ದಳು.

ಕುಮುದಳು ಧುಸುಮುಸುಗೊಂಡು ಹಾಗೆಯೆ ಎಷ್ಟೊತ್ತು ಮಲಗಿ ಕೊಂಡಿದ್ದಳೊ ! ಈಗ ಬರುವ, ಇನ್ನೊಂದು ಕ್ಷಣದಲ್ಲಿ ಬರುವ, ಬಂದರೆ ನಾನು ಮುಖವನ್ನು ಕೂಡ ಆಕಡೆ ತಿರುಗಿಸುವುದಿಲ್ಲ ಎಂದು ಹಟದಿಂದ ಹೇಳಿ ಕೊಳ್ಳುತ್ತ ಮುಖ ತಿರುಗಿಸಿ ಮಲಗಿಕೊಳ್ಳುತ್ತಿದ್ದಳು. ಇನ್ನೂ ರಾಮಣ್ಣ ಬರಲಿಲ್ಲ ಎಂದೊಡನೆ ಮತ್ತೆ ಬಾಗಿಲ ಕಡೆ ಮುಖ ತಿರುಗಿಸಿ ನಿರೀಕ್ಷೆಯ ದೃಷ್ಟಿಯಿಂದ ಕಣ್ಣುಗಳನ್ನು ತೆರೆದು ಮಲಗಿಕೊಳ್ಳುತ್ತಿದ್ದಳು.

ಆ ರಾತ್ರಿಯ ತನ್ನ ನಡತೆಗಾಗಿ ಕುಮುದಳಿಗೆ ಮೊದಲು ಆಶ್ಚರ್ಯವೆನ್ನಿ ಸಿತ್ತು. ತನಗೆ ಎಂತಹ ರಭಸದಿಂದ ಸಿಟ್ಟುಬಂದಿತ್ತು! ತಾನು ಎಷ್ಟು ಗಟ್ಟಿಯಾಗಿ ನಿಶ್ಚಯಿಸಿಕೊಂಡಿದ್ದಳು ! ಆದರೇನು ? ಕೊನೆಗೆ ರಾಮಣ್ಣ ಬಂದಾಗ ಮನ ಸ್ಸಿನಲ್ಲಿ ಮಾಡಿಕೊಂಡಂತೆ ಯಾವುದೂ ನಡೆದಿರಲಿಲ್ಲ. ಅದಕಾಗಿ ರಾಮಣ್ಣನ ಮೇಲೂ ಆಕೆಯ ಸಿಟ್ಟು ಇದ್ದಿತು. ರಾಮಣ್ಣ ಬರುವ, ಬಂದೊಡನೆ ತನ್ನನ್ನು ಮಾತನಾಡಿಸುವ, ತಡವಾದುದಕ್ಕೆ ತಾನು ಸಿಟ್ಟಾದುದನ್ನು ಕಂಡು ನೆವವನ್ನು ಹೇಳತೊಡಗುವ, ಆಗ ತಾನು ಮೌನದಿಂದ ತಿರುಗಿಸಿದ ಮುಖದಿಂದ, ಕೊನೆಗೆ ಚುಚ್ಚು ಮಾತುಗಳಿಂದ ಅವನ ಮನಸ್ಸನ್ನು ಹಣ್ಣಾಗುವಂತೆ ನೋಯಿಸ ಬೇಕು ಎಂದು ಎಣಿಕೆ ಹಾಕಿ, ಸಿದ್ಧತೆ ಮಾಡಿಕೊಂಡು ತಾನು ಮಲಗಿದ್ದಳು. ಆದರೆ ರಾಮಣ್ಣ ಬಂದವನೆ ಮೊದಲು ಬಾಗಿಲನ್ನು ಮುಚ್ಚಿ ದೀಪವನ್ನ ಆರಿಸಿಬಿಟ್ಟ. ಕುಮುದಳ ಒಂದು ಶಸ್ತ್ರವೆ ಕಳಚಿ ಬಿದ್ದಂತಾಯಿತು. ಯಾಕೆಂ ದರೆ ಕತ್ತಲಲ್ಲಿ ಮಾತನಾಡದೆ ತನ್ನ ಸಿಟ್ಟನ್ನು ತೋರಿಸುವುದು ಹೇಗೆ ? ಅದ ಕಾಗಿ ಮುಖ ತಿರುಗಿಸಿ ಮಲಗಿಕೊಂಡು ಅವನು ಮಾತನಾಡುವ ದಾರಿಯನ್ನು ಕಾಯ್ದಳು. ಏನೊ ಅವನು ಉಸುರ್ಗರೆದಂತೆ ಕೇಳಬಂದಿತು. ಆಹಾ !

ಏನಾದರೂ ಠಕ್ಕತನದ ಆಟವಿರಬಹುದು, ನಾನು ಮೆತ್ತಗಾಗುವುದು ಬೇಡ ಎಂದು ಗಟ್ಟಿಯಾಗಿ—ಕತ್ತಲಿದ್ದರೂ ಕಣ್ಣುಗಳನ್ನು ಮುಚ್ಚಿದಳು. ರಾಮಣ್ಣ ಒಂದೆರಡು ನಿಮಿಷಗಳಲ್ಲಿ ಹತ್ತಿರ ಬಂದು ಮಲಗಿಕೊಂಡ; ತುಸು ದೂರ ಸರಿದಳು. ಕೈಯನ್ನು ಅವಳ ಮೈಮೇಲೆ ಒಗೆದು ಬಲವಾಗಿ ಅವಳನ್ನು ಹತ್ತಿರ ಎಳೆದುಕೊಂಡ. ಮನಸ್ಸಿಗೆ ಸುಖವೆನ್ನಿಸಿದರೂ ಕತ್ತಲಲ್ಲಿ ಅವನಿಗೆ ಕಾಣುವುದಿಲ್ಲ, ಒಳಿತೇ ಆಯಿತು ಎಂದು ಇನ್ನೂ ರಾಮಣ್ಣನ ಕಡೆ ಮುಖ ತಿರುಗಿಸಿರಲಿಲ್ಲ. ಒಮ್ಮೆ ಮಾತನಾಡಲಿ ಆಮೇಲೆ ನೋಡೋಣ ಎಂದುಕೊಂಡಿದ್ದಳು. ಆದರೆ ರಾಮಣ್ಣ ಮಾತನ್ನೆ ಆಡಿರಲಿಲ್ಲ; ನುರಿತ ಕೈಗಳನ್ನು ಅವಳ ಅಂಗಾಂಗಗಳ ಮೇಲೆ ಆಡಿಸುತ್ತ, ಹಾವುಗಾರನು ಹಾವನ್ನು ತನಗೆ ಇಷ್ಟವಿದ್ದ ಕಡೆ ತಿರುಗಿಸಿಕೊಳ್ಳುವಂತೆ, ಕುಮುದಳ ದೇಹವನ್ನು ತನ್ನ ವಶಪಡಿಸಿಕೊಂಡಿದ್ದ. ಅಂಗೈಯಲ್ಲಿಟ್ಟ ಬರ್ಫದ ಕರಣಿಯಂತೆ ರಾಮಣ್ಣನ ಕೈಗೆ ಸಿಕ್ಕ ಅವಳ ದೇಹ ಕರಗಿ ನೀರಾಯಿತು; ದೇಹದ ಆಶ್ರಯ ತಪ್ಪಿದ್ದಕ್ಕೇನೊ ಎನ್ನುವಂತೆ ಅವಳ ಹೃದಯ ರಾಮಣ್ಣನ ಹೃದಯದ ಮರೆ ಹೊಕ್ಕಿತು; ತಾರುಣ್ಯದ ನೈಸರ್ಗಿಕ ಅಪೇಕ್ಷೆಯ ಎದುರು ಕೃತಕ ಕೋಪವು ಹೇಳಹೆಸರಿಲ್ಲದಂತೆ ಮಾಯವಾಗಿತ್ತು. ಒಂದು ನಿಮಿಷ ಹಿಂದಿನ ಜನ್ಮಜನ್ಮಾಂತರಗಳ ಅನುಭವಗಳೆಲ್ಲ ಮರೆತು ಹೋದಂತೆ ಸದ್ಯದ ಸುಖದಲ್ಲಿ ತನ್ಮಯಳಾಗಿದ್ದಳು; ಇನ್ನೊಂದು ನಿಮಿಷ, ಚಿರಂತನ ಸುಖ ದೊರೆಯಿತೆಂಬಂತೆ ಸದ್ಯವನ್ನು ಮರೆತು ಸುಖದ ಉದ್ಗಾರವನ್ನು ಬಾಯಿಯಿಂದ ಉಸಿರಿದ್ದಳು; ಮತ್ತೊಂದು ನಿಮಿಷದಲ್ಲಿ, ಇಡಿಯ ಸಂಸಾರವನ್ನೆ ಕ್ಷಮಿಸಲು ಅರ್ಹವಾದ ವಾತ್ಸಲ್ಯದಿಂದ ಅವಳ ಹೃದಯವು ವಿಶ್ವಾಕಾರವಾಗಿ ನಿಂತಂತಾಗಿತ್ತು. ಇಂತಹ ಅನುಭವವನ್ನು ಕೊಟ್ಟ ರಾಮಣ್ಣನ ಮೇಲೆ ಸಿಟ್ಟಾಗುವುದೆ ? ಪೂರ್ವಜನ್ಮದಲ್ಲಿ ಯಾವ ಪುಣ್ಯವನ್ನು ಮಾಡಿರುವಳೆಂದು ಇಂದು ತನಗೆ ಈ ದುಃಖವಿಮೋಚನೆ ದೊರಕಿದೆ ? ಆಗ ಕುಮುದಳು ತುಂಬಿ ಬಂದ ಹೃದಯದಿಂದ ರಾಮಣ್ಣನನ್ನು ಬಿಗಿದಪ್ಪಿಕೊಳ್ಳಬೇಕೆಂದು ಮಗ್ಗುಲಾಗಿ ಕೈಚಾಚಿದಳು—ಅಲ್ಲಿ ಯಾರೂ ಇದ್ದಿರಲಿಲ್ಲ ! ಇದೇನೊ ಕನಸೊ ಭೂತಾಟಿಕೆಯೊ ಎಂದು ಹೆದರುವಷ್ಟರಲ್ಲಿ ಮೆಲ್ಲನೆ ಬಾಗಿಲನ್ನು ಮುಚ್ಚಿಕೊಂಡು ಯಾರೊ ಹೊರಬಿದ್ದಂತೆ ಸದ್ದಾಯ್ತು. ರಾಮಣ್ಣ ಹೊರಟು ಹೋಗಿದ್ದ !

ಇದೇನು ಹೀಗೇಕಾಯಿತು ? ಎನ್ನುತ್ತ ಕುಮುದ ಥಂಗನೆ ಹಾಸಿಗೆಯ ಮೇಲೆ ಎದ್ದು ಕುಳಿತಿದ್ದಳು. ಬಂದನೇಕೆ ? ಹಾಗೆ ಹೋದನೇಕೆ ? ಆ ಪ್ರಶ್ನೆಗಳಿಗೆ ಉತ್ತರ ಕುಮುದಳಿಗೆ ಗೊತ್ತಿರಲಿಲ್ಲವೆಂದಲ್ಲ. ಆದರೆ ಆ ಉತ್ತರ ಆಕೆಗೆ ಬೇಡಾಗಿತ್ತು, ಮನಸ್ಸಿಗೆ ಅಸಹ್ಯವೆನ್ನಿಸುವಂತಿತ್ತು. ಅಸ್ತವ್ಯಸ್ತವಾಗಿದ್ದ ತನ್ನ ಮೈಮೇಲಿನ ವಸ್ತ್ರಗಳು, ಹಣೆಗೆ ಅಂಟಿಕೊಂಡ ಬೆವರ ಹನಿಗಳು, ಒಳಗೆ ಡವಡವ ಹಾರುತ್ತಿರುವ ಎದೆ, ಹೊರಗೆ ಪೆಟ್ಟು ತಿಂದಾಗಿನ ಒಳನೋವಿನಂತೆ ಗಾಸಿಯಾದ ವಕ್ಷಃಸ್ಥಳ, ತನ್ನ ತೊಡೆಗಳಲ್ಲಿಯ ನಡುಕು—ಇದೆಲ್ಲವೂ ರಾಮಣ್ಣನು ಬಂದುಹೋದುದರ ಸಾಕ್ಷ್ಯವಾಗಿತ್ತು. ಆದರೆ ಅವನು ಬಂದು ಹೋದುದಕ್ಕೆ ಇದಿಷ್ಟೆ ಕಾರಣವಾಗಿದ್ದಿತೆ ? ದೇಹಗಳ ಸಂಬಂಧದ ಹೊರತು ಬೇರೆ ಯಾವ ಸಂಬಂಧವೂ ಇಲ್ಲವೆ ?

ತಾನು ಸಿಟ್ಟಾಗಿರಬಹುದೆಂದು ಊಹಿಸಿ ರಾಮಣ್ಣ ಹಾಗೆ ನಡೆದುಕೊಂಡಿರಬಹುದು ಎಂದು ಒಮ್ಮೆ ಎನ್ನಿಸಿತು ಆಕೆಗೆ. ಅವನು ಉಸುರ್ಗರೆದದ್ದು ಕೇಳಿದಂತಾಗಿರಲಿಲ್ಲವೆ ? ಪಾಪ ! ಅವನಿಗೆ ಯಾವುದೊ ಮನಸ್ತಾಪವಿದ್ದಿರಬೇಕು ಎಂಬ ವಿಚಾರ ಬಂದಿತ್ತು. ಏನಿರಬಹುದು? ತುಸು ಹೊತ್ತಿನ ಮುಂಚೆ ಅವನು ಸರಲಕ್ಕನೊಡನೆ ಮಾತನಾಡುತ್ತ ಕುಳಿತದ್ದನ್ನು ನೋಡಿರಲಿಲ್ಲವೆ ? ಅಲ್ಲಿ ಏನಾದರೂ ಮನಸ್ತಾಪ ಉಂಟಾಗಿರಬಹುದೆ ? ಸರಲಕ್ಕ ಯಾವುದಾದರೊಂದು ಮನ ನೋಯುವಂತಹ ಮಾತನ್ನಾಡಿರಬಹುದೆ? ಇಲ್ಲವೆ-ಇಲ್ಲವೆ-? ಕುಮುದಳ ವಿಚಾರದೊಡನೆ ಅವಳ ಹೃದಯಕ್ರಿಯೆಯೂ ತಡೆದಂತಾಗಿತ್ತು. ಸರಲಕ್ಕನಿಗೆ ತಿಳಿದಿರಬಹುದೆ ? ಆ ವಿಚಾರಕ್ಕಾಗಿ ಒಂದೇ ನಿಮಿಷ ಕುಮುದ ಹೆದರಿದ್ದಳು. ಮರುಗಳಿಗೆಯಲ್ಲಿ ಈ ಮೊದಲು ಉಂಟಾಗಿದ್ದ ಕೋಪ, ಅಸಹನೆ ಎರಡೂ ಸಿಡಿದೆದ್ದಿದ್ದುವು. ಹಾಸಿಗೆ ಹಿಡಿದು, ಜೀವವಿದ್ದೂ ಇಲ್ಲದಂತಾದ, ರಾಮಣ್ಣನಂತಹನಿಗೆ ಕಾಲ್ತೊಡಕಿನಂತಾದ ಸರಲಕ್ಕನು ಗಂಡನ ಮನಸ್ಸನ್ನು ನೋಯಿಸಿರಲೇಬೇಕು ಎಂದು ಕುಮುದಳಿಗೆ ಖಾತ್ರಿಯಾಗಿತ್ತು. ಏನೊ ಅಂದಿದ್ದಳಲ್ಲ ಆಕೆ ? ಏನು ? ಹಾಂ—" ಅಷ್ಟಾದರೆ ನಾ ಸುಖದಿಂದ ಕಣ್ಮುಚ್ಚೇನಿ " ಎಂದು. ಅಷ್ಟು ಎಂದರೆ ಎಷ್ಟು ? ಯಾವುದು ? ಸದಾಕಾಲದ ಈ ರೋಗಿಯು ಗಂಡನು ತನ್ನ ಮುಗ್ಗುಲಲ್ಲಿಯೆ ಕೊಳೆಯಬೇಕು ಎಂದು ಬಯಸಿರುವಳೆ ? ಈಕೆಯ ಸುಖ-ದುಃಖ ಯಾರಿಗೆ ಬೇಕು ? ಈಕೆ ಕಣ್ಮುಚ್ಚಿದರೆ ಇನ್ನೊಬ್ಬರಿಗೆ ಸುಖ--

ಹಾಸಿಗೆಯ ಮೇಲೆ ಕುಳಿತ ಕುಮುದ ಗಾಬರಿಯಿಂದ ಎದ್ದಳು. ಅವಳ ಅಂಗಾಂಗವೆಲ್ಲ ನಡುಗುತ್ತಿತ್ತು. ಹಿಂದಿನ ಈ ನೆನಪು ಈಗಲೂ ಅವಳನ್ನು ಹಿಂಡಿ ಹಿಪ್ಪೆ ಮಾಡುತ್ತಿತ್ತು ? ಅಂದಿನ ತನ್ನ ವಿಚಾರಗಳನ್ನು ಹೀಗೆ ನೆನೆವಾಗ ಕುಮುದಳ ಕಣ್ಣುಗಳು ನೀರಿನಿಂದ ತೋಯ್ದುವು. ಅಂದು ಹಾಗೆ ಸರಲಕ್ಕನ ಬಗ್ಗೆ ಮಾಡಿದ ವಿಚಾರ ಪಾಪ, ಆ ಪಾಪಕ್ಕೆ ಇಂದು ಪ್ರಾಯಶ್ಚಿತ್ತವನ್ನು ಭೋಗಿಸುತ್ತಿದ್ದೇನೆ—ಎಂದುಕೊಂಡಳು. ಪಾಪ ! ಸರಲಕ್ಕನೆ ತನ್ನ ಸುಖಕ್ಕೆ ಅಡ್ಡ ಬಂದಿರುವಳೆಂದು ಆಗ ತಾನು ತಿಳಿದಿರಲಿಲ್ಲವೆ ? ಈಗ ಸರಲಕ್ಕ ಯಾರ ದಾರಿಯಲ್ಲೂ ಇಲ್ಲ, ಆದರೂ ತನಗೆ ಸುಖವಿಲ್ಲ. ಒಬ್ಬರ ಸುಖ, ಒಬ್ಬರ ದುಃಖ ಇನ್ನೊಬ್ಬರ ಕೈಯಲ್ಲಿರುವುದಿಲ್ಲ ಎಂದು ಕುಮುದಳಿಗೆ ಈಗ ತಿಳಿದಿತ್ತು. ಕೆಲವು ವರ್ಷ ಮುಂಚಿತ, ಸರಲಕ್ಕ ಜೀವದಿಂದಿದ್ದಾಗ ಈ ಮಾತು ತಿಳಿದಿದ್ದರೆ ? ಆದರೆ ಆಗ ತಿಳಿಯುವುದೆ ಶಕ್ಯವಿದ್ದಿರಲಿಲ್ಲ, ಯಾಕೆಂದರೆ ಸುಖವೆಂಬುದರ ಕಲ್ಪನೆಯೆ ಆಗ ಇದ್ದಿರಲಿಲ್ಲ. ರಾಮಣ್ಣನ ಸಾನ್ನಿಧ್ಯದಲ್ಲಿಯೆ ತನ್ನ ಸುಖ ಎಂದು ತಿಳಿದು ರಾಮಣ್ಣನನ್ನು ಸರಲಕ್ಕನಿಂದ ತನ್ನ ಹತ್ತಿರ ಎಳೆಯುವುದೆ ಆಗ ಕುಮುದಳ ಜೀವನಧ್ಯೇಯವಾಗಿತ್ತು. ಇದಲ್ಲದೆ ರಾಮಣ್ಣನ ಸಾನ್ನಿಧ್ಯ ದೊರೆಯುವುದು ರಾಮಣ್ಣನನ್ನೂ ಅವಲಂಬಿಸಿದೆ ಎಂಬುದೂ ಆಗ ತನ್ನ ಲಕ್ಷ್ಯಕ್ಕೆ ಬಂದಿರಲಿಲ್ಲ. ಎಂತಹ ಹುಚ್ಚು ತನ್ನದು ! ಸಾನ್ನಿಧ್ಯವೆಂದರೆ ದೇಹ ಸಾನ್ನಿಧ್ಯ ಎಂದೇ ತಿಳಿದು, ಆ ಸುಖವನ್ನು ಅನುಭವಿಸಿ ಈಗ ದೇಹಸಾನ್ನಿಧ್ಯ ಮನಸ್ಸಿಗೆ ಅಸಹ್ಯವೆನ್ನಿಸುತ್ತಿದೆ. ತನ್ನ ಸುಖದ ಹಾದಿ ತನಗೆ ಗೊತ್ತಾಗಿರಲಿಲ್ಲ, ಇನ್ನೊಬ್ಬರ ಮೇಲೆ ತಪ್ಪು ಹೊರಿಸಿದ್ದಳು, ತಾನು ಮಾಡಿದ್ದು ತಪ್ಪು—ಎಂದುಕೊಂಡಳು. ಅದರಲ್ಲೂ ಸರಲಕ್ಕನ ಬಗ್ಗೆ ಹಾಗೆ ತಿಳಿದದ್ದೂ ನಡೆದುಕೊಂಡದ್ದೂ ಪಾಪ ಎಂದುಕೊಂಡಳು.

ಇದುವರೆಗೆ ಹಿಂದಿನ ನೆನಪುಗಳನ್ನು ಮರೆಯಬೇಕು, ಗಟ್ಟಿಯಾಗಿ ಕಣ್ಮುಚ್ಚಿ ಮಲಗಿಕೊಳ್ಳಬೇಕು ಎನ್ನುತ್ತಿದ್ದ ಕುಮುದಳಿಗೆ ಇದೊಂದು ನೆನಪನ್ನು ಮತ್ತೆ ಮತ್ತೆ ನೆನೆದುಕೊಳ್ಳಬೇಕು ಎಂದೆನ್ನಿಸಿತು. ಆದದ್ದಾಗಿದೆ, ಕಡೆಗೆ ಈ ನೆನಪಿನ ನಿಮಿತ್ತದಿಂದ ನನ್ನ ಪಾಪದ ಪ್ರಾಯಶ್ಚಿತ್ತವನ್ನಾದರೂ ಭೋಗಿಸುತ್ತೇನೆ ಎಂದು ಆಕೆಯ ಸಮಾಧಾನ. ಅಂದಿನ ಆ ರಾತ್ರಿ, ರಾಮಣ್ಣ ಹಾಗೆ ಯಂತ್ರದ ಗೊಂಬೆಯಂತೆ ಬಂದು ಹೋದಮೇಲೆ ಸಿಟ್ಟು, ಅಸೂಯೆ; ದ್ವೇಷ,

ಅಸಹನೆ ಇವು ಒಂದೊಂದಾಗಿ ಕುಮುದಳನ್ನು ಪಿಶಾಚಿಯಂತೆ ಹಿಡಿದುಕೊಂಡಿದ್ದುವು. ರಾಮಣ್ಣನ ಬಗ್ಗೆ ತನ್ನಲ್ಲಿ ಅನಿವಾರ ಪ್ರೇಮವಿದೆ ಎಂದು ಅವಳಿಗೆ ಅಂದು ಭರವಸೆಯಾಗಿತ್ತು; ತನ್ನ ಪ್ರೇಮದ ದಾರಿಯಲ್ಲಿ ಸರಲಕ್ಕ ಮುಳ್ಳಿನ ಕಂಟಿಯಂತೆ ಅಡ್ಡಗಟ್ಟಿ ಬಿದ್ದಿದ್ದಾಳೆ ಎಂದೂ ಆಕೆಗೆ ಸಂಶಯ ಬಂದಿತ್ತು. ಆದರೆ ರಾಮಣ್ಣನು ತನಗೆ ಜೀವನದ ಉಸಿರಿನಂತೆ, ಅವನಿಲ್ಲದಿದ್ದಲ್ಲಿ ತನ್ನ ಮಟ್ಟಿಗೆ ಸೂರ್ಯನಿಗೂ ಬೆಳಕಿಲ್ಲ ಎನ್ನಬೇಕು, ಅವನನ್ನು ಹೊರತುಪಡಿಸಿದರೆ ತನಗೆ ಜೀವನವೆ ಇಲ್ಲ—ಎಂದು ಎಷ್ಟೆಷ್ಟು ದೃಢವಾಗಿ ನಂಬಿಕೊಂಡಿದ್ದಳೊ ಅಷ್ಟಷ್ಟು ಸರಲಕ್ಕನ ಬಗೆಗಿದ್ದ ಹೆದರಿಕೆ ದೂರವಾಗುತ್ತಿತ್ತು. ಇಂತಹ ಪ್ರೇಮದ ಎದುರಿನಲ್ಲಿ ಪಾಪ ! ಸರಲಕ್ಕನಂತಹ ನಿತ್ರಾಣ, ನಿರ್ಜೀವಪ್ರಾಯ ರೋಗಿ ನಿಲ್ಲಬಹುದೆ ? ಕೊನೆಕೊನೆಗೆ, ನಿದ್ದೆ ಅನಿವಾರ್ಯವಾಗುತ್ತ ಬಂದಂತೆ ಸರಲಕ್ಕನ ಬಗ್ಗೆ ಕುಮುದಳ ಹೃದಯದಲ್ಲಿ ಕನಿಕರ ಮೂಡಿತ್ತು. ಅವಳ ಬಗ್ಗೆ ಅಲ್ಲದ ಸಲ್ಲದ ವಿಚಾರ ಮಾಡುವುದೇಕೆ ? ಹಾಸಿಗೆಯನ್ನು ಬಿಟ್ಟೇಳದ ಆಕೆಯಿಂದ ತನಗೆ ಯಾವ ಹೆದರಿಕೆ ? ರಾಮಣ್ಣನಿಗೆ ಯಾವ ಸುಖ ? ಜೀವದಿಂದಿದ್ದರೂ ಅಷ್ಟೆ, ಇಲ್ಲದಿದ್ದರೂ ಅಷ್ಟೆ; ದಿನದಂತೆ ಅವಳೊಡನೆ ನಡೆದುಕೊಂಡರೆ ಅವಳಿಗೂ ಯಾವ ಸಂಶಯ ಬರಲಿಕ್ಕಿಲ್ಲ ಎಂದು ತನ್ನ ಯುಕ್ತಿಗೆ ತಾನೇ ಮೆಚ್ಚಿದ್ದಳು. ತನ್ನ ಹೃದಯ ರಾಮಣ್ಣನಿಂದಲೆ ತುಂಬಿಬಿಟ್ಟಿದೆ; ಅಲ್ಲಿ ಇನ್ನೊಬ್ಬರಿಗೆ ಯಾವ ನೆವದಿಂದಲೂ ಜಾಗೆ ಬೇಡ—ಎಂದು ಸಮಾಧಾನವನ್ನು ತಂದುಕೊಂಡಿದ್ದಳು.

ಆದರೆ ರಾಮಣ್ಣ ಉಸುರ್ಗರೆದುದನ್ನು ನೆನೆದು ಆಕೆ ಮತ್ತೆ ವಿಚಾರಕ್ಕೆ ತೊಡಗಿದ್ದಳು. ಯಾವುದೊ ಒಂದು ಮನಸ್ತಾಪವಿದೆ ಅವನಿಗೆ—ಯಾವುದು? ಅದನ್ನು ತೆಗೆಯಲೇಬೇಕು. ಹೆಂಡತಿಯು ಏನಾದರೂ ಹೇಳಿದ್ದನ್ನು ಕೇಳಿ ಅವನು ತನಗಾಗಿ ನಿರಾಸೆಯನ್ನು ತಾಳಿರಬಹುದೆ? ಒಂದು ವೇಳೆ ಸರಲಕ್ಕನಿಗೆ ತಿಳಿದರೆ, ಇಲ್ಲವೆ ಆಕೆಗೆ ತಿಳಿದಿದೆ ಎಂದು ನನಗೆ ತಿಳಿದರೆ ನಾನು ಹಿಂಜರಿಯಬಹುದೆಂದು ರಾಮಣ್ಣನಿಗೆ ಸಂಶಯವಿದ್ದಿರಬಹುದೆ ? ಅದಕಾಗಿ ಅವನು ಉಸುರ್ಗರೆದಿರಬಹುದೆ ? ಛೆ—ಹಾಗಿದ್ದರೆ ಎಷ್ಟೊತ್ತಿನ ಮನಸ್ತಾಪವದು ? ಒಂದು ವೇಳೆ ಶೇಷನಿಂದ ಬಿಗಿದು ಎಂಟು ದಿಗ್ಗಜಗಳಿಂದ ಎಳೆಯಿಸಿದರೂ ನನ್ನ ಹೃದಯ ರಾಮಣ್ಣನನ್ನು ಬಿಡದು—ಆ ಮಾತು ಅವನಿಗೆ ಗೊತ್ತಿಲ್ಲ

ವೇನೊ ! ಅಂತಹ ಗಾಢಪ್ರೇಮ ರಾಮಣ್ಣನಿಗಾಗಿ ತನ್ನಲ್ಲಿದೆ ಎಂದು ಪೂರ್ಣವಾಗಿ ಆ ರಾತ್ರಿಯಲ್ಲಿ ಕುಮುದ ಕಂಡುಕೊಂಡಿದ್ದಳು. ಕೊನೆಗೆ ಅಂದು ಮಲಗುವಾಗ ಕುಮುದ ದೇವನಲ್ಲಿ ಒಂದೇ ಒಂದು ಬೇಡಿಕೆಯನ್ನು ಮಾಡಿಕೊಂಡಿದ್ದಳು. " ದೇವಾ, ನಾನು ಅವರನ್ನು ಪ್ರೀತಿಸುವಷ್ಟು ಅವರು ನನ್ನನ್ನು ಪ್ರೀತಿಸೋ ಹಾಗೆ ಮಾಡು, ಅಷ್ಟೆ ಸಾಕು. ಆಮ್ಯಾಲೆ ನನಗ ಯಾರ ಹೆದರಿಕೆಯೂ ಇಲ್ಲ, ಯಾರ ಸಹಾಯನೂ ಬ್ಯಾಡ " ಎಂದು.

ಈಗ ಮಾತ್ರ ಕುಮುದಳಿಗೆ ಈ ಹಿಂದಿನ ನೆನಪು ಅಸಹ್ಯವಾಯಿತು. ಅದೇನು ದುರ್ಬುದ್ಧಿಯೊ ? ಸದ್ಬುದ್ಧಿಯೊ ? " ಅವರು ನನ್ನನ್ನು ಪ್ರೀತಿಸೋ ಹಾಗ ಮಾಡು " ಎಂದು ಆ ರಾತ್ರಿ ತನ್ನ ಬಾಯಿಯಿಂದ ಶಬ್ದಗಳು ಬಂದಿದ್ದುವಲ್ಲವೆ ? ಆ ಶಬ್ದಗಳು ಎಷ್ಟು ಸೂಚಕವಾಗಿದ್ದುವು ಎಂಬುದು ಇಂದು—೨-೨॥ ವರ್ಷಗಳ ತರುವಾಯ—ಕುಮುದಳಿಗೆ ಹೊಳೆಯಿತು. ರಾಮಣ್ಣನು ತನ್ನನ್ನು ಪ್ರೀತಿಸುತ್ತಿದ್ದಿಲ್ಲ ಎಂದು ಆಗಲೂ ತನಗೆ ಸಂದೇಹವಿದ್ದಿತೇನೊ ! ಅದಕಾಗಿಯೆ ಅವನನ್ನು ಒಲಿಸಿಕೊಳ್ಳಲು ದೇವನ ಸಹಾಯವನ್ನು ಬೇಡಿಕೊಳ್ಳಬೇಕಾಗಿ ಬಂತು ! ಆಗ ತನಗೆ ತಿಳಿದಿರಲಿಲ್ಲ, ಸಂಶಯವಿದ್ದಿತು. ಈಗ, ತನಗೆ ತಿಳಿದಿದೆ—ವಾಕ್ಯವನ್ನು ಪೂರ್ತಿಗೊಳಿಸದೆ ಕುಮುದ ಹಾಸಿಗೆಯಿಂದ ಎದ್ದಳು. ನಿದ್ದೆಯ ಗುಂಗೊ ವಿಚಾರದ ಭರವೊ—ಯಂತ್ರದಂತೆ ಹಾಸಿಗೆಯನ್ನು ಸರಿಪಡಿಸಿಕೊಂಡು, ಆಯಾಸವಾದವಳಂತೆ ಒರಗಿದಳು. ಅವಳಿಗೆ ತಿಳಿಯುವ ಮುಂಚೆಯೆ ಆಕಳಿಕೆಯೊಂದು ಸದ್ದಿಲ್ಲವೆ ಹೊರಬಿದ್ದಿತು.

## ೧೧

" ದ್ವೀಪಾದನ್ಯಸ್ಮಾದಪಿ ಮಧ್ಯಾದಪಿ ಜಲನಿಧೇರ್ದಿಶೋಽಪ್ಯಂತಾತ್ ।
ಆನೀಯ ಝಟಿತಿ ಘಟಯತಿ ವಿಧಿರಭಿಮತಮಭಿಮುಖೀಭೂತಃ ॥ "

ರಾಮಣ್ಣ ಕಣ್ಣು ತಿಕ್ಕಿಕೊಂಡು ದಿಟ್ಟಿಸಿ ನೋಡಿದ. ಏನಿದು ? ಎಷ್ಟೊತ್ತಿನಿಂದ ತಾನು ಆ ಶ್ಲೋಕವನ್ನು ಇದಿರಿಟ್ಟುಕೊಂಡು ಕುಳಿತಿದ್ದಾನೆ ? ಮನಸ್ಸನ್ನು ಕಲಕುವ ವಿಚಾರಗಳನ್ನು ಮರೆಯಲು ಸಂಸ್ಕೃತ ಗ್ರಂಥವೊಂದನ್ನು ಓದಲು ತಾನು ನಿಶ್ಚಯಿಸಿದ್ದ ಎಂಬುದು ಗೊತ್ತು; ಅತ್ತಿತ್ತ ನೋಡುವಾಗ ಶ್ರೀಹರ್ಷನ ರತ್ನಾವಲೀ ನಾಟಕ ಅವನ ಕೈಗೆ ಬಂದಿತು. ಎಳೆಹರೆಯದಲ್ಲಿ

ಓದಿದಾಗ ಮನಸ್ಸನ್ನು ಹಿಡಿದಿದ್ದ ಆ ನಾಟಕ ಕೈಗೆ ಬಂದುದಕ್ಕೆ ಅವನಿಗೆ ಆನಂದವೆ ಆಯಿತು. ಹಾಯಾಗಿ ಕುರ್ಚಿಯಲ್ಲಿ ಬಿದ್ದುಕೊಂಡು, ಮೇಜಿನ ಮೇಲೆ ಕಾಲ್ಗಳನ್ನೊಗೆದು ಮೊದಲಿನಿಂದಲೆ ಓದಲು ತೊಡಗಿದ್ದ. ಸೂತ್ರ ಧಾರನು ಪ್ರಸ್ತಾವನೆಯ ಕೊನೆಗೆ " ದ್ವೀಪಾದನ್ಯಸ್ಮಾದಪಿ " ಎಂಬ ಶ್ಲೋಕ ವನ್ನು ಹೇಳುವನು. ಆ ಶ್ಲೋಕದ ಅರ್ಥ ಎಂದಿನಿಂದಲೂ ಅವನ ಮನ ಸ್ಸನ್ನು ತಟ್ಟಿತ್ತು. ಬುದ್ಧಿ ಮತ್ತು ತರ್ಕಗಳಲ್ಲಿಯೆ ಪೂರ್ತಿಯಾಗಿ ವಿಶ್ವಾಸ ವನ್ನಿಟ್ಟ ರಾಮಣ್ಣನಿಗೆ ಅವೆರಡನ್ನೂ ಮೀರಿ ಒಂದು ಘಟನೆಯನ್ನು ನಡೆ ಸುವ ನಿಸರ್ಗದ ಯುಕ್ತಿ (ಏನು ಶಕ್ತಿಯೊ ?) ಮೋಜಿನದೆನ್ನಿಸಿತ್ತು. ಅದೇ ಮಾತು ಈ ಶ್ಲೋಕದಲ್ಲಿದ್ದುದರಿಂದ ಇದು ಅವನ ಮೆಚ್ಚುಗೆಯ ಶ್ಲೋಕ ವಾಗಿತ್ತು. ವಿಧಿಯು ಎಂಬುದೆ ನಿಸರ್ಗದ ಆ ಯುಕ್ತಿ (ಇಲ್ಲವೆ ಶಕ್ತಿ). ಅದು ಮನಸ್ಸು ಮಾಡಿತೆಂದರೆ ಎರಡು ಬೇರೆ ಬೇರೆ ದ್ವೀಪಗಳಿಂದ, ಇಲ್ಲವೆ ಸಮು ದ್ರದ ಮಧ್ಯದಿಂದ, ಇಲ್ಲವೆ ದಶದಿಗಂತಗಳ ಕೊನೆಯಿಂದ ಒಂದು ಸಂಗತಿ ಯನ್ನು ಇಲ್ಲವೆ ವ್ಯಕ್ತಿಯನ್ನು ಹಿಡಿದೆಳೆದು ತಂದು ತನ್ನ ಘಟನೆಯನ್ನು ನಡೆಸುವುದು. ಮನುಷ್ಯನಿಗೆ ಯಾವುದು ಆಕಸ್ಮಿಕ ಘಟನೆ ಎನ್ನಿಸುವುದೊ ಅದು ನಿಸರ್ಗದಲ್ಲಿ ನಿಯಮಬದ್ಧವಾದ ಘಟನೆಯಂತಿರುವುದು. ಎಂತಹ ಮೋಜಿನ, ಆದರೂ ಸತ್ಯಾನುಭವದ ಅರ್ಥ ! ಅತ್ಯುತ್ತಮ ಶ್ಲೋಕಗಳಲ್ಲಿ ಇದೊಂದು. " ದ್ವೀಪಾದನ್ಯಸ್— " ರಾಮಣ್ಣ ತಡೆದ. ಅದೆಲ್ಲ ಸರಿ. ಆದರೆ ಸುಮಾರು ಅರ್ಧ ಗಂಟೆಯಾಗಿರಬಹುದು ಈಗ, ಅಷ್ಟೊತ್ತೂ ಅದೇ ಶ್ಲೋಕದ ಸುತ್ತುಮುತ್ತಲೆ ತಾನು ಗುಣುಗಾಡುತ್ತಿರುವನಲ್ಲ ! ಹೀಗೇಕಾ ಯಿತು ?....ರಾಮಣ್ಣ ಉಸುರ್ಗರೆದ. ಯಾವುದನ್ನು ಮರೆಯಲು ತಾನು ಬುದ್ಧಿಪೂರ್ವಕವಾಗಿ, ಈ ಪುಸ್ತಕದ ಸಹಾಯದಿಂದ ಯತ್ನಿಸುತ್ತಿದ್ದನೊ ಕೊನೆಗೆ ಅದೇ ಸಂಗತಿಯ ನೆನಪು ಈ ಶ್ಲೋಕದಿಂದ ಮರುಕಳಿಸಿದೆ ! ಹಲ್ಲಿನ ಸಂದುಗಳೊಳಗೆ ಸಿಕ್ಕ ಪಲ್ಯದ ತೊಪ್ಪಲ ತುಣುಕಿನಂತೆ ಅದು ತನ್ನನ್ನು ಪೀಡಿಸುತ್ತಲಿದೆ; ಎಡಚೆಡಚಾಗುತ್ತಲಿದೆ. ಅದನ್ನು ಎಲ್ಲ ರೀತಿಯಿಂದಲೂ ನಾಲಗೆಯನ್ನಾಡಿಸಿ ಹೊರಗೆಳೆಯಲೇಬೇಕು. ಇಲ್ಲದೆ ಹೋದರೆ ಸಮಾಧಾ ನವೆ ಇಲ್ಲ. ಆದರೆ ಆ ನಿರ್ದಿಷ್ಟವಾದ ನೆನಪಾದರೂ ಯಾವುದು ? ಹಾಂ— ಇದೇ ಕೆಲ ನಿಮಿಷ ಮುಂಚೆ ತನ್ನ ತಲೆಯನ್ನು ತಿನ್ನುತ್ತಿರಲಿಲ್ಲವೆ ? ಅದೇ ನೆನಪು.

"ತಾನು ಸರಲೆಯನ್ನು ಪ್ರೀತಿಸುವನೊ ? ಕುಮುದಳನ್ನೊ ?" ಎಂದು ಕೇಳಿಕೊಂಡು "ಯಾರಿಗೆ ಬೇಕಾಗಿದೆ ಉತ್ತರ ?" ಎಂದು ಕೈಜಾಡಿಸಿದ್ದನಲ್ಲ ಕೆಲವು ನಿಮಿಷ ಮುಂಚಿತ ? ಅವೇ ಪ್ರಶ್ನಗಳು ಈ ಶ್ಲೋಕದ ಮಾರ್ಗವಾಗಿ ತನ್ನ ಹೃದಯವನ್ನು ಹೊಕ್ಕು ಕಾಡುತ್ತಲಿವೆ. ಯಾರಿಗೆ ಬೇಕಾಗಿದೆ ಉತ್ತರ ಎಂದು ಈಗ ರಾಮಣ್ಣನೇನೊ ಉದಾಸೀನ ಭಾವವನ್ನು ತಾಳುತ್ತಾನೆ. ಆದರೆ ಎರಡು ವರ್ಷಗಳ ಮುಂಚಿತ ರಾಮಣ್ಣನ ಮನಃಸ್ಥಿತಿ ಬೇರೆಯಾಗಿತ್ತು. ಈ ಎರಡು ಪ್ರಶ್ನಗಳಲ್ಲಿ ಒಂದಕ್ಕೆ ನಿಚ್ಚಳವಾದ ಉತ್ತರ ಅವನಿಗೆ ಅಗತ್ಯವೆನ್ನಿಸಿತ್ತು. ಒಂದು ದಿನವಂತೂ— ಅಲ್ಲ, ಒಂದು ರಾತ್ರಿ ಎನ್ನಬಹುದು— ಈ ಪ್ರಶ್ನಗಳು ತನ್ನನ್ನು ನಿರ್ವಿಣ್ಣಮಾಡಿದ್ದುವು. ಒಮ್ಮೆ ಒಂದು, ಒಮ್ಮೆ ಇನ್ನೊಂದು ಉತ್ತರ ಯೋಗ್ಯ ಎನ್ನಿಸುತ್ತಿತ್ತು. ಆ ರಾತ್ರಿ ಹೃದಯದ ಹೊಯ್ದಾಟದಿಂದ ಬುದ್ಧಿ ನಿರ್ವಿಣ್ಣವಾದಾಗ ತಾನು ಪಶುವಿನಂತಾಗಿದ್ದನು. ಪಶುವಿಗೂ ಮಾನವನಿಗೂ ಅಂತರವೆಂದರೆ ಬುದ್ಧಿಯೊಂದೇ, ಬುದ್ಧಿ ನಿಷ್ಕ್ರಿಯವಾದೊಡನೆ ಮಾನವನು ಪಶುವಿನ ಸ್ಥಿತಿಗಿಳಿಯುವನು ಎಂದು ಆ ರಾತ್ರಿ ರಾಮಣ್ಣನು ಕಂಡುಕೊಂಡಿದ್ದನು. ಅಹುದು ಅದೇ ರಾತ್ರಿ, ತನಗೆ ಈ ಶ್ಲೋಕವೂ ನೆನಪಿಗೆ ಬಂದದ್ದು.

ಆ ರಾತ್ರಿ ತಾನು ಕುಮುದಳೊಡನೆ ಪಶುವಿನಂತೆ ನಡೆದುಕೊಂಡಿದ್ದ ಎಂದು ಇಂದು ಎನ್ನಿಸಿದಂತೆ ಅಂದು ಕೂಡ ಎನ್ನಿಸಿತ್ತು. ತಾನು ಯಾಕೆ ಹಾಗೆ ನಡೆದುಕೊಳ್ಳಬೇಕಾಗಿ ಬಂದಿತ್ತೊ ? ಹಾಂ— ಅಹುದು. ಅಂದು ತನ್ನ ಮನಸ್ಸು ಕಕ್ಕಾವಿಕ್ಕಿಯಾಗಿತ್ತು. ಈಗ ೩–೪ ದಿನಗಳಿಂದ ಪ್ರತಿರಾತ್ರಿ ಕೆಲ ಕಾಲವನ್ನು ಕುಮುದಳೊಡನೆ ಕಳೆಯುತ್ತಿದ್ದ. ಇಂದ್ರಿಯ ಸುಖದ ಹಪಾಪಿಯೊ ? ಎಳೆಹರೆಯದ ಹುಡುಗೆಯ ಸಹವಾಸದಿಂದ ಮೂಡುತ್ತಿದ್ದ ಹೊಸ ಹುರುಪೊ ? ಒಂದು ಕಾರಸ್ಥಾನದ ಕೆಲಸವನ್ನು ಸಾಧಿಸಿಕೊಂಡನೆಂಬ ಒಳ ಮನಸ್ಸಿನ ಉಬ್ಬೊ ?— ಅಂತೂ ಯಾವುದೊ ಒಂದು ಕಾರಣಕ್ಕಾಗಿ ಆ ಹೊಸ ಅನುಭವದ ಸವಿ ಅಭ್ಯಾಸವಾಗತೊಡಗಿತ್ತು ಅವನಿಗೆ. ಮೂರುನಾಲ್ಕು ದಿನಗಳಿಂದ ಆ ಕಾರ್ಯಕ್ರಮ ತಪ್ಪಿರಲಿಲ್ಲ. ಅಂದು ಸುಮಾರು ಹತ್ತುವರೆ ಗಂಟೆ ರಾತ್ರಿಯಾದ ಮೇಲೆ ಕುಮುದಳ ಕೋಣೆಗೆ ಹೋಗಬೇಕೆಂದು ಎದ್ದಿದ್ದ. ಮೆಲ್ಲನೆ ಬಾಗಿಲನ್ನು ತೆರೆದು ತನ್ನ ಕೋಣೆಯಿಂದ ಹೊರಬಿದ್ದು ಬಾಗಿಲನ್ನು ಹಾಗೇ ಮುಚ್ಚಿಕೊಳ್ಳುವಷ್ಟರಲ್ಲಿ ಸರಲೆಯ ಕೋಣೆಯಿಂದ ಆಕೆ ಕೆಮ್ಮಿದ

ಸದ್ದು ಕೇಳಬಂದಿತ್ತು. ಅನಪೇಕ್ಷಿತವಾಗಿ ಆದ ಸದ್ದಿನಿಂದ ರಾಮಣ್ಣ ಬೆಚ್ಚಿದ, ಅದಕಾಗಿ ಬಾಗಿಲನ್ನು ಮುಚ್ಚುವ ಕೈ ನಡುಗಿತು, ಬಾಗಿಲು ಸದ್ದಿಲ್ಲದೆ ಮುಚ್ಚುವುದು ತಪ್ಪಿತು. ಆಗ ತಟ್ಟನೆ ಒಂದು ನಿರ್ಧಾರದಿಂದ ಸರಲೆಯ ಕೋಣೆಗೆ ಹೋದ; ಒಮ್ಮೆಲೆ ತಾನು ತನ್ನ ಕೋಣೆಯಿಂದ ಧಾವಿಸಿ ಬಂದು ದಕ್ಕೆ ತನ್ನ ಬಾಗಿಲ ಸದ್ದು ಆಗಿರಬಹುದು ಎಂದು ಯಾರಿಗಾದರೂ ಎನ್ನಿಸ ಬಹುದಲ್ಲವೆ ? ಆದರೆ ಸರಲೆಯ ಕೋಣೆಯಲ್ಲಿ ಕಾಲಿಟ್ಟೊಡನೆ ಅವನ ಅಂತಹ ಎಲ್ಲ ವಿಚಾರಗಳೂ ದೂರಾಗಿ ಸಹಜ ಕಳಕಳಿಯಿಂದಲೆ ಸರಲೆಯ ಕಡೆ ಧಾವಿಸಿದ್ದ. ಆಕೆಯ ಮುಖದಲ್ಲಿ ಆಯಾಸದ ಕಳೆ ಇದ್ದಿತು, ಮುಖ ತುಸು ಕಪ್ಪಿಟ್ಟಂತೆಯೂ ಆಗಿತ್ತು, ಅಶಕ್ತತೆಗಾಗಿ ಉಸಿರಾಡಿಸುವುದು ಕೂಡ ಪರಿಶ್ರಮ ಎಂಬುದಕ್ಕೇನೊ ಎನ್ನುವಂತೆ ಮೂಗಿನ ಹೊರಳೆಗಳು ಯತ್ನದಿಂದ ಉಸಿರು ಬಿಡುತ್ತಿರುವುದು ಕಂಡುಬಂದಿತ್ತು. ಆದರೂ ತನ್ನನ್ನು ನೋಡಿದೊಡನೆ ಸರಲೆ ಮುಗುಳ್ನಗೆ ನಗಲು ಯತ್ನಿಸಿದ್ದಳು. ಎಂತಹ ಜೀವನ ! ತನಗೆ ಕಷ್ಟವಾಗುತ್ತಿದ್ದರೂ ಅದನ್ನು ತೋರಗೊಡದೆ ಅನ್ಯರಿಗೆ ಸಂತೋಷವನ್ನುಂಟುಮಾಡುವ ಹಂಬಲ—ಎಂದೆನ್ನಿಸಿ ರಾಮಣ್ಣನಿಗೆ ಗಂಟಲಲ್ಲಿ ಏನೊ ಸಿಕ್ಕಂತಾಗಿತ್ತು. ಹೋದವನೆ ಅವಳ ಮಗ್ಗುಲಲ್ಲಿ ಕುಳಿತುಕೊಂಡು ಅವಳ ಹಣೆ--ಮೈಗಳನ್ನು ಮುಟ್ಟಿ ನೋಡತೊಡಗಿದ್ದ.

" ನನಗೇನಾಗೇದ ಇಷ್ಟು ನೀವು ಗಾಬರಿಯಾಗಿ ಓಡಿ ಬರಲಿಕ್ಕೆ ? " ಎಂದಿದ್ದಳು.

ರಾಮಣ್ಣನ ಬಾಯಿಯಿಂದ ಉತ್ತರ ಬಂದಿರಲಿಲ್ಲ.

" ಬರೆಯೋದನ್ನ ಬಿಟ್ಟೇ ಬಂದಿರ್ರ್ಯಾ ಏನು ಮತ್ತೆ ?"

" ಅಂಥಾದ್ದೇನು ಮಹತ್ತ್ವದ್ದು ಬರೀತಿದ್ದೆ !" ಎಂದು ಮಾತು ಬದಲಾಯಿಸುವವರಂತೆ ರಾಮಣ್ಣ ಉತ್ತರಿಸಿದ್ದ.

" ಖೋಡಿ ! ನನ್ನ ಜೀವನ ! ತನಗೂ ಸುಖ ಇಲ್ಲ, ಮಂದಿಗೂ ಸುಖ ಇಲ್ಲ ! " ಎಂದು ಕಣ್ಣೀರು ತಡೆಯುವ ಯತ್ನವೆಂದು ಮುಖ ಹೊರಳಿಸಿ ಮಗ್ಗುಲಾಗಿದ್ದಳು.

ರಾಮಣ್ಣ ಒಂದು ನಿಮಿಷ ಧ್ಯಾನಸ್ಥನಂತೆ ಕುಳಿತಿದ್ದ. ಜನ್ಮಜನ್ಮಾಂತರಗಳ ಅಭ್ಯಾಸದಿಂದಲೊ ಏನೊ ಎನ್ನುವಂತೆ ಅವನ ಕೈ ವಾತ್ಸಲ್ಯದ ತಂಗಾಳಿ

ಯಂತೆ ಅವಳ ಬೆನ್ನ ಮೇಲೆ ಸೂಸುತ್ತಿತ್ತು. ಕೆಲವು ನಿಮಿಷ ಸರಲೆಯೂ ನಿಶ್ಶಬ್ದವಾಗಿ ಮಲಗಿದ್ದಳು. ರಾಮಣ್ಣನ ಸ್ಪರ್ಶವು ಅವಳ ದುಃಖದ ಬೇಗೆಯನ್ನು ನೊಂದಿಸಿತ್ತು. ಆ ಮೌನದಲ್ಲಿ ಅವೆರಡೂ ಹೃದಯಗಳು ಪರಸ್ಪರವಾಗಿ ಸಮ್ಮಿಲಿತವಾದಂತಾಗಿದ್ದುವು. ಕೆಲವು ನಿಮಿಷಗಳ ತರುವಾಯ ರಾಮಣ್ಣನೆ ಮೊದಲು ಮಾತನಾಡಿದ್ದ.

"ಯಾಕ, ಸರಲಾ, ಏನಾದರೂ ಹೆಚ್ಚುಕಡಮೆ ತ್ರಾಸ ಆಗಿದೆ ಏನು ?"

ಮಲಗಿದಲ್ಲಿಯೆ ತಲೆಯನ್ನಲ್ಲಾಡಿಸಿ ಏನೂ ಇಲ್ಲ ಎಂದು ಸರಲೆ ಸೂಚಿಸಿದ್ದಳು.

"ಮತ್ತೆ ? ಇಷ್ಟೊತ್ತಾದರೂ ನಿನಗೆ ನಿದ್ದೆ ಬಂದಿಲ್ಲಲ್ಲ ?" ಅಷ್ಟರಲ್ಲಿ ಒಳಗೆ ಏನೊ ಮುಳ್ಳು ಚುಚ್ಚಿದಂತಾಗಿ, "ನನಗ ಕರೀಬೇಕಾಗಿತ್ತು" ಎಂದಿದ್ದ.

ಸರಲೆ ಸುಮ್ಮನಿದ್ದಳು.

ರಾಮಣ್ಣ ಮೆಲ್ಲನೆ ಅವಳನ್ನು ಬೆನ್ನಮೇಲಾಗುವಂತೆ ಮಲಗಿಸುತ್ತ, ಅವಳ ಗದ್ದವನ್ನು ಎಡಗೈಯಿಂದ ಎತ್ತಿ ಹಿಡಿಯುತ್ತ ಹಟದಿಂದ ಕೇಳಿದ್ದ:—

"ಏನಾಗೇದ ಹೇಳು" ಎಂದು.

"ಏನೂ ಇಲ್ಲ."

"ಉಹುಂ. ಸುಳ್ಳು ಹೇಳುವೆ. ಮುಖದ ಮ್ಯಾಲೆ ಕಾಣಿಸ್ತದೆ ಏನೊ ಆಗಿರಬೇಕು ಅಂತ ?"

"ಏ—ನೂ—ಏ—ನೇ—ನೂ ಇಲ್ಲ." ನಕ್ಕಿದ್ದಳು.

"ಹಾಗಿದ್ದರೆ ನಿದ್ದೆ ಯಾಕ ಬರಲಿಲ್ಲ ?"

"ಅದೂ ಆದ್ರೂ ಎಷ್ಟಂತ ಬಂದೀತು ? ವರ್ಷಾನುವರ್ಷ ನಡೆದೇ ನಡೆದಿದೆ. ಎಂದು ಮುಗೀತದೊ ಏನೊ !"

"ಛೀ ಹುಚ್ಚಿ ! ಅಂಥಾ ಯಾವ ವಿಚಾರನೂ ಮಾಡಬ್ಯಾಡ ಅಂದ್ರ ಮತ್ತ ಅದನ್ನೆ ತಲೀವಳಗ ತುಂಬಿಕೊಂಡು ಕೂಡುವೆ !"

"ನಾ ಆದ್ರೂ ಏನ್ಮಾಡಲಿ ? ನನಗೇ ಇಷ್ಟು ಬ್ಯಾಸರ ಆಗೇದ, ಇನ್ನು ಮುಂದಿಗೆಷ್ಟು ಬ್ಯಾಸರ ಆಗಿರಬಾರದು ?"

"ನಿನಗ ಮಲಗಿದಲ್ಲಿಯೆ ಮಲಗಿಕೋಬೇಕಾಗ್ತದ ಅಂತ ಬ್ಯಾಸರ ಆಗಿರಬಹುದು. ನಮಗೇನು ಧಾಡಿ ಬ್ಯಾಸರ ಆಗ್ಲಿಕ್ಕೆ ? ಮ್ಯಾಲೆ, ನೀನು ಸುಧಾರಿಸುವೆ ಅಂಬೋ ಆಶಾದಿಂದ ಕ್ಷಣಧಾಂಗ ಕಳೆದುಹೋಗ್ತಾವ ದಿನಗಳು."

" ನಾನು ಸುಧಾರಿಸೇನು ಅಂಬೋದು ಹುಚ್ಚು ಕಲ್ಪನಾ. ನೋಡಿರಲ್ಲ, ನೀವೇನು ಕಡಿಮೆ ಮಾಡ್ತೀರಾ ? ಎಲ್ಲಾ ತರದ ಬಾಟ್ಲಿ ಆದುವು, ಯಾವಾವೊ ಇಂಜೆಕ್‌ಶನ್ ಆದುವು, ಯಾವ ಛಲೋ ಡಾಕ್ಟರನೂ ಉಳೀಲಿಲ್ಲ— "

" ಅಂದ್ರೇನು ? ನೀನು ಸುಧಾರಿಸೋದೇ ಇಲ್ಲ ಅಂತ ಗೊತ್ತಿದ್ದೂ ನಾ ಇದನ್ನೆಲ್ಲ ನಡೆಸೀನೇನು ?"

" ಪಾಪ ! ನೀವು ನಿಂ ಕರ್ತವ್ಯ ಮಾಡಿದಿರಿ. ಆದರೆ ಇದು ನೆಟ್ಟ ಗಾಗೋ ಜಡ್ಡೇ ಇದ್ದಿಲ್ಲ ಅಂದರೆ ಯಾರೇನು ಮಾಡ್ತಾರ ?"

ರಾಮಣ್ಣ ನಗೆಯಿಂದ ಆ ವಿಚಾರವನ್ನು ಹೊಡೆದುಹಾಕಲು ಯತ್ನಿಸಿದ್ದ: " ಕರ್ತವ್ಯ ಅಂದ್ರ ? ಇಷ್ಟು ವರ್ಷ ಈಕೆ ನನ್ನ ಹೆಂಡತಿ ಅಂತ ಅಡಿಗೆ ಮಾಡಿ ಊಟಕ್ಕ ಹಾಕತಿದ್ದಳು, ಸಂಸಾರ ಸುಖ ಒದಗಿಸತಿದ್ದಳು, ಇಷ್ಟು ನನ್ನ ಹರಿದ ಬಟ್ಟೆ ಹೊಲಿದುಕೊಟ್ಟಿದ್ದಳು, ಇಷ್ಟು ಶರ್ಟಿಗೆ ಒಡೆದ ಗುಂಡಿ ಹಚ್ಚಿ ಕೊಟ್ಟಿದ್ದಳು ಅಂತ ಲೆಕ್ಕ ಹಾಕಿ, ಈಕೆಗೆ ಆ ಲೆಕ್ಕದ ಪ್ರಕಾರ ಇಷ್ಟು ದಿವಸ ಇಷ್ಟು ಬಿಲ್ ಆಗೋತನಕ ಔಷಧ ಕೊಡಿಸಬೇಕು, ಮುಂದ— "

" ಸಾಕು ತಗೀರಿ ! ನಾ ಹಾಂಗ ಹೇಳಿಲ್ಲ ಅನ್ನೋದೇನು ಗೊತ್ತಿಲ್ಲ ನಿಮಗ ? ಆದರೆ ಸಾಯೋ ಗಿಡಕ್ಕ ಸೇದಿ ನೀರು ಹಾಕೋದು ಶಾಣೇತನ ಅಲ್ಲ ಅಂತ— "

" ಇಲ್ಲಿ ನೋಡು ಸರಲಾ; ನೀನು ಸಾಯೋ ವಿಚಾರ ಬಿಡು, ಬದುಕೋದು ಹ್ಯಾಂಗ ಅಂಬೋದನ್ನ ನೋಡಿಕೊಳ್ಳೋದು ನನ್ನ ಜವಾಬ್ದಾರಿ. ಆಯ್ತಿಲ್ಲೊ ? ಮತ್ತ ಇನ್ನೊಂದು ಮಾತು. ಚೇಳು ಕಣ್ಣಿಗೆ ಬಿದ್ದ ಕೂಡಲೆ ' ಆಸ್ತಿಕ, ಆಸ್ತಿಕ ' ಅಂದ್ಬಿಡು. "

" ಅಂದ್ರ ? " ಎಂದು ನಗೆಮೊಗದಿಂದ ಕೇಳಿದ್ದಳು.

" ಇಂಥಾ ಕೆಟ್ಟ ವಿಚಾರ ಬರೋದು ಅಂತ ಸಂಶಯ ಬಂದಕೂಡಲೆ ನನ್ನ ಕರೆದುಬಿಡು, ನಾ ಬಂದ್ಕೂಡ್ತೇನಿ ನಿನಗ ನಿದ್ದೆ ಬರೋತನಕ. "

ಒಂದರೆ ನಿಮಿಷ ಸುಮ್ಮನಿದ್ದು, ಉಸುರ್ಗರೆದು ಸರಲೆ " ಅದನ್ನೆ ನಾ ಹೇಳೋದು " ಎಂದಿದ್ದಳು.

" ಅದನ್ನ ಹೇಳೋದಂದ್ರ ? " ರಾಮಣ್ಣನಿಗೆ ಸಂದರ್ಭ ತಿಳಿದಿರಲಿಲ್ಲ.

" ಮತ್ತ ಮುಂದಿಗೆ ತ್ರಾಸ ಕೊಡೋದು, ಅಂದೆ. "

" ಇಲ್ಲಿ ಬಂದು ಕೂಡೋದು ತ್ರಾಸ ಅಂದೆನೆ ನಾ ? "

" ನೀವು ಅನ್ನಲಿಲ್ಲ, ನಿಮಗ ಅನ್ನಿಸಲಿಕ್ಕಿಲ್ಲ, ಹಾಂಗ. ಆದರೂ ನೀವು ಬರೀತಾ ಕೂತಾಗ ನಿಮ್ಮನ್ನ ನಾ ಕರೀಲಾರೆ. "

" ನನ್ನ ಕಿಂತ ನಿನಗೇ ಮಹತ್ತ್ವದ್ದಾಗೇದೇನು ನಾನು ಬರೆಯೋದು ?"

" ಯಾಕಾಗಬಾರದು ? ನಿಂ ಬರೆಯೋದರಿಂದ ನಿಮಗೂ ಸುಖ ಅದ ಜನರಿಗೂ ಸುಖ ಅದ. ಅದನ್ನ ಬಿಟ್ಟು ಇಂದೊ ನಾಳೆಯೊ ಅನ್ನೋ ನನ್ನ ಮಗ್ಗುಲಿಗೆ ಮೂಲೆ ಹಿಡಿದು ಕೂತರೆ ಏನ್ಮಾಡಿಧಾಂಗಾಯ್ತು ?"

" ನೀನೇ ಲೇಖಕ ಆಗಿದ್ದರೆ ನಿನ್ನ ಮನೆಯವರದು ಗೋಳಿತ್ತು. ' ಎಂದು ರಾಮಣ್ಣ ನಕ್ಕು, ಆಕೆಯನ್ನೂ ನಗಿಸಿ ಆ ವಿಚಾರವನ್ನೆ ಮರೆಯಿಸಿ ಬಿಟ್ಟಿದ್ದ.

" ಆದರೂ—ಯಾಕೊ ಏನೊ ?—ನಾಲ್ಕಾರು ದಿವಸಗಳಿಂದ ಮನಸ್ಸಿನೊಳಗ ಏನೇನೊ ವಿಚಾರ ಬರ್ತಾವ. ನಾನೂ ಎಷ್ಟು ಪ್ರಯತ್ನ ಮಾಡ್ತೀನಿ–'

" ಇಲ್ಲಿ ನೋಡು, ಸರಲಾ, ಬಂದ ವಿಚಾರ ತ್ರಾಸ ಕೊಡಲಾರಧಾಂಗ ನಿನಗೊಂದು ಯುಕ್ತಿ ಹೇಳಿಕೊಡ್ತೀನಿ. ಬರೋಗೊಂದೇ ತಡ ಅದನ್ನ ಹೊರಗ ಹಾಕಿಬಿಡಬೇಕು; ವಿಚಾರ ಬರೋದಂದ್ರ ಸೀನು ಬಂಧಾಂಗ, ಒಳಗ ತಡೆದು ಕೊಂಡು ಕೂತರ— "

" ಹೊರಗ ಹಾಕೋದಂದ್ರ ಏನು ? ಕೆಮ್ಮೋದೋ ? ಸೀನು ಬಿಡೋದೊ ? "

" ಇನ್ನೊಬ್ಬರಿಗೆ—ಅಂದ್ರೆ ನನಗೆ—ಹೇಳೋದು. ಆಗಲಿ, ಹೇಳು ನೋಡೋಣ. ನಿನ್ನೆ ಮೊನ್ನಿನ ವಿಚಾರ ಸದ್ಯಕ್ಕಿರಲಿ. ಈಹೊತ್ತು ಬಂದ ವಿಚಾರ ಹೇಳು. "

" ಉಹುಂ. "

" ನೋಡಿದೆಯಾ ? ಔಷಧ ಒಲ್ಲೆ ಅಂದು ಜಡ್ಡು ನೆಟ್ಟಗಾಗೋದಿಲ್ಲ ಅಂಧಾಂಗ. "

" ನೀವು ನಗ್ತೀರಿ."

" ಇಲ್ಲ."

" ನೀವು ಸಿಟ್ಟಿಗೇಳ್ತೀರಿ. "

" ಇಲ್ಲ....ಎಲ ! ಇಲ್ಲಾ ನಗಿಸೋದು, ಇಲ್ಲಾ ಸಿಟ್ಟಿಗೆಬ್ಬಿಸೋದು ಅಂದ್ರ, ನಿನ್ನ ವಿಚಾರ ಆದ್ರೂ ಎಂಥಾವಿದ್ದಿರಬೇಕು ಅಂತೀನಿ ! "

" ಇಷ್ಟಾಗಿ ಹೇಳಿದರೂ ಏನು ಉಪಯೋಗ ? "

" ಮೊದಲು ಹೇಳು. ಅದರ ಉಪಯೋಗ ಏನು ಅಂಬೋದನ್ನ ಹೇಳಿದೆ ನಲ್ಲ ನಾನು ? "

" ಉಹುಂ. ಬರೀ ಬಾಯಿಯಿಂದ ಆಡಿದರೆ ಹೋಗೋ ವಿಚಾರ ಅಲ್ಲ."

" ಏನ್ಮಾಡಿದ್ರ ಹೋಗ್ತಾವಂತೀ ಹೇಳು. "

" ನೀವು ಅವನ್ನ ನಡೆಸಿಕೊಡ್ತೀನಿ ಅಂದ್ರ—" ಎಂದು ತಡೆದು, " ಸಾಕು ಸುಮ್ಮಸುಮ್ಮನೆ ನೀವಾದರೂ ಯಾಕೆ ಹೊತ್ತು ಕಳೀತೀರಿ ? ಹನ್ನೊಂದು ಹೊಡೀಲಿಕ್ಕೆ ಬಂದಿತು. ನನಗೂ ಇನ್ನು ನಿದ್ದೆ ಬರೋಹಾಂಗ ಕಾಣ್ತದ. " ಎಂದಿದ್ದಳು.

ಒಂದೆರಡು ನಿಮಿಷ ರಾಮಣ್ಣ ಮೌನದಿಂದಲೆ ಅವಳನ್ನು ದಿಟ್ಟಿಸಿ ನೋಡಿದ್ದ. ಕ್ರಮೇಣ ಅವನ ಮುಖದಲ್ಲಿ ಮುಗುಳ್ನಗೆ ಮೂಡಿತ್ತು. ಹೃದಯವೆ ಹೊರಬಿದ್ದಿದೆ ಏನೊ ಎನ್ನುವಷ್ಟು ನಯಸ್ಪರ್ಶದಿಂದ ಅವನ ಕೈ ಅವಳ ಹಣೆಯ ಮೇಲೆ ಸುಳಿಯಿತು. ಮೆಲ್ಲನೆ ಅವಳ ತಲೆಯನ್ನೆತ್ತಿ ತನ್ನ ತೊಡೆಯ ಮೇಲಿರಿಸಿಕೊಂಡ. ಹಾಗೇ ಅವಳ ಮುಖವನ್ನು ದಿಟ್ಟಿಸುತ್ತಿದ್ದ. ಅವಳೂ ಕಣ್ಣುಗಳನ್ನು ಮೇಲೇರಿಸಿ ಅವನ ಮುಖವನ್ನು ದಿಟ್ಟಿಸಿದಳು. ದೃಷ್ಟಿಗೆ ದೃಷ್ಟಿ ಕೂಡಿತು, ಮಾತ್ರೆ ಹೃದಯದಲ್ಲಿ ಹೃದಯ ಬೆರೆಯಿತು. ಅವಳ ಹೃದಯಾಂತರಾಳದಲ್ಲಿದ್ದ ವಿಚಾರ ತಟ್ಟನೆ ರಾಮಣ್ಣನಿಗೆ ಹೊಳೆಯಿತೇನೊ !

" ಅದೊಂದನ್ನ ಬಿಟ್ಟು ಬೇಕಾದ್ದಿರಲಿ, ನಡೆಸಿಕೊಡ್ತೀನಿ " ಎಂದಿದ್ದ ನಗೆಮೊಗದಿಂದ.

" ಯಾವುದೊಂದನ್ನ ಬಿಟ್ಟು ? " ಆಕೆಯೂ ಕೆಣಕುವ ದನಿಯಲ್ಲಿ ಕೇಳಿದ್ದಳು.

" ಈಗ ನಿನ್ನ ಮನಸ್ಸಿನಾಗ ಏನದ, ಅದನ್ನ ! "

" ನನಗ ಗೊತ್ತೇ ಇತ್ತು ! " ಎಂದು ಸರಲೆ ಉಸುರ್ಗರೆದಿದ್ದಳು.

" ಅದು ಶಕ್ಯ ಇಲ್ಲ ಅಂತ ನಿನಗ ಎಂದೋ ಗೊತ್ತಿರಬೇಕಿತ್ತು."

"ಯಾವುದು ಶಕ್ಯ ಇಲ್ಲ ಅಂತೀರಿ ಹೇಳಿರಲ್ಲ?" ಹಣ್ಣಾದರೂ ದನಿಯಲ್ಲಿ ಹಟವಿದ್ದಿತು.

"ಯಾವುದೆಂದರೇನು ? ಇಲ್ಲಿ ನೋಡು ಸರಲಾ, ನಿನಗ ಏನೂ ಆಗೋದಿಲ್ಲ. ನೀನು ಆ ವಿಚಾರ್ನ ಬಿಟ್ಟುಬಿಡು."

"ಏನೂ ಆಗೋದಿಲ್ಲ !" ಸರಲೆ ತನ್ನಷ್ಟಕ್ಕೆ ಮಾತನಾಡುವಂತೆ ತನ್ನ ಶಬ್ದಗಳನ್ನು ಪುನಃ ಉಚ್ಚರಿಸಿದ್ದಳು: "ಏನು ಸುಖದ ವಿಚಾರ ಅಂತ ಹೇಳ್ತೀರಿ, ಏನೂ ಆಗೋದಿಲ್ಲ, ಅಂತ ಹೇಳ್ತೀರಿ, ಏನೂ ಆಗೋದಿಲ್ಲ, ಅಂತ ? ವರ್ಷದ ವ್ಯಾಲಾಯಿತು ಹೀಂಗ ಬಿದ್ಕೊಂಡು. ಮನೆ ಅಂದರ ಭಣಭಣ ಅಂತದ. ನನ್ನಿಂದ ಅದಕ ಯಾವ ವೈಭವಾನೂ ಸಿಗಲಿಲ್ಲ. ಏನೂ ಆಗೋದಿಲ್ಲ ಅಂದರೂ ಸಿಗೋಹಾಂಗಿಲ್ಲ. ನೀವೇನು ಮುದುಕರ ತದುಕರ ? ಮಕ್ಕಳಿಲ್ಲದ ಮನೆ ಎಂಥಾದ್ದು ?"

"ಹುಚ್ಚಿ ! ಮೊದಲು ಹೆಂಡತಿ ಇದ್ದರೇನೆ ಮಕ್ಕಳ ಮಾತಲ್ಲ ?"

"ನನ್ನಂಥಾ ಹೆಂಡತಿ ಇದ್ದರ ಆ ಮಾತೇ ಏಳೋದಿಲ್ಲ."

ರಾಮಣ್ಣ ಈಗ ಏನೂ ಉತ್ತರ ಕೊಡದಂತಾಗಿದ್ದ. ಆಗಾಗ ಸರಲೆ ಈ ಮಾತನ್ನು ಹೇಳುತ್ತಿದ್ದಳಾದರೂ ಸದ್ಯದ ಸಂದರ್ಭದಲ್ಲಿ ಆ ಮಾತಿಗಾಗಿ ಅವನಿಗೆ ಏನೂ ತೋಚದಂತಾಗಿತ್ತು. ಯಾವುದೊ ಒಂದು ಒಳಗಿನ ಹೆದರಿಕೆಗಾಗಿ ತಾನು ಈ ಬಳಲಿಕೆಯಿಂದ ಪಾರಾಗುವುದಿಲ್ಲ ಎಂದು ಸರಲೆ ತಿಳಿದುಕೊಂಡಿದ್ದಳು. ಆಕೆಯು ಆ ವಿಚಾರವನ್ನು ತೆಗೆದುಹಾಕುವುದು ರಾಮಣ್ಣನಿಗೆ ಶಕ್ಯವಾಗಿರಲಿಲ್ಲ. ಆ ವಿಚಾರ ಅವನಿಗೂ ಬೇಡಾಗಿತ್ತು, ಎಷ್ಟೊ ಸಲ ಆ ವಿಚಾರದಿಂದ ಅವನಾದರೂ ಒಳಗಿಂದೊಳಗೆಯೆ ಹೆದರಿದ್ದ. ಈಗ ಕೂಡ ಅವನ ಮೈ ನಡುಗಿತ್ತು.

"ಯಾಕ ?" ಮೈ ನಡುಗಿದ್ದು ಸರಲೆಗೆ ಗೊತ್ತಾಯಿತೇನೊ ?

ರಾಮಣ್ಣ ಆಗ ತುಸು ಸಿಟ್ಟಿನ ದನಿಯಲ್ಲಿಯೆ ಹೇಳಿದ್ದ: "ನಿನ್ನ ಸಲುವಾಗಿ ಕೆಟ್ಟ ವಿಚಾರ ಬಂದರೇನೇ ನನ್ನ ಮೈ ನಡಗತದ, ಆ ವಿಚಾರವನ್ನ ಆಡಿ ತೋರಿಸೋದಂತೂ ಇರಲಿ. ನಾನಾದರೂ ಏನ್ಮಾಡಲಿ ಹೇಳು, ಸರಲಾ ?" ಎಂದು ಹತಾಶನ ದನಿಯಲ್ಲಿ ಅವನ ಬಾಯಿಯಿಂದ ಶಬ್ದಗಳು ತಡವರಿಸಿದ್ದವು.

ಮಲಗಿದಲ್ಲಿಯೆ ತನ್ನ ಕೈಯನ್ನೆತ್ತಿ ಅವನ ಗಲ್ಲವನ್ನು ನೇವರಿಸುತ್ತ, ನಗೆಯಿಂದ ಸರಲೆ ಹೇಳಿದ್ದಳು : " ಅಯ್ಯ ! ಈಗ ಯಾರಿಗೆ ಹುಚ್ಚ ಅನ್ನ ಬೇಕೊ ! ಕೆಟ್ಟ ವಿಚಾರ ಅಂತ ! ನಾ ಯಾಕ ಕೆಟ್ಟ ವಿಚಾರ ಹೇಳಲಿ ? ನಾನು ಸತ್ತಮ್ಯಾಲೆ ನೀವು ಏನ್ಮಾಡ್ತೀರೊ ಯಾರು ನೋಡಲಿಕ್ಕೆ ಬಂದಾರು ? ನಾನು ಸಾಯಬಾರದು, ನನ್ನಕಣ್ಣಿಂದೇ ನನ್ನ ವಿಚಾರ ನಡೆಸಿಕೊಡ್ಬೇಕು— "

ಸರಲೆಯು ಮಾತನ್ನು ಪೂರ್ತಿಯಾಗಿ ಕೇಳಿಕೊಳ್ಳದೆ, ಮೊದಲಿನ ಶಬ್ದ ಗಳಿಂದಲೆ ಉತ್ಸಾಹಭರಿತನಾಗಿ " ಹಾಂಗಿದ್ರ ಹೇಳು, ಬೇಕಾದ್ದನ್ನ ನಡೆಸಿ ಕೊಡ್ತೇನಿ " ಎಂದಿದ್ದ. ಎಂತಹ ಪ್ರಮಾದವೆನ್ನಿಸಿತ್ತದು ! ತನ್ನ ಬಾಯಿಯಿಂದ ಶಬ್ದಗಳು ಹೊರಡುವುದೊಂದೇ ತಡ, ಸರಲೆಯು,

" ಆ ಭಾಗ್ಯ ನೋಡ್ಲಿಕ್ಕೆ ದೇವರು ನನಗೂ ಆಯುಷ್ಯ ಕೊಡಲಿ, ಖರೇನೇ ನಡೆಸಿಕೊಡ್ತೀರಾ ? ಖರೇನ ?— " ತಾನು ತಲೆ ತೂಗುತ್ತಿದ್ದಿರಬೇಕು ಆಗ— " ಹಾಂಗಿದ್ದರ ಇನ್ನೊಂದು ಹೆಂಡ್ತೀನ್ನ— "

" ಆಂ ! " ಎಂದು ಸಿಡಿಲು ಬಡೆದವನಂತೆ ಬೆಚ್ಚಿಬಿದ್ದಿದ್ದ.

" ಇಲ್ಲ. ನಿಮಗ ಕೈಮುಗಿದು ಹೇಳ್ತೇನಿ. ನನ್ನ ವಿಚಾರ ಅದು. ನನ್ನ ಸಲುವಾಗಿ ನಡೆಸಿಕೊಡ್ತೀರಾ ? ಈ ಮನೇವಳಗ ಮಕ್ಕಳು-ಮರಿ ಓಡಾಡೋ ದನ್ನ ನೋಡಿ ಸಾಯ್ಬೇಕು ಅಂತ— "

ಯಂತ್ರದಂತೆ ತಾನು ತಲೆಯನ್ನು ಅಲ್ಲಾಡಿಸುತ್ತಿದ್ದ, " ಆಗದು, ಆಗದು " ಎಂದು ಒಳಗೆ ಹೃದಯ ಬಡೆದುಕೊಳ್ಳುತ್ತಿತ್ತು.

" ಅಷ್ಟು—ಅಷ್ಟಾದರೆ ನಾ ಸುಖದಿಂದ ಕಣ್ಮುಚ್ಚುತೀನಿ " ಹೃದಯದ ಸೆರಗೊಡ್ಡಿ ಬೇಡಿಕೊಳ್ಳುವಂತೆ ಸರಲೆ ನುಡಿದಳು.

" ಈಗ ಇದ್ದುದರ ಮುಂದೆ ಬೇರೆ ನನಗ ಯಾವ ಸುಖಾನೂ ಇಲ್ಲ " ಎಂಬ ಶಬ್ದಗಳು ಅವನ ಬಾಯಿಯಿಂದ ಹೊರನುಗ್ಗಿದುವು.

ಇಬ್ಬರೂ ಮಾತನಾಡುವಂತಿರಲಿಲ್ಲ. ಸರಲೆಯ ಕಣ್ಣುಗಳಲ್ಲಿ ನೀರಿನ ಹನಿ ಗಳು ಮಿಂಚಿದ್ದುವು. ರಾಮಣ್ಣನಿಗೆ ಬಹಳ ವ್ಯಥೆಯಾಗಿತ್ತು. "ಸರಲಾ, ಸರಲಾ, ನನಗೂ ಎಷ್ಟು ನೋವಾಗ್ತದ ಅಂಬೋದನ್ನ ನೋಡ್ಬಾರ್ದೆ ?" ಎಂದಿದ್ದ. ಆ ಮಾತಿಗೆ ಸರಲೆ ಒಮ್ಮೆಲೆ ಚಿಮ್ಮುತ್ತಿರುವ ದುಃಖವನ್ನು ತಡೆದುಕೊಂಡು

ಸಮಾಧಾನದ ದನಿಯಲ್ಲಿ " ನಿಮಗ ನೋವಾಗ್ತಿದ್ದರ ಈಗ ಆ ಮಾತೇ ಬ್ಯಾಡ" ಎಂದಿದ್ದಳು; ನಗೆಮೊಗದಿಂದ ತನ್ನನ್ನೆ ಸಂತೈಸಿದ್ದಳು.

ಇಷ್ಟೊತ್ತು ಮಾತನಾಡಿದ್ದಕ್ಕೆ ಆಯಾಸವಾಗಿತ್ತೊ, ವಿಚಾರ ಹೊರ ಬಿದ್ದುದಕ್ಕೆ ನೆಮ್ಮದಿ ಎನಿಸಿತ್ತೊ, ಅಂತೂ ಸರಲೆ ಕೂಸಿನಂತೆ ಮುಂದೆ ಎರಡೇ ನಿಮಿಷಗಳಲ್ಲಿ ನಿದ್ರೆಹೋಗಿದ್ದಳು. ಕೆಲ ನಿಮಿಷ ತಡೆದು ರಾಮಣ್ಣ ಮೆಲ್ಲನೆ ಅವಳ ತಲೆಯನ್ನು ತಲೆದಿಂಬಿನ ಮೇಲಿರಿಸಿ ತುದಿಗಾಲಿನಿಂದ ಹೊರಬಿದ್ದಿದ್ದ.

ಬಹು ದೂರದವರೆಗೆ ಪ್ರವಾಸ ಮಾಡಿ ಒಂದು ಅಪರಿಚಿತ ಸ್ಟೇಶನ್ ದಲ್ಲಿ ಇಳಿದುಕೊಂಡರೆ ಆಗುವಂತೆ ರಾಮಣ್ಣನು ದಿಗ್ಭ್ರಾಂತನಾಗಿದ್ದ— ಸರಲೆಯ ಕೋಣೆಯಿಂದ ಹೊರಬಿದ್ದೊಡನೆ, ಇದೇನು ? ಎಲ್ಲಿಗೆ ಬಂದಿರುವೆ? ಇಲ್ಲವೆ ಎಲ್ಲಿಗಾದರೂ ಹೊರಟಿರುವೆನೆ ? ಎನ್ನುವವ ನಂತೆ ಕಳೆಗೇಡಾದ ಕಣ್ಣುಗಳಿಂದ ಅತ್ತಿತ್ತ ಪಿಳಿಪಿಳಿ ನೋಡುವಾಗ ಕುಮುದಳ ಕೋಣೆಯ ಬಾಗಿಲು ಕಂಡಿತು. ಹಾಂ—ಎಷ್ಟೊ ದಿನಗಳ ಮುಂಚೆ—ಅಲ್ಲ ಕೆಲವು ನಿಮಿಷಗಳಿಗೆ ಮುಂಚಿತ ನಾನು ಹೊರಟದ್ದು ಆ ಕೋಣೆಗೆ ಎಂದು ಅತ್ತ ಹೊರಡುವಷ್ಟರಲ್ಲಿ " ಛಿ ! ಇದೆಂತಹ ವಿಚಾರ ! " ಎಂದವನೆ ಬಿರಿಬಿರಿ ನಡೆದು ತನ್ನ ಕೋಣೆಗೆ ಹೋಗಿ ಬಾಗಿಲನ್ನು ಮುಚ್ಚಿ ಕೊಂಡು ಕುಳಿತಿದ್ದ. ಆದರೆ ಮನಸ್ಸು ಕಲಕಿದಂತಾಗಿತ್ತು, ಯಾವುದೊ ಒಂದು ಅಸಮಾಧಾನವು ಅವನನ್ನು ಕುಳಿತಲ್ಲಿ ಕೂಡ್ರಗೊಡಲೊಲ್ಲದು, ಏನೊ ಹುಡುಕುವವನಂತೆ, ಆದರೆ ಶೂನ್ಯದೃಷ್ಟಿಯಿಂದ ಅತ್ತಿತ್ತ ಸುಳಿದಾಡಿದನು. " ಇದೊಂದು ದಿನ ಹೋಗಿ ಬಂದರಾಯಿತು " ಎಂದುಕೊಂಡಿದ್ದ. ಆದರೂ ಕಾಲ್ಗಳು ಕೀಳಲೊಲ್ಲವು. ಸರಲೆಯ ಬೇಡಿಕೆಯ ಆ ದೀನವಾಣಿಯು ಇನ್ನೂ ಅವನ ಕಿವಿಯೊಳಗಿಂದ ಎದೆಗೆ ತಟ್ಟಿದ್ದು ಹೊರಗೆ ಬಂದಿರಲಿಲ್ಲ. ಇಂದು ಇಷ್ಟೊಂದು ಕಕ್ಕುಲಾತಿಯಿಂದ ಬೇಡಿಕೊಂಡಳೇಕೆ ? " ನನ್ನ ಸಲುವಾಗಿ " ಎಂದಳು, " ಅಷ್ಟಾದರೆ ಸುಖದಿಂದ ಕಣ್ಮುಚ್ತೀನಿ " ಎಂದಳು. ಯಾಕೆ ? ಆಕೆಗೆ ತಿಳಿದಿರಬಹುದೆ ? ಬೇನೆಯ ಬಳಲಿಕೆಯಿಂದ ಹಣ್ಣಾದ ಆ ಸ್ತ್ರೀಹೃದ ಯಕ್ಕೆ ತನ್ನ ವಂಚನೆಯಿಂದ ಎಂತಹ ಆಘಾತವಾಗಿರಬೇಕು ? ಅಥವಾ, ತಿಳಿದಿರಲಿಕ್ಕಿಲ್ಲ. ಮುಂಚೆ ಕೂಡ ಆಕೆ ಇದೇ ಮಾತನ್ನು ಹೇಳುತ್ತಿದ್ದಳು. ಆದರೆ ಇಂದು ಇಷ್ಟೊಂದು ದೀನವಾಣಿ ಇದ್ದಿತಲ್ಲ ? ತಾನು ಜೀವದಿಂದಿರು ವಾಗಲೆ ಇದು ನಡೆಯಬೇಕು ಎಂದಳಲ್ಲ ? ಓಹೊ—ತನ್ನ ಸಂಬಂಧಿಕಳಾದ

ಕುಮುದಳನ್ನೇ ಮದುವೆಯಾಗಬೇಕೆಂದು ಆಕೆಯ ಮನಸ್ಸಿನಲ್ಲಿದ್ದಿರಬಹುದೆ ? ಮುಂದೆ ಮತ್ತೆ ಯಾರನ್ನಾದರೂ ಮದುವೆಯಾದೇನೆಂದು ಹೆದರಿ. ತನ್ನ ಜೀವ ಮಾನದಲ್ಲಿಯೆ ನಡೆಯಬೇಕೆಂದು ಹಂಬಲಿಸುತ್ತಿರುವಳೆ? ಪಾಪ! ಎಂತಹ ಶುದ್ಧ ಅಂತಃಕರಣ ! ಎಂತಹ ಸರಲ ಸ್ವಭಾವ ! ಇಂತಹ ಹೆಂಡತಿಯ ಅನುಭವ ವನ್ನುಂಡ ನಾನು ಇನ್ನೊಂದು ಮದುವೆಯಾಗುವೆನೆಂದು ಇವಳು ತಿಳಿದ ಳಾದರೂ ಹೇಗೆ ? ಹೃದಯದ ಸಂಭ್ರಮವು ಹಗುರಾಗಿ ಈಗ ರಾಮಣ್ಣನು ತನ್ನ ವಿಚಾರಕ್ಕಾಗಿ ತಾನೇ ನಕ್ಕಿದ್ದನು. ಇನ್ನೊಂದು ಮದುವೆಯಂತೆ ! ಎಂತಹ ಮುಗ್ಧೆ ಈ ಸರಲೆ ! ತನಗೆ ಇನ್ನೊಂದು ಮದುವೆಯೆ ಇಲ್ಲ. ಬೇರೆ ಯಾರೊಡನೆ ಮದುವೆಯಂತೂ ಇರಲಿ, ಕುಮುದಳ ಕೂಡವೂ—ಆಗ ರಾಮಣ್ಣನಿಗೆ ಮತ್ತೆ ದಿಗ್ಭ್ರಮೆಯಾದಂತಾಗಿತ್ತು. ಇದೇನು ಹೀಗೆ ವಿಚಾರ ಗೊಂದಲದಲ್ಲಿ ಸಿಕ್ಕಿಕೊಂಡೆ ನಾನು—ಎಂದುಕೊಂಡಿದ್ದ. ಕುಮುದಳನ್ನೂ ಮದುವೆಯಾಗುವುದಿಲ್ಲ ಎಂಬ ವಿಚಾರ ತನಗೆ ಬಂದಿತಲ್ಲ ? ಆದರೆ ಈಗ ಕುಮುದಳ ಕೋಣೆಗೇ ತಾನು ಹೊರಟಿರುವನಲ್ಲ ? ಯಾಕೆ ತಾನು ಅಲ್ಲಿ ಹೋಗುವುದು ? ಅಂತಹ ಉದ್ದೇಶದಿಂದ ಹೋಗಬಯಸುವ ತನ್ನ ಮನಸ್ಸು ಆಕೆಯನ್ನು ಮದುವೆಯಾಗಲು ಒಲ್ಲೆನ್ನುವುದು ! ಛೆ ! ಈ ತೊಡಕಿನಿಂದ ತಾನು ಈಗಲೆ ಜಾರಿಕೊಳ್ಳತಕ್ಕದ್ದು. ಆದದ್ದಾಗಿ ಹೋಯಿತು, ಇಂದಿನಿಂದ ಕುಮುದಳ ಕೋಣೆಯಲ್ಲಿ ಕಾಲಿಡತಕ್ಕದ್ದಲ್ಲ—ಎಂದುಕೊಂಡ.

ಆದರೇನು ತನ್ನಷ್ಟಕ್ಕೆ ಮನಬಂದಂತೆ ವಿಚಾರ ಮಾಡಿದ್ದನ್ನು ರಾಮ ಣ್ಣನ ಬುದ್ಧಿ ಒಪ್ಪಲಿಲ್ಲ. "ನಿನ್ನಷ್ಟಕ್ಕೆ ನೀನು ಹೋಗುವುದಿಲ್ಲ ಎಂದು ಇಲ್ಲಿ ಕುಳಿತರೆ ಆಕೆಗೆ ತಿಳಿಯುವುದು ಹೇಗೆ ? ಇಬ್ಬರ ಒಪ್ಪಿಗೆಯಿಂದ ಕೈಕೊಂಡ ಕರಾರನ್ನು ಒಬ್ಬನೇ ಮುರಿಯುವುದು ಯಾವ ನ್ಯಾಯ ? ಇದಲ್ಲದೆ ನಿನ್ನನ್ನು ಮದುವೆಯಾಗಬೇಕೆಂದು ಕುಮುದಳ ಮನಸ್ಸಿನಲ್ಲಿದ್ದರೆ ನಿನ್ನ ನಿಶ್ಚಯಕ್ಕೆ ತುಸುಮಟ್ಟಿಗಾದರೂ ಅರ್ಥವಿದೆ. ಆದರೆ ಆಕೆಗೂ ಮದುವೆಯ ವಿಚಾರ ವಿದ್ದಿಲ್ಲವೆಂದರೆ ? ಆಗ ತೊಡಕು ಎಲ್ಲಿದೆ ? ಹೀಗೆ ಹುಚ್ಚನಂತೆ ಮಾಡಬೇಡ. ಹೋಗು, ಅವಳು ನಿನ್ನ ದಾರಿಯನ್ನು ಎಷ್ಟೊತ್ತಿನಿಂದ ಕಾಯುತ್ತಿರು ವಳೋ !" ಎಂದು ಬುದ್ಧಿಯು ಮುಂದಾಗಿ ಅವನನ್ನು ಎಳೆಯುತ್ತಿತ್ತು. ಹೆಜ್ಜೆ ಮುಂದಿಟ್ಟೊಡನೆ "ಮಕ್ಕಳಿಲ್ಲದ ಮನೆ ಎಂತಹ ಮನೆ ! ನನ್ನ ಸಲು

ವಾಗಿಯಾದರೂ ಮದುವೆಯಾಗಿರಿ, ಮನೆಯಲ್ಲಿ ಮಕ್ಕಳು ಓಡಾಡುವುದನ್ನು ನೋಡಿ ಸಾಯುವೆ" ಎಂದು ಅವನ ಹೃದಯದಲ್ಲಿ ಇನ್ನೂ ಗುಣುಗುಟ್ಟುತ್ತಿದ್ದ ಸರಲೆಯ ದನಿ ಹಗ್ಗದಂತೆ ಅವನನ್ನು ಹಿಂದೆಳೆಯುತ್ತಿತ್ತು. "ಹುಚ್ಚ ನೀನು ! ಸರಲೆಯ ಸಮಾಧಾನಕ್ಕೆ ನಿನಗೆ ಸರಿ ಎನ್ನಿಸಿದಾಗ ಮದುವೆಯಾದೀಯಂತೆ. ಆದರೆ ಎಂದಿನ ಮಾತಿಗೊ ಹೆದರಿ ಇಂದಿನ ಸುಖವನ್ನು ತಪ್ಪಿಸಿಕೊಳ್ಳುವುದರಲ್ಲಿ ಯಾವ ಜಾಣತನವಿದೆ ? ನಡೆ" ಎಂದು ಮತ್ತೆ ಬುದ್ಧಿಯು ಪ್ರೋತ್ಸಾಹಿಸುತ್ತಿತ್ತು. "ಖರೇನೆ—ಖರೇನೇ ನಡೆಸಿಕೊಡ್ತೀರಾ ? ಅಷ್ಟು—ಅಷ್ಟಾದರೆ ನಾ ಸುಖದಿಂದ ಕಣ್ಮುಚ್ಚೇನಿ" ಎಂದು ಸರಲೆಯ ದನಿಯು ಈಗ ಮೂರ್ತಿಮತ್ತಾಗಿ ಕೈಹಿಡಿದು, ಮುಂದೆ ಹೋಗದಂತೆ ಜೋತುಬಿದ್ದಂತಾಗುತ್ತಿತ್ತು. "ಹಹ ! ಇಷ್ಟ್ಯಾಕೆ ಸರಲೆಯ ವಿಚಾರ ? 'ನೀವೇನು ಮುದುಕರ ತದುಕರ?' ಎಂದು ಆಕೆ ನಿನ್ನ ಅಗತ್ಯವನ್ನು ಅರಿತುಕೊಂಡಿಲ್ಲವೆ ? ಆಕೆ ಹೇಳಿದ್ದು ನಿನ್ನ ಸುಖದ ಸಲುವಾಗಿಯಲ್ಲವೆ ? ಈಗ ನಿನಗಾಗಿ ಸುಖ ಅಲ್ಲಿ ಹಾಸಿಗೆಯ ಮೇಲೆ ನಿರೀಕ್ಷಿಸುತ್ತ ಬಿದ್ದುಕೊಂಡಿದೆ, ಇನ್ನಾದರೂ ತಡಮಾಡಬೇಡ" ಎಂದು ಒಮ್ಮೆಲೆ ಬುದ್ಧಿ ಕಸುವಿನಿಂದ ನಾಲ್ಕಾರು ಹೆಜ್ಜೆಗಳನ್ನು ಮುಂದೆ ಎಳೆದಂತಾಗಿತ್ತು. ಸರಲೆಯ ದನಿ ಹಿಂದೆ ನಿಂತಲ್ಲಿಯೆ ಉಳಿಯಿತೇನೊ ! ಈಗ ಅಸ್ಪಷ್ಟವಾಗಿ ಕೇಳಿಸುತ್ತಿತ್ತು. "ಹುಚ್ಚಾ ! ಹುಚ್ಚಾ ! 'ಈಗ ಇದ್ದುದರ ಮುಂದೆ ನನಗೆ ಬೇರೆ ಯಾವ ಸುಖಾನೂ ಇಲ್ಲ' ಎಂದು ಸರಲೆಯು ಮುಂದೆ ಒಪ್ಪಿಕೊಂಡಿರುವೆ. ಈಗ ಇದ್ದುದನ್ನು ಬಿಟ್ಟು ಬೇರೆ ಎಲ್ಲಿ ಸುಖ ಕಾಣುವೆ ?" ಎನ್ನುತ್ತ ಬುದ್ಧಿ ಅವನನ್ನು ಕೋಣೆಯಿಂದ ಹೊರಗೇ ಎಳೆದೊಯ್ದು ಬಿಟ್ಟಿತ್ತು.

ರಾಮಣ್ಣ ಮೊದಲು ನಿರ್ವಿಣ್ಣನಾದ, ಆಮೇಲೆ ಕೋಪಗೊಂಡ. ಇಷ್ಟೊಂದು ವಿಚಾರದಿಂದ ತಲೆ ಕೆಡಿಸಿಕೊಳ್ಳುವುದೇಕೆ ? ಮದುವೆಯ ವಿಚಾರ ಯಾಕೆ ? ನ್ಯಾಯದ ವಿಚಾರ ಯಾಕೆ ? ನಿಸರ್ಗವೆ ಈ ನೀತಿಯನ್ನು ಹಾಕಿಕೊಟ್ಟಿದೆ-ಎಂಬವಿಚಾರದಿಂದ ತುಸು ಬಿಂಕದಿಂದಲೆ ಕುಮುದಳ ಕೋಣೆಯಲ್ಲಿ ಕಾಲಿಟ್ಟಿದ್ದ. ದೀಪ ಥಾಳವಾಗಿ ಉರಿಯುತ್ತಿತ್ತು. ಬದಿಯ ಗೋಡೆಗಿದ್ದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ಕಂಡಿತು; ತನ್ನನ್ನು ತಾನೇ ನೋಡಲು ಹೆದರಿಕೆಯಾಗಿತ್ತೇನೊ ! ಆ ಬೆಳಕಿನಲ್ಲಿ ಕುಮುದಳನ್ನು ಎದುರಿಸಲು ನಾಚಿಕೆಯೆನ್ನಿಸಿ

ತ್ತೇನೊ ! ಕುಮುದಳ ಮುಖ ಬಾಗಿಲ ಕಡೆ ಇದ್ದಿರಲಿಲ್ಲ. ಇದೇ ಸಮಯವನ್ನು ಸಾಧಿಸಿ ಕೋಣೆಯಿಂದ ಜಾರಿಕೊಳ್ಳಬೇಕೆಂಬ ವಿಚಾರವೂ ಬಂದಿತ್ತು. ಆದರೆ ಕೂಡಲೆ ಗಂಡಸನಾದ ರಾಮಣ್ಣನಿಗೆ ಅವಮಾನವಾದಂತಾಗಿತ್ತು. ಯಾಕೆ ಓಡಿಹೋಗುವುದು ? ಈ ಹುಡುಗಿಗೆ ಹೆದರುವೆನೆ ? ನನ್ನ ಉದ್ದೇಶವೇನಿದೆ ಎಂಬುದನ್ನು ಸ್ಪಷ್ಟವಾಗಿ ಇವಳಿಗೆ ತೋರಿಸಿಕೊಡುವೆ—ಎಂದವನೆ ದೀಪವನ್ನಾರಿಸಿ ಹಾಸಿಗೆಯ ಮೇಲೆ ಮಲಗಿಕೊಂಡಿದ್ದ, ಗಂಡಸಿನ ಅಧಿಕಾರವನ್ನು ನಡೆಸಿದವನೆ ಕೋಣೆಯಿಂದ ಹೊರಬಿದ್ದಿದ್ದ.

ಅಲ್ಲ—ಇನ್ನು ಹೊರಬೀಳುವೆ ಎಂದುಕೊಂಡಿದ್ದ ಮಾತ್ರ. ಆದರೆ ನಿಜವಾಗಿ ಅಂದು ತಾನು ಆ ಕೋಣೆಯಿಂದ, ತಪ್ಪಿಸುವ ಕಳ್ಳನಂತೆ ಜಾರಿಕೊಂಡಿದ್ದ. ಅದುವರೆಗಿನ ಉನ್ಮಾದವು ಇಳಿದಾಕ್ಷಣ ರಾಮಣ್ಣನು ಬೇರೆ ವ್ಯಕ್ತಿಯೆ ಆಗಿದ್ದ. ಇದೇನು—ಹೀಗೆ ಮಾಡಿದೆ ? ಎಂದುಕೊಂಡರೂ ಅಲ್ಲಿ ನಿಂತು ಸಮಾಧಾನವನ್ನಾಗಲಿ ಕ್ಷಮೆಯನ್ನಾಗಲಿ ಕೊಡಲು ಅಭಿಮಾನ ಹಿಂಜರಿಯಿತೆಂದೇ ಅವನು ಜಾರಿಕೊಂಡಂತೆ ಕೋಣೆಯಿಂದ ಹೊರಬಿದ್ದಿದ್ದ. ತನ್ನ ಕೋಣೆಗೆ ಹೋದೊಡನೆ ಅಲ್ಲಿ ಕೂಡ ಅವನಿಗೆ ದೀಪದ ಬೆಳಕು ಅಸಹ್ಯವೆನ್ನಿಸಿತ್ತು, ಕತ್ತಲಲ್ಲಿಯೆ ಕುಳಿತುಕೊಂಡಿದ್ದ. ಪಶು ! ನಾನು ಶುದ್ಧ ಪಶು ! ಎಂದುಕೊಂಡಿದ್ದ. ಮರುಗಳಿಗೆಯಲ್ಲಿ ಆ ಮಾತು ಪಶುವಿಗೇ ಅವಮಾನ, ಯಾವ ಪಶುವೂ ಮನುಷ್ಯನಂತೆ ಅತಿಕಾಮುಜೀವಿಯಾಗಿಲ್ಲ, ಪ್ರಕೃತಿಯ ಒಂದು ನಿಯಮಿತ ಹೊಣೆಯಾಗಿರುತ್ತದೆ—ಎಂದು ತನ್ನನ್ನು ಬೇರೆಯಾಗಿ ಹಳಿದುಕೊಂಡಿದ್ದ. ಆಗ ಅವನಿಗೆ ವಿಚಾರ ಬಂದಿತ್ತು—ಕುಮುದಳ ಸಹವಾಸವಿಲ್ಲದೆ ಹೋದರೆ ತನ್ನ ಬದುಕಿನಲ್ಲಿ ಏನೊ ಒಂದು ಕೊರತೆಯಾದಂತೆನ್ನಿಸುವುದು ಎಂದು. ಎಷ್ಟು ಪರಿಯಿಂದ ವಿಚಾರ ಮಾಡಿದರೂ ಕೊನೆಗೂ ತಾನು ಕುಮುದಳ ಕಡೆಗೆಯೆ ಧಾವಿಸಿದ್ದನಲ್ಲ ? ಕೆಲವೇ ನಿಮಿಷ ಮುಂಚಿತ ಅಲ್ಲಿ ಅನೈಸರ್ಗಿಕವಾಗಿ ನಡೆದುಕೊಂಡರೂ ಕುಮುದಳಿಗಾಗಿ ತನಗೆ ಸಿಟ್ಟು ಇದ್ದಿಲ್ಲ, ಹೋಗಿ ಕ್ಷಮೆಯನ್ನು ಬೇಡಬೇಕು ಎಂದೆನ್ನಿಸುತ್ತಿತ್ತು. ಅಂದಿನ ಅನುಭವವನ್ನು ಮರೆತು ಮನಸ್ಸು ಮುಂಚಿನ ದಿನಗಳ ಅನುಭವವನ್ನು ನೆನೆದು ಸವಿಯುತ್ತಿದ್ದಿತು. ಕುಮುದಳಿಗೆ ತಾನು ಮನ ಸೋತಿರುವೆನೆ ? ಆಗ ನೆನಪಾಗಿತ್ತು ರತ್ನಾವಲೀ ನಾಟಕದಲ್ಲಿಯ ಶ್ಲೋಕ. ಮನಸ್ಸು ಎಂತಹದೊ ! ಅದು

ಹೇಗೆ ಮತ್ತು ಯಾಕೆ ಸೋಲುವುದೊ ! ಮನಸ್ಯನನ್ನು ಮೀರಿದ ಮಾತು. "ವಿಧಿ" ಎಂಬುದರ ಬದಲಾಗಿ "ಸ್ಮರ" ಎಂಬ ಪದವನ್ನು ಸೇರಿಸಿ ರಾಮ ಣ್ಣನು ಅಂದು ಆ ಶ್ಲೋಕದ ಅರ್ಥವನ್ನು ಹಚ್ಚಿ ಸಮಾಧಾನವನ್ನು ತಂದು ಕೊಂಡಿದ್ದನು. ಸ್ಮರನು ಮನಸ್ಸು ಮಾಡಿದರೆ ಸಾಕು, ದ್ವೀಪಾಂತರದಿಂದ ಇಲ್ಲವೆ ಸಮುದ್ರದಾಚೆಯಿಂದ ಇಲ್ಲವೆ ಭೂಗೋಲದ ಅಂತದಿಂದ ಒಂದು ಹುಡುಗಿ ಅಕಸ್ಮಾತ್ತಾಗಿ ಬಂದು ನಿಮ್ಮ ಹೃದಯವನ್ನು ಅಪಹರಿಸುವಳು.

ಕುಮುದಳು ಹಾಗೆ ಮಾಡಿರುವಳೆ ? ಎಂಬ ವಿಚಾರದಲ್ಲಿ ಮಗ್ನನಾಗಿ ಇಡಿಯ ರಾತ್ರಿ ಕುಳಿತ ಕುರ್ಚಿಯಲ್ಲಿಯೆ ನಿದ್ರೆಹೋಗಿದ್ದ.

ಅದೆಲ್ಲ ನೆನಪಾಗಿ ಈಗ ರಾಮಣ್ಣ ಕುರ್ಚಿಯಿಂದೆದ್ದ. ಅಂದಿನಂತೆ ಇಂದೂ ಕುರ್ಚಿಯಲ್ಲಿಯೆ ನಿದ್ರೆ ಹೋಗುವುದು ಬೇಡ, ಆಗ ಸುಖದ ಕನಸು ಗಳಿದ್ದುವು, ಈಗ ಕನಸಿನಲ್ಲಿಯೂ ಸುಖವಿಲ್ಲ ಎಂದು ಎದ್ದು ಆಕಳಿಸಿ ಬೇಸರ ದಿಂದ ಕೈಯೊಳಗಿನ ಪುಸ್ತಕವನ್ನು ಮೇಜಿನ ಮೇಲೆ ಬಿಸುಟಿ ಒಗೆದ. ದೂರ ದಲ್ಲಿ ಯಾವುದೊ ಗಡಿಯಾರದಲ್ಲಿ ಹನ್ನೆರಡು ಗಂಟೆಯ ಸದ್ದು ಕೇಳಬಂದುವು.

## ೧೨

ಆಕಳಿಕೆ ನಿದ್ದೆಯ ಲಕ್ಷಣ ಎಂದು ಹೇಳುವುದು ಸುಳ್ಳೆನಿಸಿತು ಕುಮುದ ಳಿಗೆ. ಈಗ ತನಗೆ ಒಂದೇಸಮನೆ ಆಕಳಿಕೆಗಳು ಬರುತ್ತಿದ್ದರೂ ನಿದ್ರೆಯ ಲಕ್ಷ ಣವೆ ಇಲ್ಲ ! ನಿದ್ರೆ ಬಾರದಂತಹ ಬೇಸರ ಒಳಗೆ ಹುದುಗಿಕೊಂಡಿದ್ದು ಈಗ ಆಕಳಿಕೆಯ ರೂಪದಿಂದ ಹೊರಬರುತ್ತಿರುವುದೊ ಏನೊ ! ದೂರದಿಂದ ಯಾವುದೊ ಒಂದು ಗಡಿಯಾರದ ಗಂಟೆಗಳು ಕೇಳಬರುತ್ತಿವೆ. ಒಂದು, ಎರಡು, ಮೂರು....ಹನ್ನೆರಡು ! ಮಧ್ಯರಾತ್ರಿಯಾಗಿದೆ, ಇನ್ನೂ ತನಗೆ ನಿದ್ದೆ ಬರಲೊಲ್ಲದು. ದೂರದ ಗಡಿಯಾರದ ಗಂಟೆಗಳು ಕೇಳಬರುವಷ್ಟು ಜಗತ್ತು ಶಾಂತತೆಯಲ್ಲಿ ಮುಸುಕಿದ್ದರೂ ಒಳಗಿನ ವಿಚಾರಗಳ ಗಲಾಟೆ-ಗೊಂದಲಗಳಲ್ಲಿ ನಿದ್ದೆ ಬಾರದಂತಾಗಿದೆ. ಅದೆಷ್ಟು ಸಲ ತಾನು ನಿದ್ದೆ ಬರಕೂಡದೆಂದು ಪ್ರಯ ತ್ನಿಸಿದ್ದಳು ! ಈಗ ನಿದ್ದೆ ಬರಲಿ ಎಂದು ಪ್ರಯತ್ನಿಸುತ್ತಿದ್ದಾಳೆ ! ಒಂದು ಕಾಲ ವಿದ್ದಿತು, ಆಗ ರಾತ್ರಿಯ ಶಾಂತತೆಯಲ್ಲೂ ಗಡಿಯಾರದ ಗಂಟೆಗಳು ಕೇಳ ಬರುತ್ತಿರಲಿಲ್ಲ, ನಿದ್ರೆಯನ್ನೂ ತಾನು ಬಯಸುತ್ತಿರಲಿಲ್ಲ. ಅದೆಲ್ಲ ಹಿಂದಿನ

ಜನ್ಮದ ನೆನಪಿನಂತೆ ಆಗಿದೆ. ಆದರೆ ಕೇವಲ ಒಂದೆರಡು ವರ್ಷಗಳ ಹಿಂದಿನ ಮಾತು. ಆಗ 'ಎಷ್ಟೊ ರಾತ್ರಿ ಸುಖದ ಕನಸುಗಳನ್ನು ಕಣ್ಣಾರೆಯೆ ಕಾಣ ಬೇಕೆಂಬ ಹಟದಿಂದ ತಾನು ನಿದ್ದೆಯನ್ನು ತಪ್ಪಿಸುತ್ತ ಮಲಗುತ್ತಿದ್ದಳು. ಒಂದು ಅನುಭವವಂತೂ ಇನ್ನೂ ಅವಳ ಕಣ್ಣು ಕಟ್ಟಿದೆ. ಅಂದು ತನ್ನ ಜೀವ ನದ ಸೂರ್ಯ ಉದಯವಾದ, ಇನ್ನೆಲ್ಲಿಯ ರಾತ್ರಿ ಎಂಬಂತೆ ಬೆಳಗಿನವರೆಗೂ ಎಚ್ಚರಾಗಿಯೆ ಉಳಿದಿದ್ದಳು. ಎಚ್ಚರಿದ್ದು ಕನಸನ್ನು ಕಾಣಬೇಕೆಂಬ ಹಂಬಲ ಅಂದು ಪೂರೈಸಿತ್ತು, ಆದರೆ ಆ ಕನಸೂ ಇಂದು ಉಳಿದ ಕನಸುಗಳಂತೆಯೆ ಜಾರಿಹೋಗಿದೆಯಲ್ಲ! ಹೋಗಲಿ, ನೆನಪಿನಿಂದಾದರೂ ಸುಖವನ್ನು ತಂದು ಕೊಡುವ ಕನಸಾಗಿದೆಯಲ್ಲ—ಎಂಬ ಸಂತಸದಿಂದ ಅವಳ ಮುಖ ಅರಳಿತು. ಹಿಂದಿನದನ್ನು ಕಾಣುವ ಹಟದಿಂದ ಎಂಬಂತೆ ಅವಳ ಕಣ್ಣುಗಳು ಸುತ್ತು ಮುತ್ತಲಿಗಾಗಿ ಅಲಕ್ಷ್ಯವನ್ನು ತಳೆದು ಯಾವುದೊ ಪರೋಕ್ಷವನ್ನು ದಿಟ್ಟಿ ಸಲು ಅರಳಿದುವು. ಎಷ್ಟು ಕಾಲದ ಮುಂಚಿನ ಮಾತು? ಹೋಗಲಿ, ಕಾಲ ಮುಖ್ಯವಲ್ಲ, ಮಾತು ಮುಖ್ಯ. ಅಂದಿನ ರಾತ್ರಿ........

ನಿಜವಾಗಿ ಅಂದಿನ ರಾತ್ರಿ ಕುಮುದಳು ಉಲ್ಲಸಿತಳಾಗಿದ್ದಿರಲಿಲ್ಲ. ಕೆಲವು ದಿನಗಳಿಂದ ಅವಳು ಅನುಭವಿಸುತ್ತಿದ್ದ ಸುಖದ ಪ್ರವಾಹಕ್ಕೆ ತಡೆ ಬಂದಂತಾ ಗಿತ್ತು. ಗಂಡಹೆಂಡಿರ ಏಕಾಂತದ ದೃಶ್ಯವು ನಡೆದ, ರಾಮಣ್ಣನು ಹಾಗೆ ಒಂದು ತುಚ್ಛತೆಯಿಂದ ತನ್ನ ದೇಹವನ್ನು ಅವಮಾನಗೊಳಿಸಿ ಹೋದ ತರುವಾಯದ ಕೆಲ ದಿನಗಳಲ್ಲಿ ಕುಮುದಳ ಮನಃಸ್ಥಿತಿ ಉದ್ವಿಗ್ನವಾಗಿತ್ತು. ಒಂದೆಡೆ ರಾಮಣ್ಣ ನಿಗಾಗಿ ಒಂದು ತರದ ದ್ವೇಷಭಾವವಿದ್ದಿತು, ಇನ್ನೊಂದೆಡೆ ಅವನು ತನ್ನ ಹತ್ತಿರ ಬಂದಾಗಲೆಲ್ಲ ಎಲ್ಲವನ್ನೂ ನುಂಗಿ ನಾಚಿಕೆಗೇಡಿಯಂತೆ ತನ್ನ ಮನಸ್ಸು ತೃಪ್ತಿ ಪಡೆಯುತ್ತಿತ್ತು. "ರಾಮಣ್ಣ ಬಂದಾಗಲೆಲ್ಲ" ಎನ್ನುವುದಾದರೂ ಯಾಕೆ? ಮೊದಲು ಮೂರು-ನಾಲ್ಕು ದಿನ ರಾಮಣ್ಣ ಬಂದಿರಲೇ ಇಲ್ಲ. ಅದನ್ನು ಆಕೆ ಹೇಗಾದರೂ ತಡೆದುಕೊಳ್ಳಬಹುದಾಗಿತ್ತು; ತನ್ನ ನಡತೆಗಾಗಿ ನಾಚಿಕೊಂಡು ಅವನು ಹೀಗೆ ಮಾಡುತ್ತಿರುವನು ಎಂದು ಸಮಾಧಾನವನ್ನು ತಂದುಕೊಳ್ಳ ಬಹುದಾಗಿತ್ತು. ಆದರೆ ರಾಮಣ್ಣನ ನಡತೆ ಇನ್ನಿಷ್ಟು ತನ್ನ ಹೃದಯವನ್ನು ಚುಚ್ಚುವಂತಾಗಿತ್ತು. ಆ ಮೂರು-ನಾಲ್ಕು ದಿನಗಳ ಮಟ್ಟಿಗೆ ತನ್ನನ್ನು ಕಣ್ಣೆತ್ತಿ ನೋಡಿರಲಿಲ್ಲ, ತನ್ನ ಕಡೆ ಬಂದಿರಲಿಲ್ಲ; ಬರೆಯುವುದರಲ್ಲಿ ಒಂದು

ವೇಳೆ ತೊಡಗಿದ್ದರೆ ಕುಮುದಳು ಹೇಗಾದರೂ ಸಮಾಧಾನವನ್ನು ತಂದು ಕೊಳ್ಳಬಹುದಿತ್ತು. ಆದರೆ ಇಂತಹ ಯಾವುದೂ ಇಲ್ಲದೆ, ಇಡಿಯ ದಿನ ರಾಮಣ್ಣ ಸರಲೆಯ ಸನ್ನಿಧಿಯಲ್ಲಿಯೆ ಇರುತ್ತಿದ್ದ; ಅತ್ಯಂತ ಮನಃಪೂರ್ವಕ ವಾಗಿ ಉಪಚಾರವನ್ನು ಮಾಡುತ್ತಿದ್ದ; ರಾತ್ರಿ ನಿದ್ರೆ ಬರುವವರೆಗೆ ಆಕೆಯೊಡನೆ ಹರಟುತ್ತಿದ್ದ; ರಾತ್ರಿ ಕೂಡ ಉಪಚಾರಕ್ಕೆಂದು ಅಲ್ಲಿಯೆ, ಬೇರೆ ಹಾಸಿಗೆ ಕೊಂಡೊಯ್ದು, ಮಲಗುತ್ತಿದ್ದ ಎಂದೂ ಕುಮುದಳಿಗೆ ಸಂದೇಹ ಬಂದಿತ್ತು. ಯಾಕೆ ? ಬೇಕಾದ ಉಪಚಾರವನ್ನು ಮಾಡಲು ತಾನು ಎಂದಿನಿಂದಲೂ ಸಿದ್ಧಳಿದ್ದಾಗ ರಾಮಣ್ಣ ತನ್ನ ಎಲ್ಲ ಕೆಲಸವನ್ನು ಬಿಟ್ಟು ಆ ಪರಿಶ್ರಮವನ್ನು ಯಾಕೆ ವಹಿಸುತ್ತಿದ್ದ ? ಎಲ್ಲಿಯ ಉಪಚಾರ ? ಅದೆಲ್ಲ ನೆವ ಮಾತ್ರ, ತನ್ನನ್ನು ತಪ್ಪಿಸಲು ಹೂಡಿದ ಆಟ ಎಂದು ತಿಳಿದುಕೊಂಡು ಕುಮುದ ಬಹಳೇ ಖತಿ ಗೊಂಡಿದ್ದಳು. ಇನ್ನು ಈ ಮನೆಯಲ್ಲಿ ತನಗೆ ಸ್ಥಾನವಿಲ್ಲ, ಅಕ್ಕನ ಉಪ ಚಾರಕ್ಕೆ ತಾನು ಅಯೋಗ್ಯಳೆಂದರೆ ಯಾರಿಗೆ ಬೇಕಾಗಿದ್ದಾಳೆ ತಾನು? ಕುಮುದ ತನ್ನಷ್ಟಕ್ಕೆ ಕಣ್ಣೀರು ಸುರಿಸಿದ್ದಳು, ಹಳಿದುಕೊಂಡಿದ್ದಳು, ನಾಳೆ ಎದ್ದೊಡನೆ ಹೀಗೆ ಮಾಡಬೇಕು—ಹಾಗೆ ಮಾಡಬೇಕು ಎಂದು ದಿನಾಲು ಮಲಗುವಾಗ ಏನೇನೊ ನಿರ್ಣಯಗಳನ್ನು ಕೈಕೊಳ್ಳುತ್ತಿದ್ದಳು. ಆದರೆ ಯಾವ ನಿರ್ಣಯ ವನ್ನೂ ನಡೆಸುವ ಸಂದರ್ಭ ಒದಗಿರಲಿಲ್ಲ. ಇಷ್ಟೇಕೆ ? ಆ ನಿರ್ಣಯುಗಳನ್ನು ಪೂರ್ತಿಯಾಗಿ ಬದಲಾಯಿಸುವ ಪ್ರಸಂಗವೇ ಬಂದಿತ್ತು. ಒಂದು ದಿನ ಬೆಳಿಗ್ಗೆ ರಾಮಣ್ಣ ಧಾವಿಸುತ್ತ ತನ್ನ ಕೋಣೆಗೆ ಬಂದ. "ಕುಮುದಾ, ಕುಮುದಾ ?" ರಾಮಣ್ಣನ ದನಿ ! ತನ್ನನ್ನು ಕರೆಯುತ್ತಿದ್ದಾನೆ! ಛೆ—ಕನಸು! ಎಂದುಕೊಂಡಿ ದ್ದಳು ನಿದ್ದೆಗಣ್ಣಿನಲ್ಲಿ. ಆದರೆ ಅದು ಕನಸಾಗಿದ್ದಿಲ್ಲ. ರಾಮಣ್ಣನೇ ಸಾಕ್ಷಾ ತ್ತಾಗಿ ಬಂದು ತನ್ನನ್ನು ಅಲುಗಾಡಿಸುತ್ತ, "ಕುಮುದಾ, ಕುಮುದಾ" ಎಂದು ಎಚ್ಚರಿಸುತ್ತಿದ್ದ; ಧಿಂಗನೆ ಎದ್ದು ಭೂತ ಬಡೆದವಳಂತೆ ನೋಡತೊಡ ಗಿದ್ದಳು. "ಬೇಗ, ಸರಲಾನ ಕೋಣೆಗೆ ಬಾ" ಎಂದು ರಾಮಣ್ಣ ಕನಸಿನಲ್ಲಿ ಬಂದು ಹೋದವನಂತೆ ಹೊರಟೇ ಹೋಗಿದ್ದ. ತಾನು ಸರಲಕ್ಕನ ಕೋಣೆ ಯಲ್ಲಿ ಕಾಲಿಡುವುದಕ್ಕೆ ಅವನು ಕೋಟನ್ನು ಹಾಕಿಕೊಳ್ಳುತ್ತಿದ್ದ. ಅದೇ ಕೋಣೆಯ ಒಂದು ಮೂಲೆಗೆ ಅವನ ಹಾಸಿಗೆ ಇದ್ದುದು ಅವಳ ಲಕ್ಷ್ಯಕ್ಕೆ ಬರದಿರಲಿಲ್ಲ. "ನಾನು ಡಾಕ್ಟರನ್ನ ಕರೆದುಕೊಂಡು ಬರ್ತೀನಿ, ನೀನು ಇಲ್ಲೇ ಕೂತಿರು" ಎಂದವನೆ ರಾಮಣ್ಣ ಹೊರಗೆ ಧಾವಿಸಿದ್ದ.

ಆ ದಿನ ತಾನು ಭಾವಿಯಲ್ಲಿ ಜಿಗಿದು ಜೀವವನ್ನು ಬಿಡಬೇಕೆಂದೆನ್ನಿಸಿತ್ತು ಕುಮುದಳಿಗೆ. ಎಂತಹ ನಾಚಿಕೆಗೇಡಿ, ಎಂತಹ ಸ್ವಾರ್ಥಿ, ಎಂತಹ ಕಟುಕ, ಎಂತಹ ಉಪಕಾರಗೇಡಿ ತಾನು ಎಂದು ತನ್ನನ್ನು ಘಾಸವಾರಿ ಬೈದುಕೊಂಡಿದ್ದಳು. ಮೂರು ನಾಲ್ಕು ದಿನಗಳಿಂದ ಸರಲಕ್ಕನ ಹೃದಯ ದುರ್ಬಲವಾಗತೊಡಗಿತ್ತಂತೆ. ತನಗೆ ತಿಳಿಯಬಾರದಾಗಿತ್ತೆ? ಯಾವಾಗಲೂ ರಾಮಣ್ಣನು ಆಕೆಯ ಹತ್ತಿರ ಇರುತ್ತಿದ್ದನೆಂದು ತಾನು ಅಲ್ಲಿ ಕುಳಿತಿರುತ್ತಿರಲಿಲ್ಲ; ನಿಜ; ತನ್ನನ್ನು ನೋಡಿದೊಡನೆ ಸರಲಕ್ಕ ಎಂದಿನಂತೆ ಮುಗುಳ್ನಗೆ ನಗುತ್ತಿದ್ದಳು, ಎಂಬುದೂ ನಿಜ. ಆದರೇನಾಯಿತು? ಕೇವಲ ತನ್ನವೆ ಹಾಳು ಹೊಲಸು ವಿಚಾರಗಳಿಂದ ತಲೆಯನ್ನು ತುಂಬಿಕೊಂಡಿದ್ದು ತಾನು ಸರಲಕ್ಕನ ಅವಸ್ಥೆಯನ್ನು ಗುರುತಿಸಿರಲೇ ಇಲ್ಲ. ಎಂತಹ ಕುಲಗೇಡಿ ತಾನು! ಪಾಪ! ಮೂರು ನಾಲ್ಕು ದಿನಗಳನ್ನು ರಾಮಣ್ಣನೊಬ್ಬನೆ ಹೇಗೆ ತಡೆದುಕೊಂಡಿರಬೇಕು? ಅನಿವಾರ್ಯವಾಗಿ ತನ್ನನ್ನು ಎಚ್ಚರಿಸಲು ಬರಬೇಕಾದರೆ ಕಾರಣವಿದ್ದಿತು. ಆ ದಿನ ನಸುಕಿನ ಸಮಯಕ್ಕೆ ಸರಲಕ್ಕ ಕೆಲವು ನಿಮಿಷ ಮೂರ್ಛೆ ಹೋಗಿದ್ದಳಂತೆ. ಆಕೆಯನ್ನು ಎಚ್ಚರಿಸಿ, ಉಪಚರಿಸಿ, ಸಂತಯಿಸಿ, ಆಮೇಲೆ ತನ್ನನ್ನು ಅಲ್ಲಿ ಕೂಡ್ರಿಸಿ ರಾಮಣ್ಣ ಡಾಕ್ಟರನ ಕಡೆಗೆ ಹೋಗಿದ್ದ.

ಅಂದು ಸಂಜೆಯ ಹೊತ್ತಿಗೆ ಸರಲಕ್ಕ ಸುಧಾರಿಸಿದ್ದು ಎಲ್ಲರ ಪುಣ್ಯವೆಂದೆನ್ನಿಸಿತ್ತು ಕುಮುದಳಿಗೆ. "ಎಲ್ಲರ" ಎಂದು ತನ್ನನ್ನೂ ಸೇರಿಸಿಕೊಳ್ಳುವುದೇಕೆ? ಇಡಿಯ ದಿನ ಹೊರಗಿನ ಓಡಾಟದಿಂದ, ಒಳಗಿನ ಕಳವಳದಿಂದ ಹಣ್ಣಾದವನು ರಾಮಣ್ಣ; ಅವನ ಪುಣ್ಯ, ಎಂದಿದ್ದಳು. ಅಂದು ಅವನು ನಿಮಿತ್ತವಾಗಿ ಊಟ ಮಾಡಿದ್ದು ರಾತ್ರಿ ೯ ಗಂಟೆಗೆ ಮಾತ್ರ. ಅಷ್ಟರಲ್ಲಿ ಸರಲಕ್ಕನು ಎಷ್ಟೋ ಸುಧಾರಿಸಿದ್ದಳು. ಆ ರಾತ್ರಿ ಡಾಕ್ಟರರು ಆಕೆಗೆ ನಿದ್ದೆಯ ಔಷಧವನ್ನು ಕೊಟ್ಟು, ಇನ್ನು ಯಾವ ಹೆದರಿಕೆಯೂ ಇಲ್ಲ ಎಂದು ಹೇಳಿ ಹೋಗಿದ್ದರು. ರಾತ್ರಿ ಊಟ-ಉಪಚಾರವಾದ ಮೇಲೆ ಕುಮುದಳು ಸರಲಕ್ಕನು ಸುಧಾರಿಸಿದ್ದನ್ನು ಕಣ್ಣಾರೆ ಕಂಡು ತನ್ನ ಕೋಣೆಗೆ ಹೋಗಿದ್ದಳು. ಬುದ್ಧಿಪೂರ್ವಕವಾಗಿಯೆ ತುಸು ಜಾಗ್ರತವಾಗಿಯೆ ಹೋಗಿದ್ದಳು. ಇಡಿಯ ದಿನ ರಾಮಣ್ಣನ ಮುಖವನ್ನು ನೋಡಿದ್ದಳು. ಆ ಮುಖಮುದ್ರೆಯ ಅರ್ಥ ಆಕೆಗಾಗಿತ್ತು. ಹೆಂಡತಿಯೊಡನೆ ಮಾತನಾಡಲು ಅವನಿಗೆ ಅವಕಾಶ ದೊರೆಯು

ಲೆಂದೇ ತಾನು ಹಾಗೆ ಹೋದದ್ದು. ತನ್ನ ಪರಿಶ್ರಮದ ಸತ್ಪರಿಣಾಮವನ್ನು ಸವಿಯುವ ಆತುರ ಅವನಿಗಿದೆ ಎಂದೂ ಆಕೆಗೆ ತಿಳಿದಿತ್ತು. ಅಂದು ತನ್ನ ಕೋಣೆಗೆ ಹೋದಾಗ ಕುಮುದಳ ಮನಸ್ಸು ಪ್ರಸನ್ನವಾಗಿತ್ತು. ರಾಮಣ್ಣ-ಸರಲಕ್ಕ ಇಬ್ಬರೂ ಈಗ ಒಬ್ಬರೊಬ್ಬರೊಡನೆ ಎಷ್ಟೊಂದು ಆನಂದದಿಂದ ಮಾತಾಡುತ್ತಿರಬಹುದು ಎಂಬ ಕಲ್ಪನೆಯಿಂದ ಅವಳಿಗೂ ಆನಂದವೆನ್ನಿಸಿತ್ತು. ದೇಹದ ದಣಿವು, ಮನಸ್ಸಿನ ಆನಂದ—ಇದಕಾಗಿ ಕಣ್ಣುಮುಚ್ಚಿ ಎಚ್ಚರ ಉಳಿಯುವ ವಿಚಿತ್ರ ವಿಶ್ರಾಂತಿಯನ್ನು ಅವಳು ಅನುಭವಿಸುತ್ತಿದ್ದಳು. ಹಾಗೆಯೆ ಎಷ್ಟೊತ್ತು ಒರಗಿಕೊಂಡಿದ್ದಳೊ ! ಒಮ್ಮೆಲೆ ರಾಮಣ್ಣ ತನ್ನ ಹಾಸಿಗೆಯ ಹತ್ತಿರ ಬಂದು ನಿಂತುದೆ ಅವಳ ಕಣ್ಣನ್ನು ತೆರೆಯಿತು. ದಣಿವಿನಿಂದುದ್ಭವಿಸಿದ ಮೆತ್ತನ್ನ ಕಳೆ, ಆನಂದಕ್ಕಾಗಿ ಸೂಸುತ್ತಿದ್ದ ಮುಗುಳ್ನಗೆ—ಇಂತಹ ಮುಖ ಮುದ್ರೆಯ ರಾಮಣ್ಣನನ್ನು ನೋಡಿದೊಡನೆ ಆಕೆಯ ಹೃದಯದಲ್ಲಿ ಯಾವುದೊ ಒಂದು ಕಳವಳವಾಗಿತ್ತು, ಆ ಕಳವಳಕ್ಕಾಗಿ ಮನಸ್ಸು ಹಗುರೆನ್ನಿಸಿತ್ತು.

ಅಂದಿನ ರಾಮಣ್ಣ ಜನ್ಮ-ಜನ್ಮಾಂತರಗಳ ಪುಣ್ಯದ ಫಲರೂಪನಾಗಿದ್ದ ಎಂದೆನ್ನಿಸಿತ್ತು ಕುಮುದಳಿಗೆ. ಎಷ್ಟು ಶಾಂತನಾಗಿದ್ದ ! ಎಂತಹ ನಿರ್ಮಲ ಮನಸ್ಸಿನಿಂದ ಮಾತನಾಡಿದ್ದ ! ಅಂದು ರಾಮಣ್ಣನನ್ನು ಮೈದಡವಿ ಮುಂದೆ ಎಳೆದುಕೊಂಡಿದ್ದಳು ತಾನು. ತಿಳಿಯದ ದುಃಖದಿಂದ ಹಣ್ಣಾದ ಮಗು ಸಮಾಧಾನವನ್ನು ಬಯಸಿ ಬಂದಂತೆ ರಾಮಣ್ಣ ತನ್ನ ಕಡೆ ಬಂದಿದ್ದ ಎಂಬುದು ಅವಳಿಗೆ ಹೊಳೆಯಲು ಸಮಯ ಬೇಕಿರಲಿಲ್ಲ. ಮಾತನಾಡುತ್ತಾಡುತ್ತ ಮಲಗಿಕೊಂಡವನು ಬೆಳಗಿನವರೆಗೂ ಹಾಗೆಯೆ ತನ್ನ ತೋಳ ಆಶ್ರಯವನ್ನೆ ಹೊಂದಿ ಮಲಗಿದ್ದನು. ತನಗೆ ತಡವಾಗಿ ನಿದ್ದೆ ಬಂದಿತ್ತೇನೊ ! ಬೆಳಗಿನಲ್ಲಿ ತನಗಿಂತ ಮುಂಚೆ ಎದ್ದ ರಾಮಣ್ಣನು ತನ್ನ ಹಣೆಗೆ ಮುತ್ತಿಟ್ಟಾಗಲೆ ಆಕೆಗೆ ಎಚ್ಚರಿಕೆ. ತುಸು ಗಾಬರಿಯಿಂದ ಕಣ್ದೆರೆದೊಡನೆ ಹೆದರಿದ ಮಕ್ಕಳು ಒಬ್ಬರೊಬ್ಬರಿಗೆ ಸಂದೇಶಕೊಡುವಂತೆ ತುಟಿಗೆ ಕೈಹಚ್ಚಿಕೊಂಡು ಸುಮ್ಮನಿರಲು ಸದ್ದು ಮಾಡಿದ್ದ; ಮುಖ ಮಾತ್ರ ಮುಗುಳ್ನಗೆಯಿಂದ ಅರಳಿತ್ತು. ಆ ಬೆಳಗಿನಲ್ಲಿ ತಾನು ಹೆಣ್ಣಾಗಿ ಹುಟ್ಟಿದುದು ಸಾರ್ಥಕ ಎಂದೆನ್ನಿಸಿತ್ತು ಕುಮುದಳಿಗೆ.

ಒಂದು ನಿಮಿಷ ಮಿಂಚಿದ್ದ ರಾಮಣ್ಣನ ಆ ಮುಖಮುದ್ರೆಯನ್ನು ನೋಡಿ, ತನ್ನಿಂದ ಒಂದು ಹೃದಯಕ್ಕೆ ಶಾಂತಿ ದೊರೆಯಿತಲ್ಲ ಎಂದು ಕುಮುದಳಿಗೆ ಎನ್ನಿಸಿತ್ತು. ಅಂದಿನ ಅವಳ ಹೃದಯದ ವೈಭವ ಅಷ್ಟಕ್ಕೇ ಮುಗಿ ದಿರಲಿಲ್ಲ, ಅಷ್ಟಕ್ಕೆ ಮುಗಿದಿದ್ದರೂ ಅವಳು ತನ್ನ ಜನ್ಮ ಕೃತಾರ್ಥ ಎಂದು ಬಗೆಯಲು ಸಿದ್ಧಳಿದ್ದಳು. ಆದರೆ ಸುಖವಾಗಲಿ ದುಃಖವಾಗಲಿ, ಅನುಭವವು ಕೆಲವು ಕ್ಷಣಗಳವರೆಗೆ ಮರ್ಯಾದಿತವಾಗಿದ್ದರೂ, ಅನುಭವದ ನೆನಪು ಬಹು ಕಾಲ ಬಾಳುವುದು. ಇದಲ್ಲದೆ ಅನುಭವದ ಕಾಲಕ್ಕೆ ಸುಖವು ಅನುಕೂಲ ವಾದದ್ದು, ದುಃಖವು ನೋವನ್ನುಂಟುಮಾಡುವುದು ಎಂದು ಭೇದವಿದ್ದರೆ ನೆನಪಿನಲ್ಲಿ ಮಾತ್ರ ಸುಖ, ದುಃಖ ಎರಡೂ ಒಂದೇ. ದುಃಖದ ನೆನಪಿನಿಂದ ಕಣ್ಣೀರು ಬಂದರೂ ಆಗ ಹೃದಯ ಹಗುರಾಗಿ ಸುಖವೇ ಎನ್ನಿಸುವುದು. ಇವೆಲ್ಲ ಮಾತುಗಳು ಅಷ್ಟು ಸ್ಪಷ್ಟವಾಗಿ ಕುಮುದಳಿಗೆ ತಿಳಿದಿರಲಿಲ್ಲ ( ತಿಳಿದಿದ್ದರೆ ಅವಳು ಸುಖ-ದುಃಖಾತೀತಳಾಗುತ್ತಿದ್ದಳೇನೊ ! ), ಆದರೆ ಆ ಮಾತುಗಳ ಅನುಭವ ಮಾತ್ರ ಆಕೆಗೆ ಆ ದಿನ ಸಂಜೆಯೊಳಗಾಗಿ ಬಂದಿತ್ತು. ರಾಮಣ್ಣನ ಮಗುವಿನಂತೆ ಮುದ್ದಾದ ಮುಖವನ್ನು ಆಗಾಗ ನೆನೆದುಕೊಳ್ಳುತ್ತಿದ್ದಳು. ಅವನ ಬಗ್ಗೆ ನಾನು ಏನೇನೊ ತಿಳಿದುಕೊಂಡೆನಲ್ಲವೆ ? ಇಡೀ ದಿನ ದೇಹ ಮತ್ತು ಹೃದಯಗಳ ಬಳಲಿಕೆಯಿಂದ ಹಣ್ಣಾದವನು ನನ್ನ ಕಡೆ ಬಂದ, ನನ್ನೊಡನೆ ಸುಖದುಃಖದ ಮಾತುಗಳನ್ನಾಡಿದ, ನನ್ನ ಮಗ್ಗುಲಲ್ಲಿ ಮಗುವಿನಂತೆ ಗಾಢವಾಗಿ ಮಲಗಿದ್ದ. ಯಾಕೆ ? ಅವನ ಜೀವನದಲ್ಲಿ ನನಗೆ ಸ್ಥಾನವಿದ್ದಿರಲೇಬೇಕು. ಇಲ್ಲವಾದರೆ ದುಃಖದ ಸಮಯದಲ್ಲಿ ಆತ್ಮೀಯತೆಯನ್ನು ತೋರಿಸುತ್ತಿದ್ದನೆ ? ಅವನ ಹೃದಯ, ನನ್ನ ಹೃದಯ ಒಂದನ್ನೊಂದು ಹೊಂದಿಕೊಂಡಿರಬೇಕು. ಕೆಲದಿನಗಳ ಹಿಂದಿನ ದೇಹ-ಸಂಬಂಧಕ್ಕಿಂತಲೂ ಹೃದಯಗಳ ಈ ಗಾಢಸಂಬಂಧವು ಕುಮುದಳಿಗೆ ಹೆಚ್ಚು ಸುಖವನ್ನುಂಟುಮಾಡಿತ್ತು. ಮೂರು-ನಾಲ್ಕು ದಿನಗಳಿಂದ ರಾಮಣ್ಣನ ನಿಮಿತ್ತವಾಗಿ ತನ್ನಲ್ಲಿ ಉಂಟಾಗಿದ್ದ ದುಃಖಸಂತಾಪಗಳೆಲ್ಲ ಈಗಿನ ನೆನಪಿನಲ್ಲಿ ಸುಖದ ಚಿಗುರುಗಳಂತೆ ಕಂಗೊಳಿಸಿದ್ದುವು. ಹನ್ನೆರಡು ಗಂಟೆಗಳ ಅದೊಂದು ದಿವಸದಲ್ಲಿ ಕುಮುದಳ ಮುಖಕಾಂತಿ ಹೆಚ್ಚು ಮನೋಹರವಾಗಿ ಕಂಡಿತು, ಅವಳ ಅಂಗಾಂಗಗಳೆಲ್ಲ ಪ್ರೇಮರಸದ ಲೇಪದಿಂದೆಂಬಂತೆ ಮಿಂಚುತ್ತಿದ್ದುವು, ಅವಳ ನಡಿಗೆಯಲ್ಲಿ ಸೂರ್ಯೋ

ದಯದ ನವಚೈತನ್ಯವಿದ್ದಂತಿತ್ತು, ಅವಳ ಮಾತುಗಳು ಮಳೆಗಾಲದ ಪ್ರಾರಂಭದ ಹನಿಗಳಂತೆ ಆನಂದದಿಂದ ಬೆರೆತ ತಂಪನ್ನು ಬೀರುವಂತಿದ್ದುವು; ಅವಳ ಹೃದಯವು ಅಕ್ಕಪಕ್ಕದ ಹಳ್ಳಪಳ್ಳಗಳನ್ನೆಲ್ಲ ಮೈಗೂಡಿಸಿಕೊಂಡು ಸರಲಮಾರ್ಗವನ್ನು ಹುಡುಕುತ್ತ ಸಮುದ್ರವನ್ನು ಸೇರುವ ನಿಶ್ಚಯದಿಂದ ಹೊರಟ ನದಿಯಂತೆ ಕ್ಷಣಕ್ಷಣಕ್ಕೆ ವಿಶಾಲವಾಗುತ್ತಿರುವಂತೆ ಭಾಸವಾಗಿತ್ತು.

ಈ ಅಪರಿಚಿತ ಭಾವನೆಯನ್ನು ಮೈಗೂಡಿಸಿಕೊಂಡು ಮೆಲಕಾಡಿಸುತ್ತಿರುವ ಕುಮುದಳ ಚರ್ಯೆಯೆ ಬದಲಾಗಿತ್ತೇನೊ ! ಆ ದಿನಗಳಲ್ಲಿ ಸರಲಕ್ಕ ತನ್ನಸ್ನೆ ತುಂಬಿದ ಕಣ್ಗಳಿಂದ ನೋಡುವಂತೆ ನೋಡುತ್ತಿದ್ದಳು; ಮೇಲಿಂದ ಮೇಲೆ ಹತ್ತಿರ ಕರೆಯುತ್ತಿದ್ದಳು. ಕೈಯಲ್ಲಿ ಕೈಯನ್ನಿಟ್ಟು ಎಷ್ಟೊ ಹೊತ್ತು ಸುಮ್ಮನೆ ಒರಗಿರುತ್ತಿದ್ದಳು. ಒಂದು ದಿನ ಮಾತ್ರ—ಅದನ್ನು ತಾನೆಂದಿಗೂ ಮರೆಯಲಿಕ್ಕಿಲ್ಲ—ಹಾಗೆ ಕೆಲಹೊತ್ತು ಸುಮ್ಮನಿದ್ದ ಮೇಲೆ ಸರಲಕ್ಕ ಕಳಕಳಿಯ ದನಿಯಲ್ಲಿ " ಕುಮುದಾ " ಎಂದಿದ್ದಳು. ಎಲ್ಲಿಯೋ ಹೋಗಿದ್ದ ತನ್ನ ಹೃದಯವನ್ನು, ಅಡಗಿಕೊಂಡ ಮಗುವನ್ನು ಹುಡುಕಿ ಹಿಡಿದೆತ್ತಿ ಮುದ್ದಿಡುತ್ತ ತರುವ ತಾಯಿಯಂತೆ, ಆ ದನಿ ಸೆಳೆದಿತ್ತು.

" ಯಾಕೆ, ಅಕ್ಕಾ ?" ಎಂದು ಆತುರತೆಯ ದನಿಯಲ್ಲಿ ತಾನೂ ಕೇಳಿದ್ದಳು.

" ನನ್ನ ತ್ರಾಸ ಬಹಳ ಆಯ್ತು ಎಲ್ಲರಿಗೆ."

" ಯಾರು ಹೇಳಿದರು ನಿನಗೆ ?"

" ಯಾರ ಯಾಕ ಹೇಳಲಿಕ್ಕೆ ಬೇಕು. ನನಗೇ ತಿಳಿಯೋದಿಲ್ಲೇನು ?"

" ನಿನಗ ತ್ರಾಸ ಆಗದಿದ್ದರ ಸಾಕು. ಮಂದಿಯ ಕಾಳಜಿ ಯಾಕ ?"

" ನನಗೂ ತ್ರಾಸ ಆದಽನ, ಕುಮುದಾ ? ನನ್ನದಿನ್ನೇನು ವಾಸನಾ ಉಳಿದಿಲ್ಲ, ಈ ಸುಟ್ಟ ಜೀವ ಹಿಂಗ ಹಿಡಿದುಕೊಂಡು ಹಾಸಿಗೆ ಮ್ಯಾಲೆ ಹೊರಳಾಡಲಿಕ್ಕೆ."

" ನೀ ಎಷ್ಟು ಮಂದಿಗೆ ಬೇಕಾಗೇದಿ ಅಂಬೋದನ್ನ ಮರಿಬ್ಯಾಡ, ಅಕ್ಕಾ."

" ಹುಚ್ಚಿ, ಕುಮುದ ! ಯಾರು ಯಾರಿಗೆ ಬೇಕಾಗ್ತಾರ ? ಇರೋತನಕ ಬೇಕು ಅಂತ ಅನ್ನಿಸ್ತದ, ಸತ್ತ ಮ್ಯಾಲೆ ಮರೀತದ. ಇಲ್ಲದಿದ್ದರ ಸಂಸಾರ ಹ್ಯಾಂಗ ನಡೆದೀತ, ಕುಮುದಾ ?"

"ಬ್ಯಾಡಾ ಅಂದ್ರೂ ನೀನು ಅದೇ ವಿಚಾರ ಮಾಡ್ತಿ, ಅಕ್ಕಾ."

"ಏನ್ಮಾಡ಼್್ಲಿ ಹೇಳು, ಕುಮುದಾ ? ಮೊನ್ನೆ ಬವಳಿ ಬಂಧಾಂಗ ಆದಾಗ ಎಲ್ಲಿ ಹೋಗಿಯೆ ಬಿಡ್ತೀನ್ಯೋ ಅಂತ ಹೆದರಿದ್ದೆ."

"ಹಾಂ, ಹೀಂಗ ಮಾತಾಡೆ, ಅಕ್ಕಾ ! ಹೋಗ್ಲಿಕ್ಕೆ ಹೆದರಿದ್ದೆ ಅಂದೆ ಯಲ್ಲ— ಅದು ಸಂತೋಷದ ಮಾತು."

"ಹೆದರಿದ್ದು ನನ್ನ ಸಲುವಾಗಿ ಅಲ್ಲ, ಕುಮುದಾ. ನನ್ನಿಂದ ಭಲೋ ದಾಗಲಿಲ್ಲ ಯಾರಿಗೂ, ಕೆಟ್ಟದಾದರೂ ಆಗಬ್ಯಾಡ ಅಂತ ಬೇಡಿಕೋತೀನಿ."

"ಯಾರಿಗೆ ಏನೂ ಕೆಟ್ಟದಾಗಲಿಕ್ಕೆ ಕೂಡ್ತಿಲ್ಲ."

"ಆದರೂ ನಾ ಸಾಯೋದರಾಗ ಅದಿಷ್ಟಾದರ ಒಳ್ಳೆಯದು—ಅಂತ—"

"ಏನದು ?"

"ನಿನ್ನ ಮದುವೆ."

"ಹೋಗೆ, ಅಕ್ಕಾ ! ಮೊದಲು ನೆಟ್ಟಗಾದೀಯಂತ ಆ ಮ್ಯಾಲೆ—"

ಅಷ್ಟಕ್ಕೆ ಕುಮುದಳು ತಡೆದಿದ್ದಳು. ತನ್ನ ಮದುವೆಯ ಮಾತು ಎತ್ತಿದ್ದಕ್ಕೆ ಮೊದಲ ಕ್ಷಣ ಸಹಜವಾಗಿಯೆ ಆಕೆಗೆ ನಾಚಿಕೆ ಎನ್ನಿಸಿತ್ತು. ಆದರೆ ತಟ್ಟನೆ ಬೇರೊಂದು ವಿಚಾರ ಬಂದಿತ್ತು. ತನ್ನ ಮದುವೆ ? ಅಕ್ಕನಿಗೆ ಈ ವಿಚಾರ ಯಾಕೆ ಬಂದಿರಬೇಕು ? ತನಗಾಗಿ ಸಹಜವಾಗಿದ್ದ ವಾತ್ಸಲ್ಯದಿಂದಲೆ? ಇಲ್ಲವೆ— ಇಲ್ಲವೆ— ಮತ್ಯಾವ ಸಂಶಯದಿಂದಲೆ ? ತಾನು ಸಾಯೋ ಮುಂಚೆ ನನ್ನ ಮದುವೆ ಆಗತಕ್ಕದ್ದು ಎಂದು ಸರಲಕ್ಕ ಬಯಸಿದ್ದಾಳೆ; ಎಂದರೆ ಬೇರೆ ಯಾವನೊಬ್ಬನ ಕೂಡ ತನ್ನ ಮದುವೆ ?

"ಅಕ್ಕಾ, ನೀನು ನೆಟ್ಟಗಾಗೋತನಕ ಇಲ್ಲದ ವಿಚಾರ ತಲೀವಳಗ ಹಾಕಿಕೋಬೇಡ. ನಾನಂತೂ ಎಂದಿಗೂ ಒಪ್ಪಲಿಕ್ಕಿಲ್ಲ" ಎಂದಿದ್ದಳು ಕುಮುದ.

"ಅವರ ಮುಂದೂ ಹೇಳೀನಿ, ನಿನ್ನ ಮುಂದೂ ಹೇಳ್ತೀನಿ, ನನ್ನ ಹಣೇಬರಹದಾಗಿದ್ದರ ಕಣ್ಣಾರೆ ನೋಡಿ ಸಾಯ್ತೀನಿ" ಎಂದು ಸರಲಕ್ಕ ಉಸುರ್ಗರೆದಿದ್ದಳು.

ಅವರ ಮುಂದೂ ಹೇಳೀನಿ ! ಕುಮುದಳ ಹೃದಯಕ್ರಿಯೆ ನಿಂತಂತಾ ಯಿತು. ಏನೆಂದು ಹೇಳಿರಬಹುದು ಸರಲಕ್ಕ ? ಅಥವಾ ಬೇರೊಬ್ಬನ ಕೂಡ

ನನ್ನ ಮದುವೆ ಎಂದು ಸರಲಕ್ಕನ ಇಚ್ಛೆಯನ್ನು ತಿಳಿದು ರಾಮಣ್ಣನು ತನ್ನೊಡನೆ—ಮೊನ್ನಿನ ರಾತ್ರಿಯಲ್ಲಿಯಂತೆ— ಕೇವಲ ಸ್ನೇಹದಿಂದ ವರ್ತಿಸಿದ್ದನೆ? ನಾನು ಏನೇನೊ ತಿಳಿದಿದ್ದೆನಲ್ಲ? ಇದೆಂತಹ ಹೊಸ ಉಪಕ್ರಮ ಎದ್ದಿತು?

"ಅಕ್ಕಾ, ನಿನಗ ಕೈಮುಗಿದು ಬೇಡ್ತೀನಿ, ನೀನು ನೆಟ್ಟಗಾಗೋತನಕ–"

"ಹುಚ್ಚಿ, ಕುಮುದ! ಇನ್ನು ನಾ ನೆಟ್ಟಗಾಗೋದನ್ನ ಮರೆ. ಅದಕೇ ಸಾಯೋ ಅಕ್ಕನ ಸಮಾಧಾನಕ್ಕಾಗಿ, ನನ್ನ ಕಡೆಯ ವಾಸನಾ ಅಂಬೋದಕ್ಕಾಗಿ––"

"ಅಕ್ಕಾ, ನನ್ನಾಣೆಯಾಗಿದೆ ಈ ಮಾತನ್ನು ನೀನು ಬೆಳೆಸಿದಿ ಎಂದರೆ" ಎಂದು ಕುಮುದಳು ಹೃದಯದ ಅಂತರಾಳದಿಂದ ದನಿ ತೆಗೆದಿದ್ದಳು.

ತನ್ನ ಆ ದನಿ, ದನಿಯೊಳಗಿದ್ದ ಹಟ, ಜೊತೆಗೆ ಚರ್ಯೆಯ ಮೇಲೆ ಇರಬಹುದಾಗಿದ್ದ ಒಂದು ದೃಢನಿಶ್ಚಯದ ಕಳೆ— ಇದನ್ನೆಲ್ಲ ನೋಡಿ ಸರಲಕ್ಕನೂ ಬೆರಗಾಗಿದ್ದಳು.

"ಯಾಕ, ಕುಮುದಾ? ಹೋಗಲಿ ಬಿಡು. ಅವರಿಗೇ ಹೇಳ್ತೀನಿ, ಅವರೇ ನಿನ್ನ ಮಾತಾಡಿಸಲಿ" ಎಂದಿದ್ದಳು. ಸರಲಕ್ಕನ ಆ ಮಾತಿನಿಂದಂತೂ ಕುಮುದಳ ಜೀವವೇ ಹಾರಿಹೋದಂತಾಗಿತ್ತು. ಇದೇನು ವಿಪರೀತಕ್ಕಿಟ್ಟಿತು—ಎಂದುಕೊಂಡಿದ್ದಳು. ಹೇಗಾದರೂ ಮಾಡಿ ವಿಷಯವನ್ನು ಬದಲಾಯಿಸಲು ಯತ್ನಿಸಿದ್ದಳು. ಮೂರುನಾಲ್ಕು ದಿನ ರಾಮಣ್ಣ ಸರಲಕ್ಕನನ್ನು ಹೇಗೆ ಉಪಚರಿಸುತ್ತಿದ್ದ, ಆಕೆ ಮೂರ್ಛೆಹೋದ ದಿನ ಎಷ್ಟು ಗಾಬರಿಯಿಂದ ಓಡಾಡಿದ್ದ, ರಾತ್ರಿಯವರೆಗೆ ಅವನಿಗೆ ಹೇಗೆ ಊಟದ ಎಚ್ಚರವೇ ಇದ್ದಿಲ್ಲ ಮೊದಲಾದ ಸಂಗತಿಗಳನ್ನು ರುಚಿಕಟ್ಟಾಗಿ ಮಾಡಿ ಹೇಳತೊಡಗಿದ್ದಳು. ಕ್ರಮೇಣ ಸರಲಕ್ಕನು ಆನಂದ–ಅಭಿಮಾನಗಳಿಂದ ಅರಳಿದ ಮುಖದಿಂದ ತನ್ನ ಮಾತುಗಳನ್ನು ಕೇಳುವುದರಲ್ಲಿ ತಲ್ಲೀನಳಾಗಿದ್ದಳು. ಎಷ್ಟೊ ಹೊತ್ತಿನ ಮೇಲೆ ಇನ್ನು ಮದುವೆಯ ವಿಷಯ ಬರಲಿಕ್ಕಿಲ್ಲ ಎಂದು ಆಕೆಗೆ ಭರವಸೆಯಾಗಿತ್ತು, ಮಾತನ್ನು ತಡೆದಿದ್ದಳು. ಕೊನೆಗೆ ಸರಲಕ್ಕ "ಹೌದೇನ? ನೀನೂ ಎಷ್ಟು ಎಲ್ಲಾನ್ನ ನೋಡಿಟ್ಟಿರುವಿ ಸೂಕ್ಷ್ಮವಾಗಿ ಅಂತೀನಿ" ಎಂದು ನಗುತ್ತ ತನ್ನ ಬೆನ್ನ ಮೇಲೆ ಕೈಯನ್ನಾಡಿಸಿದ್ದಳು. "ನನ್ನ ದೈವ ಅಷ್ಟೇನು ಖೊಟ್ಟಿ ಇಲ್ಲ, ಹೋಗು ತಾಯೀ." ಎಂದಿದ್ದಳು.

ಕುಮುದಳಿಗೆ ಕೊನೆಯ ಮಾತಿಗಾಗಿ ಆಶ್ಚರ್ಯವಾಗಿತ್ತು. ಯಾವ ಸಂದರ್ಭಕ್ಕಾಗಿ ಸರಲಕ್ಕ ಆ ಮಾತನ್ನು ಹೇಳಿದ್ದಳು ? ತಾನು ರಾಮಣ್ಣನ ವಿಷಯವಾಗಿ ಹರಟೆಕೊಚ್ಚಿದ್ದು— ಹಾಂ— ತಿಳಿಯಿತು, ಅಂತಹ ಗಂಡ ತನ್ನವ ಸಿದ್ದಾಗ ತನ್ನ ದೈವ ಖೊಟ್ಟಿ ಅಲ್ಲ ಎಂದಿರಬಹುದೇನೊ—ಎಂದು ಒಮ್ಮೆ ಎನ್ನಿಸಿತ್ತು. ದೈವ ಖೊಟ್ಟಿ ಇಲ್ಲ ಎನ್ನುವುದರಲ್ಲಿ ತಾನು ಬಯಸಿದಂತೆ ಕುಮುದಳ ಮದುವೆ ಆಗಿಯೇ ತೀರುವುದು ಎಂಬ ಭರವಸೆ ಇದ್ದಿತೇನೊ ಎಂದು ಮತ್ತೊಮ್ಮೆ ತೋಚಿತ್ತು. ಆದರೆ ಕುಮುದಳು ಆ ಬಗ್ಗೆ ಹೆಚ್ಚು ವಿಚಾರ ಮಾಡುವ ಮನಃಸ್ಥಿತಿಯಲ್ಲಿದ್ದಿರಲಿಲ್ಲ. ಸರಲಕ್ಕನ ಬಾಯಿಯಿಂದ ತನ್ನ ಮದುವೆಯ ಪ್ರಸ್ತಾವ ಬಂದೊಡನೆ ಇದುವರೆಗೆ ಎಲ್ಲಿಯೊ ಹುದುಗಿಕೊಂಡಿದ್ದ ವಿಚಾರಗಳು ಒಮ್ಮೆಲೆ ಸುತ್ತಲಿನಿಂದ ಧುಮುಕಿದಂತಾಗಿತ್ತು. ಮದುವೆ ! ಎಂತಹ ಆಶ್ಚರ್ಯ ! ಇದುವರೆಗೂ ತನಗೆ ಆ ವಿಚಾರವೆ ಬಂದಿರಲಿಲ್ಲವಲ್ಲ ! ರಾಮಣ್ಣನೊಡನೆ ನಡೆದ ಅನುಭವದ ತರುವಾಯ ಕೂಡ ಮದುವೆ ಎಂಬ ವಿಷಯ ಅವಳಿಗೆ ತೋಚಿರಲೇ ಇಲ್ಲ. ಕುಮುದಳು ಸರಲಕ್ಕನ ಅನೇಕ ಮಾತುಗಳನ್ನು ನೆನೆದುಕೊಂಡು ಮೆಲುಕಾಡಿಸತೊಡಗಿದ್ದಳು. ತಾನು ಸಾಯುವ ಮುಂಚಿತವೆ ಈ ಮದುವೆಯಾಗಬೇಕೆಂಬ ಹಟವೊಂದು ಮಾತ್ರ ಅವಳನ್ನು ಸರಲಕ್ಕನ ಬಗ್ಗೆ ಸಂಶಯಗ್ರಹಸ್ತಳನ್ನಾಗಿ ಮಾಡುತ್ತಿದ್ದಿತು. ಒಂದು ವೇಳೆ ರಾಮಣ್ಣನೊಡನೆಯೆ ತನ್ನ ಮದುವೆ ನಡೆಯಬೇಕೆಂದು ಸರಲಕ್ಕನ ವಿಚಾರವಿದ್ದಿರಬಾರದೇಕೆ ? ಎಂದರೆ ?—ತಮ್ಮಿಬ್ಬರ ಬಗ್ಗೆ ಸರಲಕ್ಕನಿಗೆ ಸಂಶಯ ಬಂದಿರಬಹುದೆ ? ಛೆ ! ಅಕ್ಕನ ಸ್ವಭಾವ ತೀರಾ ನಿಷ್ಕಪಟಿ. ಹೆಂಗಸಿಗೆ ಗಂಡ-ಮಕ್ಕಳು ಇವೇ ವೈಭವ ಎಂದು ಆಕೆ ಎಷ್ಟು ಸಾರೆ ಹೇಳಿದ್ದಿಲ್ಲ ? ತನಗೆ ಮಕ್ಕಳಿಲ್ಲ ಎಂಬುದು ದುಃಖವಿದ್ದಷ್ಟೆ, ಮನೆಯಲ್ಲಿ ಮಕ್ಕಳಿದ್ದುದನ್ನು ನೋಡಿದರೆ ಆಕೆಗೆ ಸುಖ. ಹೀಗಿರಬಹುದೆ ? ಕುಮುದಳನ್ನು ಅವಳ ವಿಚಾರಲಹರಿ ಮನಬಂದಂತೆ ತೇಲಿಸತೊಡಗಿತ್ತು. ಎಷ್ಟೊತ್ತು ವಿಚಾರ ಮಾಡಿದರೂ ತೃಪ್ತಿ ಇದ್ದಿರಲಿಲ್ಲ. ಕಣ್ಣು ಮುಚ್ಚಿದೊಡನೆ ಒಂದು ಚಿತ್ರ ಮುಂದೆ ಬಂದು ನಿಲ್ಲುತ್ತಿತ್ತು; ತಾನು, ರಾಮಣ್ಣ ಸಿನೇಮಾಕ್ಕೆ ಹೊರಟಿದ್ದಾರೆ. ತಮ್ಮ ಮಕ್ಕಳು ಮನೆಯಲ್ಲಿ ಓಡಾಡುತ್ತಿವೆ. ಎದುರು ಹಾಸಿಗೆಯ ಮೇಲೆ ಸರಲಕ್ಕ ನಗೆಮೊಗದಿಂದ ಮಕ್ಕಳನ್ನು ನೋಡುತ್ತ " ಈಗ ನನ್ನ ಜನ್ಮ

ಸಾರ್ಥಕ ಆಯ್ತು, ಇನ್ನು ನೀವಿಬ್ಬರೂ ಸಿನೇಮಾಕ್ಕೆ ಹೋಗಿರಿ, ವಿಲಾಯತಿಗೆ ಹೋಗಿರಿ; ನನ್ನ ಪಾಲಿಗೆ ಇದೇ ಮನೆ" ಎನ್ನುತ್ತಿದ್ದಳು. ಕಣ್ಣು ತೆರೆದೊಡನೆ ಈ ಚಿತ್ರ ಮಾಯವಾಗುತ್ತಿತ್ತು.

ನೆನಪಿನ ಸವಿಯನ್ನು ಅನುಭವಿಸುತ್ತ ಈಗ ಕುಮುದ ಹಾಸಿಗೆಯಿಂದ ಎದ್ದಳು. ಆ ದಿನಗಳಲ್ಲಿ ನಿದ್ದೆ ಬಾರದಿದ್ದುದೆ ಎಷ್ಟು ಸುಖವಾಗಿತ್ತು ಎಂದುಕೊಂಡಳು. ಈಗ—? ಅಂದು ನನ್ನೊಡನೆ ಸರಸವಾಡಿದ ನಿದ್ದೆ ಈಗ ದುಷ್ಯಂತನು ಶಕುಂತಲೆಯನ್ನು ಮರೆತಂತೆ ಮರೆತಿದೆ ಏನೊ ಎಂದುಕೊಂಡಳು. ದುಷ್ಯಂತ—ಶಕುಂತಲೆ. ಈ ಮಾತು ತನ್ನ ಬಾಯಿಯಿಂದ ಹೇಗೆ ಬಂದಿತೊ! ಅಹುದು— ಈ ಕತೆಯನ್ನು ಒಂದು ರಾತ್ರಿ—ಥೂ! ಮತ್ತೆ ಮತ್ತೆ ಅದೇ! ಓಡಿಹೋಗಬೇಕೆಂದೆನ್ನಿಸುವುದು— ಎಂದು ಕುಮುದಳು ಅಸಹ್ಯದಿಂದ ಕಾಲನ್ನಪ್ಪಳಿಸಿ ಸರ‍್ರನೆ ಹಾಸಿಗೆಯನ್ನೇರಿ ಮುಖವನ್ನೂ ಮುಚ್ಚುವಂತೆ ಮುಸುಕನ್ನು ಬಿಗಿದುಕೊಂಡು ಮಲಗಿದಳು.

## ೧೩

ರಾಮಣ್ಣ ಬಿಸುಟ ಒಗೆದ ಪುಸ್ತಕ ಮೇಜಿನ ಮೇಲೆ ಪುಟಿದು, ಕೆಳ ಮೇಲಾಗಿ ಜಿಗಿದು, ಪುಟಗಳು ತೆರೆದು ಮಡಚಿ ಮುದ್ದೆಯಾಗಿ, ತೂಕ ತಪ್ಪಿ ಎತ್ತರದ ಮೇಲಿಂದ ಬಿದ್ದು ಮೂರ್ಛೆ ತಾಳಿದವನಂತೆ ನೆಲದ ಮೇಲೆ ಕುಸಿಯಿತು. "ಜಗತ್ತಿನಲ್ಲಿ ಮನುಷ್ಯಪ್ರಾಣಿ ಹುಟ್ಟಿದಂದಿನಿಂದ ಎಷ್ಟು ಮನುಷ್ಯರಾಗಿರುವರೊ ಅವರೆಲ್ಲರಿಗೂ ಒಬ್ಬೊಬ್ಬನಿಗೆ ಒಂದು ಪುಸ್ತಕ ಎಂಬ ಪ್ರಮಾಣದಲ್ಲಿ ಪುಸ್ತಕಗಳಿದ್ದರೂ ನನ್ನ ತೊಡಕಿಗೆ ಸಮಾಧಾನವನ್ನು ತೋರುವ ಪುಸ್ತಕ ದೊರೆಯುತ್ತಿರಲಿಲ್ಲ" ಎಂದು ಸಿಟ್ಟಿನಿಂದ ನೋಡುತ್ತ ಆ ಪುಸ್ತಕಕ್ಕೆ ಹೇಳಿದ. "ಜೀವನಸಮಸ್ಯೆಗಳನ್ನು ಬಿಡಿಸುವುದು ಸಾಹಿತ್ಯವಂತೆ! ಹುಚ್ಚು! ಜೀವನವೆಂದರೇನು! ಅದರ ಸಮಸ್ಯೆ ಎಷ್ಟು ಅಸಂಖ್ಯಾತವಾಗಿವೆ! ಅವುಗಳನ್ನು ಬಿಡಿಸುವುದೆಂದರೇನು?" ಎಂಬ ವಿಚಾರದಿಂದ ಕ್ಷಣಮಾತ್ರ ಸಾಹಿತಿಯಾಗಿದ್ದ ತನಗಾಗಿ ಅವನಲ್ಲಿ ತಿರಸ್ಕಾರದ ಕನಿಕರ ಮೂಡಿತು.

ತನ್ನ ಸಮಸ್ಯೆ ಯಾವುದು? ಹಾಗೆ ನೋಡಿದಲ್ಲಿ ಸಮಸ್ಯೆ ಇಲ್ಲವೇ ಇಲ್ಲ ಎಂದು ಕೆಲವರು ಹೇಳಬಹುದು; ಇದೇನು ಕಠಿಣವಾದ ಸಮಸ್ಯೆ—ಎಂದು

ಇನ್ನು ಕೆಲವರು ನಗೆಯಿಂದ ಅದನ್ನು ಹಾರಿಸಿಬಿಡಬಹುದು. ಹುಂ! ಮೂರ್ಖರು ! ಪಾಪ ! ಅಜ್ಞಾನದ ಹಸುಗೂಸುಗಳು ! ತಮ್ಮದು ಅಜ್ಞಾನ ಎಂದು ಅರಿಯದ ದುರ್ದೈವಿಗಳು !

ಎಲ್ಲಿದೆ ಸಮಸ್ಯೆ ? ಅದೇ ಕುಮುದಳ ವಿಚಾರ ಅಹುದಲ್ಲವೆ ? ಅದ ರಲ್ಲಿ ಸಮಸ್ಯೆ ಯಾವುದು ? ಪ್ರೀತಿಯ ಹೆಂಡತಿ ತೀರಿಕೊಂಡಿದ್ದಾಳೆ, ಇನ್ನು ದಾಂಪತ್ಯಜೀವನಕ್ಕಾಗಲಿ ಪ್ರೇಮಕ್ಕಾಗಲಿ ಮನಸ್ಸಾಗದು, ಯಾವ ತರದ ಬಂಧನವೂ ಇಲ್ಲ; ಅವಳನ್ನು ಬಿಟ್ಟುಬಿಟ್ಟರಾಯಿತು. ಬಿಡುವುದೆಂದರೆ ಹೊರ ದೂಡುವುದೆ ಅಲ್ಲ. ಅಷ್ಟೊಂದು ಕಳಕಳಿ ಇದ್ದರೆ, ಹೇಗಾದರೂ ಹೆಂಡತಿ ಆಕೆಯನ್ನು ಸಾಕಿ ಸಲಹುತ್ತಿದ್ದಳಲ್ಲವೆ ? ಅದನ್ನೆ ಮಾಡಿದರಾಯಿತು. ಯಾವು ದಾದರೊಂದು ಸ್ತ್ರೀಶಿಕ್ಷಣದ ಸಂಸ್ಥೆಗೆ ಆಕೆಯನ್ನು ಕಳುಹಿಸಿ ಆಕೆ ಸ್ವಾವ ಲಂಬಿಯಾಗುವಂತೆ ಮಾಡಿದರಾಯಿತು. ಇದೇನು ದೊಡ್ಡ ಸಮಸ್ಯೆ !

ಮೂರ್ಖರು ! ಹೀಗೆ ಹೇಳುವವರಿಗೆ ತನ್ನ ಸಮಸ್ಯೆಯೆ ತಿಳಿದಿಲ್ಲ. ಪ್ರೀತಿಯ ಹೆಂಡತಿ ತೀರಿಕೊಂಡಳು, ನಿಜ. ಆದರೆ ಕುಮುದಳಲ್ಲಿ ಪ್ರೀತಿ ಇದೆಯೆ ಇಲ್ಲವೆ—ಯಾರಿಗೆ ಗೊತ್ತು ? ಯಾರು ಆ ಮಾತನ್ನು ಕೇಳಿದ್ದಾರೆ ?

ಕುಮುದಳಲ್ಲಿ ಪ್ರೀತಿ ಇದ್ದರೆ ಅವಳನ್ನು ಮದುವೆಯಾಗಬೇಕು, ಅದಕ್ಕೆ ಯೋಚನೆ ಯಾಕೆ ?

ಛಿ ! ಇವರೂ ದಡ್ಡರು ! ಪ್ರೀತಿಯ ರಹಸ್ಯವೆ ಗೊತ್ತಿಲ್ಲ. ಪ್ರೀತಿ ಇದೆಯೆ ಇಲ್ಲವೆ ಎಂಬುದನ್ನು ಹೇಳುವುದು ಹೇಗೆ ? ಹೊಟ್ಟೆ ತುಂಬಿದ ಮೇಲೆ ಅಡಿಗೆ ಸೇರುವುದೆ ಎಂದು ಕೇಳಿದರೆ ? ಸೇರುವುದು ಎಂದರೆ—ಇನ್ನೊಮ್ಮೆ ತಿನ್ನು ಎನ್ನುವರು, ಅದು ಅಶಕ್ಯ; ತಿನ್ನಲು ಆಗದಿದ್ದರೆ ನಿನಗೆ ಸೇರಿದ್ದು ಸುಳ್ಳು ಎನ್ನುವರು; ಆದರೆ ಹೊಟ್ಟೆತುಂಬ ತಿಂದದ್ದೇ ಸೇರಿದೆ ಎಂಬುದಕ್ಕೆ ಸಾಕ್ಷ್ಯವಾಗಿರುವುದು. ಕುಮುದಳಲ್ಲಿ ಪ್ರೀತಿ ಇದೆಯೆ ?

ಈ ಪ್ರಶ್ನವನ್ನು ರಾಮಣ್ಣನು ಆದಷ್ಟುಮಟ್ಟಿಗೆ ಕೇಳಿಕೊಳ್ಳುತ್ತಿರ ಲಿಲ್ಲ. ಯಾಕೆಂದರೆ, ಆ ಪ್ರಶ್ನಕ್ಕೆ ನೇರವಾದ ಉತ್ತರವನ್ನು ಕೊಡುವುದಕ್ಕೆ ಮುಂಚಿತವಾಗಿಯೆ ನೂರಾರು ಸಂಗತಿಗಳು ಅವನ ಕಣ್ಣುಕಟ್ಟಿ ನಿಲ್ಲುತ್ತಿದ್ದುವು.

ಯಾವ ದಿನ ಅದು ?—ಅಂದು ?—ಆ ?—ಹಾಂ....ಸರಲೆ ಒಂದು ನಸುಕಿನಲ್ಲಿ ಗಾಬರಿ ಮಾಡಿದ ದಿವಸ. ಅಂದು ಇಡಿಯ ದಿನ ಒಂದು ಯಂತ್ರ

ದಂತೆ ತಾನು ಚಲನವಲನವನ್ನು ನಡೆಸಿದ್ದನು. ರಾತ್ರಿ ಸರಲೆ ಮೊದಲಿನಂತೆ ಹುಷಾರಾಗುವವರೆಗೆ, ಡಾಕ್ಟರನು ಮೂರು ನಾಲ್ಕು ಸಲ ಹೆದರಿಕೆ ಇಲ್ಲ ಎಂದು ಭರವಸೆ ಕೊಡುವವರೆಗೆ ತನ್ನ ಕಾಲ್ಗಳು ನಡೆದಿದ್ದುವು, ಕೈ ಕೆಲಸದಲ್ಲಿ ತೊಡಗಿತ್ತು, ಕಣ್ಣು ನೋಡುತ್ತಿದ್ದುವು, ಕಿವಿಗೆ ಕೇಳಿಸುತ್ತಿತ್ತು—ಆದರೆ ಇವು ಗಳಲ್ಲಿ ಒಂದು ಕ್ರಿಯೆಯ ಎಚ್ಚರವೂ ತನಗಿದ್ದಿರಲಿಲ್ಲ. ಎಲ್ಲ ಸರಿಹೋದ ಮೇಲೆ, ಏನೊ ತುಸು ತಿಂದಮೇಲೆ ಒಂದೆಡೆ ಅಪಾರವಾದ ಸಮಾಧಾನ, ಇನ್ನೊಂದೆಡೆ ಅನಿವಾರ್ಯವಾದ ನಿದ್ದೆ; ಸರಲೆಯೊಡನೆ ತಾನೂ ಪುನರ್ಜನ್ಮವನ್ನು ಪಡೆದಂತಾಗಿತ್ತು. ಮನಸ್ಸಿಗಾದ ಆನಂದಕ್ಕಾಗಿ ಎಲ್ಲಿಯಾದರೂ ಹಾಯಾಗಿ ಕುಳಿತುಕೊಂಡು "ಹೊಟ್ಟೆ ತುಂಬು" ವಂತೆ ಅಳಬೇಕು ಎಂದೆನ್ನಿಸಿತ್ತು. ಕೊನೆಗೆ ಯಾರೊಡನಾದರೂ ತನಗಾದ ಆನಂದವನ್ನು ತೋಡಿಕೊಳ್ಳಬೇಕು ಎಂದೆನ್ನಿಸಿತು. ಆಗ ತಾನು ಕುಮುದಳ ಕೋಣೆಗೆ ಹೋಗಿದ್ದ. ತನಗೆ ಪೂರ್ತಿ ಯಾಗಿ ನೆನಪಿನಲ್ಲಿದೆ, ಅಂದು ಕುಮುದಳನ್ನು ತಾನು ಸ್ನೇಹದಿಂದ ಕಂಡಿದ್ದನೆ ಹೊರತು ಸಂಭೋಗದ ಹೆಣ್ಣೆಂಬ ದೃಷ್ಟಿಯಿಂದಲ್ಲ. ಆ ರಾತ್ರಿಯ ನೆನಪು ಬಂದಾಗೊಮ್ಮೆ ರಾಮಣ್ಣನಿಗೆ ಆಶ್ಚರ್ಯವಾಗುತ್ತಿದ್ದಿತು; ಮರುದಿನ ನಸುಕಿನಲ್ಲಿ—ತನಗೆ ಏನೆನ್ನಿಸಿತೊ ಏನೊ!—ಕುಮುದಳ ಹಣೆಗೆ ತಾನು ಮುದ್ದಿಟ್ಟಿದ್ದನಲ್ಲ ? ಆಗ ಕುಮುದಳ ಮುಖ ಹೆಣ್ಣಿನ ಮುಖ ಎಂಬ ವಿಚಾರ ಕೂಡ ಬಂದಿರಲಿಲ್ಲ.

ಅಂದಿನ ರಾತ್ರಿ ತನ್ನ ಮನೋಭಾವನೆಯ ಬಗ್ಗೆ ರಾಮಣ್ಣನಿಗೆ ಪೂರ್ತಿ ಯಾಗಿ ಭರವಸೆ ಇದ್ದಿತು. ಆದರೇನು ? ಒಳಗಿನ ಪ್ರಪಂಚವೆ ವಿಚಿತ್ರ ಪ್ರಪಂಚ ವಾಗಿದೆ. ತಾನೊಂದು ಬಗೆದರೆ ದೈವವೊಂದು ಬಗೆಯುವುದೆನ್ನುವುರಲ್ಲ ? ಇಷ್ಟೆ, ಕುಮುದಳು ಇನ್ನೊಂದು ಬಗೆದಿದ್ದಳು. ಆ ಮಾತಿನ ಬಗ್ಗೆ ರಾಮಣ್ಣನಿಗೆ ಸಂಶಯವೆ ಇದ್ದಿರಲಿಲ್ಲ. ತನ್ನ ಮತ್ತು ಕುಮುದಳ ಸಂಬಂಧದ ವಿಷಯದಲ್ಲಿ ಇದುವರೆಗೆ ಯಾವ ವಿಚಾರವು ಬಂದಿರಲಿಲ್ಲವೊ ಆ ವಿಚಾರಕ್ಕೆ ಈಗ ರಾಮಣ್ಣನ ತಲೆಯಲ್ಲಿ ಪ್ರವೇಶ ಸಿಕ್ಕಿತು. ಕುಮುದಳು ತನ್ನನ್ನು ಪ್ರೀತಿಸುತ್ತಿದ್ದಾಳೆ ! ಆ ಮಾತು ಹೊಳೆದಾಗ ರಾಮಣ್ಣನ ಎದೆ ಧಸ್ಸೆಂದಿತ್ತು. ಇದೇನು ಹೊಸ ತೊಡಕು–ಎಂದುಕೊಂಡಿದ್ದನು. ಮೇಲಾಗಿ ತನ್ನ ಕೈಮೀರಿದ ತೊಡಕು; ಕುಮುದಳು ತನ್ನನ್ನು ಪ್ರೀತಿಸುತ್ತಿದ್ದರೆ ತಾನು ಏನು ಮಾಡಬಲ್ಲನು ? ತಾನು

ಪರತಂತ್ರ ಎಂಬುದದ್ಕಾಗಿ ಅವನಿಗೆ ಸಿಟ್ಟು ಬಂದಿತ್ತು. ಮೊದಲು ತನ್ನಲ್ಲಿಯೆ ರೇಗಿಕೊಂಡ. ಇದುವರೆಗಿನ ತನ್ನ ನಡತೆ ಕುಮುದಳಿಗೆ ಪ್ರೋತ್ಸಾಹ ಕೊಟ್ಟಿದ್ದರೆ ತನ್ನ ಮೂರ್ಖತನಕ್ಕೆ ತಕ್ಕ ಪ್ರಾಯಶ್ಚಿತ್ತ ಎಂದು ಸ್ವಂತಕ್ಕೆ ಬೈದುಕೊಂಡಿದ್ದ. ಮೂರ್ಖ ! ತಾನು ಶತಮೂರ್ಖ ! ಕೇವಲ ಕಾಮತೃಪ್ತಿಗೆ ಹಂಬಲಿಸಿ, ಮುಗ್ಧತನದ ಲಾಭ ಪಡೆದುಕೊಂಡು ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳುವಾಗ ಬೇರೆ ಯಾವ ವಿಚಾರವೂ ಇದ್ದಿರಲಿಲ್ಲವಲ್ಲ ! ಸುಲಭ ಸಾಧ್ಯಳಾಗಿ ಅವಳು ಒಲಿದಳೆಂಬುದಕ್ಕಾದರೂ ನನಗೆ ತಿಳಿಯಬೇಕಿತ್ತು, ಆಕೆ ನನ್ನನ್ನು ಮೋಹಿಸುತ್ತಿರುವಳೆಂದು ಎಂದು ಹಣೆಯನ್ನು ಬಡೆದುಕೊಂಡಿದ್ದ. ಮತ್ತೊಮ್ಮೆ ಹೆಣ್ಣಿನ ಜಾತಿಯ ಮೇಲೆ ಸಿಡಿದಿದ್ದ. ಕಾಮಜೀವನ ಎಂದರೆ ಹೆಣ್ಣಿಗೆ ಮೊದಲು ಮದುವೆಯ ವಿಚಾರವೆ ! ಒಂದು ವಾಸನೆಯ ತೃಪ್ತಿಗಾಗಿ ಅವರ ವಿಚಾರವಿಲ್ಲ, ಅದಕ್ಕೊಂದು ನೈತಿಕ ಬಂಧನದ ಹಿನ್ನೆಲೆ ಬೇಕೇ ಬೇಕು ! ಬೇರೆ ಯಾವ ನೈಸರ್ಗಿಕ ವಾಸನೆಯೂ ಮನುಷ್ಯನ ಮೇಲೆ ಇಷ್ಟು ಪರಿಣಾಮವನ್ನು, ಇಂತಹ ಪಾಪ-ಪುಣ್ಯದ ಹೊರೆಯನ್ನು ಹೊರಿಸುತ್ತಿರಲಿಕ್ಕಿಲ್ಲ. ಕುಮುದಳು ತನ್ನನ್ನು ಪ್ರೀತಿಸುತ್ತಿದ್ದರೆ ಮುಂದಿನ ಮಾರ್ಗವೇನು?

ಆಪತ್ತು ಒಂದರ ಮೇಲೊಂದು ಬರಲೇಬೇಕು ! ಎಂತಹ ಕ್ರೂರ ನಿಯಮವಿದೆಯೊ ನಿಸರ್ಗದಲ್ಲಿ! ಮೊದಲೇ ತನ್ನ ಸುತ್ತಲು ಸಾಕಷ್ಟು ತೊಡಕುಗಳನ್ನು ನಿಲ್ಲಿಸಿಕೊಂಡ ರಾಮಣ್ಣನನ್ನು ಈಗ ಹೊಸ ತೊಡಕೊಂದು ಎದುರಿಸಿತ್ತು. ಅದು ಗಂಡಾಂತರದಿಂದ ಪಾರಾದ ಮೇಲೆ ಸರಲೆಯ ಬಗ್ಗೆ ಬಹಳ ಎಚ್ಚರದಿಂದಿರಬೇಕು ಎಂದು ಡಾಕ್ಟರನು ಹೇಳಿದ್ದನು. " ಅವರಿಗೆ ಆಘಾತ ತಡೆದುಕೊಳ್ಳುವ ಶಕ್ತಿ ಉಳಿದಿಲ್ಲ. ಬೇಡಿದ್ದನ್ನ ಕೊಟ್ಟು ಕೂಸಿನಂತೆ ರಮಿಸತಾ ಇರ್ರಿ ಅವರನ್ನ " ಎಂದು ಹೇಳಿದ್ದ. ರಾಮಣ್ಣನಿಗೆ ಆಗಿನ ಸಂದರ್ಭದಲ್ಲಿ ಅದು ಅನುಕೂಲವಾಗಿಯೆ ಬಂದಿತು. ಕುಮುದಳು ತನ್ನನ್ನು ಪ್ರೀತಿಸುವಳೆಂದು ಸಂಶಯ ಬಂದ ಮೇಲೆ ಆದಷ್ಟು ಆಕೆಯ ನಿಕಟಸಹವಾಸವನ್ನು ತಪ್ಪಿಸಬೇಕು ಎಂಬ ರಾಮಣ್ಣನಿಗೆ ಈಗ ಸರಲೆಯ ಹತ್ತಿರದಲ್ಲಿಯೆ ಬೇಕಾದಷ್ಟು ವೇಳೆಯನ್ನು ಕಳೆಯಲು ನೆವ ದೊರೆತಂತಾಗಿತ್ತು. " ಕೂಸಿನ್ಹಾಂಗ ರಮಿಸಬೇಕು ನಿನ್ನ, ಅಂತ ಹೇಳ್ಯಾರ ಡಾಕ್ಟರ್ರು. ಅದಕೇ ಇಲ್ಲಿಯೆ ಕೂತಿರತೇನಿ. ಚಾಕ್‌ಲೆಟ್ ಬೇಕು ಅಂದ್ರ್ಯಾಡ್ಲೆ ತಂದ್ಕೊಡ್ತೇನಿ, ಆಂ ? " ಎಂದು ಅವಳ ಹಾಸ್ಯವನ್ನು ಮಾಡುತ್ತಿದ್ದ.

"ಆಯ್ತು, ಚಾಕ್‌ಲೆಟ್ ಅಂತ ಚಾಷ್ಟೀ ಮಾಡೋ ಪೂರ್ತಿ ನಿಂ ಮಾತು!" ಎಂದು ಒಮ್ಮೆ ಸರಲೆಯೂ ತನ್ನ ಹಾಸ್ಯವನ್ನು ಹಂಗಿಸಿದ್ದಳು.

"ಚಾಕ್‌ಲೆಟ್ ಅಂತ ಚಾಷ್ಟಿ! ಹುಚ್ಚು ಇದ್ದೀ ಏನು ನೀನು? ಬೇಕಾದರ ನನ್ನ ಪರೀಕ್ಷಾ ಮಾಡಿ ನೋಡು. ಸರಲೇ, ನೀನು ತ್ರೈಲೋಕ್ಯವನ್ನು ಬೇಡಿದರೂ ತಂದು ಕೊಟ್ಟೇನು" ಎಂದು ತಾನೂ ವಿನೋದದ ಭರದಲ್ಲಿ ನಾಟಕದೊಳಗಿನ ಪಾತ್ರದಂತೆ ನುಡಿದಿದ್ದ.

ಒಮ್ಮೆಲೆ ಸರಲೆ ಉಸುರ್ಗರೆದಿದ್ದಳು. ವಿನೋದಕ್ಕೆ ತಡೆಯನ್ನುಂಟು ಮಾಡುವ ಈ ನಿಟ್ಟುಸಿರಿನಿಂದ ರಾಮಣ್ಣ ಚಕಿತನಾಗಿದ್ದ.

"ಯಾಕ? ನಿನಗ ಸುಳ್ಳು ಅನ್ನಿಸ್ತದೇನು?"

ಸರಲೆ ಮಾತನಾಡದೆ ತಲೆಯನ್ನಲ್ಲಾಡಿಸಿದ್ದಳು.

"ಅಂತೂ ಗಂಡನ ಮ್ಯಾಲಿನ ವಿಶ್ವಾಸ ಹಾರಿತನ್ನು."

"ಉಹುಂ" ಎನ್ನುತ್ತ ಮತ್ತೆ ತಲೆಯನ್ನಲ್ಲಾಡಿಸಿದ್ದಳು.

"ಅಂದ್ರ ಮನಸಿನೊಳಗ ಇದ್ದದ್ದನ್ನ ಹೇಳಿ ನೋಡಲ್ಲ?"

ಸರಲೆ ಹಿರಿತನದ ನಗೆಯೊಂದನ್ನು ನಕ್ಕಿದ್ದಳು.

"ಅಂಥಾ ಮೋಜಿನದೇನದು? ಹೇಳಿಯಾದರೂ ಹೇಳು, ನೋಡೋಣ ಸರಲಾ."

"ನೀವು ಅದನ್ನ ನಡೆಸಿಕೊಡೋದಿಲ್ಲ ಅನ್ನೋದು ಗೊತ್ತು ಅದ ನನಗ."

ಹುಂ ಎಂದು ರಾಮಣ್ಣ ಆಕೆಯನ್ನು ದಿಟ್ಟಿಸಿ ಕೆಣಕುವ ನಗೆಯಿಂದ ನುಡಿದಿದ್ದ, "ನನ್ನದೂ ನಿನ್ನದೂ ಹೃದಯ ಅಷ್ಟು ಒಂದಾಗಿವೆಯಲ್ಲ, ನನ್ನ ವಿಚಾರ ನಿನಗೆ ಮೊದಲೇ ಗೊತ್ತಿರುವಷ್ಟು?"

"ಆಯ್ತು—ಇಂಥಾ ಮಾತು ಸುರುವಾದ್ರಂತೂ—"

"ಬಾಯಿ ಮುಚ್ಚಿಕೋತಿನಿ, ಆಯ್ತು? ಏನು ಕಣ್ಮುಚ್ಚಲ್ಯೊ? ಅಲ್ಲಲ್ಲ-ಇದು ನೋಡುವ ವಸ್ತು ಅಲ್ಲವಲ್ಲ? ಆಗಲಿ, ಕಿವಿ ಮುಚ್ಚಿಕೋತೀನಿ, ಹೇಳು" ಎಂದು ಕಿವಿಗೆ ಕೈಯಿಟ್ಟುಕೊಂಡಿದ್ದ.

"ನೀವು ಎಂದಿನಿಂದಲೂ ಕಿವಿ ಮುಚ್ಚೀರಿ ನನ್ಮಾತಿಗೆ."

" ಹೋಗಲಿ ಬಿಡು. ಡಾಕ್ಟರಿಗೇ ಹೇಳ್ತೀನಿ. ಬೇಡಿದ್ದನ್ನ ಕೊಡಿರಿ ಅಂತ ಹೇಳಿದ ಪುಣ್ಯಾತ್ಮ. ಅದಕ್ಕ ನಿನಗ ಬಾಯಿಬಿಚ್ಚಿ ಬೇಡುವಂಥಾ ಔಷಧ ಕೊಡು ಅಂತ."

" ಬಾಯಿಮುಚ್ಚಿ ಯಾಕೆ ? ಕೈಮುಗಿದು ಬೇಡ್ತೀನಿ."

" ಬೇಡು ಹಾಗಾದರೆ. ಭಕ್ತಶ್ರೇಷ್ಠಳೆ, ಪ್ರಸನ್ನನಾದ ನಿನ್ನ ದೇವನು ಕಣ್ಮುಚ್ಚಿ ಕೊಡುವನು ನೀನು ಬೇಡಿದ್ದನ್ನು."

ತಾನು ಆ ಮಾತನ್ನು ಎಂತಹ ವಿನೋದಾತ್ಮಕವಾಗಿ, ಎಷ್ಟು ಉಲ್ಲಾಸ ದಿಂದ, ಯಾವ ಹುಡುಗಾಟಿಕೆಯ ಮುಗ್ಧ ಕಿಡಿಗೇಡಿತನದಿಂದ ನುಡಿದಿದ್ದ ! ಆದರೆ ಬೇಸಗೆಯ ಅಡ್ಡಮಳೆಯಂತೆ ತನ್ನ ಉಲ್ಲಾಸವೃತ್ತಿಯನ್ನು ಸರಲೆಯ ಉತ್ತರವು ಅಕಸ್ಮಾತ್ತಾಗಿ ಬಂದು, ಕವಿದು ಮುತ್ತಿ ಸುರಿದಿತ್ತು. ಆ ಮಳೆ ಯಿಂದ ತಪತಪ ತೋಯ್ದುವನಂತೆ ತನ್ನ ಮೈ ಒಮ್ಮೆಲೆ ಬೆಮರಿತ್ತು ಆಕೆಯ ಆ ಉತ್ತರದಿಂದ. ಕಣ್ಣು ಮುಚ್ಚಿದ್ದಾಸೆ ತಾನು, ನಗೆ ಕುಣಿಯುತ್ತಿದೆ ತನ್ನ ಮುಖದಲ್ಲಿ, ಹೃದಯ ಹಾತೊರೆಯುತ್ತಿದೆ ಹುಡುಗಾಟದ ಮುಂದಿನ ಹೆಜ್ಜೆ ಗಾಗಿ; ಆದರೆ ಇದೆಲ್ಲ ಒಂದು ಕ್ಷಣಮಾತ್ರ. ಮರುಗಳಿಗೆಯಲ್ಲಿ ಸರಲೆಯ ಬಾಯಿಯಿಂದ

" ನೀವು ಕುಮುದಾನ ಮದುವೇ ವಿಚಾರ ಮಾಡಬೇಕು."

ಎಂಬ ಶಬ್ದಗಳು ಹೊರಬಿದ್ದಾಗ ಅವನಿಗೆ ಮುಚ್ಚಿದ ಕಣ್ಣು ತೆರೆಯಲು ಹೆದರಿಕೆಯಾದಂತಾಗಿತ್ತು.

" ಏನಿದು ? ಯಾವ ಮಾತು, ಸರಲಾ ?"

" ಬೇಡ ಎಂದರೂ ನೀವೇ ಕೇಳಿದಿರಲ್ಲ ?"

" ಹೀಗೆ ಮಾತನಾಡಿದರೆ, ಸರಲಾ, ನಾನು ಏನು ಮಾಡಬೇಕು ?"

" ಈಗ ಕೇಳಿರಿ ಡಾಕ್ಟರರಿಗೆ."

ನಿಜವಾಗಿ ಆ ಮಾತನ್ನು ಅವಳು ಸದುದ್ದೇಶದಿಂದಲೆ ಆಡಿದ್ದಳೆಂಬುದು ಮುಂದೆ ಎಷ್ಟೊ ದಿನಗಳ ಮೇಲೆ ತಿಳಿದುಬಂದಿತ್ತು ರಾಮಣ್ಣನಿಗೆ. ಡಾಕ್ಟರರ ಮಾತನ್ನು ತಾನೇ ಮೊದಲು ಎತ್ತಿದ್ದ, ಉದ್ವೇಗದ ವಾತಾವರಣವನ್ನು ಪ್ರಸನ್ನ ಮಾಡುವ ಸದುದ್ದೇಶದಿಂದ ಸರಲೆ ಬುದ್ಧಿಪೂರ್ವಕವಾಗಿ, ನಗೆಯ ಮಾತು

ಎಂದು ಹಾಗೆ ಹೇಳಿದ್ದಳು. ಆದರೆ ಇಷ್ಟೆಲ್ಲ ಆಗ ರಾಮಣ್ಣನಿಗೆ ಹೊಳೆದಿರಲೇ ಇಲ್ಲ.

ಸರಲೆಯು ಡಾಕ್ಟರರನ್ನು ಕೇಳಿರಿ ಎಂದಾಗ ರಾಮಣ್ಣನಿಗೆ ಒಂದೇ ಒಂದು ವಿಚಾರ ಬಂದಿತ್ತು. ತನ್ನ ಮತ್ತು ಕುಮುದಳ ಸಂಬಂಧ ಸರಲೆಗೆ ಗೊತ್ತಾಗಿದೆ. ಅಥವಾ ಕುಮುದಳೆ ಹೇಳಿರಬೇಕು. ಈ ನಾಲ್ಕಾರು ದಿನ ಇಬ್ಬರೂ ಪಿಸುಪಿಸು ಮಾತಾಡುತ್ತಿದ್ದರು. ಈಗ ಡಾಕ್ಟರರ ಹೆಸರನ್ನೆತ್ತಿದ ಳೆಂದ ಮೇಲೆ ಏನೊ ಅನರ್ಥವಾಗಿದೆ ! ಅನರ್ಥವೇನು ಸುಟ್ಟಿತು ! ಆಗು ವುದೇ ಆಗಿದೆ, ಅನಿಷ್ಟವಾಗಿದೆ ! ಬೀದಿಯಲ್ಲಿ ಹೋಗುತ್ತಿರುವ ಭೂತವನ್ನು ಮನೆಯಲ್ಲಿ ಹೊಕ್ಕಿಸಿಕೊಂಡಂತೆ ಈ ಹಾಳು ಕುಮುದಳನ್ನು ಯಾವ ಕೆಟ್ಟ ಮೂಹೂರ್ತದಲ್ಲಿ ಸೇರಿಸಿಕೊಂಡಿತೊ ! ಈ ಹುಡುಗೆಯಾದರೂ ಎಂತಹ ಠಕ್ಕ ! ತನ್ನ ಮುಂದೆ ಯಾಕೆ ಹೇಳಲಿಲ್ಲ ? ಯಾಕೇನು ? ತನ್ನನ್ನು ಬಲೆ ಯಲ್ಲಿ ಸಿಕ್ಕಿಸಿಕೊಳ್ಳಲು ಮುಂಚಿನಿಂದಲೂ ಅವಳು ಈ ಆಟವನ್ನು ಹೂಡಿ ರಲೇಬೇಕು. ಸಂಶಯವೆ ಇಲ್ಲ. ಅಂದು ಕೋಣೆಗೆ ಪುಸ್ತಕವನ್ನು ಹುಡು ಕಲು ಬಂದದ್ದು, ಅದಕ್ಕೂ ಮುಂಚೆ ನನ್ನ ಕೈಗೆ ಕೈಯನ್ನು ಹಚ್ಚಿದ್ದು, ತನ್ನನ್ನು ನಾನು ಸಿನೆಮಾಕ್ಕೆ ಕರೆದುಕೊಂಡು ಹೋಗುವಂತೆ ಶುದ್ಧಹೃದಯದ ಸರಲೆಯನ್ನು ಒಲಿಸಿದ್ದು — ಇದೆಲ್ಲ ಮುಂಚಿನಿಂದಲೆ ತಯಾರಿಸಿದ ಯೋಜನೆ ಯಾಗಿರಬೇಕು. ಅದಕಾಗಿ ಈಗ ಸರಲೆಗೇ ಹೇಳಿಬಿಟ್ಟಿದ್ದಾಳೆ, ನಾನು ಜಾರ ದಂತೆ ಸಿಕ್ಕಿಕೊಳ್ಳಬೇಕೆಂದು ! ಅಬ್ಬ !

“ ಕುಮುದಳೆ ಹೇಳಿರುವಳೆ ನಿನ್ನ ಮುಂದೆ ?” ಎಂದು ತಡೆಯದೆ ತನ್ನ ಬಾಯಿಯಿಂದ ಬಂದಿತ್ತು.

“ ಛಿ ! ಇಂಥಾ ಮಾತನ್ನ ಆ ಹುಡುಗೆ ತಾನಾಗಿಯೆ ಹೇಳೀತೇನು ? ನಾ ನಿಂಮುಂದ ಆಡ್ತೇನಿ ಅನ್ನೋದು ಕೂಡಾ ಗೊತ್ತಿಲ್ಲ ಆಕೆಗೆ.”

ಸರಲೆಯ ಈ ಉತ್ತರವನ್ನು ಕೇಳಿಯಂತೂ ರಾಮಣ್ಣನ ಸಂಶಯು ದೃಢ ವಾಗಿತ್ತು. ಸರಲೆಗೆ ಯಾವ ಆಘಾತವಾಗದಂತೆ ತಾನು ಉತ್ತರಕೊಡಬೇಕಿತ್ತು. ತನ್ನ ಮನಸ್ಸಿನೊಳಗಿನ ವಿಚಾರಗಳ ಸುಳಿವು ಕೂಡ ಆಕೆಗೆ ಬೇಡ ಎಂದು, ಹೇಗೊ ಮಾಡಿ, ನಗೆಯ ಮುಖದಿಂದ “ ಆಗಲಿ, ಡಾಕ್ಟರ್ರಿಗೇ ಕೇಳ್ತೇನಿ ” ಎಂದಿದ್ದ.

ಆ ದಿನ ಮಾತ್ರ ರಾಮಣ್ಣನು ಏಕಾಂತದಲ್ಲಿ ವಿಚಾರ ಮಾಡಬೇಕಾಗಿ ಬಂದಿತ್ತು. ಎರಡು ಮಾತುಗಳು ಅವನ ಮುಂಗೆ ಸ್ಪಷ್ಟವಾಗಿ ನಿಂತಿದ್ದುವು : ಕುಮುದಳ ಸಂಬಂಧದ ಪರಿಣಾಮವೇನು ಎಂಬುದರ ಕಲ್ಪನೆಯಾಗಿತ್ತು; ಕುಮುದಳು ಬುದ್ಧಿಪೂರ್ವಕವಾಗಿ ಬೀಸಿದ ಬಲೆ ಇದು, ಆದುದರಿಂದ ಇದರಿಂದ ಪಾರಾಗಲು ಬುದ್ಧಿಸರ್ವಸ್ವವನ್ನು ವೆಚ್ಚಮಾಡಬೇಕು. ಆ ಕ್ಷಣದಲ್ಲಿ ಕುಮುದಳಿಗಾಗಿ ತನ್ನಲ್ಲಿ ಎಷ್ಟು ಕಠೋರವಾದ ತಿರಸ್ಕಾರಭಾವ ಉಂಟಾಗಿದ್ದಿತು ! ನನ್ನನ್ನು ಬಲೆಯಲ್ಲಿ ಎಳೆಯುವುದೆ ? ನನ್ನ ಮನೆಯಲ್ಲಿದ್ದುಕೊಂಡು, ನನ್ನ ಹೆಂಡತಿ ಅಸಹಾಯಳಾಗಿದ್ದಾಳೆ ಎಂಬುದನ್ನು ಪೂರ್ತಿಯಾಗಿ ಅರಿತುಕೊಂಡು, ಅದರ ದುರ್ಲಾಭವನ್ನು ಪಡೆಯುವ ಹಂಚಿಕೆಯೆ ? ಅವಮಾನ-ಸಿಟ್ಟು-ತಿರಸ್ಕಾರ-ದ್ವೇಷ-ಅಸಹನೆ ಇವುಗಳ ಜಂಜಾಟದಿಂದ ಸುಂಟರಗಾಳಿಯಲ್ಲಿ ಸಿಕ್ಕಂತೆ ಅವನು ದಿಕ್ಕುತಪ್ಪಿ ಹೊಯ್ದಾಡಿದ್ದನು.

ಮರುದಿನದೊಳಗಾಗಿ ಉದ್ವೇಗವೆಲ್ಲ ಶಾಂತವಾಗಿತ್ತು. ತನ್ನದೂ ತಪ್ಪಿಲ್ಲದೆ ಇಲ್ಲ ಎಂದು ನಿರುಪಾಯನಾಗಿ ಅವನು ರಾತ್ರಿ ಮಲಗಿದಲ್ಲಿಯೆ ಒಪ್ಪಿಕೊಂಡಿದ್ದ. ಏನೇ ಇರಲಿ, ಇನ್ನು ಈ ಜಂಜಾಟ ಮಾತ್ರ ಬೇಡ ಎಂದು ನಿರ್ಧರಿಸಿದ್ದ. ಆ ದಿನದಿಂದ ಕುಮುದಳನ್ನು ಕಣ್ಣೆತ್ತಿ ನೋಡಲು ಕೂಡ ಅವನ ಮನಸ್ಸಾಗಿದ್ದಿಲ್ಲ; ಸರಲೆ ಮುಂದೆ ಆ ಮಾತನ್ನೆ ಎತ್ತಿರಲಿಲ್ಲವಾದರೂ ತನ್ನ ಲಕ್ಷ್ಯವಿಲ್ಲದಾಗ ತನ್ನನ್ನು ಏನೊ ಒಂದು ಅಪೇಕ್ಷಾದೃಷ್ಟಿಯಿಂದ ನೋಡುತ್ತಿದ್ದಳೆಂಬುದನ್ನು ಕಂಡಿದ್ದ; ಹಗಲು ಸರಲೆಯೊಡನೆ ಮಾತು-ಕತೆ, ಸಂಜೆಗೆ ಬಯಲು ಹವೆಗಾಗಿ ತಿರುಗಾಟ, ರಾತ್ರಿ ಬರೆಯುವುದು. ಎಲ್ಲವೂ ಈಗ ಸರಾಗವಾಗಿ ನಡೆದಂತಿದ್ದರೂ ಒಳಗೊಳಗೆ ಅವನಿಗೆ ಒಂದು ಹೆದರಿಕೆ ಇದ್ದೇ ಇದ್ದಿತು : 'ಡಾಕ್ಟರನ ಪಶ್ನ' ಯಾವಾಗ ಅನಿವಾರ್ಯವಾದೀತೊ—ಎಂದು. ಒಂದುದಿನ " ಡಾಕ್ಟರನ್ನಾದರೂ ಕೇಳಿರಿ " ಎಂದು ಸರಲೆ ನುಡಿದಾಗ ಬೆಚ್ಚಿ ಬಿದ್ದಿದ್ದ. "ಯಾಕ ? ಏನಾಯ್ತೀಗ?" ಎಂದು ಹುಚ್ಚಾಗಿ ಕೇಳಿದ್ದ.

" ಆಗಬೇಕೆ ಏನು ? ಕನ್ನಡಿ ಆದರೂ ನೋಡಿಕೋರಿ " ಎಂದಿದ್ದಳು. ಆಗ ತಿಳಿದಿತ್ತು ಸಂದರ್ಭ !

" ಹೆ ! ನನಗಂತೀಯಾ ? ನನಗೇನು ಧಾಡಿ " ಎಂದು ಹಾರಿಸಿಕೊಳ್ಳಲೆತ್ನಿಸಿದ್ದ.

“ ಸುಮ್ಮನೆ ಮಾತಾಡಿದರಾಯ್ತೇನು ? ಮಾರಿ ಅನ್ನೋದು ಬೆಳ್ಳಗ ಆಗೇದ.”

“ ಏನಾದ್ರೊಂದು ಹೇಳಬ್ಯಾಡ. ನಿನಗ ನಾ ಛಂದ ಕಾಣಿಸ್ತಿರಬೇಕು ಈ ಹೊತ್ತು—ಹಹ !”

“ ನನ್ನ ಸಲುವಾಗಿ ಛಂದ ಕಾಣಿಸೋ ದಿವಸ ಎಂದೋ ಹೋದುವು.”

ಮಾತು ಮತ್ತೆ ಮೈಮೇಲೆ ಬರಬಹುದೆಂದು ಹೆದರಿ ರಾಮಣ್ಣ ವಿಷಯವನ್ನು ಬದಲಾಯಿಸಿದ್ದ. “ ಔಷಧ ತಕ್ಕೊಂಡೆಯಾ ? ಅಂದ್ರೇನು ಬ್ಯಾಡ ಅಹುದಲ್ಲೊ ? ನಾನು ಹೋಗಲಿಯಾ ಬರೀಲಿಕ್ಕೆ ?” ಎಂದಿದ್ದ.

“ ನೀವು ಹೋಗಿರಲ್ಲ. ಕುಮುದಾನ ಊಟನೂ ಆಯ್ತು, ಆಕೆ ಕೂಡ್ತಾಳ—”

ರಾಮಣ್ಣ ಅವಸರದಿಂದಲೆ ಹೋಗಿದ್ದ. ಅಷ್ಟರಲ್ಲಿಯೆ ಮತ್ತೊಂದು ವಿಚಾರವು ಅವನನ್ನು ಕೆಣಕಿತ್ತು. ತಾನು ಈ ರೀತಿ ತನ್ನ ಕೋಣೆಯಲ್ಲಿಯೆ ಹೆಚ್ಚು ವೇಳೆ ಕಳೆಯಹತ್ತಿದಂದಿನಿಂದ ಕುಮುದಳು ಸರಲೆಯ ಹತ್ತಿರ ಹೆಚ್ಚು ವೇಳೆ ಕೂಡುತ್ತಿದ್ದಳು. ಮತ್ತೆ ಯಾವ ಜಾಲ ಬೀಸಲಿದ್ದಾಳೆ ?....

ರಾಮಣ್ಣ ಒಮ್ಮೆಲೆ ತಲೆ ತುರಿಸಿಕೊಂಡು ಎದ್ದು ನಿಂತ, ಎದುರಿಗೆ ನೋಡಿದ, ಅವನಿಗೆ ನಗೆ ಬಂದಿತು. ಪಾಪ ! ನೋಡಬಾರದೆ ? ತಾನು ಇಷ್ಟೊತ್ತಿನವರೆಗೆ ನೆನಪಿನ ಸಿಂಹಾಸನದಲ್ಲಿ ವಿರಾಜಮಾನನಾಗಿದ್ದಾಗ ಆ ಪುಸ್ತಕ ಮಾತ್ರ ಸೋತು ಮೊರೆಹೊಕ್ಕ ಶತ್ರುವಿನಂತೆ ಹಾಗೆ ನೆಲಕ್ಕೆ ತಲೆ ಹಚ್ಚಿ ಬಿದ್ದುಕೊಂಡಿದೆ ! ತನ್ನದೆ ಹುಚ್ಚು. ಪುಸ್ತಕದೊಳಗಿನ ಆ ಶ್ಲೋಕಕ್ಕಾಗಿ ತಾನು ರೇಗಿದ್ದನಲ್ಲ ? ಯಾಕೆ ಆ ಶ್ಲೋಕವು ಸತ್ಯವಾದುದನ್ನೆ ಹೇಳುವುದು ಎಂಬುದಕ್ಕಾಗಿ ಅದರ ಮೇಲೆ ತನ್ನ ಸಿಟ್ಟು ! ಆ ಶ್ಲೋಕ ಹೇಳುವುದು ಅಕ್ಷರಶಃ ನಿಜವಾಗಿದೆ. “ ಮತ್ತೆ ಯಾವ ಜಾಲ ಬೀಸಲಿದ್ದಾಳೆ ?” ಎಂದು ಅಂದು ತಾನು ಮನಸ್ಸಿನಲ್ಲಿ ಕೇಳಿಕೊಂಡಿದ್ದನಲ್ಲ ? ಅದು ಜಾಲವಲ್ಲ, ಕುಮುದಳು ಬೀಸಿದ್ದಂತೂ ಅಲ್ಲವೇ ಅಲ್ಲ, “ ಅನೀಯ ಝುಟಿತಿ ಘಟಯತಿ ವಿಧಿಃ ” ಎಂದು ಆ ಶ್ಲೋಕ ಹೇಳುತ್ತಿದ್ದ ಜಾಲ, ವಿಧಿಯು ಬೀಸಿದ ಜಾಲ, ಸೃಷ್ಟಿ ಮಾಯೆಯು ಬೀಸಿದ ಜಾಲ, ಅನಾದಿಯಾಗಿ ಜಗತ್ತನ್ನು ವ್ಯಾಪಿಸಿ ಬೀಸಿದ ಜಾಲ. ಅದಕ್ಕೆಂದೇ ಕೊನೆಗೂ ತಾನು ಅದರಲ್ಲಿ ಸಿಕ್ಕಿಕೊಂಡನು. ಸೋಲನ್ನು

ಒಪ್ಪಿಕೊಳ್ಳುವಂತೆ, ನಿಂತಲ್ಲಿಯೆ ಮೊಳಕಾಲೂರಿ ಶರಣಾಗತನಾಗುವಂತೆ ರಾಮಣ್ಣ ಕುರ್ಚಿಯಲ್ಲಿ ಮತ್ತೆ ಕುಳಿತುಕೊಂಡ.

## ೧೪

ಮುಖವನ್ನು ಮುಸುಕಿನಲ್ಲಿ ಮುಚ್ಚಿಕೊಂಡರೆ ಹೊರಜಗತ್ತು ಕಾಣದು, ಆದರೆ ಒಳಜಗತ್ತು ಮರೆಯಾಗದು ಎಂದು ಕುಮುದಳಿಗೆ ತಿಳಿಯಲು ತಡ ವಾಗಲಿಲ್ಲ. ಇಷ್ಟೇ ಅಲ್ಲ, ಹೊರಜಗತ್ತು ಪೂರ್ತಿ ಮರೆಯಾದುದಕ್ಕೊ ಏನೊ, ಒಳಜಗತ್ತಿನ ಚಿತ್ರ ಹೆಚ್ಚು ಮಹದಾಕಾರವಾಗಿ ನಿಲ್ಲುವುದೆಂದೂ ಕುಮುದಳು ಕಂಡಳು. ಮೆಲ್ಲನೆ ಮುಸುಕನ್ನು ತೆರೆದು ಅತ್ತಿತ್ತ ನೋಡಿದಳು. ಎಲ್ಲವೂ ಹಿಂದೊಮ್ಮೆ ಕಂಡಂತೆ ಭಾಸವಾಯಿತು. ದಿನಾಲು ನೋಡುತ್ತಿರುವ ಕೋಣೆಯ ದೃಶ್ಯವೆ ಆದರೂ ಯಾವುದೊ ಒಂದು ರೀತಿಯಲ್ಲಿ ಹೀಗೇ ತನ್ನ ಕೋಣೆಯ ವಾತಾವರಣ— ಹಂ, ವಾತಾವರಣವೆ ಸರಿ—ಒಮ್ಮೆ ಪರಿಚಿತ ವಾದಂತೆ ಕಂಡಿತು. ಎಂದು ? ಯಾವಾಗ ತನಗೊಮ್ಮೆ ಕೋಣೆ ಈ ರೀತಿ ಕಂಡಿತ್ತು. ತಾನು ಮುಸುಕು ಹಾಕಿ ಮಲಗಿರಬೇಕು, ಅದು ಅಸಹ್ಯವೆನ್ನಿಸ ಬೇಕು, ಆಗ ತಾನು ಮುಸುಕನ್ನು ತೆರೆದು ಸುತ್ತಲು ನೋಡಬೇಕು, ಹೀಗೆ— ಅಹುದು, ಕಂಡಿತ್ತು.

ರಾತ್ರಿ ನಸುಕಾಗುತ್ತ ನಡೆದಂತೆ, ನಿದ್ದೆ ಬಾರದಂತಾದುದಕ್ಕೆ ದಣಿದ ಕುಮುದಳ ಮನಸ್ಸಿಗೆ ಯಾವ ದಿನ, ಎಷ್ಟು ಕಾಲ ಮುಂಚಿತ ಎಂಬುದು ಸ್ಪಷ್ಟವಾಗಿ ನೆನಪಾಗಲೊಲ್ಲದು. ಆದರೆ ಸಂದರ್ಭ ಮಾತ್ರ—ಬರೀ ಸಂದರ್ಭ ಯಾಕೆ ? ನಡೆದುದೆಲ್ಲ, ಒಂದೊಂದು ಹೆಜ್ಜೆ, ಒಂದೊಂದು ಮಾತು ಎಲ್ಲ— ಪೂರ್ತಿಯಾಗಿ ನೆನಪಿದೆ.

ಆಗ ರಾಮಣ್ಣನ ಮನಸ್ಸು ಸಮಾಧಾನದಲ್ಲಿದ್ದಿರಲಿಲ್ಲ ಎಂದು ಕುಮುದ ಳಿಗೆ ಎನ್ನಿಸಿತ್ತು. ಒಂದು ಬೆಳಿಗ್ಗೆ ಸರಲಕ್ಕ ಮೂರ್ಚೆ ಹೋದಂದಿನಿಂದ ರಾಮಣ್ಣನ ಮುಖದಲ್ಲಿ ಒಂದು ಚಿಂತಾತುರ ಕಳೆ ಕಂಡಿತ್ತು. ಸರಲಕ್ಕನಿಗೆ ಇಡಿಯ ದಿನದ ಚಿಂತಾಜನಕ ಪರಿಸ್ಥಿತಿ ಸುಧಾರಿಸಿ ರಾತ್ರಿ ‘ ಇನ್ನು ಉಳಿದಳು ’ ಎಂದೆನ್ನಿಸಿದಾಗ, ಆ ರಾತ್ರಿ ಮಾತ್ರ ರಾಮಣ್ಣ ತನ್ನ ಕೋಣೆಗೆ ಬಂದಿದ್ದ. ಮುಂದೆ ಎಷ್ಟೊ ದಿನಗಳವರೆಗೆ ಬಂದಿರಲೇ ಇಲ್ಲ. ಹೆಂಡತಿಯ ಬಗ್ಗೆ ಚಿಂತೆ

ಯಿಂದ ಮನಸ್ಸು ವ್ಯಾಕುಲವಾಗಿ ಅವನು ಹಾಗೆ ಮಾಡಿರಬಹುದು ಎಂದು ಮೊದಲು ತಿಳಿದಿದ್ದಳು. ಆದರೆ ದಿನಗಳು ವಾರಗಳಾದುವು, ವಾರಗಳು ತಿಂಗಳಾದುವು ಆದರೂ ರಾಮಣ್ಣನು ತನ್ನ ಕಡೆ ಬಂದಿರಲೇ ಇಲ್ಲ! ಇದಿಷ್ಟೆ ತನ್ನ ಚಿಂತೆಯಾಗಿದ್ದರೆ ಕುಮುದಳು ಸಮರ್ಪಕವಾದ ಕಾರಣವನ್ನು ಹುಡುಕಿಕೊಂಡು ಸಮಾಧಾನವನ್ನು ತಂದುಕೊಳ್ಳಬಹುದಾಗಿತ್ತು. ಆದರೆ ಮನೆಯಲ್ಲಿ ಸಂದರ್ಭ ಬಂದಾಗ ಕೂಡ ತನ್ನನ್ನು ಮುಖವೆತ್ತಿ ನೋಡುತ್ತಿರಲಿಲ್ಲವಲ್ಲ! ಕುಮುದಳಿಗೆ ಸಂಶಯ ಬಂದಿತು, ಆಮೇಲೆ ಹೆದರಿಕೆಯಾಯಿತು; ಇಲ್ಲವಾದರೆ ತಾನಾಗಿ ಅವನ ಕೋಣೆಗೆ ಹೋಗಿ ಅವನನ್ನು ಮಾತಾಡಿಸಿಕೊಳ್ಳುತ್ತಿದ್ದಳು. ಒಳಗಿನ ಉದ್ವೇಗವನ್ನು ಎಷ್ಟು ದಿನ ತಡೆದಾಳು? ಮನಸ್ಸನ್ನು ತಡೆಹಿಡಿಯುವ ಉದ್ದೇಶದಿಂದ ರಾತ್ರಿ ಸರಲಕ್ಕನ ಜೊತೆ ಹೆಚ್ಚು ಹೊತ್ತು ಕಳೆಯುತ್ತಿದ್ದಳು. ಆಗಲಾದರೂ ರಾಮಣ್ಣನನ್ನು ಕಣ್ತುಂಬ ನೋಡೇನೆಂದು ಒಳಗಿನದೊಂದು ಆಸೆ. ಆದರೆ ತಾನು ಸರಲಕ್ಕನ ಹತ್ತಿರ ಕುಳಿತಾಗ ರಾಮಣ್ಣ ಅಲ್ಲಿ ಹಣಿಕಿ ಕೂಡ ನೋಡುತ್ತಿರಲಿಲ್ಲ! ಎಷ್ಟೋ ಸಲ ತಾನು ಬಂದಾಗ ರಾಮಣ್ಣ ಅಲ್ಲಿ ಕುಳಿತಿದ್ದರೆ, ತನ್ನನ್ನು ಬಾಗಿಲಿನಲ್ಲಿ ನೋಡಿದಾಕ್ಷಣ, "ಆಯ್ತು ಜೋಡಿ ಆಯ್ತಲ್ಲ" ಎನ್ನುತ್ತ ಹುಸಿನಗೆಯಿಂದ ಹೋಗಿಯೆ ಬಿಡುತ್ತಿದ್ದ. ಇದನ್ನೆಲ್ಲ ಕಂಡು ಒಮ್ಮೊಮ್ಮೆ ಕುಮುದಳಿಗೆ ರಾಮಣ್ಣನ ಬಗ್ಗೆ—ಯಾಕೊ? ಏನೊ?—ವ್ಯಥೆಯಾಗುತ್ತಿತ್ತು. ಒಮ್ಮೆ ಅಂತಹ ಮನಃಸ್ಥಿತಿಯಲ್ಲಿದ್ದಾಗ ಧೈರ್ಯ ತಂದುಕೊಂಡು ತಾನೇ ಸರಲಕ್ಕನನ್ನು ಕೇಳಿದ್ದಳು:—"ಯಾಕ? ಅವರ ಪ್ರಕೃತಿ ಸರಿಯಾಗಿಲ್ಲೇನು?"

"ಕೇಳಿದರ ನನಗೇನು ಧಾಡಿ ಆಗೇದ ಅಂತಾರವ್ವಾ!" ಎಂದು ಸರಲಕ್ಕ ಉಸುರ್ಗರೆದಿದ್ದಳು.

"ಅಲ್ಲ, ಮುಖ ಬೆಳ್ಳಗಾಗೇದ, ಅದಕ್ಕಂದೆ."

"ನಾನು ಹಾಂಗ ಹೇಳಿದರ ಏನೊ ಅಂದ್ಬಿಟ್ಟರು."

"ಕೇಳಿಯಾದರೂ ನೋಡ್ರೀ ಏನು ಅಂತ. ಯಾಕಂದ್ರ—"

"ನಾ ಕೇಳಿದರ ಅವರು ಹೇಳಲಿಕ್ಕಿಲ್ಲ" ಮತ್ತೆ ಸರಲಕ್ಕ ಉಸುರ್ಗರೆದಿದ್ದಳು.

ಕುಮುದಳ ಸಂಶಯು ಮತ್ತೆ ತಲೆ ಎತ್ತಿತು. ಇದೇನು? ಗಂಡ-ಹೆಂಡಿರ ಜಗಳವಿರಲಿಕ್ಕಿಲ್ಲವಷ್ಟೆ? ತನ್ನದೇನೂ ಸಂಬಂಧವಿರಲಿಕ್ಕಿಲ್ಲವಲ್ಲ? ತನ್ನ ಕಡೆ ಬರುವುದಂತೂ ಇರಲಿ, ನೋಡುವುದು ಕೂಡ ಇಲ್ಲ, ಏನಾದರೂ ಸರಲಕ್ಕನಿಗೆ ತಿಳಿದುಬಂದು— ?

" ನಿನಗ ಹೇಳದೆಯೆ ಯಾರಿಗೆ ಹೇಳ್ತಾರ, ಅಕ್ಕಾ ? " ಎಂದು ಹುಸಿ ನಗೆಯ ಪರದೆಯಿಂದ ಒಳಗಿನ ವಿಚಾರಗಳನ್ನು ಮರೆಯಾಗಿಸಲು ಯತ್ನಿಸುತ್ತ ಕುಮುದ ಕೇಳಿದ್ದಳು.

" ಹುಂ " ದೀರ್ಘವಾಗಿ ನಿಟ್ಟುಸಿರಿಟ್ಟು, " ನನ್ನ ಮ್ಯಾಲೆ ಸಿಟ್ಟಾಗ್ಯಾರ" ಎಂದಿದ್ದಳು ಸರಲಕ್ಕ.

ಗಂಡಹೆಂಡಿರ ವಾದದಲ್ಲಿ ಮೂರನೆಯವ ಬಾಯಿ ಹಾಕುವುದು ಬಲು ಸೂಕ್ಷ್ಮ ಎಂದು ಅರಿತ ಕುಮುದ ಸುಮ್ಮನಿದ್ದಳು.

" ಅವರದಾದರೂ ತಪ್ಪೇನು ? " ಸರಲಕ್ಕ ವಿಷಾದದ ದನಿಯಲ್ಲಿ ನುಡಿದಿದ್ದಳು.

ಆ ಮಾತಿಗೂ ಕುಮುದ ತಲೆ ಕೆಳಗೆ ಮಾಡಿ ಸರಲಕ್ಕನ ಹೊದಿಕೆಯನ್ನು ಸರಿಪಡಿಸುತ್ತ ಮೌನದಿಂದಲೇ ಇದ್ದಳು. ಆದರೂ ಸರಲಕ್ಕನ ಮನಸ್ಸಿನೊಳಗಿದ್ದುದು ಈಗ ತಡೆಯದಂತಾಗಿತ್ತು, ಅದು ಹೊರಬೀಳಲೇಬೇಕು ಎಂದು ತಾನು ಕುತೂಹಲದಿಂದ ಕಾದಿದ್ದಳು. ಸರಲಕ್ಕನ ವಿಚಾರಲಹರಿ ದಂಡೆಯನ್ನು ದಾಟಿತು.

" ಅವರದಾದರೂ ತಪ್ಪೇನು ಹೇಳು, ಕುಮುದಾ. ಹೊರಗಿನ ತನ್ನ ಕೆಲಸಕ್ಕ ಕೈ ಖಾಲಿ ಇರಲಿ ಅಂತ ಹೆಂಡತೀನ್ನ ಮಾಡಿಕೊಳ್ಳೋದು. ಇಲ್ಲಿ ಹಾಸಿಗೆ ಹಿಡಿದ ಹೆಂಡತಿಯ ಸಲುವಾಗಿ ಮನೇವಳಗ ಕೈಕಟ್ಟಿ ನಿಲ್ಲೋದು ! ಯಾಕ, ಕುಮುದಾ ? " ಸರಲಕ್ಕನ ಮುಖದ ಮೇಲೆ ವಿಷಾದ, ನಿರಾಶೆಗಳ ಉರಿನಗೆಯ ಬೆಳಕು ಕಂಡಿತ್ತು.

"ಅದಕೇ ಅಂದೆ, ಅವರದಾದರೂ ತಪ್ಪೇನು ? "

ಈಗಲೂ ಕುಮುದ ಮಾತಾಡಿರಲಿಲ್ಲ. ಆಕೆ ಮಾತಾಡಬಹುದೆಂಬ ವಿಚಾರ ಕೂಡ ಸರಲಕ್ಕನಿಗೆ ಇದ್ದಿರಲಿಲ್ಲ. ಆಕೆ ಹಾಗೇ ತನ್ನ ಮಾತನ್ನು ಮುಂದರಿಸಿದ್ದಳು.

“ ಮನೇಗೆ ಬಂಡರೆ ಒಂದು ಹಾದೀ ನೋಡೋದ, ಒಂದು ನಗೋದ, ಒಂದು ದಣಿದಿರಾ ಅಂತ ಕೇಳೋದ ? ಏನಿಲ್ಲ, ಕಾಲಿಡೋದೊಂದೇ ತಡ ಹಾಸಿಗೇ ವ್ಯಾಲ ಸಾಯಲಾರದೆ ಬಿದ್ದಿರೋ ಇದೊಂದು ಸುಟ್ಟ ಹೆಣ್ಣು ! ”

ಈಗ ಮಾತ್ರ ಕುಮುದಳಿಗೆ ಮಾತನಾಡಲೇ ಬೇಕೆನ್ನಿಸಿತ್ತು.

“ ಇದೇನ, ಅಕ್ಕಾ ? ಇಲ್ಲದ್ದೊಂದು ಕಲ್ಪನಾ ಮಾಡಿ ಮನಸ್ಸಿಗೆ ತ್ರಾಸ ಮಾಡಿಕೋಬ್ಯಾಡ. ಒಂದು ದಿನ ನೀನು ಅವರಿಗೆ ಕಾಣಿಸಲಿಲ್ಲ ಅಂದ್ರ ಹುಚ್ಚು ಹಿಡೀತದ ಅವರಿಗೆ. ನಿನಗ್ಯಾರು ಹೇಳಿದರು ಈ ಭೂತದ ಕತೆಯನ್ನ ? ”

“ ಹುಚ್ಚಿ, ಕುಮುದ ! ಇದನ್ನ ಯಾರು ಹೇಳಬೇಕು ? ಅವರ ಮಾರೀ ವ್ಯಾಲೇ ಕಾಣ್ತದ. ಮೊದಮೊದಲು ಬಂದ್ಯಾಗ್ಲೆ ನೋಡತಿದ್ದರು, ಏನಾದರೂ ಸುಧಾರಿಸೀನೇನೊ ಅಂತ. ಈಗ ಅದು ಖಾತ್ರಿಯಾಯಿತು ಶಕ್ಯ ಇಲ್ಲ ಅಂತ; ಈಗ ಅವರು ಬಂದ್ಯಾಗ್ಲೆ ನನ್ನ ನೋಡಿ ತಂಮನಸ್ಸಿನೊಳಗಿನ್ದು ತಡೆದು ಕೊಂಡು ಬ್ಯಾರೇ ಏನಾದ್ರೂ ಮಾತಾಡ್ಲಿಕ್ಕೆ ಪ್ರಯತ್ನ ಮಾಡ್ತಾರಲ್ಲ ?— ಆಗ ಅಂತೂ ಅವರ ಮುಖ ನೋಡಿದರ ನನ್ನ ಕರುಳು ಕಿತ್ತಿ ಕೈಯ್ಯಾಗ ಬಂಧಾಂಗ ಆಗ್ತದ. ನಾನಾದ್ರೂ ಏನ್ಮಾಡಲಿ ಹೇಳು, ಕುಮುದ ? ಮನೇವಳಗ ಒನ್ನಾಲ್ಕು ಮಕ್ಕಳಾದ್ರೂ ಇದ್ದರ ಹೊರಗಿನಿಂದ ಬಂದಕೂಡಲೆ ಹುಡುಗರ ಆಟ-ಗದ್ದಲದಿಂದ ಏನಾದ್ರೂ ಸಮಾಧಾನ ಆಗಬಹುದಿತ್ತು. ನನ್ನ ಹಣೇವಳಗ ಏನೂ ಬರೆದಿಲ್ಲ; ಬಂದು ಅವರನ್ನ ಸೂರಿ ಮಾಡಿದೆ, ಹೋಗುವಾಗೂ— ”

ಇಷ್ಟೊಂದುದ್ದ ಮತ್ತು ಕಳಕಳಿಯ ಮಾತುಗಳನ್ನಾಡುವುದು ಸರಲಕ್ಕ ನಿಗೆ ದಣಿವನ್ನು ತಂದುಕೊಟ್ಟಿತ್ತೇನೊ ! ಆದರೆ ಆ ದಣಿವನ್ನು ಕೂಡ ತಡೆದು ಕೊಳ್ಳುವ ಶಕ್ತಿ ದೇಹಕ್ಕೆ ಇಲ್ಲದಾಗಿ ಆಕೆಯ ಕಣ್ಣುಗಳಲ್ಲಿ ಅಸಹಾಯತೆಯ ಕಂಬನಿಗಳು ಮಿಂಚಿದ್ದುವು. ಕುಮುದಳಿಗೂ ಅದನ್ನು ನೋಡಿ ಅತೀವ ವೇದನೆಯಾಗಿತ್ತು.

“ ಒಬ್ಬಳೇ ಮಲಗಿ ಇಲ್ಲದ ವಿಚಾರ ತಂದುಕೊಳ್ಳುತಿ, ಅಕ್ಕಾ. ಯಾರ್ಯಾರಿಗೂ ಈ ಮನೇವಳಗ ಎಂದಿಗೂ ಅಂತಹ ವಿಚಾರ ಬಂದಿಲ್ಲ. ”

ಸರಲಕ್ಕನು ದುಃಖದ ಆವೇಗವನ್ನು ತಡೆಯುತ್ತ ಹೇಳಿದ್ದಳು. “ ಆದರೂ ನನಗ ಸಮಾಧಾನ ಇಲ್ಲ, ಕುಮುದಾ. ಇದ್ದಾಗ ನನ್ನ ಕರ್ತವ್ಯ ಮಾಡಲಿಲ್ಲ,

ಸಾಯೋವಾಗ ಆಪ್ರೊ ಮಾಡೋಣ ಅಂತೀನಿ. ಅದಕ್ಕೇ ಒಂದು ಮಾತು ಹೇಳಿದೆ ಅವರಿಗೆ, ನನ್ನ ಮ್ಯಾಲಿ ಸಿಟ್ಟಾಧಾಂಗ ಕಾಣ್ತದ. ”

“ ಯಾವ ಮಾತೇ ಅದು ಅಕ್ಕಾ ? ಅವರಿಗೆ ಸಿಟ್ಟು ತರುವಂಥಾ ಮಾತು ನಿನ್ನ ಬಾಯಿಯಿಂದ ಬಂದಿತು ಅಂತ ನನಗ ಸಹಿತ ವಿಶ್ವಾಸ ಇಲ್ಲ.”

“ ಏನೊ ತಾಯೀ ! ಸಿಟ್ಟು ಬಂಧದ್ದಂತೂ ಖರೇ. ”

“ ಅಂಥಾದ್ದೇನಕ್ಕಾ ನೀನಂದದ್ದು ? ”

ಕುಮುದ ತುಸು ಕೆಣಕುವ ಮತ್ತು ತುಸು ವಿನೋದದ ದನಿಯಲ್ಲಿಯೆ ಈ ಪ್ರಶ್ನವನ್ನು ಕೇಳಿದ್ದಳು ಅದನ್ನು ಕೇಳುವಾಗ ಕೊನೆಗೆ ಇದೊಂದು ರೂಢಿಯ ಗಂಡ-ಹೆಂಡಿರ ವಾದವೇ ಎಂದು ಹೊರಬೀಳುವುದು ಎಂದು ಕುಮುದಳ ನಂಬುಗೆ. ತಾನು ಆ ಮನೆಯಲ್ಲಿದ್ದುಕೊಳ್ಳಹತ್ತಿದಂದಿನಿಂದ ಸರಲಕ್ಕನ ಬಾಯಿಯಿಂದ ಬಿರುಸು ಇಲ್ಲವೆ ಕೊಂಕು ಮಾತನ್ನಾಗಲಿ, ಆಕೆಯು ಯಾವುದೆ ಮಾತಿಗಾಗಿ ರಾಮಣ್ಣ ಸಿಟ್ಟಿನಿಂದ ಗದ್ದರಿಸಿದ್ದಾಗಲಿ ಕೇಳಿರಲಿಲ್ಲ; ಈಗಂತೂ ಅಸಹಾಯ ಸ್ಥಿತಿಯಲ್ಲಿದ್ದಾಳೆ ಸರಲಕ್ಕ. ಆದ್ದರಿಂದ ರಾಮಣ್ಣ ಸಿಟ್ಟಿಗೆ ಬರುವುದು ಶಕ್ಯವೇ ಇಲ್ಲ; ಬೇನೆಯ ಅಶಕ್ತಿಗಾಗಿ ಎಂತೆಂತಹರ ಬುದ್ಧಿಯೂ ಹುಡುಗಬುದ್ಧಿಯಾಗುವುದು, ಹೃದಯ ಬಹಳೇ ಮೃದು ಆಗುವುದು; ಹಾಗಾಗಿ ಸರಲಕ್ಕ ನೊಂದುಕೊಂಡಿರಬಹುದು ಎಂದು ತಾನು ಮನಸ್ಸಿನಲ್ಲಿ ಎಣಿಕೆಯನ್ನು ಹಾಕಿ ಕುಮುದ ಆ ಪ್ರಶ್ನವನ್ನು ಕೇಳಿದ್ದಳು.

“ ಅವರಿಗೆ ನಾ ಇನ್ನೊಂದು ಮದುವೆ ಮಾಡಿಕೊಳ್ಳಲಿಕ್ಕೆ ಹೇಳಿಕೊಂಡೆ. ”

ಸರಲಕ್ಕನ ಈ ಉತ್ತರವನ್ನು ಕೇಳಿ ಕುಮುದಳ ಅವಸ್ಥೆ, ಎತ್ತರದಿಂದ ಕೆಳಗೆ ಬಿದ್ದು ಎಚ್ಚರ ತಪ್ಪಿದವನು ಎಚ್ಚೆತ್ತಂತಾಗತಿತ್ತು. ತಾನು ಇರುವುದೆಲ್ಲಿ ? ಮಾತನಾಡುತ್ತಿರುವವರು ಯಾರು ? ಮಾತಿನ ಸಂದರ್ಭವೇನು ? ಒಂದು ಕ್ಷಣ ಯಾವುದೂ ತಿಳಿದಿರಲಿಲ್ಲ. ಮದುವೆ ? ರಾಮಣ್ಣನಿಗೆ ? ಇನ್ನೊಂದು ಮದುವೆ ? ಯಾಕೆ ? ಹೆಂಡತಿಯೆ ಆ ಮಾತನ್ನು ಹೇಳುತ್ತಿರುವಳಲ್ಲ ? ಯಾಕೆ ? ಇಂತಹ ಮಾತಿಗಾಗಿ ನಕ್ಕು ನಗೆಯಾಡುವ ರಾಮಣ್ಣ ಸಿಟ್ಟಿಗೆ ಬಂದಿದ್ದಾನಂತೆ ? ಯಾ-ಕೆ- ? ಹೀಗೆ ನಾನಾತರದ ವಿಚಾರಗಳು ನೂಕನುಗ್ಗಲಾಟವಾಡುತ್ತ ತನ್ನ ತಲೆಯನ್ನು ಥೈಥೈ ಕುಣಿತದಿಂದ ತುಳಿದು ತಿಪ್ಪೆ

ಮಾಡಿದಂತೆನ್ನಿಸಿತ್ತು. ಜೊತೆಗೆ ಮುಖದಲ್ಲಿ ಯಾವುದನ್ನೂ ತೋರಿಸಿಕೊಡ ಬಾರದೆಂಬ ಯತ್ನ! ರಾಮಣ್ಣನ ಮದುವೆಯ ಬಗ್ಗೆ ತನಗೇಕೆ ಇಷ್ಟು ಚಿಂತೆ-ಎಂದು ಸರಲಕ್ಕನಿಗೆ ಸಂಶಯ ಬಂದಿದ್ದರೆ ? ಅದಕಾಗಿ—ತನ್ನ ವಿಚಾರಗಳ ನುಗ್ಗಾಟದ ಸದ್ದು ತನಗೇ ಕೇಳಿಸಬಾರದೆಂಬಂತೆ ತಾನೂ ಗಟ್ಟಿಯಾಗಿ ನಕ್ಕು ಬಿಟ್ಟಿದ್ದಳು ! ನೋವಿನಿಂದಲೂ ನಗಬಹುದು ಎಂಬ ವಿಚಿತ್ರ ಅನುಭವ ತನಗೆ ಅಂದು ಬಂದಿತ್ತು.

"ಅಯ್ಯ ! ಇಂಥಾ ಹುಡುಗಾಟದ ಮಾತು ಆಡಿದರ ಸಿಟ್ಟಿಗೆ ಬರದೇ ಬಿಡ್ತಾರೇನ, ಅಕ್ಕಾ ?" ಎಂದು ನಗುತ್ತಲೇ ಕೇಳಿದ್ದಳು.

"ಅವರು ಸಿಟ್ಟಿಗೆ ಬಂದರು, ನೀನು ನಗತೀ !"

ಸರಲಕ್ಕನಿಗೆ ವ್ಯಥೆಯಾದುದನ್ನು ನೋಡಿ ಕುಮುದ ನೊಂದಿದ್ದಳು. "ನಗ್ತೀನಿ ಅಂತ ತಪ್ಪು ತಿಳೀಬ್ಯಾಡ, ಅಕ್ಕಾ. ಅಲ್ಲ, ನೀನೇ ನೋಡು, ಹೆಂಡ್ತೀನ್ನ ಉಳಿಸಿಗೋಬೇಕು ಅಂತ ಹಗಲು-ರಾತ್ರಿ ಹಣ್ಣಾಗುವವರಿಗೆ ಇನ್ನೊಂದು ಹೆಂಡ್ತೀನ್ನ ಮಾಡಿಕೋರಿ ಅಂದ್ರ—"

"ಅಷ್ಟೇನು ನನಗ ತಿಳಿಯೋದಿಲ್ಲೇನೆ, ಕುಮುದಾ ? ಅವರು ನನ್ನ ಉಳಿಸಿಗೋಬೇಕು ಅನ್ನುವಾಗ ನಾ ಯಾಕ ಸಾಯ್ಬೇಕು ಅಂತೀನಿ ? ಅದ್ರ, ಇಷ್ಟು ಕಷ್ಟಪಡುವವರಿಗೆ ಒಂದಿಷ್ಟಾದರೂ ಸುಖ ಸಿಗಲಿ, ಅದೂ ನನ್ನಕಣ್ಮುಂದೇ ಸಿಗಲಿ ಅಂತ—"

"ಇನ್ನೊಂದು ಹೆಂಡತಿ ಅಂದರ ಅವರಿಗೆ ಸುಖ ಅನ್ನಿಸಲಿಕ್ಕಿಲ್ಲ."

ಆ ಮಾತನ್ನಾಡಿದ ಮೇಲೆ ತನ್ನ ನಾಲಗೆಯನ್ನು ಕೊಯ್ದೊಗೆಯಬೇಕೆಂದೆನ್ನಿಸಿತ್ತು ಕುಮುದಳಿಗೆ. ಎಂತಹ ಅಭದ್ರ ಮಾತು ಬಂದಿತು ತನ್ನ ಬಾಯಿಯಿಂದ !....

ಕುಮುದಳು ಹೊದಿಕೆಯನ್ನು ಬಿಸುಡಿ ಹಾಸಿಗೆಯಿಂದ ಎದ್ದಳು. ಅಂದು ತನ್ನ ಬಾಯಿಯಿಂದ ಹೊರಬಿದ್ದ ಮಾತು ಅಭದ್ರ ಮಾತು ಎಂದು ಈಗ ತನಗೆನ್ನಿಸಿದೆ, ಆಗ ಎನ್ನಿಸಿರಲಿಲ್ಲ ಎಂದುಕೊಂಡಳು. ಆದರೂ ಆ ರಾತ್ರಿ ಸರಲಕ್ಕನೊಡನೆ ನಡೆದ ಮಾತುಕತೆಗಳಿಂದ ತನ್ನ ಮನಸ್ಸು ಕಲಕಿತವಾಗಿತ್ತು ಎಂಬುದು ಮಾತ್ರ ನಿಜ. ಮಾತು ಮುಗಿಸಿ, ಸರಲಕ್ಕ ನಿದ್ದೆಹೋದೊಡನೆ ತನ್ನ ಕೋಣೆಗೆ ಬಂದ ಕುಮುದಳಿಗೆ ಒಂದೆಡೆ ನಿಲ್ಲಲು ಮನಸ್ಸಾಗಿರಲಿಲ್ಲ.

ಹಾಗೆ ನಿಂತರೆ ತನ್ನ ಮನಸ್ಸಿನಲ್ಲಿದ್ದ ವಿಚಾರವು ಧುತ್ತೆಂದು ತನ್ನನ್ನು ಎದುರುಗಟ್ಟಿ ಮಾತಾಡಿಸುವುದೊ ಎಂಬ ಹೆದರಿಕೆ. ಆ ವಿಚಾರವನ್ನು ತಪ್ಪಿಸುವಂತೆ ಕೋಣೆಯಲ್ಲಿ ಅತ್ತಿತ್ತ ಸುಳಿದಾಡಿದ್ದಳು. ಕೊನೆಗೂ ಆ ವಿಚಾರ ತನ್ನನ್ನು ಎದುರುಗಟ್ಟದೆ ಬಿಟ್ಟಿರಲಿಲ್ಲ.

ರಾಮಣ್ಣನ ಮದುವೆ ! ಅದು ನಿನ್ನ ಕೂಡವೆ ಯಾಕಿರಬಾರದು ? ಮದುವೆ ಗೊತ್ತಾದ ಅಕ್ಕನನ್ನು ಪೀಡಿಸುವ ತಮ್ಮನಂತೆ ಈ ವಿಚಾರವು ಅಂದು ಕುಮುದಳನ್ನು ಕೆಣಕಿತ್ತು. ಒಂದೇಸಮನೆ ಅದೇ ಅದೇ ಪ್ರಶ್ನವನ್ನು ಪುನರುಚ್ಚರಿಸಿ ಕೊನೆಗೆ ಕುಮುದಳಿಗೂ " ಇದು ನಿಜವಿರಬಹುದೆ ?" ಎಂದೆನ್ನಿಸತೊಡಗಿತ್ತು. ಆದರೆ ಆ ಹುಸಿನೆಮ್ಮದಿ ಬಹಳೊತ್ತು ತಡೆದಿರಲಿಲ್ಲ. ಆ ವಿಚಾರ ನಿಜವಿದ್ದರೆ ರಾಮಣ್ಣ ಸಿಟ್ಟಿಗೆ ಬಂದಿರುವ ಎಂಬ ಮಾತು ಆಘಾತದಂತಾಗುವುದು. ತನ್ನೊಡನೆ ಮದುವೆ ರಾಮಣ್ಣನಿಗೆ ಅಷ್ಟು ಅನಿಷ್ಟ, ಅಷ್ಟು ಅಸಹ್ಯ ಎನ್ನಿಸಿತೆ ? ಎದುರು ಕನ್ನಡಿಯಲ್ಲಿ ಕಾಣುವ ತನ್ನನ್ನು ನೋಡಿಕೊಂಡಳು; ಆ ದೇಹದ ಮೇಲೆ ರಾಮಣ್ಣನಿಗೆ ಯಾವ ತರದ ಅಧಿಕಾರ ಬಂದಿದೆ ಎಂಬ ಚಿತ್ರವೂ ಅವಳ ಕಣ್ಣು-ಮುಂದೆ ನಿಂತಿತ್ತು. ಹೀಗಿದ್ದೂ—ರಾಮಣ್ಣನಿಗೆ ಸಿಟ್ಟು ! ಛೆ— ಈ ಮದುವೆ ತನಗೆ ಸಂಬಂಧಿಸಿದ್ದೇ ಅಲ್ಲ—ಎಂದುಕೊಂಡಿದ್ದಳು. ಇಂದಿಗೆ ಎಷ್ಟು ದಿನಗಳಾಗಿದ್ದುವು ರಾಮಣ್ಣ ತನ್ನ ಕಡೆಗೆ ಬಾರದೆ ? ಕಣ್ಣೆತ್ತಿ ನೋಡದೆ ? ಯಾಕೆ? " ಹಾಂ— ತಿಳಿಯಿತು "—ಎಂದೆನ್ನಿಸಿತ್ತು ಕುಮುದಳಿಗೆ. " ಮತ್ತೆ ಯಾರೊಡನಾದರೂ ಮದುವೆಯ ವಿಚಾರ ಅವನ ಮನಸ್ಸಿನಲ್ಲಿದ್ದಿರಬೇಕು, ಅದಕಾಗಿ ನನ್ನ ಸಹವಾಸವನ್ನು ಅವನು ತಪ್ಪಿಸುತ್ತಿರಬೇಕು ! "

ಆ ವಿಚಾರ ಬಂದೊಡನೆ ಕುಮುದಳ ಜೀವವೆ ಹಾರಿಹೋದಂತಾಗಿತ್ತು. ಇನ್ನೊಬ್ಬಾಕೆಯೊಡನೆ ರಾಮಣ್ಣನ ಮದುವೆ— ಎಂಬ ವಿಚಾರ ತಡೆಯಲು ಕೂಡ ಅಶಕ್ಯ ಎಂಬಂತೆ ಗಟ್ಟಿಯಾಗಿ ಕಣ್ಣಳನ್ನು ಮುಚ್ಚಿ, ಭೂತ ಹೊಕ್ಕವರಂತೆ ಆವೇಶದಿಂದ ತಲೆಯನ್ನಲ್ಲಾಡಿಸುತ್ತ — " ಅಲ್ಲ—ಅಲ್ಲ—ಇದು ಸುಳ್ಳು— ಇದಾಗದು " ಎಂದು ಕನ್ನಡಿಯೊಳಗಿನ ಕುಮುದಳಿಗೆ ಹಟದಿಂದ ಹೇಳತೊಡಗಿದ್ದಳು. ಕನ್ನಡಿಗೆ ತೀರ ಹತ್ತಿರವಿದ್ದಾಗ ಅವಳಿಗೆ ಎಚ್ಚರ ಬಂದಂತಾಗಿತ್ತು. ಇದೇನು ಹುಚ್ಚುತನ ! ಅಲ್ಲದ ಸಲ್ಲದ ಕಲ್ಪನೆಗೆ ಭ್ರಮಿಷ್ಠ

ಳಂತಾಗುವುದೆ ? ಆದಿರಿ ಇದು ಕಲ್ಪನೆಯಲ್ಲ, ಸರಲಕ್ಕ ಬಾಯಿಯಿಂದ ಹೇಳಿದ್ದನ್ನು ತಾನೇ ಕಿವಿಮುಟ್ಟ ಕೇಳಿದ್ದಾಳೆ, ರಾಮಣ್ಣನ ಎರಡನೆಯ ಮದುವೆ—

ಛೆ ! ಇದೆಂದೂ ಶಕ್ಯವಿಲ್ಲ—ಎಂದು ಸಮಾಧಾನವನ್ನು ತಂದುಕೊಂಡಿದ್ದಳು. ಆ ಮಾತಿಗೆ ರಾಮಣ್ಣ ಸಿಟ್ಟಿಗೆ ಬಂದಿರುವ ಎಂದು ಸರಲಕ್ಕನೇ ಹೇಳಲಿಲ್ಲವೆ ? ಒಂದು ಕ್ಷಣ ಸಂತೋಷವೆನ್ನಿಸಿತ್ತು ಆ ವಿಚಾರಕ್ಕಾಗಿ. ಕೂಡಲೇ ವಿಷಾದವೂ ಆವರಿಸಿತ್ತು ಅವಳ ಮುಖವನ್ನು. ರಾಮಣ್ಣನ ಎರಡನೆಯ ಮದುವೆ ಶಕ್ಯವಿಲ್ಲ— ಎಂದರೆ— ಎಂದರೆ ?—ಒಂದು ವೇಳೆ ತನ್ನ ಸಂಬಂಧವಾಗಿಯೆ ಆ ಮಾತು ಇದ್ದರೆ ರಾಮಣ್ಣ ತನ್ನನ್ನೂ ಮದುವೆಯಾಗಲು ಸಿದ್ಧನಿಲ್ಲ— ಎಂದಂತಾಯಿತಲ್ಲ ? ಕನ್ನಡಿಯೊಳಗಿನ ಕುಮುದ ಸಮಾಧಾನದ ಉತ್ತರವನ್ನು ಕೊಡುವಳು ಎಂಬಂತೆ ಅಪೇಕ್ಷಾದೃಷ್ಟಿಯಿಂದ ತನ್ನ ಪ್ರತಿಬಿಂಬವನ್ನು ನೋಡಿದ್ದಳು.

ಮನಸ್ಸು ನಿಜವಾಗಿಯೆ ಎಷ್ಟು ಚಂಚಲವಾಗಿದೆ ! ಹಾಗೆ ಪ್ರತಿಬಿಂಬವನ್ನು ಒಂದೇ ಸಮನೆ ದಿಟ್ಟಿಸುತ್ತ ನಿಂತಾಗ ಮೊದಲಿದ್ದ ವಿಚಾರ ಎಲ್ಲಿಯೊ ಮಾಯವಾಗಿ ಪ್ರತಿಬಿಂಬದ ವಿಚಾರವೆ ಅಲ್ಲಿ ನೆಲೆಯೂರಿ ನಿಂತಿತ್ತು. ತನ್ನ ಪ್ರತಿಬಿಂಬವನ್ನು ತಾನೇ ಮೋಹಿಸಿದವಳಂತೆ ಆನಂದ, ಅಭಿಮಾನ ಎರಡೂ ಅವಳ ಮುಖದಲ್ಲಿ ಮೂಡಿದ್ದುವು. “ ರಾಮಣ್ಣನ ಸೊತ್ತು ಇದು ” ಎಂದಳು. “ಮದುವೆಯಾಗಲಿ ಆಗದಿರಲಿ, ಇದು ಪೂರ್ತಿ ರಾಮಣ್ಣನ ಸೊತ್ತು. ರಾಮಣ್ಣ ಯಾರನ್ನ ಮದುವೆಯಾದರೆ ಇದು ಮಾತ್ರ ರಾಮಣ್ಣನ ಸೊತ್ತು. ತಿಳಿಯಿತೆ ?” ಎಂದು ಪ್ರತಿಬಿಂಬಕ್ಕೆ ತಿಳುಹಿಸಿಕೊಡುವಂತೆ ಕೇಳಿದ್ದಳು. ಯಜ್ಞದಲ್ಲಿ ಆಹುತಿಯಾಗುವ ಪಶುವಿಗೂ ಸ್ವರ್ಗ ಸಿಕ್ಕುವುದು ಎಂಬುದನ್ನು ನಂಬದವರಿಗೆ ಸ್ವರ್ಗದ ಕಲ್ಪನೆಯೆ ಇದ್ದಿರಲಿಕ್ಕಿಲ್ಲ— ಎಂದು ಆಗ ಕುಮುದಳು ವಾದಿಸಲು ಸಿದ್ಧಳಿದ್ದಳು. ಒಂದು ತರದ ಯಜ್ಞದಲ್ಲಿ ತನ್ನ ದೇಹ ಆಹುತಿಯಾಗಿದೆ, ಅದಕ್ಕಾಗಿ ಆ ದೇಹಕ್ಕೆ ಆನಂದವೆ ಆಗಿದೆ ಎಂಬುದನ್ನು ಆಕೆ ಪುಲಕಿತವಾದ ತನ್ನ ದೇಹದಿಂದ ಅಂದು ಕಂಡುಕೊಂಡಿದ್ದಳು. ಕನ್ನಡಿಯಲ್ಲಿ ಅದನ್ನು ನೋಡಿ ನೋಡಿದಂತೆ ಆ ದೇಹಕ್ಕಾಗಿ ಮೊದಲು ಅಭಿಮಾನ, ಆಮೇಲೆ ಆನಂದ, ತರುವಾಯ ಕನಿಕರ, ಕೊನೆಗೆ ವಾತ್ಸಲ್ಯ ಎನ್ನಿಸಿತ್ತು ಆಕೆಗೆ. ಯಾವುದನ್ನೂ ವಿಚಾರ ಮಾಡದೆ ಲಗುಬಗೆಯಿಂದ ಆ ದೇಹವನ್ನು ಸಿಂಗರಿಸಿಕೊಂಡಿದ್ದಳು.

ಆಹುತಿಯಾದಲ್ಲಿ ಆನಂದ, ಎಷ್ಟು ಬೇಗ ಆಹುತಿಯಾಗುವುದೊ ಅಷ್ಟು ತೀವ್ರವಾಗಿ ಆನಂದ; ಆದುದರಿಂದ ಈಗಲೆ ಈ ಆಹುತಿಯನ್ನು ಅರ್ಪಿಸತಕ್ಕದ್ದು ಎಂದು ನಿರ್ಧರಿಸಿ ಕೋಣೆಯಿಂದ ಹೊರಬಿದ್ದಳು; ರಾಮಣ್ಣನ ಕೋಣೆಯ ಬೆಳಕು ಬಾಗಿಲ ಕೀಸಂದಿಯಿಂದ ಕಾಣುತ್ತಿತ್ತು, ಆ ಬೆಳಕಿನ ಒಂದು ಸೂಕ್ಷ್ಮ ಎಳೆಯಿಂದ ಬಿಗಿಯಲ್ಪಟ್ಟು ಬಲವಾಗಿ ಸೆಳೆದುಕೊಳ್ಳಲ್ಪಡುತ್ತಿರುವಳೇನೊ ಎಂಬಂತೆ ಕುಮುದ ನೇರವಾಗಿ ಆ ಬಾಗಿಲಿಗೆ ಬಂದಿದ್ದಳು.

ಅದೇ ಬೆಳಕಿನ ಎಳೆ ಬಾಗಿಲಿಗೆ ಬಂದಾಗ ಅವಳ ಕಾಲಿಗೆ ಒಂದು ಕ್ಷಣ ತೊಡಕಿದಂತಾಗಿತ್ತು, ತಡೆದಿದ್ದಳು. ಇದೇನು ? ತಿಳಿಯದೆ ತಾನು ಬಾಗಿಲನ್ನು ಬಡೆದಳೆ ? ಅಲ್ಲ—ಅದು ತನ್ನ ಹೃದಯ ಬಡೆದುಕೊಳ್ಳುತ್ತಿರುವ ಸದ್ದು. ಡಕ್ ! ಡಕ್ ! ಅಲ್ಲ—ಕೋಣೆಯೊಳಗಿನ ಗಡಿಯಾರದ ಸದ್ದು. ಡಕ್ ! ಡಕ್ ! ಉಹುಂ—ಒಳಗೆ ರಾಮಣ್ಣ ಅತ್ತಿಂದಿತ್ತ ಸುಳಿದಾಡುತ್ತಿದ್ದಾನೆ ! ತಟ್ಟನೆ ಕುಮುದಳಿಗೆ ಹೊಳೆದಂತಾಗಿತ್ತು, ಹೊಳೆದುದಕ್ಕಾಗಿ ಅವಳ ಮುಖದಲ್ಲಿ ಮುಗುಳ್ನಗೆಯೂ ಮೂಡಿತ್ತು. ಮನಸ್ಸಿನಷ್ಟು ವೇಗವುಳ್ಳ ಶಕ್ತಿ ಇನ್ನೊಂದಿದೆಯೆ ಜಗತ್ತಿನಲ್ಲಿ? ಕುಮುದಳ ಮನಸ್ಸು ಅದೊಂದು ನಿಮಿಷದಲ್ಲಿ ಕಂಡುಕೊಂಡ ರಂಗತರಂಗವಾದ ವಿಚಾರಪ್ರವಾಹದ ಸಂತತ ಓಘದಿಂದ ತಾನೇ ಆ ಮನಸ್ಸಿನೊಡನೆ ಹದಿನಾಲ್ಕು ಲೋಕಗಳನ್ನು ಸಂಚರಿಸಿ ಬಂದಂತೆನ್ನಿಸಿತ್ತು ಆಕೆಗೆ. ರಾಮಣ್ಣ ಅತ್ತಿಂದಿತ್ತ ಸುಳಿದಾಡುತ್ತಿದ್ದಾನೆ: ಯಾಕೆ ? ತನಗಾಗಿ, ಕೇವಲ ತನಗಾಗಿ, ಎಂದು ತಿಳಿದುಕೊಳ್ಳಲು ಕುಮುದಳ ಹಂಬಲಿಸುವ ಮನಸ್ಸಿಗೆ ತಡವಾಗಲಿಲ್ಲ. ತನ್ನನ್ನು ಬಿಟ್ಟು ರಾಮಣ್ಣ ಇರಲಾರ ! ಆದರೆ—ಪಾಪ !—ತನ್ನ ಕಡೆ ಒರಲಾರ ! ಸರಲಕ್ಕನ ಮಾತಿಗೆ ಹೆದರಿದ್ದಾನೆ ! ಅದಕಾಗಿ ಸುಳಿದಾಡುತ್ತಿದ್ದಾನೆ ! ಈಗ ಅವನಿಗೆ ಎಂತಹ ಆಶ್ಚರ್ಯವಾಗಬಹುದು ! ದೇವನ ಅನುಗ್ರಹಕ್ಕಾಗಿ ಹೆದರಿಕೊಂಡ ಭಕ್ತನ ಎದುರು ದೇವ ತಾನಾಗಿ ಸಾಕ್ಷಾತ್ತಾಗಿ ಬಂದು ನಿಂತರೆ ಆ ಭಕ್ತನ ಅವಸ್ಥೆ ಏನಾಗಬಹುದು ?....ಮೆಲ್ಲನೆ ಬಾಗಿಲಿಗೆ ಕೈ ಹಚ್ಚಿದ್ದಳು ಕುಮುದ. ಬಾಗಿಲು ತೆರೆದದ್ದೇ ಇದೆ ! ಈಗ ತಾನು ಒಳಗೆ ಹೋಗಬೇಕು, ಹೋದವಳೆ ರಾಮಣ್ಣನ ಕಣ್ಣನ್ನು ಹಿಂದಿನಿಂದ ಗಟ್ಟಿಯಾಗಿ ಮುಚ್ಚಬೇಕು !....ಉಹುಂ. ಕಣ್ಣಳನ್ನು ಮುಚ್ಚಿದರೆ ಸಮಾಧಾನವಿಲ್ಲ. ರಾಮಣ್ಣನನ್ನು ಬಿಗಿದಪ್ಪಬೇಕು, ಬಲವಾಗಿ

ಬಿಗಿದಪ್ಪಬೇಕು, ತನ್ನ ತೋಳುಗಳಲ್ಲಿ ಸಿಕ್ಕ ಅವನ ಮೈ ಕ್ರಮೇಣ ಕರಗಿ ಕರಗಿ ತನ್ನಲ್ಲಿ ಮೈಗೂಡಿಕೊಳ್ಳಬೇಕು, ಅಷ್ಟುಬಲವಾಗಿರಬೇಕು ತನ್ನ ಅಪ್ಪುಗೆ! ಬೇಡ—ಅದೂ ಬೇಡ....ಅದೊ—ಈಗ ಇತ್ತಕಡೆ ಬರುತ್ತಿದ್ದಾನೆ; ಒಳಗಿನ ಕಳವಳದಿಂದ ಅವನ ಮುಖ ಎಷ್ಟು ಸುಂದರವಾಗಿ ಕಾಣುತ್ತದೆ! ಯಾವುದೊ ವಿಚಾರಕ್ಕಾಗಿ ಅವನ ತುಟಿಗಳು ನಡುಗುತ್ತಿವೆ. ನಡುಗುವ ಆ ತುಟಿಗಳನ್ನು ನೋಡಿ ಕುಮುದಳ ಬಾಯಿ ಅರೆದೆರೆದಿತ್ತು. ಆ ತುಟಿಗಳನ್ನು ತನ್ನ ತುಟಿಗಳಿಂದ ಗಟ್ಟಿಯಾಗಿ ಹಿಡಿಯಬೇಕು, ಅವು ನಡುಗದಂತೆ, ಎನ್ನಿಸಿತ್ತಾಕೆಗೆ. ಅಷ್ಟಕ್ಕೆ ಸಮಾಧಾನವಾದೀತೆ ? ಎರಡೂ ಕೈಗಳಿಂದ ಅವನ ಮುಖವನ್ನು ಗಟ್ಟಿಯಾಗಿ ಹಿಡಿದು—? ಅಪ್ಪಯ್ಯ! ಆ ಮುಖ ಹೀಗೇ ತನ್ನೆದುರಿನಲ್ಲಿದ್ದರೆ ತನಗೆ ಹುಚ್ಚು ಹಿಡಿದೀತು ! ಅದನ್ನು ಎದುರಿನಲ್ಲಿ ಕಾಣಗೊಡಬಾರದು— ಅದನ್ನು ಮುಚ್ಚಿಡಬೇಕು, ಮುತ್ತಿಡಬೇಕು, ಚೂರುಚೂರಾಗಿಸಿ—

ಅಂದು ರಾತ್ರಿ ತಾನು ಮನಸ್ಸಿನಿಂದ ತೀರ ಭ್ರಷ್ಟಳಾಗಿದ್ದಳಲ್ಲಿ ಸಂದೇಹ ವಿದ್ದಿರಲಿಲ್ಲ. ಒಂದರ ಮೇಲೊಂದು ನುಗ್ಗುತ್ತಿರುವ ವಿಚಾರಗಳಿಂದ ಕೊನೆಗೆ ಎಚ್ಚರದಪ್ಪಿದಂತಾಗಿತ್ತೇನೊ ! ರಾಮಣ್ಣ ಮಂಚದ ಮೇಲೆ ಕುಳಿತದ್ದು, ತಾನು ಅವನ ಮಗ್ಗುಲಿನಲ್ಲಿದ್ದುದು, ಅವನು ತನ್ನನ್ನು ಕೈಯಿಂದ ತಡೆಯುತ್ತ ಮಂಚದಿಂದ ಏಳುತ್ತಿರುವುದು—ಇದನ್ನು ನೋಡಿದಾಗಲೆ ಅವಳಿಗೆ ಎಚ್ಚರ ವಾಗಿತ್ತು.

"ಇದೇನು ? ಹೀಗ್ಯಾಕೆ ? ಇಲ್ಲಿ ಯಾಕೆ ಬಂದೆ ?" ಎಂದು ತಡವರಿಸುತ್ತ ರಾಮಣ್ಣ ಎದ್ದು ತನ್ನಿಂದ ದೂರ ಸರಿದಿದ್ದ.

ಆಗ ಕುಮುದಳ ಹಣೆ-ಮೈ ಎಲ್ಲ ಬೆವತು ಮಳೆಯಿಂದ ತಂಪಾದ ನೆಲ ಉಸಿರಿಡುವಂತೆ ಅವಳ ಹೃದಯ ಉಸುರ್ಗರೆದಿತ್ತು. ಆ ಉಸಿರಿನೊಡನೆ ಜೀವವೆ ಹಾರಿಹೋಗಬಾರದಿತ್ತೆ-ಎಂದೆನ್ನಿಸಿತ್ತು ಆಕೆಗೆ. ರಾಮಣ್ಣನ ಮುಖದಲ್ಲಿದ್ದ ಕಳೆಯನ್ನು ನೋಡಿನೋಡಿದಂತೆ ಅವಳ ಹುಚ್ಚು ಜಾರುತ್ತಲಿದ್ದಿತು. ಕೊನೆಗೆ ತಾನು ಯಾವ ಮಾತನ್ನೂ ಆಡದೆ ಮುಖ ಕೆಳಗೆ ಮಾಡಿಕೊಂಡು ಅಲ್ಲಿಂದೆದ್ದು ತನ್ನ ಕೋಣೆಗೆ ಬಂದಿದ್ದಳು. ಆನಂದದಲ್ಲಿದ್ದಾಗ ಮನಸ್ಸಿನ ವೇಗ ಎಷ್ಟು ತ್ವರಿತವಾಗಿರುವುದೊ, ಅಷ್ಟೆ ನಿರಾಶೆಯಲ್ಲಿದ್ದಾಗ ದೇಹದ ಜಾಡ್ಯ ಹೆಚ್ಚಾಗುವುದೇನೊ ! ಯಾಕೆಂದರೆ, ಅಲ್ಲಿಂದ ತನ್ನ ಕೋಣೆಗೆ ನಡೆಯಲು

ಕಾಲ್ಗಳಿಗೆ ಅದೆಷ್ಟು ಯುಗಗಳು ಹಿಡಿದಿದ್ದುವು ! ಬಂದು ತನ್ನ ಹಾಸಿಗೆಯ್ಮೇಲೆ ಬಿದ್ದುಕೊಂಡು ಮುಖವನ್ನು ಗಟ್ಟಿಯಾಗಿ ಮುಸುಕಿನಿಂದ ಮುಚ್ಚಿಕೊಂಡಾಗಲೆ, ತಡೆಯುದ ವಿಚಾರ ಬಿಗಿದ ತನ್ನ ತುಟಿಗಳನ್ನು ರಭಸದಿಂದ ಬಿರಿದು ಹೊರನುಗ್ಗಿತ್ತು—“ನಾನು ಅವರಿಗೆ ಬೇಡಾಗಿದ್ದೇನೆ—ಬೇಡಾಗಿದ್ದೇನೆ.” ಮರುಗಳಿಗೆಯಲ್ಲಿ ತಾನು ಜಗತ್ತಿಗೇ ಬೇಡಾಗಿದ್ದೇನೆ ಎಂಬ ವಿಚಾರದಿಂದ ಅವಳ ಮೈ ಗದಗದ ನಡುಗಿತ್ತು....

ಎಂದಿನ ನೆನಪು ಇದು ? ಹಾಂ—ಆ ರಾತ್ರಿಯ ನೆನಪು. ಅಂದು ತಾನು “ನಾನಿನ್ನು ಹೃದಯದಿಂದ ವಿಧವೆ” ಎಂದುಕೊಂಡಿದ್ದಳು. ಸರಿ. ಈಗ ? ಸರಲಕ್ಕ ದೇಹದಿಂದಿಲ್ಲದಿದ್ದರೂ ಮನೆತುಂಬ, ಮನತುಂಬ ಆಕೆಯ ಮೂರ್ತಿ ವ್ಯಾಪಿಸಿಕೊಂಡೇ ನಿಂತಂತಿದೆ. ಅದಕಾಗಿ ತಾನು ಸಾಯುವವರೆಗೂ ಹೃದಯದ ವಿಧವೆಯೆ ? ದೇಹದಿಂದ ತಾನು ವಿಧವೆಯಲ್ಲ ಎಂಬುದನ್ನು ಕುಮುದಳು ಮರೆತಿರಲಿಲ್ಲ. ಮನಸ್ಸಿಗೆ ಅಭಿಮಾನವಿದ್ದಂತೆ ದೇಹಕ್ಕೆ ಸ್ವಾಭಿಮಾನ ಎಂಬುದು ಇಲ್ಲವೇ ಇಲ್ಲ—ಎಂದುಕೊಂಡಳು. ದೇಹದ ವಿಚಾರ ಬಂದೊಡನೆ ದೇಹ ದಣಿದಿದೆ ಎಂಬುದೂ ಲಕ್ಷ್ಯಕ್ಕೆ ಬಂದಿತು. ದೇಹ— ? ಕುಮುದಳು ಒಮ್ಮೆಲೆ ಗಾಬರಿಯಾದಳು. ಅಯ್ಯೊ ! ಎಂತಹ ನಾಚಿಕೆಗೇಡಿಯಾಗಿದೆ ಈ ದೇಹ—ಎಂದವಳೆ ಪಾರಾಗುವ ದಾರಿ ಕಾಣದೆ, ಬೇಟೆಗಾರರಿಂದ ಸುತ್ತಲ್ಪಟ್ಟ ಮಿಗದಂತೆ ಕುಮುದ ಮತ್ತೆ ಹಾಸಿಗೆಯ ಮೇಲೆ ಕುಳಿತಳು, ಎರಡೂ ಕೈಗಳಿಂದ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡಳು.

## ೧೫

ಪೂರ್ತಿಯಾಗಿ ಹೊರಬೀಳದ ನೆಗಡಿ ಬಂದವನಂತಾಯಿತು ರಾಮಣ್ಣನ ಸ್ಥಿತಿ. ನೋವಾದರೂ ಚಿಂತೆ ಇಲ್ಲ, ಸೀನುಗಳನ್ನು ತಂದುಕೊಳ್ಳಲೇಬೇಕು, ಇಲ್ಲದೆ ಹೋದಲ್ಲಿ ನೆಗಡಿ ಹಗುರಾಗುವಂತಿಲ್ಲ. ರಾಮಣ್ಣ ಕುರ್ಚಿಯಲ್ಲಿ ಕುಳಿತುಕೊಂಡೇ ಸರಲೆಯ ಭಾವಪಟವನ್ನು ದಿಟ್ಟಿಸುತ್ತಲಿದ್ದ. “ಹುಚ್ಚೀ, ನೋಡಿದೆಯಾ ? ನಿನ್ನ ಉದ್ದೇಶ ಎಷ್ಟು ಒಳ್ಳೆಯದಾಗಿತ್ತೊ ಅದರ ಪರಿಣಾಮ ಅಷ್ಟೆ ಘೋರವಾಗಿದೆ ! ಕೊನೆಗೆ ನನಗಿಂತಲೂ ಶ್ರೇಷ್ಠ ಸಾಹಿತಿ ನೀನಾದೆ ! ಆಂ ? ಎಂತಹ ಉದ್ವೇಗದ ಟ್ರ್ಯಾಜೆಡಿಯನ್ನು ರಚಿಸಿ ಹೋದೆ ನೀನು !

ಅದನ್ನು ತಿಳಿಯದೆ ನಿನ್ನದೆ ತಪ್ಪು ಎಂದೆ. ತಪ್ಪು ಯಾರದೂ ಅಲ್ಲವೆಂದೇ ಟ್ರ್ಯಾಜೆಡಿ ಪರಿಣಾಮಕಾರಕವಾಗಿದೆ. ” ರಾಮಣ್ಣ ಚಟ್ಟನೆ ಎದ್ದ. ನಾನು ಮುದುಕನಾದೆ— ಎಂದುಕೊಂಡ. ಮನುಷ್ಯನು ಸದ್ಯವನ್ನು ಕೂಡ ಮರೆತು ಹಿಂದಿನದನ್ನು ನೆನೆಸಿಕೊಳ್ಳಲು ಉತ್ಸುಕನಾದರೆ ಅದು ಅವನಿಗೆ ಮುಪ್ಪು ಬಂದುದರ ಲಕ್ಷಣ ಎಂದು ಎಲ್ಲಿಯೊ ಓದಿದ್ದು ಅವನ ನೆನಪಿಗೆ— ಥೂ ! ಮತ್ತೆ ನೆನಪು— ಎನ್ನುತ್ತ ಅತ್ತಿತ್ತ ಸುಳಿದಾಡತೊಡಗಿದ. ಹೀಗೇ ಸುಳಿ— ಹಾಂ ! ಅಂದಿನ ನೆನಪು ! ಹೋಗಲಿ ಈ ನೆನಪೊಂದನ್ನು ಪೂರ್ತಿಯಾಗಿ ಬಯಲಿಗೆಳೆದು ಮನಸ್ಸನ್ನು ಹಗುರಾಗಿಸಿಕೊಂಡು ಮಲಗೋಣ— ಎಂದು ನಿರ್ಧರಿಸಿದವನಂತೆ ಹೆಜ್ಜೆಗಳನ್ನಿಡುತ್ತ ಅತ್ತಿತ್ತ ಸುಳಿದಾಡತೊಡಗಿದ. ಅಹುದು ಅಂದು ತಾನು ಹೀಗೆಯೆ ಸುಳಿದಾಡುತ್ತಿದ್ದ. ಯಾಕೆ ? ಅಂದು ಏನಾಗಿತ್ತು ? ಅಹುದಲ್ಲವೆ ? ಸರಲೆ ಮತ್ತೆ ಅಂದು ತನ್ನ ಮದುವೆಯ ಮಾತನ್ನೆತ್ತಿದ್ದಳು. ಆ ಮಾತು ಬಂದಾಗೊಮ್ಮೆ ತನಗೆ ನಾಚಿಕೆಯಿಂದ ಓಡಿಹೋಗಬೇಕೆನ್ನಿಸು ತ್ತಿತ್ತು. ಯಾಕೊ— ಏನೊ ? ಸರಲೆ “ ಮದುವೆ ” ಎಂದೊಡನೆ ತನ್ನ ಕಣ್ಣ ಮುಂದೆ ಕುಮುದಳ ಮೂರ್ತಿ ನಿಲ್ಲುತ್ತಿತ್ತು; ಬದಿಗೆ ಆ ಮೂರ್ತಿ, ಎದುರಿಗೆ ಸರಲೆ— ಇದಕಾಗಿ ತಾನು ಸರಲೆಯನ್ನು ವಂಚಿಸಿದನಲ್ಲ ಎಂಬ ವಿಚಾರವೂ ಬರುತ್ತಿತ್ತು; ಆಗ ಅಪರಾಧಿಯಂತೆ ಓಡಬೇಕೆನ್ನಿಸುತ್ತಿತ್ತು. ತನ್ನ ಮತ್ತು ಕುಮುದಳ ಕಳ್ಳ ಸಂಬಂಧದ ಸಂಶಯ ಸರಲೆಗೆ ಬಂದಿದೆ, ಅದನ್ನು ತಡೆಯುವ ಪರಿಸ್ಥಿತಿಯಲ್ಲಿ ತಾನಿಲ್ಲ ಎಂಬುದನ್ನು ಮನಗಂಡೇ ಸರಲೆ ಈ ಮಾತನ್ನು ಎತ್ತುತ್ತಾಳೆ ಎಂಬ ಸಂಶಯ ಆ ಮಾತು ಬಂದಾಗೊಮ್ಮೆ ಅವನ ಹೃದಯ ವನ್ನು ಕರಗಸದಂತೆ ಕೊರೆಯುತ್ತಿತ್ತು. ಒಮ್ಮೊಮ್ಮೆ— ಸರಲೆಯ ಅಂತಃಕರಣ ಶುದ್ಧವಾದುದು, ಆಕೆ ನಿರ್ಮಲ ಬುದ್ಧಿಯಿಂದಲೆ ಹೀಗೆ ಹೇಳುತ್ತಿರುವಳು, ತನಗಾದರೂ ಕುಮುದಳ ಸಹವಾಸದ ಅಭ್ಯಾಸವಾಗಿದೆ, ಹುಂ ಎಂದ್ಬು ಬಿಡೋಣವೆ— ಎಂದು ಎನ್ನಿಸುತ್ತಿತ್ತು. ಆಗ ತಟ್ಟನೆ ನಾಲಗೆಯನ್ನು ಕಚ್ಚಿ ಕೊಳ್ಳುತ್ತಿದ್ದ. ಎಂತಹ ಮೂರ್ಖತನ ! ಸರಲೆಯ ವಿಚಾರವೇನೊ ! ತನ್ನ ವಿಚಾರವೇನೊ ! ಆಕೆ “ ಇನ್ನೊಂದು ಮದುವೆ ” ಎಂದಿಷ್ಟೆ ಹೇಳುತ್ತಿದ್ದಾಳೆ; ಕುಮುದಳೊಡನೆ ಮದುವೆ ಎಂದು ಹೇಳಿಲ್ಲ. ಆ ವಿಚಾರ ಆಕೆಯದಾಗಿದ್ದರೆ ಸ್ಪಷ್ಟವಾಗಿ ಹೇಳುತ್ತಿರಲಿಲ್ಲವೆ ? ಹಾಗೆ ಒಮ್ಮೆಯೂ ಹೇಳಿರಲಿಲ್ಲ. ಹೀಗಿರು

ವಾಗ ತಾನಾಗಿಯೆ "ಆಗಲಿ, ನಾನು ಕುಮುದಳನ್ನು ಮದುವೆಯಾಗುವೆ" ಎಂದು ಹೇಳಿದರೆ ತನ್ನ ತಪ್ಪನ್ನು ಬಹಿರಂಗವಾಗಿ ಒಪ್ಪಿಕೊಂಡಂತಾಗಲಿಕ್ಕಿಲ್ಲವೆ?

ಆದರೆ ತನ್ನದು ತಪ್ಪು ಎಂದು ರಾಮಣ್ಣನು ಯಾವಾಗಲೂ ಒಪ್ಪಲು ಸಿದ್ಧನಿರಲಿಲ್ಲ. ಒಂದು ವೇಳೆ ತಾನು ಕುಮುದಳನ್ನು ಪ್ರೀತಿಸುತ್ತಿದ್ದರೆ ಅದು ಒಂದು ದೃಷ್ಟಿಯಿಂದ ತಪ್ಪೆನ್ನಿಸಬಹುದಾಗಿತ್ತು. ಆದರೆ ತಾನು ಕುಮುದಳನ್ನು ಪ್ರೀತಿಸುವುದಿಲ್ಲ. ಪ್ರೀತಿಸುವುದಿಲ್ಲ? ಎಂದರೆ ಪ್ರೀತಿ ಇಲ್ಲದ ದೇಹಸಂಬಂಧ ವ್ಯಭಿಚಾರವಲ್ಲವೆ? ತಾನು ನಿಜವಾಗಿಯೆ ಕಾಮುಕವೃತ್ತಿಯವನೆ? ಅದನ್ನೂ ಒಪ್ಪಲು ರಾಮಣ್ಣ ಸಿದ್ಧನಿರಲಿಲ್ಲ. ಅಥವಾ—ತನಗೆ ತಿಳಿಯದೆಯೆ ತಾನು ಕುಮುದಳನ್ನು ಪ್ರೀತಿಸುತ್ತಿರಬಹುದೆ? ಯಾವ ನಿರ್ಣಯಕ್ಕೂ ಬಾರದ ಮನಃಸ್ಥಿತಿಯಲ್ಲಿದ್ದಾಗ ಮತ್ತೆ ಸರಳೆಯು "ಇನ್ನೊಂದು ಮದುವೆ" ಯ ಮಾತನ್ನು ಎತ್ತಿದೊಡನೆ ಒಮ್ಮೊಮ್ಮೆ ಅವನಿಗೆ ತಡೆಯದಂತಾಗುತ್ತಿದ್ದಿತು. ತನ್ನ ಹೃದಯದ ಬಗ್ಗೆ ರಾಮಣ್ಣನು ಇನ್ನೂ ನಿರ್ಧಾರಕ್ಕೆ ಬಾರದಿದ್ದರೂ ಕುಮುದಳ ಬಗ್ಗೆ ಅವನಿಗೆ ಸಂದೇಹ ಉಳಿಯಲಿಲ್ಲ. ಅಂದು ಆ ರಾತ್ರಿ ನಡೆದ ಘಟನೆಗಾಗಿ ರಾಮಣ್ಣನಿಗೆ ಪೂರ್ತಿಯಾಗಿ ಭರವಸೆಯಾಗಿತ್ತು. ಅಂದು ತಾನು ಮನಸ್ಸಿನ ನಿರ್ಧಾರವಿಲ್ಲದ್ದಕ್ಕೆ ಹೀಗೇ ಅತ್ತಿಂದಿತ್ತ ಸುಳಿದಾಡುತ್ತ ಕೊನೆಗೂ ಮನಸ್ಸೂ ಕಾಲ್ಗಳೂ ದಣಿದುದಕ್ಕೆ ಮಂಚದ ಮೇಲೆ ಕುಳಿತುಕೊಂಡಿದ್ದ. ಆಗ ಒಮ್ಮೆಲೆ—ತನ್ನ ಮನಸ್ಸಿನೊಳಗಿನ ಸಂಶಯ-ಹೆದರಿಕೆ-ಅಪರಾಧ ಬುದ್ಧಿ—ಇವು ಮೂರೂ ಮುಪ್ಪುರಿಗೊಂಡು ಮೂರ್ತಿ ತಾಳಿ ನಿಂತಿವೆಯೆ—ಎನ್ನುವಂತೆ ಕುಮುದ ತನ್ನ ಕೋಣೆಯ ಬಾಗಿಲಿನಲ್ಲಿ ನಿಂತಿದ್ದಳು. ಕುಮುದಳು ತನ್ನನ್ನು ಪ್ರೀತಿಸುತ್ತಿದ್ದಳೆಂಬುದರ ಬಗ್ಗೆ ಅಂದಿನ ಅವಳ ಮುಖಚರ್ಯೆಯನ್ನು ನೋಡಿ ರಾಮಣ್ಣ ಪೂರ್ತಿಯಾಗಿ ಮನಗಂಡಿದ್ದ. ಆದರೆ ಪ್ರೇಮವು ಕೋಮಲವಾದಷ್ಟೆ ಕ್ರೂರವೂ ಆಗಿದೆ, ಆಕರ್ಷಕವಾದಷ್ಟೆ ಅತಿಭಯಂಕರವೂ ಆಗಿದೆ, ಆನಂದದಂತೆ ಅಸಹ್ಯವನ್ನೂ ಬೀರುತ್ತಿದೆ—ಎಂಬುದನ್ನು ಮಾತ್ರ ರಾಮಣ್ಣ ಅಂದಿನವರೆಗೆ ಕಣ್ಣಾರೆ ಕಂಡಿದ್ದಿಲ್ಲ. ಎಂತಹ ಮೂರ್ತಿ ಕುಮುದಳದು ಆ ಕ್ಷಣದಲ್ಲಿ! ದೀಪದ ಹುಳುವಿಗೆ ಜ್ವಾಲೆಯಂತೆ ಅವನಿಗೆ ಕುಮುದಳು ಆಕರ್ಷಕವಾಗಿ ಕಂಡಿದ್ದಳು. ಅವಳನ್ನು ದಿಟ್ಟಿಸಲು ಕೂಡ ರಾಮಣ್ಣ

ಹೆದರಿದ್ದ; ನೋಡಿದರೆ ಅವಳ ಸೌಂದರ್ಯದ ಪಾಶ ತನ್ನನ್ನು ಬಿಗಿದೆಳೆವು ದಲ್ಲಾ ಎಂದು ಹೆದರಿದವನಂತೆ ಅವನು ಮುಖ ತಿರುಗಿಸಿ ಮಂಚದಿಂದ ಏಳಲು ತೊಡಗಿದ್ದ; ಚಾಚಿದ ಅವಳ ಕೈಗಳು ಅವನನ್ನು ಅದಕಾಗಿ ಇನ್ನೂ ಮುಟ್ಟಿರಲಿಲ್ಲ. ಒಂದು ಕ್ಷಣ—ಅರ್ಧ ಕ್ಷಣ—ಈ ಕಣ್ಣೆವೆಯಲ್ಲಿ—ಇನ್ನು ತಾನು ಆಹುತಿಯಾಗುವವ—ಆದ—ಎನ್ನುವಷ್ಟರಲ್ಲಿ ಆಕೆ ಕೈಚಲ್ಲಿ ತನ್ನನ್ನು ಮುಖವೆತ್ತಿ ನೋಡಿದ್ದಳು. ಎಷ್ಟು ಚಮತ್ಕಾರವಾಗಿದೆ ಸೃಷ್ಟಿಯ ಆಟ! ಅದೊಂದು ಕ್ಷಣದಲ್ಲಿ ಬೆಮರಿನೊಡನೆ ಅವಳ ಸೌಂದರ್ಯವು ತೊಳೆದು ಹೋದಂತಾಗಿತ್ತು. ಈಗ ಆಕೆಯ ಮುಖದಲ್ಲಿ ಮೊದಲು ಬರೀ ಕ್ರೂರ, ಆಮೇಲೆ ಅಸಹ್ಯ ಕಳೆ—ಇದಿಷ್ಟೇ ಉಳಿದಂತಾಗಿತ್ತು. ಕ್ರಮೇಣ ತಾನೂ ಆಕೆ ಯನ್ನು ದಿಟ್ಟಿಸತೊಡಗಿದ. ಆ ಬದಲಾದ ಕಳೆಯನ್ನು ನೋಡಿನೋಡಿದಂತೆ ಈಗ ತಾನು ಧೈರ್ಯದಿಂದ ಆಕೆಯನ್ನು ನೋಡಬಲ್ಲ ಎಂಬುದು ಅವನಿಗೆ ಕಂಡುಬಂದಿತ್ತು. ಆಗ ಮಾತಿನ ಅಗತ್ಯವೆ ಇರದಿದ್ದರೂ ತನ್ನ ಬಾಯಿಯಿಂದ ಏನೊ ಮಾತು ಹೊರಬಿದ್ದಿತ್ತು, ಆ ಮಾತಿನೊಡನೆ ಕುಮುದಳೂ ಹೊರಬಿದ್ದಿ ದ್ದಳು.

ಅಂದಿನಿಂದ ರಾಮಣ್ಣನ ಹೆದರಿಕೆ ಹೆಚ್ಚಾಗಿತ್ತು. ತಾನು ಪ್ರೀತಿಸುವ ಮಾತು ಬೇರೆ, ಇನ್ನೊಬ್ಬರು ತನ್ನನ್ನು ಪ್ರೀತಿಸುವರೆಂಬ ಮಾತು ಬೇರೆ ಎಂಬುದು ಆಗ ಅವನಿಗೆ ತಿಳಿದುಬಂದಿತ್ತು. ಪ್ರೀತಿ ತನ್ನದಾಗಿದ್ದರೆ ಆನಂದ ವಿದೆ, ಪ್ರೀತಿಯ ವಸ್ತು ತನ್ನನ್ನೆ ಪ್ರತಿಯಾಗಿ ಪ್ರೀತಿಸಲಿಲ್ಲವಾದರೂ ಸುಖ ವಿದೆ. ಆದರೆ ಇನ್ನೊಬ್ಬರ ಪ್ರೀತಿಯ ವಸ್ತು ತಾನು ಎಂದಾಗ ಬೇಟೆಯ ಆಹುತಿಯಾದಂತೆನ್ನಿಸುವುದು, ವಿಶೇಷವಾಗಿ ತನ್ನಲ್ಲಿ ಪ್ರೀತಿ ಇಲ್ಲದಿದ್ದಾಗ— ಎಂಬುದು ಇದುವರೆಗೆ ರಾಮಣ್ಣನಿಗೆ ತಿಳಿದಿರಲಿಲ್ಲ. ಬೇಟೆಯ ನಾಯಿಗಳನ್ನು ತಪ್ಪಿಸುವ ಮೊಲದಂತೆ ಅಂದಿನಿಂದ ರಾಮಣ್ಣ ಕುಮುದಳನ್ನು ತಪ್ಪಿಸಿ ತನ್ನ ಕೋಣೆಯಲ್ಲಿ ಹೆಚ್ಚು ವೇಳೆ ಹುದುಗಿಕೊಳ್ಳುತ್ತಿದ್ದ. ಕ್ರಮೇಣ ಸರಲೆಯ ಸಹವಾಸಕ್ಕೂ ಹೆದರತೊಡಗಿದ್ದ. "ಇನ್ನೊಂದು ಮದುವೆ" ಎಂಬ ಶಬ್ದ ಗಳು ತನ್ನ ಕಿವಿಯ ಮೇಲೆ ಬಿದ್ದರೆ ತನ್ನ ಅವಸ್ಥೆ ಏನಾದೀತೊ—ಎಂಬ ಹೆದರಿಕೆ. ಇವರಿಂದ ಆದಷ್ಟು ದೂರ ಇದ್ದರೆ ಸಾಕು, ಸುರಕ್ಷಿತ ಎಂದು ತಿಳಿದುಕೊಂಡಿದ್ದ. ಎಂತಹ ಹುಚ್ಚ ತಾನು! ದೂರ! ಎಂದರೇನು? ಆ

ಶಬ್ದಕ್ಕೆ ಅರ್ಥವೇ ಇಲ್ಲ ಎಂದು ಕ್ರಮೇಣ ರಾಮಣ್ಣನಿಗೆ ತಿಳಿಯತೊಡಗಿತ್ತು. ದೇಹದಿಂದ ತಾನು ಎಷ್ಟೆಷ್ಟು ದೂರವಾಗಿರುತ್ತಿದ್ದನೊ ಮನಸ್ಸು ಅವನನ್ನು ಅಷ್ಟಷ್ಟು ಕುಮುದಳ ಹತ್ತಿರ ಒಯ್ಯತೊಡಗಿತ್ತು. ಕುಮುದ ದೇಹದ ಮಗ್ಗಲಲ್ಲಿರದಿದ್ದರೂ ಮನಸ್ಸಿನ ಮಗ್ಗುಲಲ್ಲಿಯೆ ಖಂಡಿತವಾಗಿ ಇದ್ದಾಳೆ ಎಂಬುದನ್ನು ಕಂಡು ಅವನು ಹತಾಶನಂತಾಗಿದ್ದನು. ಹೀಗಿರುವಾಗ ಬರೀ ದೇಹದಿಂದ ದೂರವಿದ್ದರೆ ಏನು ಸಾಧಿಸಿದಂತಾಯಿತು ಎಂದು ಒಮ್ಮೊಮ್ಮೆ ಎನ್ನಿಸುತ್ತಿತ್ತು. ಹೇಗಾದರೂ ಆಕೆ ತನ್ನನ್ನು ಪ್ರೀತಿಸುತ್ತಿದ್ದಾಳೆ, ಆದುದರಿಂದ ಆಕೆಯ ತಿರಸ್ಕಾರದ ಹೆದರಿಕೆಯೆ ಇಲ್ಲ, ಒಮ್ಮೆ ದೇಹದ ಬಯಕೆಯನ್ನು ತೃಪ್ತಿಗೊಳಿಸಿದರೆ ತಪ್ಪೇನು— ಎನ್ನಿಸುವುದು. ಮದುವೆಯ ಮಾತಂತೂ ಕುಮುದಳ ಬಾಯಿಯಿಂದ ಬಂದಿಲ್ಲವಲ್ಲ ? ಇನ್ನು ಯಾವ ಹೆದರಿಕೆ ?—ಎಂದೂ ಧೈರ್ಯವನ್ನು ಹೇಳಿಕೊಳ್ಳುವನು. ಇಷ್ಟಕ್ಕೂ ಮೀರಿದರೆ ಸರಲೆಯ ತರುವಾಯ—

ಆಗ ರಾಮಣ್ಣ ತನಗಾಗಿ ತಾನು ಅಸಹ್ಯಪಟ್ಟಿದ್ದ. "ಸರಲೆಯ ತರುವಾಯ" ಎಂದು ಎಂದೂ ಬಾರದ ವಿಚಾರ ಬಂದಿತೇಕೆ ? ಇಷ್ಟು ಕಟುಕನೆ, ಕೃತಘ್ನನೆ, ಅಸಂಸ್ಕೃತನೆ ತಾನು ? ಒಳಗಿಂದೊಳಗೆ ತನ್ನ ಮನಸ್ಸು ಸರಲೆಯ ಕೊನೆಯನ್ನು ಪರೀಕ್ಷಿಸುತ್ತಿದೆಯಲ್ಲ ? ಛೆ !— ಆ ದೇವಿಯ ಮುಂದೆ ರಾಕ್ಷಸನು ನಾನು ! ತನ್ನ ಕಷ್ಟ-ನಷ್ಟಗಳನ್ನು ನುಂಗಿಕೊಂಡು, ನನ್ನ ಸುಖಕ್ಕಾಗಿ ಆಕೆ ತಾನಾಗಿಯೆ ನನಗೆ ಇನ್ನೊಂದು ಮದುವೆಯಾಗಲು ಬೇಡಿ ಬೇಡಿ ಕಾಡುತ್ತಿರುವಾಗ ಈ ವಿಚಾರ ಯಾಕೆ? ಆಕೆಯಿಂದ ನನಗೆ ಯಾವ ಆತಂಕ ಉಂಟಾಗಿದೆ ಎಂದು ನಾನು ಆಕೆಯ ಮರಣವನ್ನು ಬಯಸುತ್ತಿರುವೆ?—ಎಂದು ರಾಮಣ್ಣ ಪರಿಪರಿಯಿಂದ ಹಳಿದುಕೊಂಡಿದ್ದ. ಕೆಲವು ತಿಂಗಳುಗಳ ತರುವಾಯ ಒಮ್ಮೆ ತಾನಾಗಿಯೆ ಹೋಗಿ ಸರಲೆಯ ಕಾಲ ಮೇಲೆ ಬಿದ್ದು ಎಲ್ಲವನ್ನೂ ಒಪ್ಪಿಕೊಂಡು ಇನ್ನೊಂದು ಮದುವೆಗೆ ಸಮ್ಮತಿಸಬೇಕೆಂದು ನಿರ್ಧರಿಸಿದ್ದ. ಆದರೆ ಕೊನೆಯ ಗಳಿಗೆಗೆ ಧೈರ್ಯವಾಗಿರಲಿಲ್ಲ. ಆಗ ಕ್ರಮೇಣ ಸರಲೆಯ ಪ್ರಕೃತಿಯು ದಿನದಿನಕ್ಕೆ ಹೆಚ್ಚು ಕ್ಷೀಣವಾಗತೊಡಗಿತ್ತು. ಈ ರೀತಿ ಉದ್ವೇಗಕರ ಭಾವನೆಯನ್ನು ಅವಳಲ್ಲಿ ಒದವಿಸುವುದು ಅವಳ ಪ್ರಕೃತಿಗೆ ಹಿತವಲ್ಲ ಎಂದು ಬಹಿರಂಗವಾಗಿ ನೆವವನ್ನು ಮುಂದೆ ಮಾಡಿಕೊಂಡಿದ್ದ; ಆದರೆ ಒಂದು ವೇಳೆ ಆ ಇನ್ನೊಂದು ಮದುವೆಯಲ್ಲಿ ಕುಮುದಳ ಪಾತ್ರವೆ ಇಲ್ಲದಿದ್ದರೆ ಹೇಗೆ—ಎಂಬ ಹೆದರಿಕೆಯೂ ಅವನನ್ನು ತಡೆದಿತ್ತು.

ಕೊನೆಗೆ ಮಾತುಮಾತಿಗೆ, ಕ್ಷಣಕ್ಷಣಕ್ಕೆ ಕುಮುದಳು ರಾಮಣ್ಣನ ಮನಸ್ಸಿನಲ್ಲಿ ಬಂದು ನಿಲ್ಲತೊಡಗಿದ್ದಳು. ಸರಲೆಯ ಪ್ರಕೃತಿ ಕ್ಷೀಣವಾಗಹತ್ತಿದಂದಿನಿಂದ ಕುಮುದಳ ಕಣ್ಣು ತಪ್ಪಿಸುವುದು ರಾಮಣ್ಣನಿಗೆ ಶಕ್ಯವಾಗಿರಲಿಲ್ಲ. ರೋಗಿಯ ಉಪಚಾರಕ್ಕಾಗಿ, ಅನಿವಾರ್ಯವಾಗುತ್ತಲಿರುವ ದುಃಖದಾಯಕ ಘಟನೆಯ ನೆರಳಿನಲ್ಲಿ ರಾಮಣ್ಣ ಮತ್ತು ಕುಮುದ ಹೆಚ್ಚಾಗಿ ಸಹಕರ್ಮಿಗಳಾಗಬೇಕಿತ್ತು. ಸರಲೆಯ ಕೊನೆ ಇನ್ನು ಬಹಳ ದೂರದಲ್ಲಿಲ್ಲ ಎಂಬ ವಿಚಾರದ ಉದ್ವೇಗದಿಂದ ಹಣ್ಣಾದ ರಾಮಣ್ಣನ ಮನಸ್ಸಿಗೆ ಆತ್ಮನಿಗ್ರಹದ ಶಕ್ತಿ ಉಳಿದಿರಲಿಲ್ಲ; ಅಂತೂ ಕೊನೆಗೆ ಒಂದು ರಾತ್ರಿ ಗಲ್ಲಿಗೇರಿಸಲ್ಪಡುವ ಅಪರಾಧಿ ಶೂಲದ ಕೆಳಗೆ ಹೋಗಿ ನಿಲ್ಲುವ ತೀರ ಅಸಹಾಯ ಮನಃಸ್ಥಿತಿಯಲ್ಲಿ ಕುಮುದಳ ಕೋಣೆಗೆ ಹೋಗಿದ್ದ.

ಕುಮುದ ತನ್ನನ್ನು ಪ್ರೀತಿಸುತ್ತಿದ್ದಾಳೆ, ಇಂದಿಲ್ಲ ನಾಳೆ ಆಕೆಯನ್ನೆ ಹಾಗೆನ್ನಿಸಿದರೆ—ಮದುವೆಯಾಗಬಹುದು ಎಂಬ ಎರಡು ವಿಚಾರಗಳು ಈಗ ಕುರುಡನಂತಾಗಿದ್ದ ರಾಮಣ್ಣನ ಎರಡೂ ಕೈಗಳಲ್ಲಿ ಎರಡು ಕೋಲುಗಳಂತೆ ಆಧಾರಗಳಾಗಿದ್ದುವು. ಕುಮುದಳು ತನ್ನನ್ನು ಪ್ರೀತಿಸುತ್ತಿದ್ದಾಳೆ—ಅಹುದೆ? ಎಂದು ಒಮ್ಮೊಮ್ಮೆ ಅವನಿಗೆ ಸಂಶಯವೂ ಬರದಿರುತ್ತಿರಲಿಲ್ಲ. ಎಷ್ಟೋ ಸಲ ಯಾವಾಗಲೂ ತನ್ನ ಸ್ಪರ್ಶಕ್ಕೆ ಇನ್ನಷ್ಟು ಮೃದುವಾಗುತ್ತಿರುವ ಕುಮುದಳ ಅಂಗಾಂಗಗಳು ತನ್ನ ಕೈ ಮುಟ್ಟಿದೊಡನೆ ಬಿಗಿದು ಬಿರುಸಾದಂತಾಗುತ್ತಿದ್ದುವು ಯಾಕೊ? ಆದರೂ ಕುಮುದಳು ಮಾತ್ರ ತನ್ನ ಅನಿಚ್ಛೆಯನ್ನು ಎಂದೂ ವ್ಯಕ್ತಮಾಡಿ ತೋರಿಸುತ್ತಿರಲಿಲ್ಲ. ಅದೇ ರಾಮಣ್ಣನ ಮನಸ್ಸಿಗೆ ಧೈರ್ಯವನ್ನು ಕೊಡುತ್ತಿದ್ದಿತು. ಒಮ್ಮೊಮ್ಮೆ ಹಿಂದೊಮ್ಮೆ ತನಗೆ ಕಂಡ ಕ್ರೂರ ಕಳೆಯ ಕುಮುದಳ ಚಿತ್ರ ಕಣ್ಣುಮುಂದೆ ನಿಲ್ಲುತ್ತಿದ್ದಿತು; ಆ ಚಿತ್ರ ಕಣ್ಮುಂದೆ ನಿಂತಾಗೊಮ್ಮೆ ತಾನೂ ಕಠೋರನಾಗಿಯೆ ವರ್ತಿಸುತ್ತಿದ್ದ, ಅಪರಾಧವನ್ನೆಸಗಿದಾಕ್ಷಣ ಓಡಿಹೋಗುವ ಅಪರಾಧಿಯಂತೆ ಕಾಲ್ದೆಗೆಯುತ್ತಿದ್ದ. ಎಷ್ಟೋ ಸಲ ತನ್ನ ವಿಚಾರಕ್ಕಾಗಿ, ತನ್ನ ನಡತೆಗಾಗಿ ನಾಚಿಕೆಗೊಂಡ ಮನಃಸ್ಥಿತಿಯಲ್ಲಿ ಕುಮುದಳಿಗಾಗಿ ಅವನಲ್ಲಿ ಕನಿಕರ ಭಾವ ಮೂಡುತ್ತಿದ್ದಿತು. ಆಗ ಆಕೆಯನ್ನು ಮಾತಾಡಿಸಿ ಒಲಿಸಿಕೊಳ್ಳಲು ಯತ್ನಿಸುತ್ತಿದ್ದ. ಹೆಚ್ಚಾಗಿ ಮೌನವಾಗಿರುವ ಕುಮುದ ಒಮ್ಮೆ ತನ್ನನ್ನು ನಿರುತ್ತರಳನ್ನಾಗಿ ಮಾಡಿದ್ದು ಅವನ ಮನಸ್ಸಿನಲ್ಲಿ ಎಂತಹ ಅಧೈರ್ಯವನ್ನು ತಂದಿತ್ತು ?

" ಕುಮುದಾ, ನನ್ನ ಮ್ಯಾಲೆ ನೀ ಸಿಟ್ಟಾಗಿರಬೇಕು " ಎಂದಿದ್ದ ಒಮ್ಮೆ ಅತ್ಯಂತ ಕನಿಕರ ಮತ್ತು ಪಶ್ಚಾತ್ತಾಪಗಳ ದನಿಯಲ್ಲಿ.

ಕುಮುದ ಉತ್ತರ ಕೊಟ್ಟಿರಲಿಲ್ಲ. ಆದರೂ ನಿಟ್ಟುಸಿರು ತಡೆಯುವ ಯತ್ನದಲ್ಲಿ ಆಕೆಯ ಮೈ ನಡುಗಿದ್ದು ತನ್ನ ಕೈಗೆ ತಿಳಿದುಬಂದಿತ್ತು.

" ನೀನು ಸಿಟ್ಟಾಗಿದ್ದರೂ ನಿನ್ನ ತಪ್ಪಲ್ಲ ಅಂತೇನಿ." ಕ್ಷಮೆ ಬೇಡುವವ ನಂತೆ ಹೇಳಿದ್ದ.

" ತಪ್ಪು ಮಾಡಿದವರಿಗೆ ಮಂದಿಯ ತಪ್ಪು ಹಿಡಿಯೋ ಅಧಿಕಾರ ಇಲ್ಲ."

ಅಬ್ಬ ! ಎಂತಹ ಉತ್ತರ ಅದು !

" ಅದೇ ಹೇಳ್ತೀನಿ ನಾನು, ಅದಕ್ಕೇ ತಪ್ಪು ನಿನ್ನದು ಅಂತ ನಾ ಹೇಳೋದೇ ಇಲ್ಲ. "

" ನಾನು ನನ್ನ ಸಲುವಾಗಿ ಹೇಳಿದೆ. ಇವ್ನೊಬ್ಬರ ತಪ್ಪು ಹಿಡಿಯೋ ಅಧಿಕಾರ ನನಗಿಲ್ಲ ಅಂದೆ. " ಎನ್ನುತ್ತ ದೂರ ಸರಿಯುವ ಯತ್ನದಲ್ಲಿದ್ದಳು.

ಅವಳನ್ನು ತನ್ನ ಹತ್ತಿರ ಎಳೆದುಕೊಳ್ಳುತ್ತ " ಹುಚ್ಚಿ ! ನೀ ಏನು ತಪ್ಪು ಮಾಡೀದಿ ? ಇಷ್ಟು ದಿವಸ ನಾ ನಿನ್ನನ್ನ ಮರೆತ ಹಾಂಗೆ ನಡೆದು ಕೊಂಡೆ. ಅದು ನನ್ನ ತಪ್ಪು,, ಅದಕ್ಕ ನೀ ಸಿಟ್ಟಾದರೂ ಅದು ಯೋಗ್ಯ ಅಂದೆ " ಎಂದಿದ್ದ.

ಕತ್ತಲಲ್ಲಿ ನಗುವ ಆ ಮುಖ ಕಾಣದಿದ್ದರೂ ಆಕೆಯ ನಗೆಯಲ್ಲಿ ಅತ್ಯಂತ ತಿರಸ್ಕಾರ– ಜಿಗುಪ್ಸೆ– ನಿರಾಶೆಗಳ ವಿಷವಾಯು ಇದ್ದಿತೆಂಬುದು ರಾಮಣ್ಣನಿಗೆ ತಿಳಿಯದೆ ಹೋಗಿರಲಿಲ್ಲ. ಒಮ್ಮೆಲೆ ಅವನಿಗೆ ಅಧೈರ್ಯವಾ ದಂತಾಗಿತ್ತು. ಅದನ್ನು ತೋರಗೊಡಬಾರದೆಂದು ತುಸು ಬಿರುಸು ದನಿ ಯಲ್ಲಿಯೆ ಕೇಳಿದ್ದ " ಯಾಕ ? ನಿನಗ ವಿಶ್ವಾಸ ಇಲ್ಲೇನು ನನ್ನ ಮಾತಿನೊ ಳಗ ? " ಎಂದು.

" ಇಟ್ಟ ವಿಶ್ವಾಸ ನಡೆಸಿಕೊಡಬೇಕು ಅಂತ ನಿಂ ಜೋಡಿ ಯಾರು ಕರಾರು ಮಾಡಿಲ್ಲವಲ್ಲ ?"

" ಹೀಗ್ಯಾಕ, ಕುಮುದ ? ನಾಯೇನು ನಿನ್ನ ಮೋಸಮಾಡಬೇಕು ಅಂತ ಮಾಡೀನಿ ಅಂತ ತಿಳಿದೀಯಾ ?"

" ಕಣ್ಣ ತೆರೆದು ಕತ್ತಲೆಯೊಳಗ ನಡೀಬೇಕು ಅನ್ನೋ ಹುಚ್ಚಿ ನಾನು !"

" ಇಷ್ಟು ವಿಶ್ವಾಸ ಇಲ್ಲದಿದ್ದರೆ ನೀ ಏನು ಮಾಡಂತೀ ಹೇಳು, ಅದನ್ನ ಮಾಡಲಿಕ್ಕೆ ಸಿದ್ಧ ನಾನು. "

ಆ ಮಾತಿಗೂ ನಕ್ಕಿದ್ದಳು. "ತುಡುಗ ಮಾಡಿದವರು ಮಾಡೋದೇನು? ಮುಚ್ಚಿಡೋದು !" ಎಂದಿದ್ದಳು.

" ಬೇಕಾದರೆ ಈಗೇ ನಡೆ. ಸರಲಾನ ಮುಂದೆ ನನ್ನ ಬಾಯಿಯಿಂದಲೇ ಎಲ್ಲಾ ಒಪ್ಪಿಕೋತೀನಿ."

" ಯಾಕ ? ಇಂಥಾ ಮಾತು ಹೇಳಿ ಆಕೇನ್ನ ಕೊಲ್ಲಬೇಕಂತೀರೇನು?"

" ಆಂ ? ಏನಂದಿ ? "

" ಏನಂದ್ರೇನು ? ನೀ ಹಾಸಿಗೆ ಹಿಡಿದಾಗ ನಾವು ಈ ಹಾದಿ ಹಿಡಿದೀವಿ ಅಂತ ಹೇಳಿದರೆ ಆಕೆಯ ಎದೆ ಒಡೆದು ಚೂರಾಗಲಿಕ್ಕಿಲ್ಲ ? ಇಂಥಾ ಉಪಕಾರ ಏನು ನೀವು ಮಾಡೋದು ಬ್ಯಾಡ ನನ್ನ ಮ್ಯಾಲೆ."

" ನಾನೂ ಅದಕೇ ಬಿಟ್ಟೇನಿ. ಆದರೆ ಮತ್ತೇನು ಮಾಡಬೇಕಂತೀ ಹೇಳು, ಅದಕ್ಕ ನಾನು ಸಿದ್ಧ. "

" ಅಕ್ಕ ಜೀವದಿಂದಿರೋತನಕ ನನ್ನ ಕಡೆ ಬರೋದನ್ನ ಬಿಡತೀರಾ ?"

ಆ ಮಾತಿನ ಹಿನ್ನೆಲೆ ಆಗ ತನಗೆ ತಿಳಿದಿರಲಿಲ್ಲ. ಅದಕ್ಕೆಂದೇ ಅದೊಂದು ವಿನೋದದ ಮಾತು ಎಂದು ಭಾವಿಸಿ ನಕ್ಕಿದ್ದ. " ಕೆಟ್ಟ ಕೆಲಸ ಮಾಡೋದನ್ನ ಕಳವಿನಿಂದ ಮಾಡ್ತಾರ, ಆದರೆ ಅದನ್ನ ಬಿಡೋದನ್ನೂ ಕಳವಿನಿಂದೇ ಬಿಡಬೇಕು ಅಂತ ನೀ ಹೇಳೋದು ಮಾತ್ರ ಒಳ್ಳೇ ಮೋಜಿನ ವಿಚಾರ ನೋಡು ! ಆಂ ? ಹಹ."

" ಅಂದ್ರ ? ಇದು ಕೆಟ್ಟ ಕೆಲಸ ಅಂತ ನೀವು ತಿಳಿದೀರಿ ಅನ್ನಿರಿ."

" ಆಂ ? ಏನಂದಿ ? ಛೆ-ಛೆ ! ನನ್ನ ಮಾತು ಅಂತ ಹೇಳಲಿಲ್ಲ. ಮಂದಿ ಹಾಂಗ ತಿಳೀತಾರ ಅದಕ್ಕ ಹೇಳಿದೆ."

" ಅಂದ್ರ ನಿಂ ದೃಷ್ಟಿಯಿಂದ ಇದು ಒಳ್ಳೆಯ ಕೆಲಸ ಅಂತೀರಾ ?"

" ಇದೇನು, ಕುಮುದಾ ? ಮಾತಿನೊಳಗ ನನ್ನ ತೊಡಕಿಸಬೇಕು ಅಂತೀ ಏನು ? ಒಳ್ಳೆಯದು—ಕೆಟ್ಟದು ! ನನಗೂ ನಿನಗೂ ಆ ವಿಚಾರದ ಸಂಬಂಧವೆ ಬರೋದಿಲ್ಲ. ಇಬ್ಬರು ಮನಸ್ಸಿನಿಂದ ಒಪ್ಪಿ ಒಂದು ಕೆಲಸ ಮಾಡುವಾಗ—"

" ನೀವೂ ಮನಸ್ಸಿನಿಂದ ಒಪ್ಪೀರಾ ?"

" ಅಂದ್ರ ? ಮನಸ್ಸು ನಿನಗಾಗಿ ಸೋತಿದೆ ಅಂತಲೆ ಪ್ರಯತ್ನ ಮಾಡಿದರೂ ನಿನ್ನನ್ನು ಬಿಟ್ಟು ಇರೋದಾಗಲಿಲ್ಲ, ನೀನೇ ನೋಡೀದಿ—"

" ನನಗೇನು ಗೊತ್ತು ಇದು ನಿಂ ಮನಸ್ಸಿಗೆ ಒಪ್ಪಿದ ಮಾತು ಅಂತ. ನನಗ ಅನ್ನಿಸಿತ್ತು ಇದು ನಿಂ ದೇಹಕ್ಕ ಅಂಟಿಕೊಂಡ ಚಟ ಅಂತ" ಎಂದು ನಡುವೆಯೆ ಮಾತನಾಡಿ ತನ್ನನ್ನು ನಿರುತ್ತರನನ್ನಾಗಿ ಮಾಡಿದ್ದಳು.

ಎಂತಹ ಮಾತು ! ಎಲ್ಲಿಂದ ಬಂದಿತ್ತು ಆಕೆಗೆ ಅಷ್ಟೊಂದು ಬುದ್ಧಿ, ಅಂತಹ ವಿಚಾರ ? ಬಂದ ಸಂಕಟವನ್ನು ಎದುರಿಸಲು ನಿಸರ್ಗವೆ ಪ್ರಾಣಿಗೆ ತಕ್ಕ ಶಕ್ತಿಯನ್ನು ಕೊಡುತ್ತಿರಬಹುದೆ ? ಎಂದೂ ಇಷ್ಟೊಂದು ಮಾತನಾಡದ ಈಕೆ ಇಂದು ಹೀಗೇಕೆ ವರ್ತಿಸುತ್ತಿದ್ದಾಳೆ ?

" ಯಾಕ ? ಸುಮ್ಮನಾದಿರಿ ?"

" ಅಲ್ಲ, ಕುಮುದಾ, ತಪ್ಪು ತಿಳಿದುಕೋಬೇಕು ಅಂತ ನಿನ್ನ ಹಟಾನೇ ಇದ್ದರೆ ಏನು ಮಾಡೋದು ? ನಿದ್ದೆ ಸೋಗುಹಾಕಿದವರನ್ನ—"

" ಸೋಗನ್ನು ಹಾಕಿದವರು ಯಾರು ? ಒಂದು ಕಾಲಕ್ಕ ನನಗ ಯಾವುದರದೂ ಹೆದರಿಕೆ ಇದ್ದಿದ್ದಿಲ್ಲ ನಾನು ನಿಂ ಪ್ರೀತಿಯ ವಸ್ತು ಅಂತ ಹೇಳಿಕೊಳ್ಳಲಿಕ್ಕೆ."

" ಒಂದು ಕಾಲಕ್ಕ ಯಾಕ ? ಈಗಲೂ ನೀನು ನನ್ನ—"

" ಆದರೆ ಈಗ ಅದನ್ನ ಹೇಳಿಕೊಳ್ಳೋದರಲ್ಲಿ ನನಗ ಆನಂದ ಇಲ್ಲ."

" ಸುಮ್ಮನೆ ತಪ್ಪು—"

" ನಾನು ನಿಮ್ಮದೊಂದು ಚಟದ ಆಟಿಗೆ." ಹಾಗೆಂದು ಕುಮುದ ಎದ್ದು ಹೋಗಿದ್ದಳು.

ಅದೆಲ್ಲ ಅನುಭವ ಇಷ್ಟೊಂದು ನೆನಪಿರಲಿಕ್ಕೆ ರಾಮಣ್ಣನಿಗೆ ಇನ್ನೂ ಒಂದು ಕಾರಣವಿದ್ದಿತು. ಅಂದಿನಿಂದ ಕುಮುದ ತನ್ನನ್ನು ಮುಖ ತಪ್ಪಿಸುತ್ತಿದ್ದಳು, ರಾತ್ರಿ ತನ್ನ ಕೋಣೆಯ ಬಾಗಿಲನ್ನು ಒಳಗಿನಿಂದ ಭದ್ರವಾಗಿ ಮುಚ್ಚಿಕೊಳ್ಳುತ್ತಿದ್ದಳು. ಯಾವಾಗಲಾದರೊಮ್ಮೆ ತಾನು ನಗೆಮೊಗದಿಂದ ಆಕೆಯನ್ನು ದಿಟ್ಟಿಸುತ್ತ ಮಾತನಾಡಿಸಲು ಪ್ರಯತ್ನಮಾಡಿದರೆ ತನ್ನನ್ನು ತಿರಸ್ಕಾರದ ನೋಟದಿಂದ ನಿರುತ್ಸಾಹಗೊಳಿಸುತ್ತಿದ್ದಳು, ಹೆಚ್ಚಾಗಿ ವೇಳೆಯನ್ನು ಸರಲೆಯ ಮಗ್ಗುಲಲ್ಲಿ ಕಳೆಯುತ್ತಿದ್ದಳು, ತಾನೂ ಅಲ್ಲಿಯೆ ಕುಳಿತರೆ ತಾನು ಎದ್ದು

ಹೋಗುವವರೆಗೆ ತಲೆ ತಗ್ಗಿಸಿಯೆ ಇರುತ್ತಿದ್ದಳು. ಒಂದೆಡೆ ಆಕೆಯ ಈ ನಡತೆಯಿಂದ ರಾಮಣ್ಣನಿಗೆ ತನ್ನ ಬಗ್ಗೆ ಪಶ್ಚಾತ್ತಾಪ ಮೂಡಿತ್ತು, ಇನ್ನೊಂದೆಡೆ ಕೆಣಕಿದಂತಾಗಿತ್ತು. ಆದರೆ ಈ ಮನಃಸ್ಥಿತಿ ವಿಕೋಪಕ್ಕೆ ಹೋಗುವ ಸಂದರ್ಭವೆ ಬರಲಿಲ್ಲ. ಮುಂದೆ ಒಂದೆರಡು ದಿನಗಳಲ್ಲಿಯೆ ತಾನು ಆಕೆ ಇಬ್ಬರೂ ಸರಲೆಯ ಹತ್ತಿರ ಕುಳಿತಾಗ "ಕುಮುದಾ, ಒಂದಿಷ್ಟು ಕಾಫೀ ಆದ್ರೂ ಮಾಡ್ತೀಯಾ ? ಯಾಕೊ ಬಾಯಿ ಕೆಟ್ಟ ಹಾಂಗ ಆಗೇದ" ಎಂದಿದ್ದಳು ಸರಲೆ. ಕುಮುದ ಎದ್ದು ಅಡುಗೆಯ ಮನೆಗೆ ಹೋಗಲು "ಒಂದಿಷ್ಟು ಆ ಬಾಗಿಲಾ ಮುಂದೆ ಮಾಡಿಕೊಂಡು ಬರ್ರಿ" ಎಂದಿದ್ದಳು ಸರಲೆ. ಯಾವ ಬಾಗಿಲು ? ಮುಂದೆ ಯಾಕೆ ? ಯಾವ ಸಂದರ್ಭದ ಮಾತು ? ರಾಮಣ್ಣನಿಗೆ ತಿಳಿದಿರಲಿಲ್ಲ.

"ಅಡಿಗೇ ಮನೆಯ ಬಾಗಿಲಾ ಮುಂದೆ ಮಾಡಿಕೊಂಡು ಬರ್ರಿ ಅಂದೆ. ನಿಂ ಜೋಡಿ ಮಾತಾಡಬೇಕಾಗೇದ" ಎಂದು ಸರಲೆ ತಿಳಿಸಿ ಹೇಳಿದ್ದಳು.

ರಾಮಣ್ಣನ ಕಾಲ್ಗಳೇ ಏಳದಂತಾಗಿದ್ದುವು. ಯಾವುದಕ್ಕೆ ತಾನು ಹೆದರಿದ್ದನೊ ಕೊನೆಗೂ ಆ ಪ್ರಸಂಗ ತಪ್ಪಲಿಲ್ಲ, ಕುಮುದಳು ಸೇಡನ್ನು ತೀರಿಸುವಂತೆ ಮಾಡಿದಳು—

"ಬಾಗಿಲಾ ಮುಂದೆ ಮಾಡಿಕೊಂಡು ಬರ್ರಿ ಅಂದೆ."

"ಅಲ್ಲ—ಅಂದ್ರ—ಸುಳ್ಳೇ ಮಾತಾಡಿ ತ್ರಾಸ ಯಾಕ ಮಾಡಿಕೋತೀ ಅಂತ ? ಅಂಥಾದ್ದೇನು ನನ್ನ ಜೋಡಿ ಮಾತಾಡೋದು ?"

ಆದರೂ ಬಾಗಿಲನ್ನು ಮುಂದೆ ಮಾಡಿಕೊಂಡು, ಶಿಕ್ಷೆಗೆ ಸಿದ್ಧನಾದ ಅಪರಾಧಿಯಂತೆ ಬಂದು ಕುಳಿತಿದ್ದ.

"ನಿಮ್ಮ ಕೈ ತರ್ರಿ."

ಯಂತ್ರದಂತೆ ಕೈ ಮುಂದೆ ಚಾಚಿತ್ತು.

"ನಾ ಆಡ್ತೇನಿ ಅಂತ ಮನಸ್ಸಿಗೆ ಹಚ್ಚಿಕೋ ಬ್ಯಾಡಿರಿ."

"ಸರಲಾ, ಯಾಕ ತ್ರಾಸ ಮಾಡಿಕೋತಿ ?" ಕೊನೆಯ ಯತ್ನವನ್ನು ಮಾಡುವವನಂತೆ ನುಡಿದಿದ್ದ.

"ತ್ರಾಸ !" ಸರಲೆಯ ಮುಖದಲ್ಲಿ ವೈರಾಗ್ಯದ ಸಮಾಧಾನದ ಕಳೆ ಇದ್ದಿತು. "ನನ್ನ ತ್ರಾಸದ ಕಾಳಜಿ ಮಾಡಬ್ಯಾಡಿರಿ ಇನ್ನು."

ಯಾರೋ ಹಿಂದಿನಿಂದ ಬಂದು ತನ್ನ ಗಂಟಲನ್ನು ಹಿಸುಕಿದಂತಾ ಯಿತು ರಾಮಣ್ಣನಿಗೆ. ಮುಖವನ್ನು ಹಿಂತಿರುಗಿಸಿದ. ತಾನು ದುಷ್ಟ, ಕ್ರೂರ, ಕೃತಘ್ನ, ಕಾಮುಕ—

" ಅಯ್ಯ ! ಅಂಥಾದ್ದೇನಾಗೇದ ಕೆಟ್ಟ ಅನ್ನಿಸಿಕೊಳ್ಳಲಿಕ್ಕೆ ? ಎಷ್ಟು ದಿನ ಹೀಂಗೇ ನರಳತಾ ಬೀಳಬೇಕು ನಾನಾದರೂ ?"

" ಏನಂದಿ ?" ರಾಮಣ್ಣನಿಗೆ ಇದೇನೊ ಬೇರೆ ವಿಷಯ ಎಂದು ಹೊಳೆ ದಂತಾಗಿತ್ತು.

ಸರಲೆ ಕೈಮೇಲೆ ಕೈಯನ್ನಾಡಿಸುತ್ತ ಹೇಳಿದ್ದಳು, " ನಿಮ್ಮ ಮನಸ್ಸು ಗಟ್ಟಿ ಅಂತ ತಿಳಕೊಂಡು ಹೇಳ್ತೀನಿ. ನನ್ನ ವ್ಯಾಳ್ಯಾ ಸಮೀಪ ಬಂತು."

ವಿಚಾರವನ್ನು ಮಾಡುವ ಮುಂಚಿತವಾಗಿಯೆ ರಾಮಣ್ಣನ ಕಣ್ಣಳಿಂದ ನೀರು ದಳದಳ ಸುರಿಯತೊಡಗಿತು.

" ಇದೇನು ಸಣ್ಣ ಹುಡುಗರ್ಹಾಂಗ ಮಾಡ್ತೀರಿ ? ಇರೋತನಕ ಈ ಮನೀವಳಗ ನಾನೂ ಬೇಕಾದಷ್ಟು ಸುಖ ಕಂಡೀನಿ. ಹೋದಮ್ಯಾಲೆ ನನ್ನಿಂದ ನಿಮಗ ತ್ರಾಸ ಆಗ್ಬಾರದು ಅಂತ ನಾ ಬೇಡಿಕೋತೀನಿ, ನೀವು ಮುಂಚೆಯೆ ಅಳಲಿಕ್ಕೆ ಸುರುವು ಮಾಡಿದಿರಲ್ಲ ? ವಸ್ತ್ರ ಕೋಟಿನ ಕಿಸೇದಾಗ ಬಿಟ್ಟು ಬಂದಿರೊ ಏನೊ ! ನನ್ನ ಸೆರಗಿನಿಂದೇ ಕಣ್ಣು ಒರೆಸಿಕೋರಿ."

ಅಂತಹ ಸಮಯದಲ್ಲೂ ಆ ಮಾತಿಗೆ ರಾಮಣ್ಣನ ಮುಖದಲ್ಲಿ ಮುಗು ಳ್ನಗೆ ಮೂಡಿತ್ತು. ಮುಖ ಬಾಗಿಸಿ ಸೆರಗಿನಿಂದ ಕಣ್ಣೊರಸಿಕೊಳ್ಳುವಾಗ ಸರಲೆ ತನ್ನ ತಲೆಯ ಮೇಲೆ ಕೈಯನ್ನಿಟ್ಟಿದ್ದಳು. ಅದೆಂತಹ ಸ್ಪರ್ಶ ! ಸಾವು ಸಮೀಪಿಸಿದಾಗಲೂ ತನ್ನಲ್ಲಿ ಹೊಸಚೈತನ್ಯವನ್ನು ತಂದುಕೊಟ್ಟಿತ್ತು. ಸರಲೆಗೆ ಸಾವು ಸಮೀಪಿಸಿದೆ ಎಂಬುದರ ಬಗ್ಗೆ ಅವನಿಗೀಗ ಸಂಶಯವಿದ್ದಿರಲಿಲ್ಲ. ಕಣ್ಣೀರು ಸುರಿದುದಕ್ಕೆ ದುಃಖದ ಆವೇಗವೂ ಕಡಮೆಯಾಗಿತ್ತು.

" ಸರಲಾ, ಇಷ್ಟು ನಾವೆಲ್ಲಾ ಬ್ಯಾಡಾದೆವೆ ನಿನಗ ? ಯಾಕ ಮ್ಯಾಲಿಂದ ಮ್ಯಾಲೆ ಸಾಯೋ ಮಾತನ್ನ ಬಾಯಿಯಿಂದ ಆಡತೀ ?"

" ಬಾಯಿಯಿಂದ ಆಡದಿದ್ದರ ಅದೇನು ತಡೆಯೋದೆ ? ಸಾವು ಸಮೀಪಿ ಸಿತು ಅನ್ನೋ ಅಧಿಕಾರದಿಂದ ನಾ ಹೇಳ್ತೀನಿ—ಕೇಳತೀರಾ ?"

" ಸಾಯೋ ಮಾತು ಬ್ಯಾಡ. ಆದರೆ ನಿನಗ ಏನು ಹೇಳೋದದ ಅದನ್ನೆಲ್ಲಾ ಹೇಳು."

" ಕೇಳತೀರಾ ?" ತನ್ನ ಅಂಗೈಯ ಮೇಲೆ ಕೈಯನ್ನಾಡಿಸುತ್ತ ಕೇಳಿದ್ದಳು.

" ಸಂಶಯ ಯಾಕ ?"

" ಎಂದಿನಿಂದ ಹೇಳಿದರೂ ಕಿವಿಮ್ಯಾಲೆ ಹಾಕಿಕೊಂಡಿಲ್ಲ ನೀವು. ಸಿಟ್ಟಿಗೂ ಎದ್ದಿದ್ದಿರಿ. ಆದರೆ ಇನ್ನೊಮ್ಮೆ ಹೇಳೋ ಪ್ರಸಂಗ ಆದರೂ ನನಗ ಬರೋದೋ ಇಲ್ಲೋ ! ಅದಕ್ಕ—"

" ಯಾವ ಮಾತು ?"

" ಸಾಯೋ ಹೆಂಡತಿಯ ಕಡೆಯ ವಾಸನಾ ಇದು."

" ಯಾವ ಮಾತು, ಸರಲಾ ? ಇಷ್ಟು ಯಾಕೆ ಮನಸ್ಸಿಗೆ ಹಚ್ಚಿಕೊಳ್ಳುವೆ ? ಯಾವುದು, ಹೇಳು—"

" ಯಾವುದೇನು ? ಅದೇ—"

" ಏನು ? ಇನ್ನೊಂದು ಮದುವೆ ? ಹಹ !" ಹಾರಿಸಿಕೊಳ್ಳುವ ನಗೆಯಿಂದ ಕೇಳಿದ್ದ.

" ಹೌದು, ಕುಮುದಾನ ಕೂಡ ಮದುವೆ."

" ಏನು ?"

ರಾಮಣ್ಣನಿಗೆ ಬರಿಬೆನ್ನಿನ ಮೇಲೆ ಯಾರೋ ಬೆತ್ತದಿಂದ ಹೊಡೆದಂತಾಗಿತ್ತು.

" ಯಾಕ ? ನನ್ನ ಕಣ್ಣು ಮುಚ್ಚೋದರೊಳಗ ಆಗಿಬಿಟ್ಟರೆ—"

" ಕುಮುದಾನ ಕೂಡ ಮದುವೆ !"

" ಹೀಂಗೆ ಏನೂ ತಿಳೀದವರ್ಹಾಂಗ ಮಾತಾಡಬ್ಯಾಡಿರಿ. ಎಷ್ಟು ಸಾರೆ ನಾ ನಿಮಗ ಕೇಳೀನಿ."

" ಕುಮುದಾನ ಕೂಡ ?"

" ಹೌದು. ಒಂದು ದಿನ ನನ್ನ ಮಾತು ಪೂರಾ ಕೇಳಿಕೋಳಿಲ್ಲ. ಎಷ್ಟು ಸಲ ಹೇಳಬೇಕಂದಿದ್ದೆ ನಾನು."

ರಾಮಣ್ಣನಿಗೆ ತಟ್ಟನೆ ಒಂದು ವಿಚಾರ ಹೊಳೆದಿತ್ತು. ಈಗ ಮಾತು ಬೆಳೆಯಿಸಿ ಉಪಯೋಗವಿಲ್ಲ. " ಆಗದು " ಎಂದರೆ ಅವಳ ಮನಸ್ಸಿಗೂ

ಅಘಾತ. ಒಂದೆರಡು ದಿನಗಳಲ್ಲಿ ವಿಚಾರ ಮಾಡಿ ಹೇಳುವೆ ಎಂದರಾಯಿತು— ಎಂದುಕೊಂಡ, ಹಾಗೆ ಆಕೆಗೆ ಹೇಳಿದ್ದ.

" ಮತ್ತ ಯಾಕ ವಿಚಾರ ?"

" ಸರಲಾ, ನಿನ್ನ ಮಾತು ನನಗೆ ಎಷ್ಟು ನೋವು ಮಾಡಿದೆ ಗೊತ್ತಿಲ್ಲ ನಿನಗೆ. ತುಸು ಶಾಂತನಾಗಿ ವಿಚಾರ ಮಾಡಿ ಹೇಳುವೆ. "

" ನೀವು ಹೇಳೋತನಕ ನಾನು ಇರ್ತೀನೊ ಇಲ್ಲೊ ! " ಎಂದು ನಿರಾಶೆಯಿಂದ ಉಸುರ್ಗರೆದಿದ್ದಳು.

" ಹುಚ್ಚಿ ನೀನು ! "

ಆದರೆ ಕೊನೆಗೆ ತಾನೇ ಹುಚ್ಚನಾಗಿದ್ದ. ಇದು ನಡೆದ ಮರುದಿನ ಬೆಳಗಿನಲ್ಲಿ ಸರಲೆಯು— ಯಾವುದನ್ನೂ ನೋಡಲಾರದಂತೆ— ಕೊನೆಯದಾಗಿ ಕಣ್ಣು ಮುಚ್ಚಿದ್ದಳು.....

ರಾಮಣ್ಣ ಭಾವಪಟವನ್ನು ದಿಟ್ಟಿಸುತ್ತ ಕುಳಿತ. ಅಂದಿನ ನೆನಪಿನಲ್ಲಿ ತಲ್ಲೀನನಾಗಿದ್ದನೊ ಏನೊ ! ಅವನ ಕಣ್ಗಳಿಂದ ನೀರಿನ ಧಾರೆ ಸುರಿಯತೊಡಗಿತು. ಕಣ್ಗಳ ಮುಂದೆ ಮಂಜಿನ ಪರದೆ ಬಂದಂತಾಗಿ ಭಾವಪಟ ಸ್ಪಷ್ಟವಾಗಿ ಕಾಣದಿದ್ದರೂ ಆ ನಿಟ್ಟನ್ನೆ ದಿಟ್ಟಿಸುತ್ತ ಕುಳಿತ.

## ೧೬

ಗಟ್ಟಿಯಾಗಿ ತಲೆ ಹಿಡಿದುಕೊಂಡು ಕುಳಿತ ಕುಮುದ ಕೆಲವು ನಿಮಿಷಗಳ ತರುವಾಯ ಉಸುರ್ಗರೆದು ಎದ್ದಳು. ದೇಹ ನಾಚಿಕೆಗೇಡಿ ಇಷ್ಟೆ ಅಲ್ಲ, ಎಷ್ಟು ಪರಿಯಿಂದ ನಾಚಿಕೆಗೇಡಿಯಾಗಿದೆಯಲ್ಲ ಎಂಬ ವಿಚಾರ ಬಂದಿತು ಅವಳಿಗೆ. " ನಿಂ ದೇಹಕ್ಕ ಅಂಟಿಕೊಂಡ ಚಟ " ಎಂದು ಒಂದು ದಿನ ತಾನೇ ರಾಮಣ್ಣನಿಗೆ ಹೇಳಿದ್ದಿಲ್ಲವೆ ? ಆದರೆ ಇನ್ನೊಬ್ಬರಿಗೆ ಹೇಳುವ ಅಧಿಕಾರ ತನಗೆಲ್ಲಿಯದು? ಅಷ್ಟೊಂದು ಮನಸಿಗೆ ಅನಿಚ್ಛೆ, ಜಿಗುಪ್ಸೆ, ಅಸಹ್ಯ ಎನ್ನಿಸಿದ್ದರೂ ತನ್ನ ದೇಹಕ್ಕೂ ರಾಮಣ್ಣನು ಚಟವಾಗಿರುವನಲ್ಲ ? ಒಂದು ದಿನವನ್ನಾದರೂ ಅವನ ಸಾನ್ನಿಧ್ಯವನ್ನು ಬಯಸದೆ ತಾನು ಕಳೆದಿರುವಳೆ ? ಸಾವಿನ ಗಳಿಗೆಯಲ್ಲಿ ಸರಲಕ್ಕ ಅವರಿಗೆ ಬಾಯಿಬಿಚ್ಚಿ ಹೇಳಿದ್ದಳು. ಆಗ, ಹೆಂಡತಿಯನ್ನು ಉಳಿಸಲು ಕೂಡ ಅವರು ಒಪ್ಪಲಿಲ್ಲವಲ್ಲ ನನ್ನನ್ನು ಮದುವೆಯಾಗಲು? ನನ್ನೊಡನೆ

ಮದುವೆಯನ್ನು ತಪ್ಪಿಸಿಕೊಳ್ಳಲು ಹೆಂಡತಿಯ ಆಹುತಿಯನ್ನು ಕೊಡಲು ಅವರು ಸಿದ್ಧರಾದರು! ಇದನ್ನರಿತೂ ನನ್ನ ದೇಹ—ಇದನ್ನರಿತ ಮೇಲೂ—ಅವರ ಸೊತ್ತಾಗಿದೆ! ಇಷ್ಟೇ ಅಲ್ಲ—ಈಗ ಅವರ ಸತ್ವವನ್ನು ಒಳಗೆ ಇಟ್ಟುಕೊಂಡಿದೆ. ನಾಚಿಕೆಗೇಡು—ಎಂದಳು. ತನಗೆ ಹೇಗೆ ತಿಳಿದಿರಲಿಲ್ಲ? ಈಗೊಂದು ತಿಂಗಳ ಮುಂಚಿತವಾಗಿಯೆ ತಿಳಿಯಬೇಕಿತ್ತು. ಆದರೆ ಲಕ್ಷ್ಯಕ್ಕೇ ಬಂದಿರಲಿಲ್ಲ. ಕುಮುದ ಮತ್ತೆ ಹಾಸಿಗೆಯ ಮೇಲೆ ಕುಳಿತುಕೊಂಡಳು. ಯಾವುದಕ್ಕೂ ಸಿದ್ಧಳಾದ ಅವಳಿಗೆ ಈ ಹೊಸ ತೊಡಕಿನಿಂದ ಯಾವ ಹೆದರಿಕೆಯೂ ಇದ್ದಿಲ್ಲ. ಆದರೆ—ಒಂದೇ ಒಂದು ವಿಚಾರದಿಂದ ಅವಳಿಗೆ ವಿಷಾದವಾಯಿತು. ಮನೆಗೆ ಮಕ್ಕಳು ಬೇಕು ಎಂಬ ಸರಲಕ್ಕ ಕಣ್ಣಾರೆ ನೋಡದೆ ಹೋದಳಲ್ಲ—ಎಂದು. ಈಗ ಯಾರಿಗೆ ಇದು ಸಂತೋಷದ ಸಂಗತಿ? ರಾಮಣ್ಣನಿಗೆ? ಅತ್ಯಂತ ತಿರಸ್ಕಾರದ ನಗೆ ಮೂಡಿತು ಅವಳ ಮುಖದಲ್ಲಿ. ಒಮ್ಮೆಲೆ ಗೆಲುವಿನ ಕಳೆಯೂ ಮೂಡಿತು. ಈ ಸುದ್ದಿಯನ್ನು ರಾಮಣ್ಣನಿಗೆ ತಿಳಿಸಬೇಕು, ಅದನ್ನು ಕೇಳಿ ಅವನಿಗಾಗುವ ವ್ಯಥೆಯನ್ನು ಕಣ್ತುಂಬ ನೋಡಿ ಹೊಟ್ಟೆತುಂಬ ನಗಬೇಕು—ಎಂದುಕೊಂಡು ಹೊರಟಳು.

## ೧೭

ರಾಮಣ್ಣ ಮುಖ ಒರೆಸಿಕೊಂಡೆದ್ದ. ಇನ್ನು ಮುಂದೆ ಈ ಯಾತನೆಯೆ ಬೇಡ, ನಾಳೆ ಕುಮುದಳಿಗೆ ಸ್ಪಷ್ಟವಾಗಿ ತಿಳಿಸಿಬಿಡಬೇಕು, ಒಂದು ನಿರ್ಧಾರಕ್ಕೆ ಬರಬೇಕು, ಅಲ್ಲಿಯವರೆಗೆ ಶಾಂತಿ ದೊರೆಯುವಂತಿಲ್ಲ ಎಂದು ಏಳುವಾಗ ಕೈಗಡಿಯಾರವನ್ನು ನೋಡಿಕೊಂಡ. ನಸುಕಿನ ನಾಲ್ಕು ಗಂಟೆಯಾಗಿದೆ! ಎಷ್ಟೊತ್ತು ತಾನು ಹೀಗೆ ಕುಳಿತಿರುವೆನೆಂಬುದರ ಕಲ್ಪನೆ ಬಂದ ಮೇಲೆ ಒಮ್ಮೆಲೆ ದಣಿವು ರಾಮಣ್ಣನನ್ನು ಮುತ್ತಿಕೊಂಡಿತು. ಆಕಳಿಸಿದ — ಹೊರಬೀಳುವಾಗ ಮತ್ತೊಮ್ಮೆ ಭಾವಪಟವನ್ನು ನೋಡಿದ. "ಸರಲೇ, ನಿನ್ನನ್ನು ಉಳಿಸುವುದಕ್ಕಾಗಿ ನಾನು ಒಪ್ಪಬಹುದಿತ್ತು. ಆದರೆ ಈಗ ಒಪ್ಪಿ ಪ್ರಯೋಜನವಿಲ್ಲ. ಅದಕಾಗಿಯೆ ನೀನು ಜೀವವನ್ನು ಕೊಟ್ಟೆ ಎಂಬುದನ್ನು ಎಂದಿಗೂ ಮರೆಯಲಾರೆ. ನಿನ್ನ ಆಹುತಿಗೆ ಕಾರಣವಾದುದನ್ನು ಮನೆಯಲ್ಲಿ ಇಟ್ಟುಕೊಳ್ಳಲಾರೆ, ಕ್ಷಮಿಸು" ಎಂದು ಒಳಗಿಂದೊಳಗೆಯೆ ಬೇಡಿಕೊಂಡನು.

ಇನ್ನೊಂದು ಮದುವೆ ? ಛಿ !

ಆದರೆ ಪಾಪ ! ಸರಲೆಗೆ ಮಾತ್ರ ಬಲವಾದ ಆಕಾಂಕ್ಷೆ ಇದ್ದಿತು. ಕೊನೆಗೆ ಮಕ್ಕಳಿಗಾಗಿಯಾದರೂ ನಾನು ಮದುವೆಯಾಗಬೇಕೆಂದು—

ರಾಮಣ್ಣ ಒಮ್ಮೆಲೆ ತಡೆದ. ಯಾವುದೊ ವಿಚಾರದಿಂದ ಜೀವ ಬಂದಂತಾಯಿತೇನೊ ಎನ್ನುವಂತೆ ಸಮಾಧಾನದ ಉಸಿರನ್ನು ಬಿಟ್ಟ.

ಹೌದಲ್ಲ ? ಇಲ್ಲವಾದರೆ ಅದೊಂದು ಬಗೆಹರಿಯದ ತೊಡಕೇ ಆಗುತ್ತಿತ್ತು. ಆದರೆ ಈಗ ಯಾವ ತೊಡಕೂ ಇಲ್ಲ—ಎಂದು ಸಮಾಧಾನದ ನಗೆಮೊಗದಿಂದ ನಡೆದ. ಎದುರು ಕುಮುದಳೂ ನಗುತ್ತಲೆ ಬಂದಳು. ರಾಮಣ್ಣ ಒಂದು ನಿಮಿಷ ಗಾಬರಿಯಾದ.

"ಇಲ್ಲ—ಬರೀತಾ ಕೂತಿದ್ದೆ, ಹೊತ್ತಾಯ್ತು, ಈಗ ಮುಗೀತು, ವ್ಯಾಳ್ಯಾ ನೋಡಿದೆ—"

"ನನಗೂ ಸಂತೋಷದ ಸುದ್ದಿ ಹೇಳಬೇಕಾಗಿತ್ತು. ಅದಕ್ಕ ನೀವು ಬರೋತನಕ ಕೂಡೋದಾಗದೆ ನಾನೇ ಬಂದೆ."

"ಓಹೊ ! ಹೀಂಗೇನು ? ನನಗೂ ಒಂದ್ಮಾತು ಹೇಳ್ಬೇಕಾಗಿತ್ತು."

"ನಾನೀಗ ತಾಯಿಯಾಗುವಾಕೆ" ಒಮ್ಮೆಲೆ ಕುಮುದ ಹೇಳಿದಳು.

ಆಂ ! ಎಂದಿತು ರಾಮಣ್ಣನ ಹೃದಯ. ತಟ್ಟನೆ ಅವನ ಬುದ್ಧಿ ಮುಂದಾಗುತ್ತ "ಆಂ—ಅಂದ್ರ ಭಲೆ—ಒಳ್ಳೇ ಸಂತೋಷದ ಸುದ್ದಿ." ಎಂದಿತು.

ಆ ಮಾತು ತನ್ನ ಬಾಯಿಯಿಂದ ಹೊರಬಿದ್ದ ಮೇಲೆ ರಾಮಣ್ಣನಿಗೆ ಹೊಳೆಯಿತು—ಇನ್ನು ಏನು ಮಾಡಿದರೂ ಏನು ಪ್ರಯೋಜನ—ಎಂದು.

ರಾಮಣ್ಣನ ಉತ್ತರವನ್ನು ಕೇಳಿ ಕುಮುದಳೂ ಚಕಿತಳಾದಳು. "ಈ ಮನುಷ್ಯ ತನ್ನಂತೆ ಎಲ್ಲಕ್ಕೂ ಸಿದ್ಧನಾಗಿರುವನಲ್ಲ !"—ಎಂದುಕೊಂಡಳು.

ರಾಮಣ್ಣನೆ ಮೊದಲು ಸುಧಾರಿಸಿಕೊಂಡ. "ಆಂ—ಈಗ ನಾನೂ ಸರಲಾನ ಫೋಟೋದ ಮುಂದ ಪ್ರತಿಜ್ಞಾ ಮಾಡಿಬಂದೀನಿ."

ಕುಮುದಳಿಗೆ ಅಧೈರ್ಯವಾಯಿತು. "ಏನೆಂದು ?" ಉಸಿರಿನಲ್ಲಿಯೆ ಕೇಳಿದಳು.

"ಆಕೆಯ ಕೊನೆಯ ಇಚ್ಛೆಯನ್ನು ನಡೆಸಿಯೆ ತೀರುವೆನೆಂದು" ಎಂದು ರಾಮಣ್ಣ ಇಲ್ಲದ ನಿಶ್ಚಯದ ದನಿಯಲ್ಲಿ ಹೇಳಿದ.

.ಆಂ ! ಎಂದಿತು ಕುಮುದಳ ಹೃದಯ. ತಟ್ಟನೆ ಅವಳ ಬುದ್ಧಿ ಮುಂದಾಗುತ್ತ " ಬಯಸಿದ್ದು ನಡೆಯೋದನ್ನ ಕಣ್ಮುಟ್ಟ ನೋಡೋ ಭಾಗ್ಯ ಇರಲಿಲ್ಲ ಅಕ್ಕನಿಗೆ " ಎಂದಿತು. ಆಕೆ ಮುಖವನ್ನೂ ಕೆಳಗೆ ಮಾಡಿದಳು.

ಮುಂದೆ ಎರಡು ತಿಂಗಳೊಳಗೆ ಕುಮುದ-ರಾಮಣ್ಣರ ಮದುವೆ ಯಾಯಿತು. ಅಕ್ಕನ ಮಾತು ನಡೆಸಲಿಕ್ಕೆ ಕುಮುದ, ಹೆಂಡತಿಯ ಕೊನೆಯ ಬೇಡಿಕೆಯನ್ನು ನಡೆಸಲು ರಾಮಣ್ಣ ಮದುವೆಯಾಗಲು ಒಪ್ಪಿದರು ಎಂದು ಜನರು ಅವರಿಬ್ಬರ ನಿಷ್ಠೆಯನ್ನು ಪ್ರಶಂಸಿಸಿದರು. ಗಂಡ-ಹೆಂಡರಿಗೆ ಸುಖ-ದೀರ್ಘಾಯು ದೊರೆಯಲಿ, ಮನೆ ತುಂಬ ಮಕ್ಕಳಾಗಲಿ ಎಂದು ಮನಃ ಪೂರ್ವಕವಾಗಿ ಬಯಸದವರು ಯಾರೂ ಇರಲಿಲ್ಲ.